ಬುಧವಾರ, ಸೆಪ್ಟೆಂಬರ್ 13, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 255 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
'ಇಂಟ್ರಾಕ್ಟೀವ್ ಫಿಲ್ಮ್' ಎಂಬ ತಂತ್ರಜ್ಞಾನ ಇದೀಗ ಚಿತ್ರರಂಗಕ್ಕೆ ಬರಲಿದೆಯಂತೆ



ಅನುಭವ ಮಂಟಪ
ಸಮಸ್ತ ಭಾರತೀಯರ ಸಾಂವಿಧಾನಿಕ ಹಕ್ಕು

'ಜೆಡಿಎಸ್ ಜೊತೆಗೆ ಬಿಜೆಪಿ ಮೈತ್ರಿ: ಮೋದಿ, ಶಾ ನಿರ್ಧಾರ' 4B

ದೂರುದಾರರಿಗೆ ಡಿ.ಸುಧಾಕರ್ ಬೆದರಿಕೆ? 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
67,221 ▲	19,993 ▼	₹60,950 (ಬೆಂಗಳೂರು) ▲	₹73,600 (ಬೆಂಗಳೂರು) ▲	82.95 ▲

ಮನುಷ್ಯತ್ವ ಇಲ್ಲದವರು ಸಾರ್ವಜನಿಕ ಸೇವೆಗೆ ಬರಬಾರದು: ಸಿದ್ದರಾಮಯ್ಯ

ಅಧಿಕಾರಿಗಳಿಗೆ ಸಿ.ಎಂ ಚಾಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನುಷ್ಯತ್ವ ಇಲ್ಲದವರು ಸಾರ್ವಜನಿಕ ಸೇವೆಗೆ ಬರಬಾರದು. ನಿಮ್ಮ ನಿರ್ಲಕ್ಷ್ಯ ಮತ್ತು ಉಡಾಫೆಯಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬಂದರೆ ಸುಮ್ಮನೆ ಕೂರುವುದಿಲ್ಲ'

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ಇಡೀ ದಿನ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಚಾಟಿ ಬೀಸಿದ ಪರಿ ಇದು.

ಅಧಿಕಾರಿಗಳು ಸಾರ್ವಜನಿಕರಿಗೆ ಮಾತ್ರವಲ್ಲದೇ ಸಚಿವರು ಮತ್ತು ಶಾಸಕರ ದೂರುಗಳಿಗೂ ಸ್ಪಂದಿಸುತ್ತಿಲ್ಲ ಮತ್ತು ದೂರವಾಣಿ ಕರೆಗಳನ್ನು ಸ್ವೀಕರಿಸುವುದಿಲ್ಲ ಎಂಬ ದೂರುಗಳು ಬಂದಿವೆ. ದೂರವಾಣಿ ಕರೆಗಳನ್ನು ಸ್ವೀಕರಿಸುವುದು ಮಾತ್ರವಲ್ಲ, ದೂರುಗಳಿಗೂ ಸ್ಪಂದಿಸಬೇಕು. ಶಿಷ್ಟಾಚಾರವನ್ನು ಚಾಚೂತಪ್ಪದೇ ಪಾಲಿಸಬೇಕು ಎಂದು ಸಿದ್ದರಾಮಯ್ಯ ತಾಕೀತು ಮಾಡಿದರು.

'ಅಧಿಕಾರಿಗಳು ಹೃದಯವಂತಿಕೆಯಿಂದ ಕೆಲಸ ಮಾಡಬೇಕು. ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಅಧಿಕಾರಿಗಳು ಮನೆಯಿಂದಲೇ ಕೆಲಸ ಮಾಡಬಾರದು. ಕೇಂದ್ರ ಸ್ಥಾನದಲ್ಲಿಯೇ ವಾಸವಿರಬೇಕು. ಜನರ ಸೇವೆಗೆ ಲಭ್ಯರಿರಬೇಕು. ಒಂದೋ ಕಚೇರಿಯಲ್ಲಿರಬೇಕು, ಇಲ್ಲವೇ ಪ್ರವಾಸದಲ್ಲಿರಬೇಕು. ಮನೆಯಿಂದ ಕೆಲಸ ಮಾಡುವುದಕ್ಕೆ ಅವಕಾಶವಿಲ್ಲ. ಇದರಿಂದ ಜನರಿಗೆ ತೊಂದರೆಯಾಗುವುದನ್ನು ಸರ್ಕಾರ ಸಹಿಸುವುದಿಲ್ಲ' ಎಂದರು.

'ರಾಜ್ಯದಲ್ಲಿ 251 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು, 174 ಪ್ರಕರಣಗಳಷ್ಟೇ ಇತ್ಯರ್ಥವಾಗಿವೆ. ಉಳಿದ ಪ್ರಕರಣಗಳನ್ನು ಶೀಘ್ರವೇ ವಿಲೇವಾರಿ ಮಾಡಿ ಪರಿಹಾರ ವಿತರಿಸಬೇಕು. ಇದರಲ್ಲಿ ತಡ ಮಾಡುವುದು ಸರಿಯಲ್ಲ. ನೀವು ಚೆನ್ನಾಗಿ ಕೆಲಸ ಮಾಡಿದರೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ' ಎಂದರು.

'ಆಸ್ಪತ್ರೆಗಳಲ್ಲಿ ವೈದ್ಯರು ಲಭ್ಯವಿರುವುದಿಲ್ಲ. ಅರೆ ವೈದ್ಯಕೀಯ ಸಿಬ್ಬಂದಿಯೇ ವೈದ್ಯರ ಪಾತ್ರ ನಿರ್ವಹಿಸುವುದು, ಔಷಧದ ಪ್ರಿಸ್ಕ್ರಿಪ್ಷನ್ ಬರೆಯುವುದು ಸರಿಯಲ್ಲ. ವೈದ್ಯರು ತಮ್ಮ ಕೇಂದ್ರ ಸ್ಥಾನದಲ್ಲಿಯೇ ಇದ್ದುಕೊಂಡು ಜನರ ಕಷ್ಟಗಳಿಗೆ ಸ್ಪಂದಿಸಬೇಕು' ಎಂದು ಆದೇಶಿಸಿದರು.

5ನೇ ಪುಟ ನೋಡಿ

ಸಚಿವರಾದ ಎಚ್‌.ಕೆ.ಪಾಟೀಲ, ಜಿ.ಪರಮೇಶ್ವರ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಂದಾಯ ಸಚಿವ ಕೃಷ್ಣಬೈರೇಗೌಡ ಸಭೆಯಲ್ಲಿ ಇದ್ದರು

'ಗ್ರಾಮಲೆಕ್ಕಿಗರು ಕಚೇರಿಗಳಲ್ಲೇ ಕೆಲಸ ಮಾಡಲಿ'

'ಗ್ರಾಮಲೆಕ್ಕಿಗರು ಜನರ ಕೈಗೇ ಸಿಗುತ್ತಿಲ್ಲ. ಅವರು ಎಲ್ಲಿರುತ್ತಾರೆ ಎಂದು ಹುಡುಕಿಕೊಂಡು ಹೋಗುವುದೇ ಜನರಿಗೆ ಒಂದು ತಲೆನೋವಾಗಿದೆ. ಆದ್ದರಿಂದ ಗ್ರಾಮಲೆಕ್ಕಿಗರು ಗ್ರಾಮಪಂಚಾಯಿತಿಗಳಲ್ಲೇ ಕುಳಿತು ಕೆಲಸ ಮಾಡುವಂತಾಗಬೇಕು. ಇದಕ್ಕಾಗಿ ಗ್ರಾಮಪಂಚಾಯಿತಿಯಲ್ಲೇ ಒಂದು ಕೊಠಡಿ ಇರುವಂತೆ ಕ್ರಮ ಕೈಗೊಳ್ಳಬೇಕು' ಎಂದು ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚಿಸಿದರು.

5ನೇ ಪುಟ ನೋಡಿ

'ಪ್ರತಿ ವಾರ ಜನಸಂಪರ್ಕ ಸಭೆ ನಡೆಸಿ'

ಜನರು ಸಣ್ಣ ಕೆಲಸಗಳಿಗೂ ತಮ್ಮನ್ನು ಹುಡುಕಿಕೊಂಡು ಬರುವುದನ್ನು ತಪ್ಪಿಸಲು ತಾಲ್ಲೂಕು ಮಟ್ಟದಲ್ಲಿ ಪ್ರತಿ ವಾರವೂ ಜನ ಸಂಪರ್ಕ ಸಭೆಗಳನ್ನು ನಡೆಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳಿಗೆ (ಸಿಇಒ) ಸೂಚಿಸಿದರು.

> **ಅಧಿಕಾರಿಗಳಿಗೆ ಅನಗತ್ಯವಾಗಿ ಶಿಕ್ಷೆ ನೀಡುವುದಿಲ್ಲ. ಆದರೆ, ತಪ್ಪು ಮಾಡಿದರೆ ಕಾನೂನು ರೀತ್ಯ ಕಠಿಣ ಕ್ರಮ ಕೈಗೊಳ್ಳಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಜನರು ಸಣ್ಣ ಸಮಸ್ಯೆಗಳಿಗೂ ಪರಿಹಾರ ಬಯಸಿ ನನ್ನ ಬಳಿ ಬರುತ್ತಾರೆ ಎಂದರೆ ನೀವು ಇದ್ದು ಏನು ಪ್ರಯೋಜನ' ಎಂದು ಕಟುವಾಗಿಯೇ ಪ್ರಶ್ನಿಸಿದರು.

'ಮುಖ್ಯಮಂತ್ರಿಯಾದ ಬಳಿಕ ಹಲವು ಜಿಲ್ಲೆಗಳಿಗೆ ಭೇಟಿ ನೀಡಿದ್ದೇನೆ. ಸಾಮಾನ್ಯ ಜನರು ನೂರಾರು ರೀತಿಯ ಮನವಿಗಳನ್ನು ನೀಡುತ್ತಿದ್ದಾರೆ. ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ಪರಿಹಾರ ಒದಗಿಸಲು ಸಾಧ್ಯವಿರುವ ಸಮಸ್ಯೆಗಳನ್ನು ಹೊತ್ತುಕೊಂಡು ಜನರು ನನ್ನ ಬಳಿ ಬರುತ್ತಿದ್ದಾರೆ. ಅಧಿಕಾರಿಗಳಿಗಳು ಸ್ಥಳೀಯವಾಗಿ ಜನ ಸಂಪರ್ಕ ಸಭೆ ನಡೆಸಿ ಪರಿಹಾರ ಒದಗಿಸಿದ್ದರೆ ಈ ರೀತಿ ಆಗುತ್ತಿರಲಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನ್ಯಾಯದಾನ ವಿಳಂಬವಾದರೆ ಕಠಿಣ ಕ್ರಮ: 'ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಬೇಕು. ನ್ಯಾಯದಾನ ವಿಳಂಬವಾದರೆ ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಅವರು ಎಚ್ಚರಿಕೆ ನೀಡಿದರು.

ಜಲಾವೃತ ರಸ್ತೆ ಕೋಲ್ಕತ್ತದಲ್ಲಿ ಭಾರಿ ಮಳೆ ಸುರಿದ ಪರಿಣಾಮ ಜಲಾವೃತವಾಗಿದ್ದ ರಸ್ತೆಯಲ್ಲೇ ವಿದ್ಯಾರ್ಥಿನಿಯರು ಮಂಗಳವಾರ ಸಾಗಿದರು –ಪಿಟಿಐ ಚಿತ್ರ

ನಿತ್ಯ 5 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಶಿಫಾರಸು

ಮತ್ತೆ 'ಕಾವೇರಿ' ಸಂಕಷ್ಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಿಂದ ತಮಿಳುನಾಡಿಗೆ ಸೆ. 13ರಿಂದ ಹದಿನೈದು ದಿನಗಳವರೆಗೆ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರನ್ನು ಬಿಡಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಮಂಗಳವಾರ ಶಿಫಾರಸು ಮಾಡಿದೆ.

ಸಮಿತಿಯ ಅಧ್ಯಕ್ಷ ವಿನೀತ್ ಗುಪ್ತ ಅಧ್ಯಕ್ಷತೆಯಲ್ಲಿ ವರ್ಚುವಲ್ ಮೂಲಕ ನಡೆದ ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಜಲ ಸಂಪನ್ಮೂಲ ಇಲಾಖೆಗಳ ಅಧಿಕಾರಿಗಳು ಭಾಗಿಯಾಗಿದ್ದರು. ಸಮಿತಿಯ ಶಿಫಾರಸಿನಂತೆ ಕರ್ನಾಟಕ ನಡೆದುಕೊಂಡರೆ ಹದಿನೈದು ದಿನಗಳಲ್ಲಿ 7 ಟಿಎಂಸಿ ಅಡಿಯಷ್ಟು ನೀರನ್ನು ತಮಿಳುನಾಡಿಗೆ ಬಿಡಬೇಕಾಗುತ್ತದೆ.

ತಮಿಳುನಾಡಿಗೆ ನೀರು ಬಿಡಲು ಕರ್ನಾಟಕ ಸುತಾರಾಂ ಒಪ್ಪಿಲ್ಲ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಡಬ್ಲ್ಯುಎಂಎ) ಸಭೆ ಬುಧವಾರ ಅಥವಾ ಗುರುವಾರ ನಡೆಯಲಿದ್ದು, ನೀರು ಬಿಡುಗಡೆ ಸಂಬಂಧ ಪ್ರಾಧಿಕಾರ ಅಂತಿಮ ಆದೇಶ ಹೊರಡಿಸಲಿದೆ.

ಆಗಸ್ಟ್ 29ರಿಂದ ಸೆಪ್ಟೆಂಬರ್ 12ರವರೆಗೆ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಕರ್ನಾಟಕಕ್ಕೆ ಪ್ರಾಧಿಕಾರ ನಿರ್ದೇಶನ ನೀಡಿತ್ತು. ಆ ಪ್ರಕಾರ, ರಾಜ್ಯ ನೀರು ಬಿಡುಗಡೆ ಮಾಡಿತ್ತು. ಜತೆಗೆ, ಆದೇಶವನ್ನು ಪುನರ್ ಪರಿಶೀಲನೆ ಮಾಡುವಂತೆ ಪ್ರಾಧಿಕಾರಕ್ಕೆ ಮನವಿ ಮಾಡಿತ್ತು.

4A ಪುಟ ನೋಡಿ

ಇಂದು ತುರ್ತುಸಭೆ

ಬೆಂಗಳೂರು: ತಮಿಳುನಾಡಿಗೆ ಮತ್ತೆ ನೀರು ಬಿಡಲು ಪ್ರಾಧಿಕಾರ ಸೂಚಿಸಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಬುಧವಾರ ವಿಶೇಷ ತುರ್ತುಸಭೆ ನಡೆಯಲಿದೆ.

ಐಐಐಟಿ ಪದವೀಧರ, ಆಂಧ್ರಪ್ರದೇಶದ ಆರೋಪಿ ಸೆರೆ • ₹ 4.16 ಕೋಟಿ ಮೌಲ್ಯದ ವಸ್ತು ಜಪ್ತಿ

ರಿವಾರ್ಡ್ ಪಾಯಿಂಟ್ಸ್‌ಗೆ ಹ್ಯಾಕರ್‌ನಿಂದ ಕನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡುವ ಮೂಲಕ ಗ್ರಾಹಕರ ರಿವಾರ್ಡ್ ಪಾಯಿಂಟ್ಸ್‌ಗೆ ಕನ್ನ ಹಾಕಿ, ₹4.16 ಕೋಟಿ ಮೌಲ್ಯದ ವಸ್ತು ಖರೀದಿಸಿದ್ದ ಆರೋಪಿಯನ್ನು ಬೆಂಗಳೂರು ಆಗ್ನೇಯ ವಿಭಾಗದ ಸೈಬರ್ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ

ಲಕ್ಷ್ಮೀಪತಿ

ಆಂಧ್ರಪ್ರದೇಶದ ಚಿತ್ತೂರಿನ ಬೊಮ್ಮಲೂರು ಲಕ್ಷ್ಮೀಪತಿ ಬಂಧಿತ ಆರೋಪಿ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್ಫಾರ್ಮೇಶನ್ ಟೆಕ್ನಾಲಜಿಯಲ್ಲಿ (ಐಐಐಟಿ) ಆತ ಶಿಕ್ಷಣ ಪಡೆದುಕೊಂಡಿದ್ದ.

'ಆರೋಪಿಯಿಂದ ₹3.40 ಕೋಟಿ ಮೊತ್ತದ 5 ಕೆ.ಜಿ ಚಿನ್ನಾಭರಣ, ₹21.80 ಲಕ್ಷದ 27 ಕೆ.ಜಿ ಬೆಳ್ಳಿ ಸಾಮಗ್ರಿ, ₹11.13 ಲಕ್ಷ ನಗದು, ವಿವಿಧ ಕಂಪನಿಗಳ ಏಳು ಬೈಕ್‌ಗಳು, ಫ್ಲಿಪ್‌ಕಾರ್ಟ್ ವ್ಯಾಲೆಟ್‌ನಲ್ಲಿದ್ದ ₹26 ಲಕ್ಷ, ಅಮೆಜಾನ್ ವ್ಯಾಲೆಟ್‌ನಿಂದ ₹3.50 ಲಕ್ಷ, ಎರಡು ಲ್ಯಾಪ್‌ಟಾಪ್, 3 ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ. ಒಟ್ಟು ಮೌಲ್ಯ ₹4.16 ಕೋಟಿಯಷ್ಟಿದೆ' ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಗರದ 'ರಿವಾರ್ಡ್ 360' ಕಂಪನಿಗೆ ಸೇರಿದ ವೋಚರ್‌ಗಳನ್ನು ಗ್ರಾಹಕರು ಬಳಕೆ ಮಾಡುವುದಕ್ಕೆ ಮೊದಲು ಕಂಪನಿ ವೆಬ್‌ಸೈಟ್ ಹ್ಯಾಕ್ ಮಾಡಿ ಬಳಕೆ ಮಾಡಿಕೊಳ್ಳಲಾಗುತ್ತಿದ್ದ ಬಗ್ಗೆ ದೂರುಗಳು ಬಂದಿದ್ದವು. ಗ್ರಾಹಕರಿಗೆ ಮೋಸ ಎಸಗುತ್ತಿರುವ ಆರೋಪಿಯನ್ನು ಬಂಧಿಸುವಂತೆ ಕಂಪನಿಯ ನಿರ್ದೇಶಕರು ಜೂನ್ 24ರಂದು ಸೈಬರ್ ಠಾಣೆಗೆ ದೂರು ನೀಡಿದ್ದರು. ತನಿಖೆ ನಡೆಸಿದ್ದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

'ಶಿಕ್ಷಣ ಪಡೆದ ಮೇಲೆ ಆರೋಪಿ ದುಬೈ, ಬೆಂಗಳೂರಿನ ವಿವಿಧ ಕಂಪನಿಗಳಲ್ಲಿ ಕೆಲಸ ಮಾಡಿದ್ದ. ತಂತ್ರಜ್ಞಾನ ಬಳಕೆಯಲ್ಲಿ ನೈಪುಣ್ಯ ಪಡೆದುಕೊಂಡಿದ್ದ. ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡುವುದನ್ನು ಕಲಿತಿದ್ದ' ಎಂದು ಕಮಿಷನರ್ ಮಾಹಿತಿ ನೀಡಿದರು.

5ನೇ ಪುಟ ನೋಡಿ

ಶ್ರೀಕಿ ಮನೆಯಲ್ಲಿ ಎಸ್‌ಐಟಿ ಶೋಧ

ಬೆಂಗಳೂರು: ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದಿದ್ದ ಬಿಟ್‌ಕಾಯಿನ್ ಹಗರಣದ ತನಿಖೆ ನಡೆಸುತ್ತಿರುವ ಸಿಐಡಿ ವಿಶೇಷ ತನಿಖಾ ತಂಡವು (ಎಸ್‌ಐಟಿ) ಮೂವರು ಆರೋಪಿಗಳ ಮನೆಗಳ ಮೇಲೆ ಮಂಗಳವಾರ ದಾಳಿ ಮಾಡಿ ಶೋಧ ನಡೆಸಿದೆ. ಕೆಲವು ತಾಂತ್ರಿಕ ದಾಖಲೆಗಳನ್ನು ತನಿಖಾ ತಂಡವು ಜಪ್ತಿ ಮಾಡಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಆರೋಪಿಗಳ ಮನೆಗಳಲ್ಲಿ ಶೋಧ ನಡೆಸಲು ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿದ್ದ ಎಸ್‌ಐಟಿ ತಂಡವು ಪ್ರಮುಖ ಆರೋಪಿ ಹಾಗೂ ಅಂತರ ರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಮನೆಯಲ್ಲಿ ಶೋಧ ನಡೆಸಿದೆ. ಹಗರಣಕ್ಕೆ ಸಹಕಾರ ನೀಡಿದ ಆರೋಪದ ಮೇಲೆ ಸಂಜಯನಗರ ನಿವಾಸಿ ಸುನೀಶ್ ಹೆಗ್ಡೆ, ಸದಾಶಿವನಗರದ ಪ್ರಸಿದ್ಧ ಅವರ ಮನೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

5ನೇ ಪುಟ ನೋಡಿ

ಹರಿಪ್ರಸಾದ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರಿಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಶಿಸ್ತು ಸಮಿತಿ ಮಂಗಳವಾರ ಷೋಕಾಸ್ ನೋಟಿಸ್ ನೀಡಿದೆ. ಹತ್ತು ದಿನಗಳಲ್ಲಿ ಉತ್ತರ ನೀಡುವಂತೆಯೂ ಸೂಚಿಸಿದೆ.

'ಇತ್ತೀಚಿನ ದಿನಗಳಲ್ಲಿ ನೀವು ನೀಡಿರುವ ಹೇಳಿಕೆಗಳು, ಪಕ್ಷದ ಆಧಾರ ಸ್ತಂಭವಾಗಿರುವ ಹಿಂದುಳಿದವರ ಮತ್ತು ಪರಿಶಿಷ್ಟ ಜಾತಿ ಪಂಗಡದವರ ಮನಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುವಂತೆ ಮಾಡಿವೆ. ಪಕ್ಷದ ಹಿರಿಯ ಮುಖಂಡರಾಗಿರುವ ನಿಮಗೆ ಇಂಥ ಹೇಳಿಕೆಗಳ ಪರಿಣಾಮದ ಅರಿವು ಇದ್ದೇ ಇರುತ್ತದೆ. ಆದರೂ ನೀವು ಇಂಥ ಹೇಳಿಕೆಗಳನ್ನು ನೀಡಿರುವುದು ಪಕ್ಷದ ನಿಯಮಗಳ ಉಲ್ಲಂಘನೆಯಾಗಿದೆ' ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

'ಸೆಪ್ಟೆಂಬರ್ 9ರಂದು ಹಿಂದುಳಿದ ವರ್ಗಗಳ ಸಮಾವೇಶದಲ್ಲಿ ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ, ನರೇಂದ್ರ ಬಾಬು, ವೈಎಸ್‌ಆರ್ ಕಾಂಗ್ರೆಸ್‌ನ ಜೋಗಿ ರಮೇಶ್ ಅವರೊಂದಿಗೆ ಪಾಲ್ಗೊಂಡು, ಮುಖ್ಯಮಂತ್ರಿ ಅವರ ಹೆಸರು ಉಲ್ಲೇಖಿಸದೇ ಅವರ ವಿರುದ್ಧ ವಾಗ್ದಾಳಿ ನಡೆಸಿದ್ದೀರಿ. ನಿಮ್ಮ ವಿರುದ್ಧ ಏಕೆ ಶಿಸ್ತುಕ್ರಮ ಕೈಗೊಳ್ಳಬಾರದು ಎಂಬುದಕ್ಕೆ ಉತ್ತರ ನೀಡಿ' ಎಂದು ಕೇಳಲಾಗಿದೆ.

'ನನಗೆ ವಾಟ್ಸ್ ಆ್ಯಪ್ ಮೂಲಕ ನೋಟಿಸ್ ಸಿಕ್ಕಿದೆ. ಅದಕ್ಕೆ ಹತ್ತು ದಿನಗಳ ಒಳಗೆ ಉತ್ತರ ನೀಡುತ್ತೇನೆ' ಎಂದು ಹರಿಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು. ಈ ನೋಟಿಸ್ ಅನ್ನು ಸಮಿತಿಯ ಸದಸ್ಯ ಕಾರ್ಯದರ್ಶಿ ತಾರಿಕ್ ಅನ್ವರ್ ಹೆಸರಿನಲ್ಲಿ ನೀಡಲಾಗಿದೆ. ಬೆಂಗಳೂರಿನಲ್ಲಿ ಶನಿವಾರ ನಡೆದ ಈಡಿಗ ಮತ್ತು ಹಿಂದುಳಿದ ವರ್ಗಗಳ ಸಮಾನ ಮನಸ್ಕರ ಪೂರ್ವಭಾವಿ ಸಭೆಯಲ್ಲಿ ಹರಿಪ್ರಸಾದ್ ಅವರು ಸಿದ್ದರಾಮಯ್ಯ ಹೆಸರು ಹೇಳದೆಯೇ ಟೀಕಾಪ್ರಹಾರ ನಡೆಸಿದ್ದರು.

ದ್ವಿತೀಯ ಪಿಯು ಪೂರಕ ಪರೀಕ್ಷೆ: ಶೇ 35 ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆಯ ಇತಿಹಾಸದಲ್ಲೇ ಇದೇ ಮೊದಲ ಬಾರಿ ದ್ವಿತೀಯ ಪಿಯುಗೆ ನಡೆಸಿದ್ದ ಎರಡನೇ ಪೂರಕ ಪರೀಕ್ಷೆಯ ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, 41,961 (ಶೇ35.21) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಗೆ ಪ್ರತಿವರ್ಷ ನಿಗದಿತ ಸಮಯದಲ್ಲಿ ಮೂರು ಪರೀಕ್ಷೆಗಳನ್ನು ನಡೆಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆಯು ನಿರ್ಧಾರ ತೆಗೆದುಕೊಂಡ ನಂತರ ಮೊದಲ ಬಾರಿ ನಡೆಸಿದ ಎರಡನೇ ಪೂರಕ ಪರೀಕ್ಷೆ ಅತ್ಯಂತ ಯಶಸ್ವಿಯಾಗಿ ನಡೆದಿದೆ. 41 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದೇ ಶೈಕ್ಷಣಿಕ ವರ್ಷದಲ್ಲಿ ಮುಂದಿನ ಹಂತಕ್ಕೆ ಸಾಗುತ್ತಿರುವುದು ಅವರ ಭವಿಷ್ಯಕ್ಕೆ ದೊರೆತ ಅವಕಾಶ ಎಂದು ಸಚಿವ ಮಧು ಬಂಗಾರಪ್ಪ ಹರ್ಷ ವ್ಯಕ್ತಪಡಿಸಿದ್ದಾರೆ.

1.19 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಪೂರಕ ಪರೀಕ್ಷೆಯ ಫಲಿತಾಂಶದಲ್ಲೂ ಯುವತಿಯರು ಹಾಗೂ ಗ್ರಾಮೀಣರು ಮೇಲುಗೈ ಸಾಧಿಸಿದ್ದಾರೆ.

4B ಪುಟ ನೋಡಿ

ಮರು ಮೌಲ್ಯಮಾಪನಕ್ಕೆ ಅರ್ಜಿ: ಸೆ.18 ಕೊನೆ ದಿನ

ಪೂರಕ ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಪಡೆಯಲು ಸೆ.15ರ ಒಳಗೆ ಅರ್ಜಿ ಸಲ್ಲಿಸಬೇಕು. 17ರ ಒಳಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. ಛಾಯಾಪ್ರತಿ ಪಡೆದವರು ಮರು ಎಣಿಕೆ, ಮರು ಮೌಲ್ಯ ಮಾಪನಕ್ಕೆ ಅರ್ಜಿ ಸಲ್ಲಿಸಲು ಸೆ. 18 ಕೊನೆಯ ದಿನವಾಗಿದೆ.

ಛಾಯಾಪ್ರತಿ ಪಡೆಯಲು ಪ್ರತಿ ವಿಷಯಕ್ಕೆ ₹ 530, ಮರು ಮೌಲ್ಯಮಾಪನಕ್ಕೆ ₹ 1,690 ನಿಗದಿ ಮಾಡಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಹೇಳಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು



ಲಿಬಿಯಾದಲ್ಲಿ ಪ್ರವಾಹ: ಕನಿಷ್ಠ 2,300 ಸಾವು 8
ನಾಸಾ: ದಾಖಲೆ ಮುರಿದ ಗಗನಯಾತ್ರಿ ರುಬಿಯೊ 8
'ಸನಾತನ ಧರ್ಮ ವಿರೋಧಿಗಳ ಕಣ್ಣು, ನಾಲಗೆ ಕೀಳುವೆವು' 9

ಸುಧಾ, ಮಯೂರ ಓದಿರಿ

ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನಕ್ಕೊಳಪಟ್ಟಿದೆ) ecotourism
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿ, ವನವಿಕಾಸ, 2ನೇ ಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ದೂ: 080–23448822/26, ಇಮೇಲ್: office@karnatakaecotourism.com

ಸಂಖ್ಯೆ: ಕೆಇಡಿಬಿ/ಮುಕಾನಿ/07/2023–24 ದಿನಾಂಕ: 08.09.2023

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯು ಅಭಿವೃದ್ಧಿ ಪಡಿಸಿದ ವೆಬ್‌ಸೈಟ್‌ನಲ್ಲಿ ಸೇವೆಗಳನ್ನು ನಿರ್ವಹಿಸುವ ಸಲುವಾಗಿ ಮೊಬೈಲ್ ಅಪ್ಲಿಕೇಷನ್ / Ticket Scanning App ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸುವುದು ಮತ್ತು ವೆಬ್‌ಸೈಟ್ ವಿನ್ಯಾಸ, ಅಭಿವೃದ್ಧಿ, ಕಾರ್ಯಾಚರಣೆ, ನಿರ್ವಹಣೆ, ಇ–ಮೇಲ್, ಟಿಕೆಟ್ ಮಾರಾಟ, 24x7 ಸಹಾಯವಾಣಿ, Ticketing application (online/offline) ಹಾಗೂ ಇತರೆ ಕೆಲಸಗಳನ್ನು ನಿರ್ವಹಿಸುವುದರೊಂದಿಗೆ ಗ್ರಾಹಕನಿಂದ ಕನಿಷ್ಠ ಸೇವಾ ಶುಲ್ಕ ಮಾತ್ರ ಪಡೆಯಲು ಇ–ಟೆಂಡರ್ ಅಧಿಸೂಚನೆ ಹೊರಡಿಸಿದೆ.

ವಿವರಗಳು: (1) ಇ–ಟೆಂಡರ್ ಪ್ರಕಟಣೆ ದಿನಾಂಕ: 08.09.2023. (2) ಟೆಂಡರ್‌ಗಿಟ್ಟ ಮೊತ್ತ ರೂ: 30.00 ಲಕ್ಷ. (3) ಇಎಂಡಿ ಮೊತ್ತ ರೂ. 90,000/–. (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22.09.2023 ಸಂಜೆ 5.30 ಗಂಟೆಗೆ. (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25.09.2023 ಪೂರ್ವಾಹ್ನ 11.00 ಗಂಟೆಗೆ. (6) ಆರ್ಥಿಕ ಬಿಡ್ ತೆರೆಯುವ ದಿನಾಂಕ: 29.09.2023 ಪೂರ್ವಾಹ್ನ 11.00 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ಮತ್ತು https://karnatakaecotourism.com ನಿಂದ ಪಡೆದುಕೊಳ್ಳಬಹುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಅರಣ್ಯ) ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

DIPR/CP/YC/1254/2023-24

IN THE COURT OF THE II ADDL DISTRICT & SESSIONS JUDGE, BANGALORE RURAL DISTRICT, BANGALORE
RA NO.141/2022

BETWEEN : SRI. KARTHIK SHEKAR, aged about 43 years, S/o M.Somashekar, R/at 'Shekars" No.62/1-106, 6th main Road, near 39th 'A' Cross, 5th Block, Jayanagar, Bangalore - 560041. ....**APPELLANT**
AND : SRI M SOMASHEKAR AND OTHERS ...**RESPONDENTS**

NOTICE / SUMMONS RESPONDENT NO.7

SRI. RAVISHANKAR SHETTY, aged about 59 years, S/o Sri. K.M.Shetty, R/at No.114, "The Embassy" Ali askar Road, Bangalore - 560001.

Whereas, as the above named appellant has filed regular appeal and challenging the order sated 08-08-2022 passed by the Hon'ble III Addl Senior Civil Judge, Bangalore Rural District Bangalore in O.S.No.89/2017 against you and others this appeal is pending before Hon'ble II Addl District and Session Judge, Bangalore Rural District, Bangalore with interest from the date of the appeal till realization.

You have summonsed to appear before this court on the **25-10-2023 at 11.00 Clocks** in the forenoon in person or by a pleader to answer the question to the same. failing which is heard and determined ex-parte.

Given under my hand the seal of the Court this **12th day of September, 2023.**

By order of the Court, Chief Administrative Officer District & Session Bangalore Rural District, Bangalore.

Sri. B. N. Jayadeva, Unit No.203, IInd Floor, Brigade Links, No.54 /1, 1st Main Road, Seshadripuram, Bangalore - 560020.

ಬಾಡಗ–ಬಾಣಂಗಲ ವ್ಯಾಪ್ತಿಯಲ್ಲಿ ಕಾಡಾನೆ ಹಿಂಡು

ಮಡಿಕೇರಿ: ಇಲ್ಲಿನ ಬಾಡಗ–ಬಾಣಂಗಲ ಕಾಫಿ ತೋಟಗಳಲ್ಲಿ 15ಕ್ಕೂ ಅಧಿಕ ಕಾಡಾನೆಗಳ ಹಿಂಡು ಬೀಡು ಬಿಟ್ಟಿದ್ದು, ಜನ ಆತಂಕಗೊಂಡಿದ್ದಾರೆ.

ಮಾಲ್ದಾರೆ– ಹುಂಡಿ ರಸ್ತೆಯಲ್ಲಿ ಮಂಗಳವಾರ ಸಂಜೆ ದೊಡ್ಡದಾದ ಕಾಡಾನೆ ಹಿಂಡೊಂದು ರಸ್ತೆ ದಾಟಿದೆ. ಕಾರ್ಮಿಕರು ಜೀವಭಯದಿಂದ ಕೆಲಸಕ್ಕೆ ಹೋಗಲು ಹಿಂದೇಟು ಹಾಕುತ್ತಿದ್ದಾರೆ. ವಿದ್ಯಾರ್ಥಿಗಳು ಶಾಲೆ, ಕಾಲೇಜುಗಳಿಗೆ ತೆರಳಲು ಭಯಪಡುವಂತಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಮೂರ್ತಿ ತಯಾರಕರಿಗೆ ಸಚಿವ ಈಶ್ವರ ಖಂಡ್ರೆ ಎಚ್ಚರಿಕೆ

ಪಿಒಪಿ ಗಣಪತಿ: ಕ್ರಿಮಿನಲ್ ಮೊಕದ್ದಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಒಪಿ ಗಣಪತಿ ಮತ್ತು ಭಾರಲೋಹ ಮಿಶ್ರಿತ ರಾಸಾಯನಿಕ ಬಣ್ಣಗಳನ್ನು ಲೇಪಿಸಿದ ಗಣಪತಿ ವಿಗ್ರಹಗಳ ತಯಾರಿಕೆ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಾಲಿನ್ಯ ನಿಯಂತ್ರಣ ಅಧಿಕಾರಿಗಳೊಂದಿಗೆ ತಮ್ಮ ಕಚೇರಿಯಲ್ಲಿ ಮಂಗಳವಾರ ಸಭೆ ನಡೆಸಿದ ಸಚಿವರು, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. 'ಮಾಲಿನ್ಯ ನಿಯಂತ್ರಣ ಮಂಡಳಿಯ ನೋಟಿಸ್‌ಗೂ ಹೆದರದೆ, ಬೀಗಮುದ್ರೆ ಹಾಕಿದ್ದರೂ ಹಿಂಬಾಗಿಲಿನಿಂದ ಪಿಒಪಿ ಗಣಪತಿ ತಯಾರಿಕೆ, ಸಾಗಣೆ, ದಾಸ್ತಾನು ಮತ್ತು ಮಾರಾಟ ಮಾಡುತ್ತಿದ್ದಾರೆ. ಯಾವುದೇ ಒತ್ತಡಕ್ಕೂ ಮಣಿಯದೇ ಇಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು' ಎಂದು ಹೇಳಿದರು.

'ನೀರಿನಲ್ಲಿ ಕರಗದ ಪಿಒಪಿ ವಿಗ್ರಹಗಳು ಜಲಮೂಲಗಳಿಗೆ ಅಪಾಯಕಾರಿಯಾಗಿದ್ದು, ಇಂತಹ ಮೂರ್ತಿಗಳ ತಯಾರಿಕೆ, ಸಾಗಾಟ, ಮಾರಾಟ ಮತ್ತು ವಿಸರ್ಜನೆಯನ್ನು ಸಂಪೂರ್ಣ ತಡೆಯಬೇಕು. ಪ್ರಕೃತಿ ಮತ್ತು ಪರಿಸರ ಉಳಿಸಬೇಕಾದದ್ದು ನಮ್ಮೆಲ್ಲರ ಹೊಣೆ. ಇದಕ್ಕಾಗಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ 2020ರ ಮೇ 12ರಂದು ಮಾರ್ಗಸೂಚಿ ಹೊರಡಿಸಿದ್ದು, ಅದಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಆಗಸ್ಟ್ 21ರಂದು ಸುತ್ತೋಲೆ ಹೊರಡಿಸಿದೆ' ಎಂದು ತಿಳಿಸಿದರು.

ಇಂತಹ ಗಣೇಶ ವಿಗ್ರಹಗಳ ತಯಾರಿಕೆ, ಸಾಗಾಟ, ಮಾರಾಟ ಮತ್ತು ವಿಸರ್ಜನೆ ಮಾಡುವುದರ ವಿರುದ್ಧ ಜಲ, ವಾಯು ಮತ್ತು ಪರಿಸರ ಸಂರಕ್ಷಣಾ ಕಾಯ್ದೆ 1986ರ ಅಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಜಿಲ್ಲಾಡಳಿತಗಳಿಗೂ ನಿರ್ದೇಶನ ನೀಡುವಂತೆ ಮುಖ್ಯಮಂತ್ರಿಯವರಿಗೆ ಮನವಿ ಮಾಡಲಾಗುವುದು ಎಂದರು.

'ಪರಿಸರ ಸ್ನೇಹಿ ಗಣಪತಿ ಪೂಜಿಸಿ'

ಪಿಒಪಿ ಗಣಪತಿಯನ್ನು ತ್ಯಜಿಸಿ, ಪರಿಸರ ಸ್ನೇಹಿ ಗಣಪತಿಯನ್ನು ಪೂಜಿಸಿ ಎಂದು ಸಚಿವ ಈಶ್ವರ ಖಂಡ್ರೆ ಸಾರ್ವಜನಿಕರಿಗೆ ಸಲಹೆ ನೀಡಿದ್ದಾರೆ. ಜಲಚರಗಳ ಸಾವಿಗೆ ಕಾರಣವಾಗುವ ಬಣ್ಣ ಲೇಪಿತ ಗಣೇಶಮೂರ್ತಿಗಳ ಬದಲಿಗೆ ಪರಿಸರ ಸ್ನೇಹಿ ಗಣಪತಿ ಪೂಜಿಸಲು ಇತರರಿಗೂ ಪ್ರೇರೇಪಿಸುವಂತೆ ಮನವಿ ಮಾಡಿದ್ದಾರೆ.

'ಗಣಪತಿ ಪರಿಸರದಿಂದ ಉದ್ಭವಿಸಿದ ದೇವರು, ನಾವು ಪರಿಸರ ಸ್ನೇಹಿ ಗಣಪನ ಪೂಜಿಸಿದರೆ ಅದು ನಿಜ ಭಕ್ತಿಯ ಸಮರ್ಪಣೆ ಆಗುತ್ತದೆ. ಜೇಡಿಮಣ್ಣಿನಿಂದ ಅಥವಾ ಗೋಮಯದಿಂದ ತಯಾರಿಸಿದ ಗಣಪತಿಗಳನ್ನು ಪೂಜಿಸಿ, ಮನೆಯಲ್ಲೇ ವಿಸರ್ಜಿಸಿ ಆ ನೀರನ್ನು ಗಿಡ, ಮರಗಳಿಗೆ ಹಾಕುವ ಮೂಲಕ ಪ್ರಕೃತಿ ಉಳಿಸುವಂತೆ' ಅವರು ಮನವಿ ಮಾಡಿದ್ದಾರೆ.

ಪುರಸಭಾ ಕಾರ್ಯಾಲಯ ಮಾಲೂರು, ಕೋಲಾರ ಜಿಲ್ಲೆ–563130
ದೂರವಾಣಿ ಸಂ: 08151–232847/ ಸಹಾಯ ವಾಣಿ:08151–232840
E-mail: itstaff_ulb_malur@yahoo.co.in, ವೆಬ್‌ಸೈಟ್: www.malurtown.mrc.gov.in

ಸಂಖ್ಯೆ:ಪು.ಸ.ಮಾ/ಕಿ.ಅ/ಟೆಂಡರ್–02/2023–24 ದಿನಾಂಕ:05.09.2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ದ್ವಿ–ಲಕೋಟೆ)

ಮಾಲೂರು ಪುರಸಭೆ ವ್ಯಾಪ್ತಿಯಲ್ಲಿ **2023–24** ನೇ ಸಾಲಿನ ವಿವಿಧ ಕಾಮಗಾರಿಗಳು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ **(ಕೆ.ಟಿ.ಪಿ.ಪಿ. –1999 ನಿಯಮಗಳು 2000)** ಅನ್ವಯ ದ್ವಿ–ಲಕೋಟೆ ಪದ್ಧತಿ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಸರಬರಾಜುದಾರರು / ಗುತ್ತಿಗೆದಾರರು ಟೆಂಡರ್‌ಗಳನ್ನು, ತಾಂತ್ರಿಕ ಬಿಡ್‌ನ್ನು ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ ವಿವರಗಳನ್ನು **KPPP Portal** ನಲ್ಲಿ ಕಾಣಬಹುದು ಹಾಗು ದಸ್ತಾವೇಜಿನ ನಿಯಾಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ, ಪುರಸಭೆ, ಮಾಲೂರು ರವರನ್ನು ಸಂಪರ್ಕಿಸಿ ಪಡೆಯಬಹುದು. **ದೂರವಾಣಿ ಸಂ:080–232238.**

ಕ್ರ.ಸಂ	ಕಾಮಗಾರಿಗಳ ವಿವರ	Indent No
1	Hiring of Drivers, supervisors etc to swm section in TMC Malur	DMA/2023-24/SE0727
2	Hiring of helpers to swm section in TMC Malur	DMA/2023-24/SE0731
3	Hiring of swm staff in TMC Malur	DMA/2023-24/SE0737
4	Hiring of water supply operators in TMC Malur	DMA/2023-24/SE0739
5	Supplying and erection of pupm motor near sanjana hospital & Kumbeshwara kalyana mantapa	DMA/2023-24/WS/ WORK_INDENT399/CALL-2
6	Construction of GLSR near OHT R P Layout and supplying motor pump for bore wells and pipe line	DMA/2023-24/WS/ WORK_INDENT194/ CALL2
7	For carrying out ABC for dogs in Malur TMC	DMA/2023-24/SE0785

Portal Name: https://kppp.karnataka.gov.in/kppp/

ಸಹಿ/– (ಶ್ರೀ ರಮೇಶ್ ಕುಮಾರ್.ಕೆ) ಆಡಳಿತಾಧಿಕಾರಿಗಳು ಪುರಸಭೆ, ಮಾಲೂರು

ಸಹಿ/– (ಶ್ರೀ ಪ್ರದೀಪ್ ಕುಮಾರ್ ಎ.ಬಿ) ಮುಖ್ಯಾಧಿಕಾರಿ ಪುರಸಭೆ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:121/ಕೆಎಸ್‌ಎಂ.ಸಿ.ಎ/2023–24

IN THE COURT OF THE SMALL CAUSES JUDGE (SCCH-4) AT BANGALORE
Execution Petition No. 812/2023

Between: R. Venu & Others ...**Decree Holders**
AND
Narayana Murthy @ Narayana Murthy Adiga ....**Judgement Debtor**

Notice To Judgement Debtor Through Paper Publication
Sri. Narayana Murthy @ Narayana Murthy Adiga S/0 Late Manjunatha Adiga, #110, 5th Cross, Keere Palya, Durga Parameshwari Layout.Raja Rajeshwari Nagar, B'lore-98

Whereas the above execution proceeding is initiated Against you by the decree holders before this Hon'ble Court for seeking to execute the judgement and decree Passed by this Hon'ble court in their favour in **ECA no. 56/2020 on 02-03-2023** the incident took place on **04/08/2019.** You are directed by this Hon'ble court to Pay **Rs. 21,53,037=00** (Rs Twenty one lakhs fifty three Thousand and thirty seven only) to the decree holders Of the above case with interest at the rate of **12%** Per anum from the date of petition till realization you are further directed by this Hon'ble court to deposit The compensation amount within thirty days from the date of order. You are further directed by this Hon'ble Court to release **50%** amount in favour of **Decree Holders 1 and 2** and remaining **50%** shall be kept in Fixed deposit in any Nationalized or schedule Bank for a period of three years, in their respective names. You are further directed by this Hon'ble court to Release entire amount to **Decree holder 3** and you are also directed to pay advocate fee fixed at **Rs. 1500=00.** But till today the compensation amount is not paid by you to the decree holders. You are hereby summoned to appear before this Hon'ble court in person or by a Pleader duly instructed and able to answer to all the questions on this **3rd day of october 2023** at 11:00am failing which the above execution petition will be Disposed off ex-parte

Given under my hand and the seal of the court on this 5th day of September 2023.

Naveen.P Advocate Roll. No- KAR/2823/05 # 1016, 1st A maim road 3rd Stage, 3rd Block 3rd Phase, Banashankari Bangalore-85.

By Order Of The Court Assistant Rigistar Court Of Small Causes Bangalore

ಜಿ20 ಅನುಭವ: ಮೋದಿ ಸಂವಾದ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ತಮ್ಮ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಭೇಟಿಯಾಗಿ ಜಿ20 ಶೃಂಗಸಭೆ ಬಗ್ಗೆ ಅವರ ಅನುಭವಗಳ ಮಾಹಿತಿ ಪಡೆದರು ಎಂದು ಮೂಲಗಳು ತಿಳಿಸಿವೆ.

ನಂತರ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕಾರಿಗಳೂ ಸೇರಿದಂತೆ ಎಲ್ಲಾ ಹಂತದ ಸಿಬ್ಬಂದಿಯನ್ನು ಸುಷ್ಮಾ ಸ್ವರಾಜ್ ಭವನದಲ್ಲಿ ಭೇಟಿಯಾದರು. ಜಿ20 ಶೃಂಗಸಭೆಯ ಕುರಿತು ಅಲ್ಲಿಯೂ ಸಂವಾದ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಬೆಂ.ಮ.ಪ್ರ.ಪ್ರಾ.
ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು

ಸಂಖ್ಯೆ :ಬಿಎಂಆರ್‌ಡಿಎ/ಲೆಕ್ಕಶಾಖೆ/16/2023–24 ದಿನಾಂಕ:12.09.2023

ಟೆಂಡರ್ ಪ್ರಕಟಣೆ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ಇ–ಹರಾಜು **GoK** ಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ:**www.kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಸಹಾಯಕ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಅಪಘಾತದ ಮಾಹಿತಿ ನೀಡುವ 'ರಕ್ಷಾ ಕ್ಯೂಆರ್ ಕೋಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಅಪಘಾತ ಸಂಭವಿಸಿದಾಗ ತುರ್ತಾಗಿ ಕುಟುಂಬದ ಸದಸ್ಯರಿಗೆ ಮಾಹಿತಿ ನೀಡುವ 'ರಕ್ಷಾ ಕ್ಯೂಆರ್ ಕೋಡ್' ಅನ್ನು ಹೈವೇ ಡಿಲೈಟ್ ಸಂಸ್ಥೆ ಮಂಗಳವಾರ ಬಿಡುಗಡೆಗೊಳಿಸಿದೆ.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಸಂಸ್ಥಾಪಕ ರಾಜೇಶ್ ಘಟನಟ್ಟಿ, 'ದೇಶದಲ್ಲಿ ಪ್ರತಿನಿತ್ಯ ನೂರಾರು ಅಪಘಾತಗಳು ಸಂಭವಿಸುತ್ತವೆ. ಅಪಘಾತಕ್ಕೆ ಒಳಗಾದವರ ನೆರವಿಗಾಗಿ ರಕ್ಷಾ ಕ್ಯೂಆರ್ ಕೋಡ್ ಅಭಿವೃದ್ಧಿ ಪಡಿಸಲಾಗಿದೆ. ಸ್ಥಳೀಯರು ಅಪಘಾತಕ್ಕೆ ಒಳಗಾದವರ ವಾಹನಕ್ಕೆ ಅಂಟಿಸಿರುವ ಈ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅವರ ಕುಟುಂಬದ ಸದಸ್ಯರಿಗೆ ತಿಳಿಸಬಹುದು. ಕರೆ ಮಾಡುವ ಮತ್ತು ಸ್ವೀಕರಿಸುವವರ ಮಾಹಿತಿಯನ್ನು ಗೌಪ್ಯವಾಗಿ ಇಡಲಾಗುತ್ತದೆ. ಜತೆಗೆ ನಮ್ಮ ಸಂಸ್ಥೆ ಅಪಘಾತದ ಸ್ಥಳದ ಮಾಹಿತಿ ಪಡೆದುಕೊಂಡು ಸ್ಥಳೀಯ ಆಸ್ಪತ್ರೆ ಮತ್ತು ಪೊಲೀಸ್ ಠಾಣೆಗೆ ಮಾಹಿತಿ ರವಾನಿಸಲಾಗುತ್ತದೆ' ಎಂದು ತಿಳಿಸಿದರು.

ಹೈವೇ ಡಿಲೈಟ್ ಸಂಸ್ಥೆಯ ಸಂಸ್ಥಾಪಕ ರಾಜೇಶ್ ಘಟನಟ್ಟಿ ಅವರು 'ರಕ್ಷಾ ಕ್ಯೂಆರ್ ಕೋಡ್' ಬಿಡುಗಡೆಗೊಳಿಸಿದರು. ಸಿಬ್ಬಂದಿ ಶಿಲ್ಪಾ, ಅಭಿಲಾಷ ಮತ್ತು ಮುರಳಿ ಇದ್ದಾರೆ –ಪ್ರಜಾವಾಣಿ ಚಿತ್ರ

'ರಕ್ಷಾ ಕ್ಯೂಆರ್ ಕೋಡ್ ಪಡೆಯಲು ವಾಹನದ ಮಾಲೀಕರಿಗೆ ಹೈವೇ ಡಿಲೈಟ್‌ನೊಂದಿಗೆ ವಾರ್ಷಿಕ ₹365 ಶುಲ್ಕ ಪಾವತಿಸಿ ನೋಂದಣಿ ಮಾಡಿಕೊಳ್ಳಬೇಕು. ರಕ್ತದ ಗುಂಪು, ವಾಹನದ ವಿಮೆ, ಆರೋಗ್ಯ ವಿಮೆ ಹಾಗೂ ಕುಟುಂಬದ ತುರ್ತು ಮಾಹಿತಿಯ ವಿವರಗಳನ್ನು ಇದರಲ್ಲಿ ಸೇರಿಸಬಹುದು. ಈ ಎಲ್ಲ ಮಾಹಿತಿಗಳನ್ನು ಸುರಕ್ಷಿತವಾಗಿವೆ. ಇದು ಕೇವಲ ಕುಟುಂಬದ ತುರ್ತು ಸಂಪರ್ಕ ಸಂಖ್ಯೆಗೆ ಅಥವಾ ನೋಂದಾಯಿತ ವಾಹನದ ಮಾಲೀಕರ ರಕ್ಷಾ ಕ್ಯೂಆರ್ ಪ್ರೊಫೈಲ್‌ನಲ್ಲಿ ಮಾತ್ರ ಎಸ್‌ಎಂಎಸ್ ಮೂಲಕ ಕಾಣುತ್ತದೆ' ಎಂದು ಅವರು ವಿವರಿಸಿದರು.

ಮಾಹಿತಿಗೆ: https://highwaydelite.com/#/raksha-agent-order ಈ ಜಾಲತಾಣಕ್ಕೆ ಭೇಟಿ ನೀಡಬಹುದು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

SUNDARAM BOREWELLS, Bommasandra Indl.-Area`next to_Narayana Hrudayalaya Hosur Road_Required ACCOUNTS`MANAGER B.Com`with 2-3years-Exp. in`Tally`Call: 9845014845, 9663207070.

Engg/ Production Technical

CALIBRATION LABORATORY seeks science graduate / ITI / Diploma Mechanical, to join our ISO 17025 accredited laboratory team. Located in south Bangalore. Min 2 Years' experience, fresher apply as trainee. Send biodata to 9686393535.

Teachers/ Professors

WANTED MATHEMATICS, Social Teachers for Higher classes CBSE school, Bagepalli. Drop Resumes 9110440705 Salary 15000.

WANTED ENGLISH MEDIUM PUC passed Girls below 25 years with Kannada Mother Tongue to assist Nursery and Primary Teachers. Contact at the earliest in person (10.00 am- 3.00 pm on all working days) - Secretary, Deccan Educational Society®, No. 95, 3rd Cross, Srirampuram, Bengaluru- 560021 (Near Sampige Theater, Malleswaram).

EAST WEST INSTITUTIONS
EAST WEST INSTITUTE OF PHARMACEUTICAL SCIENCES
187, Dodda Aalada Mara Main Road, Kumbalagodu, (Bheemanakuppe Cross) Kengeri Hobli, Bengaluru South. Mobile: 63601 67901
Require following personnel for immediate appointment
PRINCIPAL | PROFESSORS
ASSOCIATE PROFESSORS
ASSISTANT PROFESSORS | LECTURERS
Faculty for: Pharmacognosy, Pharmaceutical Analysis Pharmaceutical Chemistry, Pharmaceutics & Pharmacology.
Qualification: M. Pharm. in the respective specialization. Preference will be given to Ph.D holders for the post of Professor. Industrial experience will also be considered. Qualification, experience & salary as per PCI norms
ALSO WANTED: Admin Officer | Lab Technician | Lab Assistant | Lab Attendant
Apply within 10 days from the date of advertisement E-mail: ewbsni2020@gmail.com
SVM-23407

ARE YOU A QUALIFIED & EXPERT TRAINER IN OET, IELTS OR GERMAN LANGUAGE WITH PASSION FOR TEACHING ?
Join us. We offer a thriving and inclusive teaching environment with Competitive compensation package.
Share your CV to: pursuinginternationaleducation@gmail.com
Short-listed candidates will be called for personal interview.

General

WANTED DISTRIBUTORS, PROMOTERS, Male/ Female, Marketing Staff for fast moving consumer and Pharma products all over Karnataka. Contact:- 9448041257.

WANTED GRAPHIC DESIGNER Computer Typt Male & Female Supervisor @ Jayanagar 9th Block Mob: 9845934508

BHUMIKA BUILDERS requires experienced OFFICE Asst. cum CAR DRIVER immediately Call : 9480316868

RECRUITING FOR Supermarket in Electronic City Phase 1- Shop Supervisor, Billing Clerk and Store Clerk, Send your CV to grandmartbangalore@gmail.com

PANCHASHEELA GROUP of institutions Rajarajeshwari nagar Bangalore require PRO cum Computer operator with five years experience apply dsveeraiahmlc@gmail.com Call me 9448091814

Brindavan Group of Institutions
Dwarakanagar, Bagalur Main Road, Yelahanka, Bengaluru - 560063
Recognized by Government of Karnataka. Approved by AICTE, Council of Architecture, DTE UGC, & PU Board Affiliated to Bengaluru City University (BCU) & Visvesvaraya Technological University (VTU) Accredited at the "A" Level by NAAC
www.brindavancollege.com Ph: +91 8028478388 / 8423, +91 9606487201
Invites Applications from Suitable Applicants for the Proposed Vacancies
Teaching: Assistant Professor / Associate Professor / Professor
In CSE, ISE, AI & ML, IOT, ECE, MBA, MCA and English Departments
Qualification: BE/B.Tech / ME / M.Tech / MCA / MBA (Finance / Business Analytics) MA (60% above) Ph.D and as per UGC and AICTE norms.
Experience: Minimum of 0-10 years in Teaching / Research / Industry in which 5 years shall be at the level of Professor preferably 3 years of Administrative experience with essential management and, leadership qualities.
Non-Teaching: Accounts / Admin / Library / Admission Head / Hostel-Warden
Qualification: Graduate in Any Discipline (Accounts), M.Lib / B.Lib
Experience: Minimum of 0-5 years in College/Institute in which 3 years shall be at the level of Administrative experience with essential management.
The Interested and eligible candidates with mentioned requirements may send the detailed resume to HR@brindavancollege.com and also send your detailed resume with relevant Credentials/Testimonial's to The HR-Director, Brindavan Group of Institutions, Dwarakanagar, Bagalur Main Road, Bangalore-560063 on or before 30.09.2023.
• Salary for the prescribed post as per the UGC / AICTE / State Scale
• The Applicants with Ph.D the relevant subject from recognized Universities are preferable.
• The Institution reserves the rights of Processing Applications by any means.
• The eligible and short-listed candidates shall be communicated for the selection process.
ADMISSIONS OPEN FOR 2023-24
Contact: 9606487201/203/220/080-28478388/28478423
Sd/- CEO

Multiple Vacancy

SOLIDUS GROUP require administrator ,HR, PR, business development executives, office boys, drivers content writers Please send details to wintreat@gmail.com .ph 7022643567

Marketing & Sales

TECHSER POWER SOLUTIONS Pvt.Ltd. AN`ISO-9001 Company Requires HR Executive (Bangalore)`and MARKETING EXECUTIVES For ONLINE UPS/SOLAR For Various Districts Head Quarter in Karnataka. Qualification:- BE/Diploma/BSc Experience: 1-2Years Package: on Experience Benefits:ESI/ PF/Conveyance. Interested Candidates send Resumes to bangalore@techser.com

FUTURE KIDS PUBLICATIONS PVT LTD BANGALORE
We have opening for Young & dynamic sales officers at following locations in Bangalore, Mysore, Tumkur, Davanagere, Belgaum, Gulbarga.
Salary : 20 K to 40 K
ESI + PF + Bonus + Conveyance + Incentives
Interested & Experienced candidates, contact Ph: 9986167032, 080-23145345
Email: bangalore@vkpublications.com fkvkbooks@gmail.com

REQUIRED SALES EXECUTIVE for reputed electric vehicle showroom in Jayanagar. Attractive salary, incentive and TA/ DA. Call 9164705777.

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

REAL ESTATE SELLING

Commercial Building

Chickpet

SALE G+1, East South Corner Semi-Commercial 1000sft on Akkamahadevi Road, Sultanpete Area, Verna Developers, 9353128035/ 9916310226 Brokers Excuse.

Sites

Nagarabhavi

SALE/ RENT 30X40 40X60 Sites,Houses Vishveshwaraiah Annapoorneshwarinagar Health, ITI, NGEF BEL. RUDRAPPA 9035334418 9141326819

Mysore

30X45 SOUTH/ west facing corner site for sale at Byatarayanapura, Mysore Road. Brokers Excuse. Contact +919845900432

Farm House/ Land/ Resorts

Devanahalli

1/2ACRE LAND gated converted eKhata 21K builtup 15 furnished AC rooms garden 9Cr non-nego Ph:7019346409

REAL ESTATE BUYING

Joint Development

General

WANTED PURCHASE or JD Properties at Jayanagar/ Basavangudi/ JP Nagar/ Chamrajpet/ CBD Area. Verna Developers, MG Road, Bangalore 9916310226/ 9353128035 (Brokers Excuse

AUTOMOTIVE

Four Wheelers Selling

Others

DAMAGED VEHICLE Volkswagen polo 1.2, 2018 Model for sale without RC contact 9945110327/ 9110259455

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

PERSONAL

Change of Name

CHANGE OF NAME
I, SUSHMA DIKSHITH, R/at.# 16, Krishna Gardenia , 5th Main Road, Dollars Colony, RMV 2nd Stage, Bangalore - 560094 have changed my name to SUSHMA R. DIXIT vide affidavit dt.09/09/2023 before Notary C. Srinivas, Bangalore. Henceforth I shall be called SUSHMA R. DIXIT only

14830626K, HAV/ MT, PAWAR DAJI RAMCHANDRA, Vill - Bambavade, Palus, Sangli, Maharashtra changed son's name AARYAN to AARYAN DAJI PAWAR, 12/09/2023, Notary K.V. Mani, Bangalore

14830626K, HAV/ MT, PAWAR DAJI RAMCHANDRA, Vill - Bambavade, Palus, Sangli, Maharashtra changed daughter's name MRUNALI to MRUNALI DAJI PAWAR, 12/09/2023, Notary K.V. Mani, Bangalore

SMT ASHWINI, Wife/o, 6498931W, SEP/ASH, SHIVAGOUDA NERLE, Vill- Jainapur, Chikodi, Belgaum, Karnataka changed name SMT ASHWINI to ASHWINI SHIVAGOUDA NERLE, 12/09/2023, Taluka Executive Magistrate, Chikodi

CHANGE OF NAME
I, R. TAMIL SELVI, R/at.# No. 6, Ground Floor, Krishnappa Garden, 1st Block, Cholanagar, R. T. Nagar, Bengaluru - 560032 have changed my name to R. SELVI vide affidavit dt.11/09/2023 before Notary Y. R. Chandrasekar, Bangalore. Henceforth I shall be called R. SELVI only

I, K.ANITHAMAHALAKSHMI, have changed my name to ANITHAMAHALAKSHMI.C.H. vide affidavit dated 11.09.2023 sworn before Notary Thippeswamy.T, Bengaluru

CHANGE OF NAME
I, VIBIN residing at House No. 9, 8th Cross, Muneshwara Layout, Varanasi, Bengaluru- 560036, have changed my name to VIBIN YOHANNAN CHOOVAKARAN, vide affidavit dated 12/09/2023 before Notary S. Subashini, Bangalore. Henceforth I shall be called VIBIN YOHANNAN CHOOVAKARAN, only.

I, CHAITRA S BALURAGI, Residing at Bangalore-560102 have changed my name as CHAITRA BALURAGI, vide affidavit dated 12/8/2023 before Notary P.C.Ramaiah, Bangalore

NIHAL GIRIDHAR B M, 23 years S/o B.V. Muralidhara, R/o #258, Venkatagiri, 3rd Main, 5th Cross, Girinagar Avalahalli BDA Extension, Bengaluru-85 have changed my name from NIHAL MURALIDHARA to NIHAL GIRIDHAR B M vide affidavit dated 12/09/2023 before Notary, Smt. Shashidevi M.P. Bengaluru.

CHANGE OF NAME
I, ABHISHEK, R/at.# 1562, 2nd Cross, Behind Ayodhya Complex, Suggappa Layout, Yelahanka NES, Bangalore-64 have changed my name to ABHISHEK MAHADEV SHEDABALE
MY DOB is mentioned in some record as 29-05-1999 & correcto DOB is 02-05-1999 & My father's name mother's name is mentioned as Mahadeva Vittal Shedabale & Shyla Mahadava Shedabale & Correct names are MAHADEV SHEDABALE & SHAILA SHEDABALE vide affidavit dt.12/09/2023 before Notary S.R. Ravikumar, Bangalore.

PUBLIC NOTICE

TENDER NOTICE
Managing Committee of Tungabhadra Residents Welfare Association invites Pre-qualification bids for Repair & Renovation of Tungabhadra Block in National Games Village, Bengaluru.
For details visit our website www.ngvtungabhadra.in
Total Estimated Cost: ₹ 580 Lakhs + GST
Last Date: 30/09/2023

PUBLIC NOTICE
To Place your Classified Ads Contact 9731810277

DH DECCAN HERALD ಪ್ರಜಾವಾಣಿ JOB HUNT
Classifieds
More value, more impact
Get your HIRING NEEDS answered
JOB
Get the right people for your company...
Book your Ad with us now !
www.dhclassifieds.com BOOK NOW
For more details contact:
+91 9901641752 | +91 9731810277 | +91 9900428036
+91 9886213331 | +91 9845114560 | 080-45557163/164

ಟಿ–2ನಲ್ಲಿ ವಿಮಾನ ಸಂಚಾರ ಆರಂಭ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ: ಸೌದಿಯ ಏರ್‌ಲೈನ್ಸ್ ವಿಮಾನ ಆಗಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್‌-2 (ಟಿ–2) ಕಾರ್ಯಾಚರಣೆ ಮಂಗಳವಾರ ಆರಂಭವಾಯಿತು.

ಜೆಡ್ಡಾದಿಂದ 'ಸೌದಿಯಾ ಏರ್‌ಲೈನ್ಸ್' ವಿಮಾನ ಪ್ರಥಮವಾಗಿ ಟರ್ಮಿನಲ್‌-2ನಲ್ಲಿ ಬಂದಿಳಿಯಿತು. 'ಎಸ್‌ವಿ866' ವಿಮಾನ ಮಂಗಳವಾರ ಬೆಳಿಗ್ಗೆ 10.15ಕ್ಕೆ ಆಗಮಿಸಿತು.

ಇಂಡಿಗೊದ 6ಎ1167 ವಿಮಾನ ಕೊಲೊಂಬೊದಿಂದ ಮಧ್ಯಾಹ್ನ 12.10ಕ್ಕೆ ಬಂದಿಳಿಯಿತು. ಭಾರತ ವಿಮಾನ ಸಂಸ್ಥೆಯ ಪ್ರಥಮ ವಿಮಾನ ಇದಾಗಿತ್ತು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದರು.

ಟರ್ಮಿನಲ್‌–2ಗೆ ಪ್ರಥಮ ವಿಮಾನದಲ್ಲಿ ಬಂದಿಳಿದ ಪ್ರಯಾಣಿಕರಿಗೆ ಡೊಳ್ಳು ಕುಣಿತ ಹಾಗೂ ಯಕ್ಷಗಾನ ಪ್ರದರ್ಶನದ ಮೂಲಕ ಸ್ವಾಗತ ಕೋರಲಾಯಿತು. 'ಸೌದಿಯಾ' ವಿಮಾನ ಎಸ್‌ವಿ867 ಜೆಡ್ಡಾಗೆ ಬೆಳಿಗ್ಗೆ 11.50ಕ್ಕೆ ಟರ್ಮಿನಲ್‌–2ನಿಂದ ನಿರ್ಗಮಿಸಿತು.

ಟರ್ಮಿನಲ್‌–1ನಲ್ಲಿ ಮಂಗಳವಾರದಿಂದ ದೇಶೀಯ ವಿಮಾನಗಳ ಕಾರ್ಯಾಚರಣೆ ಮಾತ್ರ ಮುಂದುವರಿದಿದೆ. ಇಂಡಿಗೊ, ಆಕಾಶ ಏರ್, ಅಲೈಯನ್ಸ್ ಏರ್ ಮತ್ತು ಸ್ಪೈಸ್‌ಜೆಟ್ ವಿಮಾನಗಳು ಹಾರಾಟ ನಡೆಸಿದವು. ಟರ್ಮಿನಲ್‌-2 ಅಂತರ ರಾಷ್ಟ್ರೀಯ ವಿಮಾನಗಳಿಗೆ ಸೀಮಿತ ವಾಗಿದ್ದರೂ, ಏರ್‌ಏಷಿಯಾ, ಏರ್ ಇಂಡಿಯಾ, ಸ್ಟಾರ್ ಏರ್ ಮತ್ತು ವಿಸ್ತಾರದ ದೇಶೀಯ ವಿಮಾನಗಳೂ ಕಾರ್ಯಾಚರಣೆ ನಡೆಸ ಲಿವೆ ಎಂದು ಅಧಿಕಾರಿಗಳು ತಿಳಿಸಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಹ್ಯಾರಿ ಮರಾರ್ ಮಾತನಾಡಿ, 'ಟರ್ಮಿನಲ್‌-2 ಆಧುನಿಕ ಮೂಲಸೌಕರ್ಯಗಳನ್ನು ಹೊಂದಿದ್ದು, ಉತ್ತಮ ಮಳಿಗೆಗಳ ಆಯ್ಕೆಯನ್ನೂ ಹೊಂದಿದೆ. ನಾಗರಿಕರ ಪ್ರಯಾಣವನ್ನು ಮರುವಿಮರ್ಶಿಸ ಲಾಗಿದೆ' ಎಂದರು.

ಆಗಸ್ಟ್ 31ರಂದು ಟರ್ಮಿನಲ್‌-2 ಕಾರ್ಯಾಚರಣೆ ಮಾಡಲಿದೆ ಎಂದು ಈ ಮೊದಲು ಪ್ರಕಟಿಸಲಾಗಿತ್ತು. ಒಂದು ದಿನದ ಮೊದಲು ಉದ್ಘಾಟನೆ ಕಾರ್ಯಕ್ರಮವನ್ನು ಮುಂದೂಡ ಲಾಗಿತ್ತು. ಕಳೆದ ನವೆಂಬರ್‌ನಲ್ಲಿ ಉದ್ಯಾನವನ್ನು ಉದ್ಘಾಟಿಸಲಾಗಿತ್ತು. 2,55,551 ಚದರ ಮೀಟರ್ ವ್ಯಾಪ್ತಿಯಲ್ಲಿರುವ ಟರ್ಮಿನಲ್‌-2ನಲ್ಲಿ ವಾರ್ಷಿಕ 2.5 ಕೋಟಿ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್‌–2ನಿಂದ ಸೌದಿ ವಿಮಾನ ಜೆಡ್ಡಾಗೆ ಮಂಗಳವಾರ ನಿರ್ಗಮಿಸಿತು (ಎಡಚಿತ್ರ). ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್‌–2 ಉದ್ಘಾಟನೆ ಸಮಾರಂಭದಲ್ಲಿ ಮಂಗಳವಾರ ಡೊಳ್ಳು ಕುಣಿತ ಹಾಗೂ ಯಕ್ಷಗಾನ ಪ್ರದರ್ಶನ ಆಯೋಜಿಸಲಾಗಿತ್ತು

ಅಧಿಕಾರಿಗಳಿಗೆ ಶಾಸಕ ಎಸ್‌. ಮುನಿರಾಜು ಸೂಚನೆ

'ಕೆರೆಗಳ ಸ್ವಚ್ಛತೆಗೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಚೊಕ್ಕಸಂದ್ರ ಕೆರೆಗೆ ಕಲುಷಿತ ನೀರು ಹರಿಸಬಾರದು' ಎಂದು ಶಾಸಕ ಎಸ್. ಮುನಿರಾಜು ಅಧಿಕಾರಿಗಳಿಗೆ ಸೂಚಿಸಿದರು.

ಕೆರೆ ಪರಿಶೀಲನೆ ಹಾಗೂ ಚರಂಡಿ ನೀರನ್ನು ಶುದ್ಧೀಕರಿಸಲು ಇರುವ ಘಟಕಕ್ಕೆ ತೆರಳಿ ಅಧಿಕಾರಿಗಳಿಂದ ಮಾಹಿತಿ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚೊಕ್ಕಸಂದ್ರ ಕೆರೆಯಲ್ಲಿ ಚರಂಡಿಯ ಕಲುಷಿತ ನೀರು ಸೇರಿ ಮೀನುಗಳು ಸಾವಿಗೀಡಾಗಿವೆ. ಹೀಗಾಗಿ, ಮೀನುಗಾರಿಕೆ ಇಲಾಖೆಗೆ ಪತ್ರ ಬರೆದು ಸದ್ಯಕ್ಕೆ ಕೆರೆಗೆ ಮೀನುಗಳನ್ನು ಬಿಡಬೇಡಿ' ಎಂದು ಸೂಚಿಸುತ್ತೇನೆ' ಎಂದು ತಿಳಿಸಿದರು.

'ಕೆರೆಗಳನ್ನು ಅಭಿವೃದ್ಧಿ ಮಾಡಿ ಮಾದರಿ ಕೆರೆಗಳ ಮಾಡುವ ಕಲ್ಪನೆ ನಮ್ಮದು. 2017ಕ್ಕೆ ಮೊದಲು ದಾಸರಹಳ್ಳಿ, ಬಾಗಲಗುಂಟೆ, ಕಮ್ಮ-ಗೊಂಡನಹಳ್ಳಿ ಕೆರೆಗಳನ್ನು ಅಭಿವೃದ್ಧಿಪ-ಡಿಸಲಾಗಿತ್ತು. ಬಾಗಲಗುಂಟೆ ಕೆರೆಯಲ್ಲಿ ಮಳೆಗಾಲದಲ್ಲಿ ನೀರು ತುಂಬುವ ಕೆಲಸವಾಗದೆ ಕೊಳವೆ ಬಾವಿಗಳ ನೀರಿನ ಮಟ್ಟ ಕುಸಿಯುತ್ತಿದೆ' ಎಂದು ಅವರು ತಿಳಿಸಿದರು.

'ಕಲುಷಿತ ನೀರಿನಿಂದ ದುರ್ವಾಸನೆ ಬೀರುತ್ತಿದೆ. ಸ್ವಚ್ಛತೆ ಕಾಪಾಡಿಲ್ಲ. ವಾಯುವಿಹಾರಿಗಳಿಗೆ ನಡೆದಾಡಲು ಸರಿಯಾದ ರಸ್ತೆ ಇಲ್ಲ. ಜಿಮ್ ಯಂತ್ರಗಳು ಇಲ್ಲ. ಇಂತಹ ಸಮಸ್ಯೆಗ-ಳನ್ನು ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಅವರು ಹೇಳಿದರು.

ಈ ವೇಳೆ ಗಣೇಶ ಹಬ್ಬ ಹತ್ತಿರ ಇರುವುದರಿಂದ ಚೊಕ್ಕಸಂದ್ರ ಕೆರೆಯ ಪಕ್ಕದಲ್ಲಿ ಇದ್ದ ದೊಡ್ಡ ಕಲ್ಯಾಣಿಗೆ ನೀರು ತುಂಬಿಸಿ ಅಲ್ಲಿ ಗಣೇಶ ಮೂರ್ತಿಗಳನ್ನು ವಿಸರ್ಜಿಸಲು ಸೂಚಿಸಿದರು.

ಚೊಕ್ಕಸಂದ್ರ ಕೆರೆಯನ್ನು ಶಾಸಕ ಎಸ್‌. ಮುನಿರಾಜು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಪ್ರಾಣಿ, ಪಕ್ಷಿಗಳ ದಾಹ ತಣಿಸಲು ಕೊಳವೆ ಬಾವಿ ನೀರು

ಬೊಮ್ಮಶೆಟ್ಟಿಹಳ್ಳಿ ಕೆರೆ ತುಂಬಿಸಿದ ಟ್ರಸ್ಟ್

• ಬೈಲಮೂರ್ತಿ ಜಿ.

ಹೆಸರಘಟ್ಟ: ಈ ಬಾರಿಯ ಮುಂಗಾರು ವಿಫಲವಾಗಿ ಮಳೆ ಇಲ್ಲದೇ ಕೆರೆ-ಕಟ್ಟೆ-ಗಳು ಒಣಗುತ್ತಿದ್ದರೂ, ಹೋಬಳಿಯ ಬೊಮ್ಮಶೆಟ್ಟಿಹಳ್ಳಿ ಕೆರೆ ಮಾತ್ರ ತುಂಬಿ ತುಳುಕುತ್ತಿದೆ. ಇದರಿಂದ ಪ್ರಾಣಿ ಪಕ್ಷಿಗಳು, ಸುತ್ತಮುತ್ತಲ ಗ್ರಾಮಗಳ ಜಾನುವಾರುಗಳು ದಾಹ ನೀಗಿಸಿ-ಕೊಳ್ಳುತ್ತಿವೆ. ಅಂತರ್ಜಲ ವೃದ್ಧಿಗೂ ನೆರವಾಗಿದೆ.

ಮುಂಗಾರು ಮಳೆ ತಡವಾಗಿತ್ತು. ಜುಲೈಯಲ್ಲಿ ಮಳೆ ಬಂತಾದರೂ ಆಗಸ್ಟ್‌ನಲ್ಲಿ ಕಣ್ಮರೆಯಾಗಿ-ತ್ತು. ಇದರಿಂದ ಸಮೃದ್ಧವಾಗಿರ-ಬೇಕಿದ್ದ ಕೆರೆಗಳು ಒಣಗಿದ್ದವು. ಮಳೆಯನ್ನೇ ಆಶ್ರಯಿಸಿರುವ ರೈತರ ಬೆಳೆಗಳು ಒಣಗಿವೆ. ಜಾನುವಾರುಗಳು, ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರಿಲ್ಲದಂತಾಗಿತ್ತು.

ಇದನ್ನು ಗಮನಿಸಿದ ಬೊಮ್ಮ-ಶೆಟ್ಟಿಹಳ್ಳಿ ಗ್ರಾಮದ ಉದ್ಯಮಿ ವಿ. ರಾಮಸ್ವಾಮಿ ತಮ್ಮ ಹಿತಚಿಂತನಾ ಚಾರಿಟಬಲ್ ಟ್ರಸ್ಟ್ ನೆರವಿನಿಂದ ₹ 2.50 ಲಕ್ಷ ಖರ್ಚಿನಲ್ಲಿ ಕೆರೆ ಪಕ್ಕ ದಲ್ಲೇ ಕೊಳವೆಬಾವಿ ಕೊರೆಸಿ, ಮೋಟಾರು ಅಳವಡಿಸಿ ಕೆರೆಗೆ ನೀರು ಹರಿಸಿದ್ದಾರೆ.

ಈಗ ನೂರಾರು ದನ-ಕರುಗಳು, ಪ್ರಾಣಿ-ಪಕ್ಷಿಗಳು ದಾಹ ನೀಗಿಸಿಕೊ-ಳ್ಳುತ್ತಿವೆ. ಅಂತರ್ಜಲ ಮಟ್ಟ ಉತ್ತ-ಮವಾಗಿದ್ದು ಸುತ್ತ ಮುತ್ತಲಿನ ರೈತರ ಕೊಳವೆಬಾವಿಗಳಲ್ಲಿ ನೀರಿನ ಮಟ್ಟ ಸುಸ್ಥಿತಿಯಲ್ಲಿದೆ ಎಂದು ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದರು.

ಹಸುಗಳು ದಾಹ ನೀಗಿಸಿಕೊಳ್ಳುತ್ತಿರುವುದು

ಯಾವ ಕೆರೆಯಲ್ಲೂ ನೀರಿಲ್ಲ

ಕಳೆದ ಬಾರಿ ವಾಡಿಕೆಗಿಂತಲೂ ಅಧಿಕ ಮಳೆಯಾಗಿದ್ದರಿಂದ ಹೆಸರಘಟ್ಟ ಕೆರೆ ತುಂಬುವ ಹಂತ ತಲುಪಿತ್ತು. ಹಿಂದಿನ ಬಾರಿಯ ಸಂಗ್ರಹ ಹೊರತುಪಡಿಸಿ ಹೊಸದಾಗಿ ಹೆಚ್ಚು ನೀರು ಬಂದಿಲ್ಲ. ಅಲ್ಲದೇ ಹೆಸರಘಟ್ಟ ಹೋಬಳಿಯ ಹಲವು ಕೆರೆಗಳಲ್ಲಿ ಅಲ್ಪ ಪ್ರಮಾಣದಲ್ಲಿ ನೀರಿದ್ದು ಈ ವರ್ಷ ತುಂಬುವ ಲಕ್ಷಣಗಳಿಲ್ಲ. ಈ ಮಧ್ಯೆ ಬೊಮ್ಮಶೆಟ್ಟಿಹಳ್ಳಿ ಕೆರೆಗೆ ತಮ್ಮ ಸ್ವಂತ ದುಡ್ಡಿಂದ ನೀರು ತುಂಬಿಸಿರುವ ಹಿತಚಿಂತನಾ ಚಾರಿಟಬಲ್ ಟ್ರಸ್ಟ್‌ನ ವಿ. ರಾಮಸ್ವಾಮಿ ಅವರ ಕಾರ್ಯ ಜನ ಮನ್ನಣೆಗೆ ಪಾತ್ರವಾಗಿದೆ.

ಜಾನುವಾರುಗಳು, ಪ್ರಾಣಿ ಪಕ್ಷಿಗಳು ಬೇಸಿಗೆಯಲ್ಲಿ ನೀರಿಗಾಗಿ ಪರಿತಪಿಸು ತ್ತಿದ್ದನ್ನು ಕಂಡು ಶಾಶ್ವತ ಪರಿಹಾರಕ್ಕಾಗಿ ಕೊಳವೆಬಾವಿ ಕೊರೆಸಿದೆ.

ವಿ.ರಾಮಸ್ವಾಮಿ, ಮ್ಯಾನೇಜಿಂಗ್ ಟ್ರಸ್ಟಿ, ಹಿತಚಿಂತನಾ ಚಾರಿಟಬಲ್ ಟ್ರಸ್ಟ್

ಮಳೆಯ ಕೊರತೆಯಿಂದ ಪ್ರಾಣಿ ಪಕ್ಷಿಗಳಿಗೆ ಉಂಟಾಗಿದ್ದ ನೀರಿನ ಅಭಾವವನ್ನು ಹಿತಚಿಂತನಾ ಚಾರಿಟಬಲ್ ಟ್ರಸ್ಟ್ ನೀಗಿಸಿದೆ

ಭಾಗ್ಯಮ್ಮ ಗೋಪಾಲ್

ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ

ಟ್ರಸ್ಟ್ ಮೂಲಕ ರಾಮಸ್ವಾಮಿಯವರು ಮೂಕ ಪ್ರಾಣಿಗಳ ದಾಹವನ್ನು ನೀಗಿಸುತ್ತಿರುವ ಕಾರ್ಯ ಎಲ್ಲರಿಗೂ ಮಾದರಿ.

ರಾಮಾಂಜನೇಯ

ಸ್ಥಳೀಯ ರೈತ

ಕಳಂಕ ಮೆತ್ತಿಸಿದರೂ ದೃತಿಗೆಡದ ರಾಹುಲ್

ಚಿಂತಕ ಪ್ರೊ.ಜಿ.ಎನ್‌. ದೇವಿ ಶ್ಲಾಘನೆ, 'ಸ್ಟ್ರೇಂಜ್ ಬರ್ಡನ್ಸ್' ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ವ್ಯಕ್ತಿತ್ವಕ್ಕೆ ನಿರಂತರ ಕಳಂಕ ಮೆತ್ತಿಸಿದರೂ, ದೃತಿಗೆಡದೆ ಜನರ ಮಧ್ಯೆ ಸಾಗುತ್ತಿರುವ ರಾಹುಲ್ ಗಾಂಧಿ ನಿಜಕ್ಕೂ 'ಅನಿರೀಕ್ಷಿತ ಹೊರೆ'ಗಳನ್ನು ನಿಭಾಯಿ-ಸುತ್ತಿರುವ ನಾಯಕ ಎಂದು ಚಿಂತಕ ಪ್ರೊ.ಜಿ.ಎನ್. ದೇವಿ ಬಣ್ಣಿಸಿದರು.

ನಗರದಲ್ಲಿ ಮಂಗಳವಾರ ಪಾರ ದರ್ಶಕ್ ಮೀಡಿಯಾ ಫೌಂಡೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಹುಲ್ ಗಾಂಧಿ ಅವರ ಕುರಿತು ಪತ್ರಕರ್ತ ಸುಗತ ಶ್ರೀನಿವಾಸರಾಜು ಬರೆದಿರುವ 'ಸ್ಟ್ರೇಂಜ್ ಬರ್ಡನ್ಸ್' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಬಾಲ್ಯದಲ್ಲೇ ಅಜ್ಜಿ ಇಂದಿರಾ, ಯೌವನದಲ್ಲಿ ತಂದೆ ರಾಜೀವ್ ಅವರನ್ನು ಹಂತಕರು ಹತ್ಯೆ ಮಾಡಿ ದರೂ ಸಾಮಾಜಿಕ ಬದುಕಿನಿಂದ ವಿಮುಖರಾಗುವ ಯೋಚನೆಯನ್ನೂ ರಾಹುಲ್ ಮಾಡಲಿಲ್ಲ. ಪರಿವಾರದ ಹತ್ಯೆಗಳ ನೋವನ್ನು ನುಂಗುತ್ತಲೇ ಸಮಾಜಕ್ಕೆ ಪ್ರೀತಿ ಹಂಚಲು ನಿರಂತರ ಪ್ರಯತ್ನ ಮಾಡಿದ್ದಾರೆ. ಅವರ ನಡೆ ಬುದ್ಧಪ್ರಜ್ಞೆಯ ಹಾದಿಯಂತೆ ಗೋಚರಿ ಸುತ್ತದೆ. ಒಂದು ರಾಷ್ಟ್ರೀಯ ಪಕ್ಷ, ಅದರ ಪರಿವಾರ, ಕೆಲ ಮಾಧ್ಯಮಗಳು ಅವರ ವ್ಯಕ್ತಿತ್ವವನ್ನು ಸಾರ್ವಜನಿಕ ವಾಗಿ ಕುಗ್ಗಿಸುವ ಪ್ರಯತ್ನ ಮಾಡಿದರೂ, ಹಿಂದಡಿ ಇಡಲಿಲ್ಲ. ಇಂತಹ ನಿರ್ಧಾರಗಳಿಂದಲೇ ರಾಹುಲ್ ಸಾಮಾನ್ಯ ಜನರಿಗೆ ಹತ್ತಿರವಾಗುತ್ತಿದ್ದಾರೆ ಎಂದರು.

ರಾಹುಲ್ ಅವರಲ್ಲಿನ ಮಾನವ ಪ್ರೀತಿ, ಬಡವರ ಬಗೆಗಿನ ಕಾಳಜಿ, ಕೋಮುವಾದಕ್ಕೆ ವಿರುದ್ಧವಾದ ಜಾತ್ಯತೀತ ನಿಲುವು, ಧರ್ಮಗಳ ಮಧ್ಯೆ ಸಾಮರಸ್ಯ ಮೂಡಿಸುವ ಪ್ರಯತ್ನ, ಅಧ್ಯಾತ್ಮ, ಮಾನವೀಯತೆ, ಭಕ್ತಿಯ ನಿಲುವು, ಧಾರ್ಮಿಕ ಆಚರಣೆ ಜತೆಗೆ ಅವರಲ್ಲಿನ ದ್ವಂದ್ವ, ವೈರುಧ್ಯಗಳನ್ನು ಉದಾಹರಣೆ, ದಾಖಲೆಗಳ ಸಮೇತ ಸುಗತ ಅವರು ನಿರೂಪಿಸಿದ್ದಾರೆ. ಪುಸ್ತಕ ಓದುತ್ತಾ ಸಾಗಿದಂತೆ ರಾಹುಲ್ ಅವರನ್ನು ಪರಕಾಯ ಪ್ರವೇಶ ಮಾಡಿರುವಂತೆ ಭಾಸವಾಗುತ್ತದೆ ಎಂದು ವಿಶ್ಲೇಷಿಸಿದರು.

ಇತಿಹಾಸತಜ್ಞ ಸಂಜೀವ್ ಜೈನ್, ಸುಖದ ಸುಪ್ಪತ್ತಿಗೆಯಲ್ಲಿ ಇರುವ ಅವಕಾಶವನ್ನು ನಿರಾಕರಿಸಿ, ಪ್ರತೀಕಾರದ ರಾಜಕೀಯಕ್ಕೆ ಎದೆಯೊಡ್ಡಿ ಸಾಗುತ್ತಿರುವ ರಾಹುಲ್ ಹಲವರಿಗೆ ಸ್ಫೂರ್ತಿ. 2004ರಲ್ಲಿ ರಾಜಕೀಯಕ್ಕೆ ಪದಾರ್ಪಣೆ ಮಾಡಿದ ದಿನದಿಂದ ಭಾರತ್ ಜೋಡೊ ಯಾತ್ರೆವರೆಗಿನ ಅವರ ಪಯಣದ ಏಳು-ಬೀಳುಗಳನ್ನು ವಾಸ್ತವದ ವಿಶ್ಲೇಷಣೆ ಮೂಲಕ 'ಸ್ಟ್ರೇಂಜ್ ಬರ್ಡನ್ಸ್' ಕಟ್ಟಿಕೊಟ್ಟಿದೆ ಎಂದರು.

ನಟಿ ಪದ್ಮಾವತಿ ರಾವ್, ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್, ಸುಗತ ಶ್ರೀನಿವಾಸ ರಾಜು ಇದ್ದರು.



ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿಂತಕ ಜಿ.ಎನ್‌. ದೇವಿ (ಎಡದಿಂದ ಮೂರನೆಯವರು) 'ಸ್ಟ್ರೇಂಜ್ ಬರ್ಡನ್ಸ್' ಪುಸ್ತಕ ಬಿಡುಗಡೆ ಮಾಡಿದರು. ಪದ್ಮಾವತಿ ರಾವ್, ಸುಗತ ಶ್ರೀನಿವಾಸರಾಜು, ಸಂಜೀವ್ ಜೈನ್, ಚಿರಂಜೀವಿ ಸಿಂಘ್ ಇದ್ದರು – ಪ್ರಜಾವಾಣಿ ಚಿತ್ರ

ಪುಸ್ತಕ ಕುರಿತು

ಕೃತಿ: ಸ್ಟ್ರೇಂಜ್ ಬರ್ಡನ್ಸ್
ಲೇಖಕ: ಸುಗತ ಶ್ರೀನಿವಾಸರಾಜು
ಪ್ರಕಾಶನ: ಪೆಂಗ್ವಿನ್ ಇಂಡಿಯಾ
ಪುಟಗಳು: 311
ಬೆಲೆ: ₹699

ಪ್ರಜಾವಾಣಿ@75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ
8147623791
080 45557204
readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಿಕ್ಷಕರಿಗೆ 'ಉತ್ತಮಶಿಕ್ಷಕ' ಪ್ರಶಸ್ತಿ ಪ್ರದಾನಮಾಡಲಾಯಿತು. ತುಮಕೂರು ವಿಶ್ವವಿದ್ಯಾಲಯದ ಮಾಜಿ ಕುಲಸಚಿವ ಪ್ರೊ. ಕೆ. ಶಿವಚಿತ್ತಪ್ಪ, ರೇವಾ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಧನಂಜಯ, ವಿವೇಕಾನಂದ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಎನ್‌.ಮುನಿಕೆಂಪಣ್ಣ, ಒಕ್ಕೂಟದ ಅಧ್ಯಕ್ಷ ಶ್ರೀರಾಮಚಂದ್ರ, ಕಾರ್ಯದರ್ಶಿ ವಿ.ಸುರೇಶ್‌, ಖಜಾಂಚಿ ಚಿಕ್ಕಹನುಮಂತೇಗೌಡ, ನ್ಯೂ ನೋಬೆಲ್ ಆಂಗ್ಲ ಪ್ರೌಢಶಾಲೆಯ ಕಾರ್ಯದರ್ಶಿ ಮುಕ್ತಾರ್ ಅಹಮದ್ ಇದ್ದರು

85 ಶಿಕ್ಷಕರಿಗೆ 'ಉತ್ತಮ ಶಿಕ್ಷಕ' ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: 'ಶಿಕ್ಷಕ ವೃತ್ತಿ ಬಹಳ ಶ್ರೇಷ್ಠ. ಜಾತಿ, ಭಾಷೆ ಹಾಗೂ ಧರ್ಮದ ತಾರತಮ್ಯಗಳನ್ನು ಮೀರಿ ಮಕ್ಕಳಿಗೆ ಸಂಸ್ಕಾರಯುತ ಮತ್ತು ಜ್ಞಾನಾಧಾರಿತ ಶಿಕ್ಷಣವನ್ನು ಧಾರೆಯೆರೆಯು ವವರೇ ನಿಜವಾದ ಶಿಕ್ಷಕರು' ಎಂದು ತುಮಕೂರು ವಿಶ್ವ-ವಿದ್ಯಾಲಯದ ಮಾಜಿ ಕುಲಸಚಿವ ಪ್ರೊ.ಕೆ.ಶಿವಚಿತ್ತಪ್ಪ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟ ಹಾಗೂ ರೇವಾ ವಿಶ್ವ ವಿದ್ಯಾಲಯದ ಸಹಯೋಗದೊಂದಿಗೆ ರೇವಾ ಕಾಲೇಜಿನಲ್ಲಿ ಆಯೋಜಿಸಿದ್ದ 'ಗುರುನಮನ' ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸರ್ವಪಲ್ಲಿ ರಾಧಾಕೃಷ್ಣ ಮತ್ತು ಸಾವಿತ್ರಿಬಾಯಿ ಫುಲೆ ಅವರು ಶಿಕ್ಷಕರಿಗೆ ಎಂದೆಂದಿಗೂ ಮಾದರಿಯಾಗಿದ್ದಾರೆ' ಎಂದು ಸ್ಮರಿಸಿದರು.

ರೇವಾ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ. ಧನಂಜಯ ಮಾತನಾಡಿ, 'ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಅತಿಮುಖ್ಯ. ಪ್ರಾಥಮಿಕ ಶಿಕ್ಷಕರು ಒಬ್ಬ ತಂದೆ, ತಾಯಿ ಸ್ಥಾನದಲ್ಲಿ ನಿಂತು ಮಕ್ಕಳನ್ನು ದೇಶದ ಉತ್ತಮ ಪ್ರ-ಜೆಗಳನ್ನಾಗಿ ರೂಪಿಸುವ ಜವಾಬ್ದಾರಿ ಹೊಂದಿದ್ದಾರೆ' ಎಂದರು.

ಇದೇ ಸಂದರ್ಭದಲ್ಲಿ ಬೆಂಗಳೂರು ಉತ್ತರ ವಲಯ-4ರ ವ್ಯಾಪ್ತಿಯ ಶಾಲಾ-ಕಾಲೇಜುಗಳ 85 ಶಿಕ್ಷಕರಿಗೆ "ಉತ್ತಮಶಿಕ್ಷಕ" ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಂತರರಾಷ್ಟ್ರೀಯ ಯುಟಿಲಿಟಿ ಡಾಗ್ ಸ್ಪೋರ್ಟ್ಸ್ 17ಕ್ಕೆ

ಬೆಂಗಳೂರು: 'ಪೆಟ್‌ಗಾಲ್ ಮತ್ತು ಫಿಲೈನ್ ಕ್ಲಬ್ ಆಫ್ ಇಂಡಿಯಾದಿಂದ (ಎಫ್‌ಸಿಐ) ಇದೇ 17ರಂದು ಅಂತರ-ರಾಷ್ಟ್ರೀಯ ಯುಟಿಲಿಟಿ ಡಾಗ್ ಸ್ಪೋರ್ಟ್ಸ್ ಜಯಮಹಲ್ ಅರಮನೆಯಲ್ಲಿ ಹಮ್ಮಿ-ಕೊಳ್ಳಲಾಗಿದೆ' ಎಂದು ಎಫ್‌ಸಿಐ ಅಧ್ಯಕ್ಷ ಸಾಕಿಬ್ ಪಠಾಣ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಫ್‌ಸಿಐ ಮತ್ತು ಮಾರ್ಸ್ ಪೆಟ್‌ಕೇರ್‌ನ ಬ್ರಾಂಡ್ ವಿಸ್ಕಾಸ್‌ನ ಸಹಭಾಗಿತ್ವದಲ್ಲಿ ಬೆಕ್ಕು ಗಳ ಪ್ರದರ್ಶನ ಆಯೋಜಿಸಲಾಗಿದ್ದು, 200ಕ್ಕೂ ಹೆಚ್ಚು ಬೆಕ್ಕುಗಳು ಭಾಗವಹಿ ಸಲಿವೆ. ಜೊತೆಗೆ ಪೆಟ್‌ಕೇರ್ ಸಾಕು ಪ್ರಾಣಿಗಳ ದತ್ತು ಸ್ವೀಕಾರ ಅಭಿಯಾನ ವನ್ನು ಹಮ್ಮಿಕೊಳ್ಳಲಾಗಿದೆ' ಎಂದರು.

ನೆಫ್ರೋ–ಯುರಾಲಜಿ: ಪ್ರಭಾರ ನಿರ್ದೇಶಕರ ಬಗ್ಗೆ ತನಿಖೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೆಫ್ರೋ ಯುರಾಲಜಿ ಸಂಸ್ಥೆಯಲ್ಲಿನ ಅವ್ಯವಸ್ಥೆ ಹಾಗೂ ಪ್ರಭಾರ ನಿರ್ದೇಶಕ ಡಾ. ಕೇಶವಮೂರ್ತಿ ಆರ್. ಅವರ ಕರ್ತವ್ಯ ಲೋಪದ ಬಗ್ಗೆ ಸೂಕ್ತ ತನಿಖೆ ನಡೆಸಿ, 15 ದಿನಗಳೊಳಗೆ ವರದಿ ಸಲ್ಲಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

'ಅಕ್ರಮ ಸೇವಾ ಬಡ್ತಿ, ವೈದ್ಯಕೀಯ ನಿರ್ಲಕ್ಷ್ಯಕ್ಕೆ ಸಂಬಂಧಿಸಿದಂತೆ ಪ್ರಭಾರ ನಿರ್ದೇಶಕರನ್ನು ಕೂಡಲೇ ಅಮಾನತುಗೊಳಿಸಿ, ಸಂಸ್ಥೆಗೆ ಹಿರಿಯ ಅಧಿಕಾರಿಯನ್ನು ಮುಖ್ಯ ಆಡಳಿತಾಧಿ-ಕಾರಿಯನ್ನು ನೇಮಿಸುವಂತೆ ವಿಧಾನ ಪರಿಷತ್ತಿನ ಮಾಜಿ ಸದಸ್ಯ ಪಿ.ಆರ್. ರಮೇಶ್ ಮನವಿ ಮಾಡಿದ್ದಾರೆ. ಆಡಳಿತಾಧಿಕಾರಿ ನೇಮಿಸುವ ಬಗ್ಗೆ ಕೂಡಲೇ ಪ್ರಸ್ತಾವನೆ ಸಲ್ಲಿಸಲು ಹಾಗೂ ಸಂಸ್ಥೆಯಲ್ಲಿನ ಅವ್ಯವಸ್ಥೆ, ವೈದ್ಯಕೀಯ ನಿರ್ಲಕ್ಷ್ಯ, ಆಡಳಿತಾತ್ಮಕ ಹಾಗೂ ಹಣಕಾಸು ಸಂಬಂಧಿತ ಅವ್ಯವಹಾರ, ಅಕ್ರಮ ಸೇವಾ ಬಡ್ತಿ, ಕರ್ತವ್ಯ ಲೋಪದ ಬಗ್ಗೆ ತನಿಖೆ ನಡೆಸಲು ಕ್ರಮವಹಿಸಬೇಕು' ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿಗೆ ಪತ್ರ ಬರೆದಿದ್ದ ಪಿ.ಆರ್. ರಮೇಶ್, 'ನೆಫ್ರೊ ಯುರಾಲಜಿ ಸಂಸ್ಥೆಯ ಅವ್ಯವಸ್ಥೆ ಮತ್ತು ನಿರ್ಲಕ್ಷ್ಯದಿಂದ ಮೂತ್ರಪಿಂಡ ವರ್ಗಾವಣೆ ಚಿಕಿತ್ಸೆಗೆ ಒಳಗಾಗಿದ್ದ 9 ಮಂದಿಯಲ್ಲಿ ನಾಲ್ವರು ಮೃತರಾಗಿದ್ದಾರೆ. ಉಳಿದವರು ಸಾವು ಬದುಕಿನ ನಡುವೆ ಹೋರಾಟ ಮಾಡುತ್ತಿದ್ದಾರೆ. ರಾಮನಗರದ ನಿವಾಸಿ ರಂಜಿತ್‌ರಾಜ್ ಎಂಬ ಯುವಕ ವೈದ್ಯರ ನಿರ್ಲಕ್ಷ್ಯದಿಂದಾಗಿ 11 ತಿಂಗಳಿನಿಂದ ಕೋಮಾದಲ್ಲಿದ್ದಾರೆ' ಎಂದು ತಿಳಿಸಿದ್ದರು.

'ಕೇಶವಮೂರ್ತಿ ಅವರು ಸಂಸ್ಥೆಯಲ್ಲಿ 4 ವರ್ಷಗಳಿಂದ ಪ್ರಭಾರ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿ-ದ್ದಾರೆ. ನಿಯಮ ಪ್ರಕಾರ 6 ತಿಂಗಳಿಗಿಂತ ಹೆಚ್ಚು ಅವಧಿಗೆ ಯಾವುದೇ ಅಧಿಕಾರಿ ಪ್ರಭಾರ ಹುದ್ದೆಯಲ್ಲಿ ಮುಂದುವ-ರಿಯುವಂತಿಲ್ಲ. ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗ ಆರೋಪ ದಲ್ಲಿ ಇದೇ ಪ್ರಭಾರ ನಿರ್ದೇಶಕರು ಮತ್ತು ಸಿಬ್ಬಂದಿ ಮೇಲೆ 2 ವರ್ಷಗಳಿಂದ ಲೋಕಾಯುಕ್ತ ವಿಚಾರಣೆ ನಡೆಯು ತ್ತಿದೆ. ಪ್ರಭಾರ ನಿರ್ದೇಶಕರನ್ನು ಅಮಾ ನತು ಮಾಡಬೇಕು. ಹಿರಿಯ ಅಧಿಕಾರಿ ಯನ್ನು ಆಡಳಿತಾಧಿಕಾರಿಯನ್ನಾಗಿ ನೇಮಿ ಸಬೇಕು' ಎಂದು ಒತ್ತಾಯಿಸಿದ್ದರು.

ನಗರದಲ್ಲಿ ಇಂದು



ಅನಂತನಾಗ್

'ಅನಂತನಾಗ್ ಉತ್ಸವ': ಉದ್ಘಾಟನೆ: ಪ್ರಕಾಶ ಬೆಳವಾಡಿ, ಎಚ್‌.ಎನ್. ಸುರೇಶ್, 'ವಿಚಾರ ಸಂಕಿರಣ'ದ ಅಧ್ಯಕ್ಷತೆ: ಎನ್. ನರಹರಿ ರಾವ್, ಭಾಗವಹಿಸುವವರು: ಸದಾಶಿವ ಶೆಣೈ, ಸುಂದರ್ ರಾಜ್, ರಮೇಶ್ ಭಟ್, 'ಅಂಕುರ್' ಸಿನಿಮಾ ಪ್ರದರ್ಶನ, ಆಯೋಜನೆ: ಭಾರತೀಯ ವಿದ್ಯಾಭವನ, ಸುಚಿತ್ರ ಫಿಲಂ ಸೊಸೈಟಿ, ಸ್ಥಳ: ಇ.ಎಸ್‌.ವಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ದತ್ತು ಸ್ವೀಕರಿಸಿ ಅಭಿವೃದ್ಧಿಪಡಿಸಿದ ಸರ್ಕಾರಿ ಶಾಲೆಗಳ ಹಸ್ತಾಂತರ, ಮಕ್ಕಳಿಗೆ ಬ್ಯಾಗ್ ಮತ್ತು ಪುಸ್ತಕ ವಿತರಣೆ: ಉದ್ಘಾಟನೆ: ಎಂ.ಆರ್. ದೊರೆಸ್ವಾಮಿ, ಅತಿಥಿ: ಕೆ. ಗೋಪಾಲಯ್ಯ, ಉಪಸ್ಥಿತಿ: ಎಂ. ಕೃಷ್ಣಪ್ಪ, ಪ್ರಸನ್ನ ಕುಮಾರ್ ಎಂ.ಎಸ್., ಹನುಮಂತಯ್ಯ, ಅಧ್ಯಕ್ಷತೆ: ಎಂ. ರುಕ್ಮಾಂಗದ ನಾಯ್ಡು, ಆಯೋಜನೆ: ಕೃಷ್ಣ ಸಮೂಹ ವಿದ್ಯಾ ಸಂಸ್ಥೆ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅರೇಹಳ್ಳಿ, ಬೆಳಿಗ್ಗೆ 10.30

ವಚನ ಶ್ರಾವಣ: ವಚನ ಗಾಯನ: ಟಿ.ಎಂ. ಜಾನಕಿ, ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿಗಳು: ಬಿ. ಚಂದ್ರಿಕ, ಮಹೇಶ ಎಂ., ಶಿವಸ್ವಾಮಿ ಎನ್‌.ಎಸ್., ಗುರುಪ್ರಸಾದ್ ಕುಚ್ಚಂಗಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ದಿ ನಾರ್ಥ್‌ವೆಸ್ಟ್ ಶಾಲೆ, ನಾಗರಭಾವಿ, ಬೆಳಿಗ್ಗೆ 10.30

ಡಾ.ಬಾಬಾಸಾಹೇಬ್ ಅಂಬೇಡ್ಕರ್ ಜಯಂತಿ, ವಾರ್ಷಿಕ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಿದ್ದರಾಮಯ್ಯ, ಪ್ರಶಸ್ತಿ ಪ್ರದಾನ: ಎಚ್‌.ಸಿ. ಮಹದೇವಪ್ಪ, ಎನ್. ಚೆಲುವರಾಯಸ್ವಾಮಿ, 'ಬಿ. ರಾಚಯ್ಯ ದತ್ತಿ ಪ್ರಶಸ್ತಿ' ಪುರಸ್ಕೃತರು: ದಿನೇಶ್ ಅಮೀನ್‌ಮಟ್ಟು, ವಾರ್ಷಿಕ ಪ್ರಶಸ್ತಿ ಪುರಸ್ಕೃತರು: ಸಿ. ಮುನಿಯಪ್ಪ, ಮಾಳಪ್ಪ ಅಡಸಾರೆ, ಡಿ.ಎನ್. ಮೈಲಾರಪ್ಪ, ಆಯೋಜನೆ: ಕರ್ನಾಟಕ ರಾಜ್ಯ ಎಸ್ಸಿ/ಎಸ್ಟಿ ಪತ್ರಿಕಾ ಸಂಪಾದಕರ ಸಂಘ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ರಾಷ್ಟ್ರೀಯ ವಿಚಾರಸಂಕಿರಣದ ಸಮಾರೋಪ ಸಮಾರಂಭ: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಅತಿಥಿಗಳು: ಅಜಿತ್ ಕುಮಾರ್ ಹೆಗಡೆ, ಎನ್. ಷೇಕ್ ಮಸ್ತಾನ್, ಅಧ್ಯಕ್ಷತೆ: ಷೇಕ್ ಲತೀಫ್, ಆಯೋಜನೆ ಮತ್ತು ಸ್ಥಳ: ಎಚ್‌.ಎನ್. ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಸಂಜೆ 4

'ಕಾರ್ತಿಕೇಯ ಕಲ್ಯಾಣ' ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕ್ಷಣ ಕ್ಷಣದ ಮಾಹಿತಿಗೆ prajavani.net ನೋಡಿ

ರೈತರ ಹಿತ ಕಾಪಾಡುವಲ್ಲಿ ಸಹಕಾರಿ ಸಂಘಗಳ ಪಾತ್ರ ದೊಡ್ಡದು: ಕೃಷ್ಣಬೈರೇಗೌಡ

ಪ್ರಜಾವಾಣಿ ವಾರ್ತೆ

ಯಲಹಂಕ: 'ರಾಜ್ಯದ ರೈತರ ಹಿತ ಕಾಪಾಡುವಲ್ಲಿ ಸಹಕಾರಿ ಸಂಘಗಳು ಮಹತ್ವದ ಪಾತ್ರ ವಹಿಸುತ್ತಿವೆ. ಈ ಸೇವೆಯನ್ನು ಇನ್ನಷ್ಟು ವಿಸ್ತರಿಸುವ ಮೂಲಕ ರೈತರು ಹಾಗೂ ಬಡಜನರ ಅಭಿವೃದ್ಧಿಗೆ ಶ್ರಮಿಸಬೇಕು' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಜಕ್ಕೂರಿನಲ್ಲಿ ಆಯೋಜಿಸಿದ್ದ ಬ್ಯಾಟರಾಯನಪುರ ವ್ಯವಸಾಯ ಸೇವಾ ಸಹಕಾರಿ ಸಂಘದ 2022-23ನೇ ಸಾಲಿನ ಸರ್ವಸದಸ್ಯರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಸಂಘಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳುವ ಜತೆಗೆ ರೈತರು ಕೃಷಿ ಚಟುವಟಿಕೆ ನಡೆಸಲು ಹಾಗೂ ಬಡಜನರಿಗೆ ಸಾಲಸೌಲಭ್ಯ ಒದಗಿಸಿ ಅನುಕೂಲ ಮಾಡಿಕೊಡಬೇಕು' ಎಂದರು.

'ಸುದೀರ್ಘವಾದ ಇತಿಹಾಸವಿರುವ ಸಂಘವು ಈ ಭಾಗದಲ್ಲಿ ವ್ಯವಸಾಯ ಚಟುವಟಿಕೆಗಳು ಇದ್ದಾಗ ಆರಂಭವಾಗಿತ್ತು. ಇತ್ತೀಚೆಗೆ ಕಡಿ-ಮೆಯಾಗಿದ್ದರೂ ಸಹ ಬದಲಾದ ಪರಿಸ್ಥಿತಿಯ ನಡುವೆಯೂ ತನ್ನ ಅಸ್ತಿ-ತ್ವವನ್ನು ಉಳಿಸಿಕೊಂಡು ಈ ಭಾಗದ ಜನರ ಸೇವೆಯನ್ನು ಮಾಡಿಕೊಂಡು ಬರುತ್ತಿದೆ. ₹6 ಕೋಟಿ ಠೇವಣಿ ಹೊಂದಿದ್ದು, ₹5.11 ಕೋಟಿ ಸಾಲ ನೀಡಿ, ₹23 ಲಕ್ಷ ಲಾಭದೊಂದಿಗೆ ಪ್ರಗತಿಯ ಹಾದಿಯಲ್ಲಿದೆ' ಎಂದು ಶ್ಲಾಘಿಸಿದರು.

ಮನವಿ: ಸಂಘದ ಕಾರ್ಯಚಟುವಟಿಕೆ ಗಳಿಗಾಗಿ ಜಕ್ಕೂರಿನಲ್ಲಿ ಗುರುತಿಸಿರುವ 10 ಗುಂಟೆ ಭೂಮಿಯನ್ನು ಮಂಜೂರು ಮಾಡಿಸಿಕೊಡಬೇಕು ಎಂದು ಸಂಘದ ಪದಾಧಿಕಾರಿಗಳು ಸಚಿವ ಕೃಷ್ಣಬೈರೇಗೌಡರಿಗೆ ಮನವಿಪತ್ರ ಸಲ್ಲಿಸಿದರು.

ಜಕ್ಕೂರಿನಲ್ಲಿ ಆಯೋಜಿಸಿದ್ದ ಬ್ಯಾಟರಾಯನಪುರ ವ್ಯವಸಾಯ ಸೇವಾ ಸಹಕಾರಿ ಸಂಘದ 2022–23ನೇ ಸಾಲಿನ ಸರ್ವಸದಸ್ಯರ ಸಭೆಯನ್ನು ಕಂದಾಯ ಸಚಿವ ಕೃಷ್ಣಬೈರೇಗೌಡ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಎ.ಮೋಹನ್ ರಾಜ್‌, ಉಪಾಧ್ಯಕ್ಷ ಎಸ್‌.ಸೋಮಶೇಖರ್‌, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಂ. ಮಂಜುನಾಥ್ ಇದ್ದರು

BHARAT DYNAMICS LIMITED
(A Govt. of India Enterprise, Ministry of Defence)
Corporate Office, Hyderabad – 500 032

WALK-IN-INTERVIEW

DATE(S)	PLACE
16-09-2023 & 17-09-2023 From 08:30 hrs onwards	**Aeronautical Society of India,** Suranjan Das Road, Opposite Engine Division, Binna Mangala, New Tippasandra, **Bengaluru,** Karnataka – 560075

34 POSTS

Applications are invited from eligible Indian Nationals for **WALK-IN-INTERVIEW** for the position of **34-PROJECT ENGINEER(S) (07- Mechanical and 27-Electronics / Electrical / Computer Science)** on CONTRACTUAL BASIS for BDL-Project Office located in the premises of ADE, Bengaluru.

Visit our website: www.bdl-india.in > Careers > Recruitment for **detailed Advertisement** / updates / corrigendum. Further, if any query, please Contact: **040-23456 132 / 131.**

C-HR (TA & CP) /Advt. 2023-6

THE FORCE BEHIND PEACE

ತಂತ್ರಜ್ಞಾನ



ನೋಡಿ ನಿಮ್ಮಿಷ್ಟದಂತೆ ಫೈಟ್!



ಪರಿಸರದ ನಕಾಶೆಗೂ ‘ಕೃತಕ ಬುದ್ಧಿಮತ್ತೆ’

ಶರತ್ ಭಟ್ ಸೇರಾಜೆ

ಈಚೆಗೆ ಕೃತಕ ಬುದ್ಧಿಮತ್ತೆ ಆಧಾರಿತ ಚಾಟ್ಬಾಟ್ ತಂತ್ರಾಂಶವಾದ ಚಾಟ್ ಜಿಪಿಟಿ ಬಹಳಷ್ಟು ಸುದ್ದಿಯಲ್ಲಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಇನ್ನು ಕೆಲವೇ ವರ್ಷಗಳಲ್ಲಿ ಕೃತಕ ಬುದ್ಧಿಮತ್ತೆಯ ವರ್ಚುವಲ್ ಅಸಿಸ್ಟೆಂಟ್‌ಗಳು ನಮ್ಮ ಮೊಬೈಲು ಫೋನುಗಳಷ್ಟೇ ಸರ್ವಸಾಮಾನ್ಯವಾಗಿ ಬಿಡುತ್ತವೆ ಎಂಬ ಊಹೆಯೂ ಇದೆ. ಚಾಟ್ ಜಿಪಿಟಿ ಎನ್ನುವಾಗ, ‘ಜಿಪಿಟಿ’ ಎಂದರೆ ಏನು ಎಂಬ ಪ್ರಶ್ನೆ ಬರುವುದು ಸಹಜವೇ. ‘ಜಿಪಿಟಿ’ ಎನ್ನುವುದು ‘Generative Pre-trained Transformer’ ಎನ್ನುವುದರ ಹ್ರಸ್ವರೂಪ. ಇದರಲ್ಲಿನ ‘Pre-trained’ ಎನ್ನುವುದು ಅದಕ್ಕೆ ಈಗಾಗಲೇ ಅಗಾಧ ಪ್ರಮಾಣದ ಪಠ್ಯವನ್ನು ಉಣ್ಣಿಸಿ, ಒಂದು ರೀತಿಯಲ್ಲಿ ತರಬೇತಿ ಕೊಟ್ಟು ಅದನ್ನು ತಯಾರು ಮಾಡಲಾಗಿದೆ ಎಂಬುದರ ಸೂಚನೆಯನ್ನು ಕೊಡುತ್ತದೆ. ‘Generative’ ಎನ್ನುವುದು ಅದು ಏನನ್ನಾದರೂ ಉತ್ಪಾದಿಸಬಲ್ಲದು; ಎಂದರೆ, ಬಳಕೆದಾರರು ಕೇಳುವ ಪ್ರಶ್ನೆಗಳಿಗೆ ತಕ್ಷಣವೇ ಬರಹರೂಪದಲ್ಲಿ ಉತ್ತರವನ್ನು ಉತ್ಪಾದಿಸಬಲ್ಲದು, ಅಥವಾ ಒಂದು ಪ್ರಬಂಧವನ್ನೋ ಲೇಖನವನ್ನೋ ಸಿದ್ಧಪಡಿಸಿಕೊಡಬಲ್ಲದು ಎಂಬುದರ ಸೂಚಕ. ಇಂಥವುಗಳನ್ನು ‘Generative AI’ ಎನ್ನುವ ಕ್ರಮವೂ ಉಂಟು. ಈ ಜನರೇಟಿವ್ AIಗಳು ಚಾಟ್ ಜಿಪಿಟಿ ಮಾಡುವ ಕೆಲಸಗಳ ಆಚೆಯೂ ಬಹಳಷ್ಟನ್ನು ಮಾಡಿ ತೋರಿಸಬಲ್ಲವು ಎಂಬುದು ಕುತೂಹಲಕಾರಿಯಾದ ವಿಚಾರ. ಇವುಗಳನ್ನು ಪರಿಸರ ಸಂರಕ್ಷಣೆಯಂಥ ಕೆಲಸಕ್ಕೂ ಉಪಯೋಗಿಸುವ ನಿಟ್ಟಿನಲ್ಲಿ ಯೋಚಿಸಿದವರಿದ್ದಾರೆ. ಮೈಕ್ರೋಸಾಫ್ಟ್ ಸಂಸ್ಥೆಯ ಸಹ-ಸಂಸ್ಥಾಪಕರಲ್ಲಿ ಒಬ್ಬರಾಗಿದ್ದ ಪಾಲ್ ಅಲೆನ್ ಸ್ಥಾಪಿಸಿದ ‘ಅಲೆನ್ ಇನ್‌ಸ್ಟಿಟ್ಯೂಟ್ ಫಾರ್ ಎಐ’ ಎಂಬ ಸಂಸ್ಥೆಯು ತಯಾರಿಸಿರುವ ನಕಾಶೆಯೊಂದು ಗಮನ ಸೆಳೆಯುವಂತಿದೆ. ನಕಾಶೆಗಳು ಸಾವಿರ ಇವೆ; ಅದರಲ್ಲೇನು ವಿಶೇಷ? ‘ಇದರಲ್ಲಿ ಗಮನ ಸೆಳೆಯುವಂಥದ್ದು ಏನಿದೆಯಪ್ಪಾ’ ಎನ್ನುವ ಪ್ರಶ್ನೆಯನ್ನೀಗ ಎತ್ತಿಕೊಳ್ಳೋಣ. ಇದು ಮಾಮೂಲಿ ನಕಾಶೆಯಲ್ಲ; ಪರಿಸರದ ಆರೋಗ್ಯದ ಬಗ್ಗೆ ಮಾಹಿತಿಯನ್ನು ಕೊಡಬಹುದಾದ ನಕಾಶೆ. ಈಗ ಜಲವಿದ್ಯುಚ್ಛಕ್ತಿ, ಗಾಳಿಯಂತ್ರಗಳ ವಾಯುಶಕ್ತಿ, ಸೌರಶಕ್ತಿ ಮುಂತಾದ ಬೇಗ ಖಾಲಿಯಾಗದ ಇಂಧನಮೂಲಗಳಿಂದ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯು ಪರಿಸರಸ್ನೇಹಿ ಎಂದು ಹೇಳುತ್ತೇವಲ್ಲ, ಇಂಥವು ಜಗತ್ತಿನಲ್ಲಿ ಎಲ್ಲೆಲ್ಲಿ ಇವೆ ಎಂಬುದನ್ನು ಕಾಣಿಸುವ ನಕಾಶೆಯಿದು. ಇಷ್ಟು ಮಾತ್ರ ಅಲ್ಲ, ಮರ-ಗಿಡಗಳ, ಅರಣ್ಯಗಳ ಪ್ರಮಾಣ ಎಲ್ಲೆಲ್ಲಿ ಎಷ್ಟೆಷ್ಟು ಇವೆ ಎಂಬುದರ ವಿವರವನ್ನೂ ಇದು ಗೊತ್ತು ಮಾಡಿಸುತ್ತದೆ.

ಅಷ್ಟೇ ಅಲ್ಲ, ಕಾಲಕ್ರಮದಲ್ಲಿ ಯಾವ ಯಾವ ಕಡೆಯಲ್ಲಿ ಅರಣ್ಯಗಳ, ಮರಗಿಡಗಳ ಪ್ರಮಾಣ ಹೇಗೆ ಬದಲಾಗಿದೆ ಎಂಬ ವಿವರಗಳನ್ನೂ ಅದು ಸಿದ್ಧಪಡಿಸಿಕೊಡಬಲ್ಲದು. ಅಧಿಕಾರದಲ್ಲಿದ್ದು ಪರಿಸರಕ್ಕೆ ನಾವು ಉಂಟುಮಾಡುತ್ತಿರುವ ಹಾನಿಯನ್ನು ತಡೆಯಬೇಕೆಂದು ಹೊರಟವರಿಗೆ, ಪರಿಸರಸ್ನೇಹಿಯಾದ ರಾಜ್ಯನೀತಿ, ಕಾರ್ಯನೀತಿ, ಕಾನೂನು-ಕಟ್ಟಲೆಗಳನ್ನು ರಚಿಸಲು ಮೊದಲು ಮಾಡುವವರಿಗೆ ಎಲ್ಲ ಬೇಕಾದ ಮೂಲಮಾಹಿತಿಯನ್ನು, ದತ್ತಾಂಶಗಳನ್ನು ಇದು ಕೊಡಬಲ್ಲದು. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ, ಯೋಜನೆಗಳನ್ನು ರೂಪಿಸಲು ಇವುಗಳನ್ನು ಆಧಾರಾಂಶಗಳಾಗಿ ಬಳಸುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

‘ಈ ವಿವರಗಳು ಉಪಗ್ರಹಗಳಿಂದ ಸಿಕ್ಕುವುದಿಲ್ಲವೇ’ ಎಂದರೆ ಸಿಗುತ್ತವೆ. ಆದರೆ ಸಮಸ್ಯೆ ಏನಪ್ಪಾ ಎಂದರೆ, ಆ ಚಿತ್ರಗಳು ಅಸ್ಪಷ್ಟವಾಗಿ, ಮಸುಕು ಮಸುಕಾಗಿ ಇರುತ್ತವೆ. ಆ ಮಸುಕಾದ ಚಿತ್ರಗಳಿಗೆ ಊಹೆಯಿಂದ ಬಣ್ಣಗೊಟ್ಟು ಸ್ಪಷ್ಟವಾದ ಚಿತ್ರಗಳನ್ನು ತಯಾರಿಸಿಕೊಡುವ ಕೆಲಸ ಅಲೆನ್ ಇನ್‌ಸ್ಟಿಟ್ಯೂಟಿನವರ ಕೃತಕ ಬುದ್ಧಿಮತ್ತೆಯದ್ದು. ಅದಕ್ಕೆ ಈ ಅಸ್ಪಷ್ಟ ಚಿತ್ರಗಳನ್ನು ನೋಡಿ, ಸರಿಯಾಗಿ ಗುರುತಿಸಿ, ಸ್ಪಷ್ಟವಾದ ಚಿತ್ರಗಳನ್ನು ಉತ್ಪಾದಿಸುವ ಸಾಮರ್ಥ್ಯ ಸುಮ್ಮನೆ ಬರಲಿಲ್ಲ. ಅದಕ್ಕೆ ಸುಮಾರು 36,000 ಗಾಳಿಯಂತ್ರಗಳು, 4,000 ಸೌರಶಕ್ತಿಯ ಫಾರ್ಮ್‌ಗಳು ಮತ್ತು 3,000 ಮರಗಳ ಮೇಲಿನ ಚಾಚುರೆಂಬೆಗಳ ಸ್ತರಗಳನ್ನು ತೋರಿಸಿ, ಉಣ್ಣಿಸಿ, ಇವುಗಳನ್ನು ಗುರುತಿಸುವುದು ಹೇಗೆ ಎಂದು ಹೇಳಿ ಕೊಡಲಾಗಿದೆ. ಹೀಗೆ ಹೊಸ ಹೊಸತನ್ನು ಕಲಿತು, ಕಲಿತದ್ದನ್ನು ನೆನಪಿಟ್ಟುಕೊಂಡು, ನೆನಪಿಟ್ಟದ್ದನ್ನು ಮುಂದಿನ ದಿನಗಳಲ್ಲಿ ಬಳಸಿ, ಅದರ ಬಲದಿಂದ ಹೊಸತನ್ನೇನಾದರೂ ಮಾಡಿ ಕೊಡುವುದು ಜನರೇಟಿವ್ AIಗಳ ಹೆಚ್ಚುಗಾರಿಕೆ. ಯುರೋಪಿಯನ್ ಸ್ಪೇಸ್ ಏಜೆನ್ಸಿಯವರು ಉಡ್ಡಯನ ಮಾಡಿರುವ ಸೆಂಟಿನೆಲ್-2 ಉಪಗ್ರಹಗಳಿಂದ ಬರುವ ಸಾವಿರ ಸಾವಿರ ಮಸುಕಾದ ಚಿತ್ರಗಳನ್ನು ನೋಡಿ, ಅವುಗಳಿಂದ ಬೇಕಾದ ಮರಗಳ ವಿಸ್ತಾರದ, ಪರಿಸರಸ್ನೇಹಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಎಲ್ಲ ಘಟಕಗಳ ವಿವರಗಳನ್ನು ಲೀಲಾಜಾಲವಾಗಿ ಹೊರಗೆಳೆದು, ಅವುಗಳಿಗೆ ನಕಾಶೆಯ ರೂಪವನ್ನು ನೀಡುವ ಕೆಲಸವನ್ನು ಈ ಅಲೆನ್ ಸಂಸ್ಥೆಯ ಯಂತ್ರಗಳು ನಿಭಾಯಿಸಬಲ್ಲವು.

ಹೀಗೆಂದ ಮಾತ್ರಕ್ಕೆ ಇವು ನೂರಕ್ಕೆ ನೂರರಷ್ಟು ಸರಿಯಾಗಿ ಕಾರ್ಯಸಾಧನೆ ಮಾಡುತ್ತವೆ ಎನ್ನುವಂತಿಲ್ಲ. ಚಾಟ್ ಜಿಪಿಟಿಯಂತೆ ಇವೂ ಅಲ್ಲೊಮ್ಮೆ ಇಲ್ಲೊಮ್ಮೆ ಎಡವುವುದು ಉಂಟು. ಯಾವುದನ್ನೋ ಹೇಗೋ ಕಲ್ಪಿಸಿಕೊಂಡು ತಪ್ಪು ತಪ್ಪಾಗಿ ಅವು ಬಿಡಿಸಿಕೊಡುವುದೂ ಆಗಾಗ ನಡೆಯುವ ವಿಷಯವೇ. ಒಬ್ಬನು ಮಾನವರಿಂದ ದೂರವಾಗಿ, ಕಾಡಿನಲ್ಲಿದ್ದು, ಯಾವುದೇ ಜೀವನಾನುಭವವಿಲ್ಲದೆ ಪುಸ್ತಕಗಳನ್ನು ಮಾತ್ರ ಓದಿ ಎಲ್ಲವನ್ನೂ ಕಲಿತರೆ ಹೇಗಾಗಬಹುದೋ ಹಾಗೆ ಇವುಗಳ ಪರಿ. ಬರೀ ಪುಸ್ತಕಗಳನ್ನು ಮಾತ್ರ ಓದಿದವನಿಗೆ, ಆ ಪುಸ್ತಕಗಳಲ್ಲಿ ಇಲ್ಲದ್ದು ಏನಾದರೂ ಕಂಡರೆ, ಏನು ಮಾಡಬೇಕು ಎಂಬುದೇ ಗೊತ್ತಾಗಲಿಕ್ಕಿಲ್ಲ! ಈ ಜನರೇಟಿವ್ AIಗಳೂ ಹಾಗೆಯೇ; ಅವುಗಳಿಗೆ ಹೇಳಿಕೊಡಲು ಬಳಸಿದ ಆಕರ ಸಾಮಗ್ರಿಯ ಆಚೆಗಿನದು ಏನಾದರೂ ಕಂಡರೆ ಏನು ಮಾಡುವುದೆಂದು ಗೊತ್ತಾಗದೆ ಅವು ಪೆದ್ದು ಪೆದ್ದಾಗಿ ವರ್ತಿಸುತ್ತವೆ. ಆದರೆ ವಿಶೇಷವೆಂದರೆ, ಅವುಗಳಿಗೆ ತಪ್ಪನ್ನು ಸರಿಪಡಿಸಿಕೊಳ್ಳುವ ಜಾಣ್ಮೆಯೂ ಇದೆ. ಅದು ತಪ್ಪೆಸಗಿದಾಗ ನಾವದನ್ನು ಅದರ ಗಮನಕ್ಕೆ ತಂದರೆ, ಅದು ಅದನ್ನು ಸರಿಪಡಿಸಿಕೊಳ್ಳುತ್ತದೆ, ಮುಂದೆಂದೂ ಅದೇ ತಪ್ಪು ಮತ್ತೆ ಆಗದಂತೆ ಜಾಗ್ರತೆ ವಹಿಸುತ್ತದೆ. ಹಾಗಾಗಿ ‘ಪ್ರಾಕ್ಟಿಸ್ ಮೇಕ್ಸ್ ಎ ಮ್ಯಾನ್ ಪರ್ಫೆಕ್ಟ್’ ಎಂಬ ಮಾತಿನಂತೆ, ದಿನ ಕಳೆದಂತೆ ಅದು ಹೆಚ್ಚು ಹೆಚ್ಚು ನಿಖರವಾಗುತ್ತಹೋಗುತ್ತದೆ. ಅಲೆನ್ ಅವರ ಸಂಸ್ಥೆಯ ಜನರೇಟಿವ್ AIಗಳೂ ಮುಂಬರುವ ದಿನಗಳಲ್ಲಿ ಇನ್ನಷ್ಟು ಮತ್ತಷ್ಟು ಕಲಿತು, ಅಭ್ಯಾಸ ಮಾಡಿ ಮಾಡಿ, ಹೆಚ್ಚು ಹೆಚ್ಚು ಜಾಣತನವನ್ನು ಸಂಪಾದಿಸಿಕೊಳ್ಳಲಿವೆ. ❖

> ತಂತ್ರಜ್ಞಾನಕ್ಕೆ ತಕ್ಕಂತೆ ಚಿತ್ರರಂಗವೂ ಕಾಲಕಾಲಕ್ಕೆ ಬದಲಾಗುತ್ತದೆ. ಇತ್ತೀಚೆಗೆ ‘ಇಂಟ್ರಾಕ್ಟೀವ್ ಫಿಲ್ಮ್’ ಎಂಬ ತಂತ್ರಜ್ಞಾನ ಜನಪ್ರಿಯವಾಗುತ್ತಿದೆ...

ವಿನಾಯಕ ಕೆ.ಎಸ್.

1970ರ ದಶಕದಲ್ಲಿಯೇ ಅಮೆರಿಕದಲ್ಲಿ ಬಳಕೆಗೆ ಬಂದ ಈ ತಂತ್ರಜ್ಞಾನವಿಂದು ಜನಪ್ರಿಯವಾಗುತ್ತಿದೆ. ಚಿತ್ರಮಂದಿರದಲ್ಲಿ ಕುಳಿತ ಪ್ರೇಕ್ಷಕನೊಂದಿಗೆ ಸಂವಾದ ನಡೆಸಿ ಪರದೆ ಮೇಲೆ ಬಿತ್ತರಗೊಳ್ಳುತ್ತಿರುವ ಚಿತ್ರದ ಗತಿ-ಘಟನೆಗಳನ್ನು ಬದಲಿಸುವ ಅವಕಾಶವನ್ನು ಈ ತಂತ್ರಜ್ಞಾನ ನೀಡುತ್ತದೆ. ಉದಾಹರಣೆಗೆ, ಚಿತ್ರವೊಂದರಲ್ಲಿ ತಪ್ಪು ಮಾಡಿದವನನ್ನು ನಾಯಕ ದಂಡಿಸುತ್ತಿರುತ್ತಾನೆ. ಅನೇಕ ಪ್ರೇಕ್ಷಕರು ‘ಇನ್ನೂ ಜೋರಾಗಿ ಹೊಡೆಯಬೇಕಿತ್ತು. ಎರಡೂ ಕಪಾಳಕ್ಕೆ ಬಾರಿಸಬೇಕಿತ್ತು’ ಎಂದೆಲ್ಲ ಕುಳಿತ ಜಾಗದಲ್ಲಿಯೇ ಅಥವಾ ಚಿತ್ರಮಂದಿರದಿಂದ ಹೊರಬಂದ ನಂತರ ಮಾತಾಡುವುದನ್ನು ನಾವೆಲ್ಲ ಕೇಳಿರುತ್ತೇವೆ. ನಾವು ಮಾತಾಡಿದ್ದನ್ನೇ ತೆರೆಯ ಮೇಲೆ ವೀಕ್ಷಿಸುವ ಅವಕಾಶವನ್ನು ಈ ತಂತ್ರಜ್ಞಾನ ನೀಡುತ್ತದೆ.

- **ಹೇಗೆ ಕೆಲಸ ಮಾಡುತ್ತದೆ?**

‘ಇಂಟ್ರ್ಯಾಕ್ಟೀವ್ ಫಿಲ್ಮ್’ ತಂತ್ರಜ್ಞಾನವನ್ನು ಬಳಸಿಕೊಂಡು ಇತ್ತೀಚೆಗೆ ಸಾಕಷ್ಟು ಸಿನಿಮಾಗಳು ಬರುತ್ತಿವೆ. ನೆಟ್‌ಫ್ಲಿಕ್ಸ್‌ನಲ್ಲಿ ಇದಕ್ಕೊಂದು ಪ್ರತ್ಯೇಕ ವಿಭಾಗವೇ ಇದೆ. ‘ಬ್ಲಾಕ್ ಮಿರರ್: ಬ್ಯಾಂಡರ್‌ಸ್ನಾಚ್’ನಂತಹ ಬೆರಳೆಣಿಕೆಯಷ್ಟು ಸಿನಿಮಾಗಳು ಮಾತ್ರ ಜನಪ್ರಿಯವಾಗಿವೆ. ಆದಾಗ್ಯೂ ಈ ತಂತ್ರಜ್ಞಾನ ಪ್ರಯೋಗಾತ್ಮಕ ಸಿನಿಮಾಗಳಿಗಷ್ಟೇ ಸೀಮಿತವಾಗಿದ್ದು, ಚಿತ್ರಮಂದಿರಗಳಿಗಿನ್ನೂ ಪೂರ್ತಿಯಾಗಿ ಕಾಲಿಟ್ಟಿಲ್ಲ. ಕನ್ನಡಿಗರಾದ, ನಿಟ್ಟೂರು ಶ್ರೀನಿವಾಸ ರಾಯರ ಕುಟುಂಬದ ಅರ್ಜುನ್ ನಿಟ್ಟೂರು ಈ ತಂತ್ರಜ್ಞಾನಕ್ಕೊಂದು ‘ಇಂಟ್ರಾಫ್ಲಿಕ್ಸ್’ ಎಂಬ ಪ್ರತ್ಯೇಕ ಆ್ಯಪ್ ಅನ್ನು ರೂಪಿಸಿ ಜನಪ್ರಿಯ ತಾರೆಯರ ಸಿನಿಮಾಗಳನ್ನು ಈ ತಂತ್ರಜ್ಞಾನದಡಿ ತರುವ ಯತ್ನದಲ್ಲಿದ್ದಾರೆ.

‘ಉದಾಹರಣೆಗೆ, ನೀವು ಕೆಜಿಎಫ್ ಚಿತ್ರ ನೋಡುತ್ತಿರುವಿರಿ ಎಂದುಕೊಳ್ಳಿ. ಅಲ್ಲಿ ನಾಯಕ ಯಶ್ ಖಳನಾಯಕನಿಗೆ ಹೊಡೆಯುತ್ತಾರೆ. ಯಾವ ವೇಗದಲ್ಲಿ ಹೊಡೆಯಬೇಕು ಎಂಬುದನ್ನು ಚಿತ್ರಮಂದಿರದಲ್ಲಿ ಕುಳಿತ ಪ್ರೇಕ್ಷಕ ನಿರ್ಧರಿಸಬಹುದು. ಅದಕ್ಕಾಗಿ ‘ಇಂಟ್ರಾಫ್ಲಿಕ್ಸ್’ ಎಂಬ ಆ್ಯಪ್ ಸಿದ್ಧಗೊಳ್ಳುತ್ತಿದೆ. ಚಿತ್ರಮಂದಿರದಲ್ಲಿ ಕುಳಿತ ಪ್ರೇಕ್ಷಕ ಈ ಆ್ಯಪ್ ಓಪನ್ ಮಾಡಿ ಯಾವ ವೇಗದಲ್ಲಿ ಹೊಡೆಯಬೇಕು ಎಂಬುದಕ್ಕೆ ನಾವು ನೀಡಿದ ಆಯ್ಕೆಗಳಲ್ಲಿ ಒಂದಕ್ಕೆ ಮತ ಹಾಕಬಹುದು. ಹೆಚ್ಚು ಮತ ಗಳಿಸಿದ ಆಯ್ಕೆಯ ದೃಶ್ಯ ಚಿತ್ರಮಂದಿರದಲ್ಲಿ ಪ್ರಸಾರಗೊಳ್ಳುತ್ತದೆ. ಇದೇ ರೀತಿ ಯಾವುದೋ ಒಂದು ಮಹತ್ವದ ತೀರ್ಮಾನ ತೆಗೆದುಕೊಳ್ಳಬೇಕಿದ್ದರೆ, ಆಗಲೂ ಪ್ರೇಕ್ಷಕರಿಗೆ ನಾಯಕ ಯಾವ ತೀರ್ಮಾನ ತೆಗೆದುಕೊಳ್ಳಬೇಕೆಂದು ಆಯ್ಕೆ ಮಾಡುವ ಅವಕಾಶ ನೀಡುತ್ತೇವೆ. ಅದೇ ತೀರ್ಮಾನ ನಾಯಕನ ಬಾಯಿಯಿಂದ ಪರದೆ ಮೇಲೆ ಹೊರಬರುತ್ತದೆ’ ಎನ್ನುತ್ತಾರೆ, ಅರ್ಜುನ್.

ಸದ್ಯ ಪ್ರಚಲಿತವಿರುವುದು ದೃಶ್ಯ ಆಧಾರಿತ ಸಂವಾದ ತಂತ್ರಜ್ಞಾನ. ಅಂದರೆ ಪ್ರೇಕ್ಷಕನ ಆಯ್ಕೆಗೆ ಅನುಗುಣವಾಗಿ ದೃಶ್ಯಗಳನ್ನು ಬದಲಿಸುವುದು. ‘ಇಂಟ್ರಾಫ್ಲಿಕ್ಸ್’ ಇಂಟೆನ್ಸಿಟಿ ಆಧಾರಿತ, ಧ್ವನಿ ಆಧಾರಿತ, ವೈಯಕ್ತಿಕ ಆಯ್ಕೆ ಆಧಾರಿತ ವೈಶಿಷ್ಟ್ಯಗಳನ್ನು ಈ ತಂತ್ರಜ್ಞಾನದಲ್ಲಿ ಅಳವಡಿಸುವ ನಿಟ್ಟಿನಲ್ಲಿ ಕಳೆದ 4-5 ವರ್ಷದಿಂದ ಕೆಲಸ ಮಾಡುತ್ತಿದೆ.

ಸಿನಿಮಾವನ್ನು ಪ್ರೇಕ್ಷಕರು ಮನೋರಂಜನೆಗೆಂದು ನೋಡುತ್ತಾರೆ. ಆದಾಗ್ಯೂ ಯಾವ ನಿರ್ದೇಶಕನು ಚಿತ್ರದ ಕಥೆಯಲ್ಲಿ, ಭಾವನೆಗಳಲ್ಲಿ ಪ್ರೇಕ್ಷಕನಿಗೆ ಆಯ್ಕೆ ನೀಡಲು ಇಷ್ಟಪಡುವುದಿಲ್ಲ. ಇದೊಂದು ಕಲೆ ಮತ್ತು ನಿರ್ದೇಶಕನಿಗೆ ಒಂದು ಆಲೋಚನೆ ಇರುತ್ತದೆ. ಪ್ರೇಕ್ಷಕ ಕೂಡ ಆಲೋಚನೆಗೆ ಹಚ್ಚುವ ಬದಲಾವಣೆಗಳನ್ನು ಬಯಸುವುದಿಲ್ಲ. ಯೂಟ್ಯೂಬ್ ನೋಡುವ ಇಂದಿನ ಮಕ್ಕಳು ಪಾತ್ರಗಳನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಬಯಸುತ್ತಾರೆ. ಆದರೆ ಇದು ಕಥೆಯ ಮೇಲೋ, ಪಾತ್ರದ ಮೇಲೋ ಪ್ರಭಾವ ಬೀರುವ ರೀತಿಯಲ್ಲ.

- **ಎಲ್ಲ ಸಿನಿಮಾಗಳಲ್ಲಿಯೂ ಸಾಧ್ಯವಾ?**

ನಾವು ಬಯಸಿದ್ದು ತೆರೆಯ ಮೇಲೆ ಬರುವಾಗ ನಮಗೆ ಖುಷಿಯಾಗುವುದು ಸಹಜ. ಶಿವರಾಜ್ ಕುಮಾರ್ ಸಿನಿಮಾವೊಂದು 700 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದೆ ಎಂದಿಟ್ಟುಕೊಳ್ಳಿ. ಶಿವಣ್ಣ ಹೊಟೆಲ್‌ಗೆ ಹೋಗಿ ತಿಂಡಿ ತಿನ್ನುವ ದೃಶ್ಯವಿದೆ. ಒಂದು ಹೊಟೆಲ್‌ನಲ್ಲಿ ಈ ಚಿತ್ರಮಂದಿರದಲ್ಲಿ ಕುಳಿತ ‘ಎಕ್ಸ್’ ವ್ಯಕ್ತಿಗೆ ಇಡ್ಲಿ ಇಷ್ಟ ಎಂದು ಇಡ್ಲಿಯನ್ನು ಆರ್ಡರ್ ಮಾಡುತ್ತಾರೆ. ಮತ್ತೊಂದು ಚಿತ್ರಮಂದಿರದಲ್ಲಿ ಅದೇ ದೃಶ್ಯದಲ್ಲಿ ಆ ಚಿತ್ರಮಂದಿರದಲ್ಲಿಯೇ ಸಿನಿಮಾ ವೀಕ್ಷಿಸುತ್ತಿರುವ ‘ವೈ’ ವ್ಯಕ್ತಿಗೆ ಚಪಾತಿ ಇಷ್ಟವೆಂದು ಚಪಾತಿಯನ್ನು ಆರ್ಡರ್ ಮಾಡುತ್ತಾರೆ. ಅಷ್ಟರ ಮಟ್ಟಿಗೆ ವಿಶೇಷತೆಯನ್ನು ಈ ತಂತ್ರಜ್ಞಾನ ಹೊಂದಿದೆ.

ಹೀಗೆಂದು ಪರದೆಯ ಮೇಲೆ ತಂತ್ರಜ್ಞಾನದಿಂದ ಜಾದೂ ನಡೆಯುವುದಿಲ್ಲ. ಬದಲಿಗೆ ನಾಯಕ ಖಳನಾಯಕನಿಗೆ ಹೊಡೆಯುವ ದೃಶ್ಯಗಳನ್ನು ಬೇರೆ ಬೇರೆ ವೇಗದಲ್ಲಿ ಚಿತ್ರೀಕರಿಸಿ, ನಂತರ ಅದರ ಆಧಾರದಲ್ಲಿ ಪ್ರೇಕ್ಷಕನಿಗೆ ಆಯ್ಕೆ ಕೊಡುತ್ತಾರೆ. ಇಡೀ ಸಿನಿಮಾವನ್ನು ಪ್ರೇಕ್ಷಕ ತನಗೆ ಬೇಕಾದಂತೆ ಬದಲಿಸಲು ಸಾಧ್ಯವಿಲ್ಲ. ಒಂದು ಚಿತ್ರದಲ್ಲಿ ಈ ರೀತಿ ಆರೆಂಟು ಆಯ್ಕೆಗಳು ಇರುತ್ತವೆ. ಹೀಗಾಗಿ ಇಂಟ್ರಾಕ್ಟೀವ್ ಸಿನಿಮಾ ತೆರೆ ಮೇಲೆ ತರಲು ನಿರ್ಧರಿಸಿದರೆ ಚಿತ್ರಕಥೆಯ ಹಂತದಿಂದಲೇ ಇದರ ಸಿದ್ಧತೆಗಳು ನಡೆಯಬೇಕು. ‘ಶಿವಣ್ಣನ ಧ್ವನಿಯ ಉದಾಹರಣೆಯನ್ನೇ ತೆಗೆದುಕೊಂಡರೆ, ಶಿವರಾಜ್ ಕುಮಾರ್ ಧ್ವನಿ ಸ್ಯಾಂಪಲ್ ಅನ್ನು ‘ಎಐ’ಗೆ ನೀಡಿ ಶಿವಣ್ಣ ಧ್ವನಿಯಲ್ಲಿ 700 ಚಿತ್ರಮಂದಿರಕ್ಕೂ 700 ಪ್ರತ್ಯೇಕ ಸಂಭಾಷಣೆ ಸಿದ್ಧಮಾಡಬೇಕು. ಹೀಗಾಗಿ ಈ ತಂತ್ರಜ್ಞಾನ ಕೆಲವಷ್ಟೇ ಆಯ್ಕೆಗಳಿಗೆ ಸೀಮಿತವಾಗಿದೆ. ಆದರೆ ನಮ್ಮ ವಿರೆಜಾ ರೆವಲ್ಯೂಷನ್ ಕಂಪನಿ ಈ ತಂತ್ರಜ್ಞಾನವನ್ನು ದೊಡ್ಡ ನಾಯಕರ ಕಮರ್ಷಿಯಲ್ ಸಿನಿಮಾಗಳಿಗೂ ತರುವ ಪ್ರಯತ್ನ ಮತ್ತು ಅದಕ್ಕೆ ಸಂಬಂಧಿತ ಸಂಶೋಧನೆಯಲ್ಲಿ ಕೆಲಸ ಮಾಡುತ್ತಿದೆ. ಹಲವು ಕಂಪನಿಗಳ ಜೊತೆ ಕೈಜೋಡಿಸಿ ಕೆಲ ಪ್ರಾಯೋಗಿಕ ಯೋಜನೆಗಳು ಆಗಿವೆ. ಈಗಿನ ಮಕ್ಕಳು ಮುಂದಿನ ಸಿನಿಮಾ ಪ್ರೇಕ್ಷಕರು. ಹೀಗಾಗಿ ಅವರು ಈ ರೀತಿ ಫ್ಯಾಂಟಸಿಯನ್ನು ಇಷ್ಟಪಡುತ್ತಾರೆ. ಸ್ಟಾರ್‌ಗಳ ಸಿನಿಮಾದಲ್ಲಿ ಈ ತಂತ್ರಜ್ಞಾನ ಅಳವಡಿಕೆಯಾದಾಗ ಮತ್ತಷ್ಟು ಜನಪ್ರಿಯವಾಗುತ್ತದೆ. ಈಗಿನ ಟ್ರೆಂಡ್‌ನಲ್ಲಿ ಈ ತಂತ್ರಜ್ಞಾನಕ್ಕೆ ಭವಿಷ್ಯವೂ ಉತ್ತಮವಾಗಿದೆ’ ಎಂದು ಮಾಹಿತಿ ಹಂಚಿಕೊಳ್ಳುತ್ತಾರೆ, ಅರ್ಜುನ್. ❖

ಚಿತ್ರಮಂದಿರದಲ್ಲಿಯೇ ಬದಲಾಗುತ್ತದೆಯಾ?

ಒಂದು ಸಿನಿಮಾ ಪೂರ್ತಿಯಾಗಿ ಸಿದ್ಧಗೊಂಡು ಸಿನಿಮಾ ಮಂದಿರಕ್ಕೆ ಪ್ರಸಾರಕ್ಕೆ ಹೋದ ನಂತರ ಚಿತ್ರದ ಧ್ವನಿ-ದೃಶ್ಯಗಳ ಬದಲಾವಣೆ ಸಾಧ್ಯವಿಲ್ಲ. ಪ್ರಸ್ತುತ ಕನ್ನಡ ಸಿನಿಮಾಗಳು ಯುಎಫ್‌ಒ, ಕ್ಯೂಬ್ ಮೊದಲಾದ ಸಂಸ್ಥೆಗಳ ಸರ್ವರ್ ಮೂಲಕ ರಾಜ್ಯದ ಎಲ್ಲ ಚಿತ್ರಮಂದಿರಗಳಲ್ಲಿ ಬಿತ್ತರಗೊಳ್ಳುತ್ತದೆ. ಹಾಗಿದ್ದಲ್ಲಿ ಪ್ರತಿ ಚಿತ್ರಮಂದಿರದಲ್ಲಿ ಒಂದೇ ಸಿನಿಮಾ ಬೇರೆ ಬೇರೆ ರೀತಿ ಕಾಣಿಸಿಕೊಳ್ಳಲು ಹೇಗೆ ಸಾಧ್ಯ ಎಂಬ ಪ್ರಶ್ನೆ ಮೂಡುತ್ತದೆ. ಯೂಟ್ಯೂಬ್‌ನಲ್ಲಿ ವಿಡಿಯೊ ವೀಕ್ಷಿಸುವಾಗ 10 ಸೆಕೆಂಡ್ ಹಿಂದೆ ಅಥವಾ ಮುಂದೆ ಹೋಗಲು ಅವಕಾಶವಿರುವ ತಂತ್ರಜ್ಞಾನದ ರೀತಿಯಲ್ಲಿಯೇ ಇಂಟ್ರ್ಯಾಕ್ಟೀವ್ ಫಿಲಂ ಕೂಡ ಕೆಲಸ ಮಾಡುತ್ತದೆ. ಚಿತ್ರಮಂದಿರಲ್ಲಿ ಲೈವ್ ಆಗಿ ದೃಶ್ಯ-ಧ್ವನಿಗಳನ್ನು ಬದಲಿಸುವ ತಂತ್ರಜ್ಞಾನ ಕೂಡ ಭವಿಷ್ಯದಲ್ಲಿ ಬರಲಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

2) ಈ ಕೆಳಗಿನವುಗಳಲ್ಲಿ ಯಾವ ಸಂಖ್ಯಾ ಪಟ್ಟಿಗಳು ಸಮಾಂತರ ಶ್ರೇಢಿಯನ್ನುಂಟು ಮಾಡುತ್ತವೆ? ಅವುಗಳು ಸಮಾಂತರ ಶ್ರೇಢಿಯನ್ನುಂಟು ಮಾಡಿದರೆ ಅದರ ಮುಂದಿನ ಎರಡು ಪದಗಳನ್ನು ಕಂಡುಹಿಡಿಯಿರಿ.

i) 4, 10, 16, 22 .... ii) 1, –1, –3, –5 ....

iii) –2, 2, –2, 2 .... iv) 1, 1, 1, 2, 2, 2, 3, 3, 3 ....

ಪರಿಹಾರ: (..........ಹಿಂದಿನ ಸಂಚಿಕೆಯಿಂದ)

iii) $a_2 - a_1 = 2 - (-2) = 2 + 2 = 4$

$a_3 - a_2 = -2 - 2 = -4$

$\therefore a_2 - a_1 \neq a_3 - a_2$ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಮಾಂತರ ಶ್ರೇಢಿಯನ್ನುಂಟು ಮಾಡುವುದಿಲ್ಲ.

iv) $a_2 - a_1 = 1 - 1 = 0$

$a_3 - a_2 = 1 - 1 = 0$

$a_4 - a_3 = 2 - 1 = 1$

ಇಲ್ಲಿ $a_2 - a_1 = a_3 - a_2 \neq a_4 - a_3$ ಆದ್ದರಿಂದ ಕೊಟ್ಟ ಸಂಖ್ಯಾ ಪಟ್ಟಿಯು ಸಮಾಂತರ ಶ್ರೇಢಿಯನ್ನು ಉಂಟುಮಾಡುವುದಿಲ್ಲ.

ಅಭ್ಯಾಸ 1.1

1. ಈ ಕೆಳಗಿನ ಯಾವ ಸಂದರ್ಭಗಳಲ್ಲಿ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಮಾಂತರ ಶ್ರೇಢಿಯನ್ನುಂಟು ಮಾಡುತ್ತದೆ ಮತ್ತು ಏಕೆ?

i) ಒಂದು ಟ್ಯಾಕ್ಸಿಯ ಬಾಡಿಗೆ ಮೊದಲ ಕಿಲೋಮೀಟರ್‌ಗೆ ರೂ.. 15/– ಆಗಿದ್ದು ನಂತರದ ಪ್ರತಿ ಕಿಲೋಮೀಟರ್‌ಗೆ ರೂ.. 8/–ರಂತೆ ಇರುತ್ತದೆ.

ii) ಒಂದು ನಿರ್ವಾತಗೊಳಿಸುವ ವಾಯು ರೇಚಕ ಯಂತ್ರವು ಪ್ರತಿಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು.

iii) ಬಾವಿಯನ್ನು ತೋಡುವಾಗ ಮೊದಲ ಮೀಟರ್‌ಗೆ ರೂ. 150/– ನಂತರದ ಪ್ರತಿ ಮೀಟರ್‌ಗೆ ರೂ. 50/–ರಂತೆ ಹೆಚ್ಚಾಗುತ್ತಾ ಹೋಗುತ್ತದೆ.

iv) ಆರಂಭಿಕ ಠೇವಣಿ ರೂ. 10000ಕ್ಕೆ 8% ಚಕ್ರಬಡ್ಡಿಯಂತೆ ಪ್ರತಿವರ್ಷ ಆಗುವ ಮೊತ್ತ

ಪರಿಹಾರ:

(i) ಟ್ಯಾಕ್ಸಿಯ ಬಾಡಿಗೆ ಮೊದಲ ಕಿಲೋಮೀಟರ್‌ಗೆ ರೂ. 15/– = a_1

ಟ್ಯಾಕ್ಸಿಯ ಬಾಡಿಗೆ 2kms = Rs15 + Rs8 = Rs 23 = a_2

ಟ್ಯಾಕ್ಸಿಯ ಬಾಡಿಗೆ 3kms = Rs23 + Rs8 = Rs 31 = a_3

ಟ್ಯಾಕ್ಸಿಯ ಬಾಡಿಗೆ 4kms = Rs31 + Rs8 = Rs 39 = a_4

ಹೀಗೆಯೇ ಮುಂದುವರಿಯುತ್ತದೆ

$a_2 - a_1$ = Rs 23- Rs 15 = Rs 8

$a_3 - a_2$ = Rs 31- Rs 23 = Rs 8

$a_4 - a_3$ = Rs 39- Rs 31 = Rs 8

ಅಂದರೆ $a_{k+1} - a_k$ ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ. ಆದ್ದರಿಂದ ಸಾಮಾನ್ಯ ವ್ಯತ್ಯಾಸ d = 8 ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ.

ಪರಿಹಾರ: (ii) ಒಂದು ನಿರ್ವಾತಗೊಳಿಸುವ ವಾಯುರೇಚಕ ಯಂತ್ರವು ಪ್ರತಿಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು.

ಸಿಲಿಂಡರಿನಲ್ಲಿರುವ ಅನಿಲದ ಪ್ರಮಾಣ x ಆಗಿರಲಿ = a_1

ಒಂದು ನಿರ್ವಾತಗೊಳಿಸುವ ವಾಯು ರೇಚಕ ಯಂತ್ರವು ಒಂದು ಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು =

$$= x - \frac{x}{4} = \frac{3x}{4} \ unit = a_2$$

ಒಂದು ನಿರ್ವಾತಗೊಳಿಸುವ ವಾಯು ರೇಚಕ ಯಂತ್ರವು ಮೂರನೇ ಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು

$$= \frac{3x}{4} - \frac{x}{4}\left(\frac{3x}{4}\right) = \frac{3x}{4} - \left(\frac{3x}{16}\right) = \frac{9x}{16} units$$

$$= \left(\frac{3}{4}\right)^2 x \ \ units = a_3$$

$$= \left(\frac{3}{4}\right)\left(\frac{3}{4}\right)x$$

$$= \left(\frac{3}{4}\right)^3 x \ units = a_4$$

ಹೀಗೆಯೇ ಮುಂದುವರಿಯುವುದು

$$a_2 - a_1 = \left(\frac{3x}{4}\right) - x = -\frac{x}{4} units$$

$$a_3 - a_2 = \left(\frac{3}{4}\right)^2 x - \frac{3}{4}x = -\frac{3}{16}x \ \ units$$

$a_2 - a_1 \neq a_3 - a_2$,

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

ಪರಿಹಾರ: (iii)

ಬಾವಿಯನ್ನು ತೋಡುವಾಗ ಮೊದಲಮೀಟರ್‌ಗೆ ರೂ.150/–= a_1

ಬಾವಿಯನ್ನು ತೋಡುವಾಗ ಎರಡನೇ ಮೀಟರ್‌ಗೆ =

ರೂ 150+ ರೂ 50 = 200 = a_2

ಬಾವಿಯನ್ನು ತೋಡುವಾಗ ಮೂರನೇ ಮೀಟರ್‌ಗೆ =

ರೂ. 200+ರೂ 50 = 250 = a_3

ಬಾವಿಯನ್ನು ತೋಡುವಾಗ ನಾಲ್ಕನೇ ಮೀಟರ್‌ಗೆ =

ರೂ. 250 + ರೂ 50 = 300 = a_4

ಹೀಗೆಯೇ ಮುಂದುವರಿಯುವುದು

$\Rightarrow a_2 - a_1$ = Rs. 200 – Rs. 150 = Rs. 50

$\Rightarrow a_3 - a_2$ = Rs. 250 – Rs. 200 = Rs. 50

$\Rightarrow a_4 - a_3$ = Rs. 300 – Rs. 250 = Rs. 50

ಅಂದರೆ $a_{k+1} - a_k$ ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ. ಆದ್ದರಿಂದ ಸಾಮಾನ್ಯ ವ್ಯತ್ಯಾಸ d = 50 ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ.

iv) ಆರಂಭಿಕ ಠೇವಣಿ ರೂ.10000ಕ್ಕೆ 8% ಚಕ್ರಬಡ್ಡಿಯಂತೆ ಪ್ರತಿವರ್ಷ ಆಗುವ ಮೊತ್ತ

ಪರಿಹಾರ: ಚಕ್ರಬಡ್ಡಿ= $P\left(1 + \frac{r}{100}\right)^n$

ಇಲ್ಲಿ A =ಅಸಲು, r = ಬಡ್ಡಿದರ n= ವರ್ಷಗಳ ಸಂಖ್ಯೆ

p = 10000 n =8%

ಮೊದಲನೇ ವರ್ಷದ ನಂತರದ ಮೊತ್ತ

$$= Rs.10000\left(1 + \frac{8}{100}\right) = a_1$$

ಎರಡನೇ ವರ್ಷದ ನಂತರದ ಮೊತ್ತ

$$= Rs.10000\left(1 + \frac{8}{100}\right)^2 = a_2$$

ಮೂರನೇ ವರ್ಷದ ನಂತರದ ಮೊತ್ತ

$$= Rs.10000\left(1 + \frac{8}{100}\right)^3 = a_3$$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHEMATICS

MATRICES

7. Write a brief note on the Subtraction of matrices.

Ans:- If A and B are matrices of the same order then A - B is defined to be a matrix obtained by subtracting each element of B from the corresponding element of A.

If $A = [a_{ij}]$; $B = [b_{ij}]$;

Wherein, i = 1, 2, 3.......m & j = 1, 2, 3........n

then $A - B = [a_{ij} - b_{ij}]$;

$$Eg:-If\ A = \begin{bmatrix} 8 & 5 \\ 4 & 9 \end{bmatrix} \& B = \begin{bmatrix} 5 & 3 \\ 8 & 2 \end{bmatrix} \text{ then } A - B = ?$$

$$Soln:- A - B = \begin{bmatrix} 8-5 & 5-3 \\ 4-8 & 9-2 \end{bmatrix} = \begin{bmatrix} 3 & 2 \\ -4 & 7 \end{bmatrix}$$

Problems:-

$$1.\ If \begin{bmatrix} x+3 & z+4 & 2y-7 \\ -6 & a-1 & 0 \\ b-3 & -21 & 0 \end{bmatrix} = \begin{bmatrix} 0 & 6 & 3y-2 \\ -6 & -3 & 2c+2 \\ 2b+4 & -21 & 0 \end{bmatrix}$$

Find the values of a, b, c, x, y and z.

Soln:- Given that the matrices are equal

$x + 3 = 0 \Rightarrow x = -3$

$z + 4 = 6 \Rightarrow z = 6 - 4 \Rightarrow z = 2$

$a - 1 = -3 \Rightarrow a = -3 + 1 \Rightarrow a = -2$

$2c + 2 = 0 \Rightarrow c = \frac{-2}{2} \Rightarrow c = -1$

$b - 3 = 2b + 4 \Rightarrow 2b - b = -4 - 3 \Rightarrow b = -7$

$2y - 7 = 3y - 2 \Rightarrow 3y - 2y = -7 + 2 \Rightarrow y = -5$

$$2.\ If\ A = \begin{bmatrix} a+b & b^2+2 \\ 0 & -6 \end{bmatrix}$$

$$\& B = \begin{bmatrix} 2a+1 & 3b \\ 0 & b^2-5b \end{bmatrix} \text{ and also } A = B,$$

find the values of a and b?

Soln:- Given, A = B

$\therefore$ from equality of matrices we get,

$a + b = 2a + 1$ ....(i)

$b^2 + 2 = 3b$ ....(ii)

$-6 = b^2 - 5b$..........(iii)

From (i) we get, $b - a = 1$.......(iv)

From (ii) we get, $b^2 - 3b + 2 = 0$......(v)

$(b - 2)(b - 1) = 0$

$\Rightarrow b = 2$ and $b = 1$

But b = 1 does not satisfy the eqn (iii) and b = 2 agrees with it.

Hence b = 2.

Substituting for b as 2 in (iv), we get a = 1

$\therefore$ values of a & b are 1 & 2 respectively.

$$\textbf{3. Solve for A \& B if } 2A + 3B = \begin{bmatrix} -1 & 1 \\ 1 & -1 \end{bmatrix}$$

$$\textbf{and } 3A + 2B = \begin{bmatrix} 1 & -1 \\ -1 & 1 \end{bmatrix}.$$

$$Soln:-\ 2A + 3B = \begin{bmatrix} -1 & 1 \\ 1 & -1 \end{bmatrix} ....(i)$$

$$3A + 2B = \begin{bmatrix} 1 & -1 \\ -1 & 1 \end{bmatrix} ....(ii)$$

Multiplying eqn (i) by 2 & eqn (ii) by 3

$$\text{we get, } 4A + 6B = \begin{bmatrix} -2 & 2 \\ 2 & -2 \end{bmatrix} ....(iii)$$

$$\text{and } 9A + 6B = \begin{bmatrix} 3 & -3 \\ -3 & 3 \end{bmatrix} ....(iv)$$

Solving simultaneous eqns (iii) & (iv)

$$\text{we get, } -5A = \begin{bmatrix} -5 & 5 \\ 5 & -5 \end{bmatrix} \Rightarrow A = \begin{bmatrix} 1 & -1 \\ -1 & 1 \end{bmatrix}$$

Substituting the value of A in the eqn

$$2A + 3B = \begin{bmatrix} -1 & 1 \\ 1 & -1 \end{bmatrix}$$

$$3B = \begin{bmatrix} -1 & 1 \\ 1 & -1 \end{bmatrix} - 2A = \begin{bmatrix} -1 & 1 \\ 1 & -1 \end{bmatrix} - 2\begin{bmatrix} 1 & -1 \\ -1 & 1 \end{bmatrix}$$

$$3B = \begin{bmatrix} -1 & 1 \\ 1 & -1 \end{bmatrix} - \begin{bmatrix} 2 & -2 \\ -2 & 2 \end{bmatrix} = \begin{bmatrix} -3 & 3 \\ 3 & -3 \end{bmatrix}$$

$$\therefore B = \begin{bmatrix} -1 & 1 \\ 1 & -1 \end{bmatrix}$$

Substituting the value of A in the eqn

$$2A + 3B = \begin{bmatrix} -1 & 1 \\ 1 & -1 \end{bmatrix}$$

$$3B = \begin{bmatrix} -1 & 1 \\ 1 & -1 \end{bmatrix} - 2A = \begin{bmatrix} -1 & 1 \\ 1 & -1 \end{bmatrix} - 2\begin{bmatrix} 1 & -1 \\ -1 & 1 \end{bmatrix}$$

$$= \begin{bmatrix} -1 & 1 \\ 1 & -1 \end{bmatrix} - \begin{bmatrix} 2 & -2 \\ -2 & 2 \end{bmatrix} = \begin{bmatrix} -3 & 3 \\ 3 & -3 \end{bmatrix}$$

$$\Rightarrow B = \begin{bmatrix} -1 & 1 \\ 1 & -1 \end{bmatrix}$$

Multiplication of matrices

Write a brief note on the Multiplication of matrices

Ans:- If A is a matrix of the order m x n and B is a matrix of the order n x p then the product AB is defined and is of order m x p.

Thus AB is defined only if the number of columns of A is equal to the number of rows of B.

If $A = [a_{ij}]$; $B = [b_{jk}]$;

Wherein, i = 1, 2, 3........m, and j = 1, 2, 3........n; k = 1, 2,.......p be two matrices of order m x n and n x p respectively.

Problems:-

$$\textbf{1. If } A = \begin{bmatrix} 5 & -3 \\ -1 & 2 \end{bmatrix} \& B = \begin{bmatrix} -2 & -1 \\ 4 & 7 \end{bmatrix}; \textbf{ find AB.}$$

$$Soln: A = \begin{bmatrix} 5 & -3 \\ -1 & 2 \end{bmatrix} \ \& \ B = \begin{bmatrix} -2 & -1 \\ 4 & 7 \end{bmatrix}$$

$$AB = \begin{bmatrix} 5 & -3 \\ -1 & 2 \end{bmatrix} X \begin{bmatrix} -2 & -1 \\ 4 & 7 \end{bmatrix}\downarrow$$

$$AB = \begin{bmatrix} (5 \times -2) + (-3 \times 4) & (5 \times -1) + (-3 \times 7) \\ (-1 \times -2) + (2 \times 4) & (-1 \times -1) + (2 \times 7) \end{bmatrix}$$

$$AB = \begin{bmatrix} -10-12 & -5-21 \\ 2+8 & 1+14 \end{bmatrix} = \begin{bmatrix} -22 & -26 \\ 10 & 15 \end{bmatrix}$$

ತಮಿಳುನಾಡಿಗೆ ಕಾವೇರಿ ನೀರು ಬಿಡಲು ಮತ್ತೆ ಶಿಫಾರಸು

ಆದೇಶ ಪ್ರತಿಗೆ ಬೆಂಕಿ: ಆಕ್ರೋಶ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ಮತ್ತೆ 15 ದಿನಗಳ ಕಾಲ, ಪ್ರತಿ ದಿನ 5 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ಖಂಡಿಸಿ ವಿವಿಧ ರೈತ ಪರ ಸಂಘಟನೆಗಳ ಕಾರ್ಯಕರ್ತರು ಜಿಲ್ಲಾ ಕೇಂದ್ರ ಮತ್ತು ಶ್ರೀರಂಗಪಟ್ಟಣದಲ್ಲಿ ಮಂಗಳವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಸಮಿತಿಯ ಶಿಫಾರಸು ಪತ್ರ ಮತ್ತು ಟೈರ್ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯ ನಗರದಲ್ಲಿ ಜಿಲ್ಲಾ ರೈತ-ಹಿತರಕ್ಷಣಾ ಸಮಿತಿ ಮತ್ತು ಪ್ರಗತಿಪರ ಸಂಘಟನೆಯ ಕಾರ್ಯಕರ್ತರು ಬೆಂಗಳೂರು –ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ದಿಢೀರ್ ರಸ್ತೆ ತಡೆ ನಡೆಸಿದರು.

‘ಇಂದಿನದ್ದು ರೈತರ ಪಾಲಿಗೆ ಕರಾಳ ತೀರ್ಪು. ಸರ್ಕಾರ ಒಂದು ಹನಿ ನೀರನ್ನೂ ಬಿಡುವುದಿಲ್ಲ ಎಂಬ ಹೇಳಿಕೆ ನೀಡಬೇಕು’ ಎಂದು ಸಮಿತಿಯ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಆಗ್ರಹಿಸಿದರು.

ಭೂಮಿತಾಯಿ ಹೋರಾಟ ಸಮಿತಿ ಕಾರ್ಯಕರ್ತರು ಶ್ರೀರಂಗಪಟ್ಟಣದಲ್ಲಿ ಕಾವೇರಿ ನದಿಗಿಳಿದು ಪ್ರತಿಭಟಿಸಿದರು.

‘ಕಾವೇರಿ ನೀರಿನ ವಿಚಾರದಲ್ಲಿ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದೆ. ರಾಜ್ಯದ ಒಬ್ಬ ಸಂಸದರೂ ದನಿ ಎತ್ತುತ್ತಿಲ್ಲ. ರಾಜ್ಯ ಸರ್ಕಾರ ಕೂಡ ವಾಸ್ತವ ಸ್ಥಿತಿಯನ್ನು ಸಮಿತಿ ಮನವರಿಕೆ ಮಾಡಿಕೊಡುವಲ್ಲಿ ವಿಫಲವಾಗಿದೆ’ ಎಂದು ರೈತ ನಾಯಕ ಕೆ.ಎಸ್. ನಂಜುಂಡೇಗೌಡ ಟೀಕಿಸಿದರು.

ತಮಿಳುನಾಡಿಗೆ ನೀರು ಹರಿಸಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ ಮಾಡಿರುವ ಶಿಫಾರಸು ಖಂಡಿಸಿ, ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಮತ್ತು ಪ್ರಗತಿಪರ ಸಂಘಟನೆಯ ಕಾರ್ಯಕರ್ತರು ಮಂಡ್ಯದ ಜೆ.ಸಿ. ವೃತ್ತದ ಬೆಂಗಳೂರು ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ದಿಢೀರ್ ರಸ್ತೆತಡೆ ನಡೆಸಿದರು

ಇಂದು ತುರ್ತು ಸಭೆ

ಮಂಡ್ಯ: ಕಾವೇರಿ ನೀರು ನಿಯಂತ್ರಣ ಸಮಿತಿಯ ನಿರ್ಧಾರವನ್ನು ಖಂಡಿಸಿ ಸೆ.13 ಬೆಳಿಗ್ಗೆ 9 ಗಂಟೆಗೆ ನಗರದ ಸರ್‌ಎಂ.ವಿ.ಪ್ರತಿಮೆ ಎದುರು ರೈತರು, ಪ್ರಗತಿಪರ ಸಂಘಟನೆಗಳು ಮತ್ತು ನಾಗರಿಕ ಬಂಧುಗಳ ತುರ್ತು ಸಭೆ ಕರೆಯಲಾಗಿದೆ.

ಉಪವಾಸ ಸತ್ಯಾಗ್ರಹ: ‘ತಮಿಳುನಾಡಿಗೆ ನೀರು ಬಿಟ್ಟರೆ ರೈತರು ಮತ್ತು ನಾಗರಿಕರ ಜತೆಗೂಡಿ ಉಪವಾಸ ಸತ್ಯಾಗ್ರಹ ಆರಂಭಿಸುತ್ತೇನೆ’ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಎಚ್ಚರಿಸಿದ್ದಾರೆ.

ಇಲ್ಲಿನ ಕುವೆಂಪು ವೃತ್ತದಲ್ಲಿ ಟೈರ್‌ಗೆ ಬೆಂಕಿ ಹಚ್ಚಿ, ವಾಹನಗಳನ್ನು ತಡೆದು, ಸಮಿತಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ರೈತ ಸಂಘದ ಪ್ರಮುಖರು, ತಮ್ಮನ್ನು ತಡೆದ ಪೊಲೀಸರ ವಿರುದ್ಧವೂ ಹರಿಹಾಯ್ದರು.

‘ಜೀವವೇ ಹೋಗುತ್ತಿದೆ. ನಮ್ಮನ್ನು ತಡೆಯಬೇಡಿ. ಧೈರ್ಯವಿದ್ದರೆ ನಮ್ಮನ್ನು ಬಂಧಿಸಿ’ ಎಂದು ರೈತ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಮರಳಾಗಾಲ ಕೃಷ್ಣೇಗೌಡ ಆಗ್ರಹಿಸಿದರು.

‘ನೀರು ಬಿಟ್ಟರೆ ಪ್ರತಿಭಟನೆ ತೀವ್ರಗೊಳಿಸುತ್ತೇವೆ. ಜೈಲ್ ಭರೋ ಚಳವಳಿಯನ್ನೂ ನಡೆಸುತ್ತೇವೆ’ ಎಂದು ಜಿಲ್ಲಾ ಘಟಕದ ಅಧ್ಯಕ್ಷ ಎ.ಎಲ್. ಕೆಂಪೂಗೌಡ ಎಚ್ಚರಿಸಿದರು.

‘ತಮಿಳುನಾಡಿಗೆ ಹರಿಸಲು ನೀರು ಎಲ್ಲಿದೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕಕ್ಕೆ ಸಾಕಾಗುವಷ್ಟು ನೀರಿಲ್ಲ. ತಮಿಳುನಾಡಿಗೆ ಹರಿಸಲು ನೀರೆಲ್ಲಿದೆ’ ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೇಳಿದರು.

ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸು ಕುರಿತು ಮಂಗಳವಾರ ಪತ್ರಕರ್ತರಿಗೆ ಪ್ರತಿಕ್ರಿಯಿಸಿದ ಅವರು, ‘ಮಳೆ ಕೊರತೆಯಿಂದ ನಮ್ಮ ಜಲಾಶಯಗಳಲ್ಲಿ ಅಗತ್ಯ ಪ್ರಮಾಣದ ನೀರಿನ ಸಂಗ್ರಹವಿಲ್ಲ. ನಮಗೆ ಕುಡಿಯುವ ನೀರು ಹೊಂದಿಸಿಕೊಳ್ಳುವುದು ಕಷ್ಟವಿದೆ’ ಎಂದರು.

‘ವಾಸ್ತವಾಂಶವನ್ನು ಕಾವೇರಿ ನೀರು ನಿರ್ವಹಣಾ ಸಮಿತಿಗೆ ತಿಳಿಸುತ್ತೇವೆ. ಕುಡಿಯುವ ನೀರು ಹೊಂದಿಸಿಕೊಳ್ಳಲು ಅವಕಾಶ ನೀಡುವಂತೆ ಮನವಿ ಮಾಡುತ್ತೇವೆ’ ಎಂದರು.

ಮಂಗಳವಾರದ ನಂತರ ನೀರು ಹರಿಸುವುದನ್ನು ನಿಲ್ಲಿಸುತ್ತೀರಾ ಎಂಬ ಪ್ರಶ್ನೆಗೆ, ‘ಈಗಲೇ ನೀರು ಹೋಗುತ್ತಿಲ್ಲ. ಬಂದ್ ಮಾಡುವುದಕ್ಕೆ ಏನಿದೆ’ ಎಂದು ಕೇಳಿದರು.

ಮತ್ತೆ ‘ಕಾವೇರಿ’ ಸಂಕಷ್ಟ

ಒಂದನೇ ಪುಟದಿಂದ...

ಮಂಗಳವಾರದ ಸಭೆಯ ಆರಂಭದಲ್ಲೇ ಕರ್ನಾಟಕದ ಅಧಿಕಾರಿಗಳು, ‘ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಗಂಭೀರ ಬರದ ಸ್ಥಿತಿ ಇದೆ. ಸಂಕಷ್ಟದ ಸ್ಥಿತಿಯಲ್ಲೂ ತಮಿಳುನಾಡಿಗೆ ನೀರು ಹರಿಸಲಾಗಿದೆ. ರಾಜ್ಯದಲ್ಲಿ ಮುಂಗಾರು ಮುಕ್ತಾಯದ ಹಂತದಲ್ಲಿದೆ. ತಮಿಳುನಾಡಿನಲ್ಲಿ ಮುಂಗಾರು ವೇಗ ಪಡೆದು ಕೊಂಡಿದೆ. ಅದರ ಸಂಪೂರ್ಣ ಲಾಭ ಆ ರಾಜ್ಯಕ್ಕೆ ಸಿಗಲಿದೆ. ಹೀಗಾಗಿ, ಇನ್ನು ಮುಂದೆ ತಮಿಳುನಾಡಿಗೆ ನೀರು ಬಿಡುಗಡೆ ಸಾಧ್ಯವೇ ಇಲ್ಲ’ ಎಂದು ವಾದಿಸಿದರು.

ಆಗ ತಮಿಳುನಾಡಿನ ಅಧಿಕಾರಿಗಳು, ‘ಕಾವೇರಿ ನೀರು ನ್ಯಾಯ ಮಂಡಳಿಯ ಆದೇಶದ ಪ್ರಕಾರ, ಕರ್ನಾಟಕವು ಜೂನ್‌ನಿಂದ ಇಲ್ಲಿಯವರೆಗೆ 90 ಟಿಎಂಸಿ ಅಡಿಯಷ್ಟು ನೀರು ಹರಿಸಬೇಕಿತ್ತು. ಆದರೆ, ಈವರೆಗೆ ಹರಿಸಿರುವುದು 43 ಟಿಎಂಸಿ ಅಡಿಯಷ್ಟು ನೀರನ್ನು ಮಾತ್ರ. ಈ ಮೂಲಕ ನ್ಯಾಯಮಂಡಳಿಯ ಆದೇಶವನ್ನು ಉಲ್ಲಂಘಿಸಿದೆ’ ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕರ್ನಾಟಕದ ಅಧಿಕಾರಿಗಳು, ‘ರಾಜ್ಯದ ನಾಲ್ಕು ಜಲಾಶಯಗಳಿಗೆ ಜೂನ್‌ನಿಂದ ಇಲ್ಲಿಯವರೆಗೆ 105 ಟಿಎಂಸಿ ಅಡಿಯಷ್ಟು ನೀರು ಬಂದಿದೆ. 73 ಟಿಎಂಸಿ ಅಡಿಯಷ್ಟು ನೀರು ಜಲಾಶಯಗಳಿಂದ ಹರಿದು ಹೋಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ನಾಲ್ಕು ಜಲಾಶಯಗಳಲ್ಲಿ 113 ಟಿಎಂಸಿ ಅಡಿಯಷ್ಟು ನೀರು ಇತ್ತು. ಈಗ 63 ಟಿಎಂಸಿ ಅಡಿಯಷ್ಟು ಮಾತ್ರ ನೀರಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಬರದ ತೀವ್ರತೆ ಹೆಚ್ಚುತ್ತಿದೆ. ಕುಡಿಯುವ ನೀರು ಹಾಗೂ ನೀರಾವರಿಯ ಅಗತ್ಯ ಪೂರೈಸಲು ಕಷ್ಟದ ಸನ್ನಿವೇಶ ಇದೆ. ಒಳಹರಿವು ಸುಧಾರಿಸದ ಹೊರತು ಕರ್ನಾಟಕವು ತಮಿಳುನಾಡಿಗೆ ನೀರು ಬಿಡುಗಡೆ ಮಾಡುವ ಸ್ಥಿತಿಯಲ್ಲಿಲ್ಲ’ ಎಂದು ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದರು.

ಪ್ರತಿದಿನ 12,500 ಕ್ಯೂಸೆಕ್‌ನಂತೆ (ಹಿಂದಿನ ಬಾಕಿ 6,500 ಕ್ಯೂಸೆಕ್ ಸೇರಿ) 15 ದಿನಗಳ ಕಾಲ ನೀರು ಹರಿಸಬೇಕು ಎಂದು ತಮಿಳುನಾಡು ಅಧಿಕಾರಿಗಳು ಪಟ್ಟು ಹಿಡಿದರು. ಅಂತಿಮವಾಗಿ ಸಮಿತಿಯು, ಬಿಳಿಗುಂಡ್ಲು ನೀರು ಮಾಪನ ಕೇಂದ್ರದಲ್ಲಿ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರಿನ ಹರಿವನ್ನು ಖಚಿತಪಡಿಸಲು ಶಿಫಾರಸು ಮಾಡಿತು.

₹ 2.5 ಕೋಟಿ ತೆರಿಗೆ ವಂಚಿಸಿದ ಗುತ್ತಿಗೆದಾರ

ಬೆಂಗಳೂರು: ಸರ್ಕಾರದ ಇಲಾಖೆಗಳಲ್ಲಿ ₹12.20 ಕೋಟಿ ಮೊತ್ತದ ಕಾಮಗಾರಿ ನಡೆಸಿದ್ದ ಕಲಬುರಗಿಯ ಗುತ್ತಿಗೆದಾರ-ರೊಬ್ಬರು ₹2.5 ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಂಚಿಸಿರುವುದನ್ನು ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗದ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ.

‘ಈ ಗುತ್ತಿಗೆದಾರ ಕಾಮಗಾರಿ ಬಾಬ್ತು ಬಿಲ್ ಪಡೆಯುವಾಗ ಎರಡು ಜಿಎಸ್‌ಟಿ ನೋಂದಣಿ ಸಂಖ್ಯೆಗಳನ್ನು ನೀಡಿದ್ದರು. ಒಂದು ಜಿಎಸ್‌ಟಿ ನೋಂದಣಿ ಸಂಖ್ಯೆ 2019ರಲ್ಲೇ ರದ್ದಾಗಿತ್ತು. ಅದನ್ನು ಉಲ್ಲೇಖಿಸಿ ಪಡೆದಿದ್ದ ಬಿಲ್ ಮೊತ್ತದ ಬಾಬ್ತು ₹2.5 ಕೋಟಿ ಜಿಎಸ್‌ಟಿ ಪಾವತಿಸದೇ ವಂಚಿಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ. ಶಿಖಾ ತಿಳಿಸಿದ್ದಾರೆ.

‘ತೆರಿಗೆ ವಂಚನೆಗೆ ಸಂಬಂಧಿಸಿದಂತೆ ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ವಂಚಿಸಿರುವ ತೆರಿಗೆ ಮೊತ್ತವನ್ನು ವಸೂಲಿ ಮಾಡಲು ಪ್ರಕ್ರಿಯೆ ಆರಂಭಿಸಲಾಗಿದೆ. ತನಿಖೆ ಪ್ರಗತಿಯಲ್ಲಿದೆ’ ಎಂದು ಮಾಹಿತಿ ನೀಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಬುರಗಿಯ ಸ್ಥಳವೊಂದರ ಮೇಲೆ ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗದ ಅಧಿಕಾರಿಗಳು ದಾಳಿಮಾಡಿ ಶೋಧ ನಡೆಸಿದ್ದಾರೆ. ಆಗ ₹500ರ ಮುಖಬೆಲೆಯ ₹33 ಲಕ್ಷ ನಗದು ಪತ್ತೆಯಾಗಿದೆ. ಈ ಮೊತ್ತದ ನಗದು ಇರಿಸಿಕೊಂಡ ಕುರಿತು ಗುತ್ತಿಗೆದಾರರು ಕಾರಣ ವಿವರಿಸಲು ವಿಫಲರಾಗಿದ್ದಾರೆ. ಈ ಬಗ್ಗೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಬಿಸಿಯೂಟ: ವಿದ್ಯಾರ್ಥಿಗಳು ಅಸ್ವಸ್ಥ

ಚಿತ್ರದುರ್ಗ: ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಮೌಲಾನಾ ಆಜಾದ್ ಪ್ರೌಢಶಾಲೆಯಲ್ಲಿ ಮಂಗಳವಾರ ಬಿಸಿಯೂಟ ಸೇವಿಸಿ ಅಸ್ವಸ್ಥಗೊಂಡಿರುವ 26 ವಿದ್ಯಾರ್ಥಿಗಳನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಎರಡೂ ಶಾಲೆಗಳ ವಿದ್ಯಾರ್ಥಿ ಗಳಿಗೆ ಮಧ್ಯಾಹ್ನ ಅನ್ನ ಮತ್ತು ಬೇಳೆಸಾರು ನೀಡಲಾಗಿತ್ತು. ಜತೆಗೆ ಶೇಂಗಾ ಚಿಕ್ಕಿಯನ್ನೂ ನೀಡಲಾಗಿತ್ತು. ಪ್ರಾಥಮಿಕ ಶಾಲೆಯಲ್ಲಿ 110 ವಿದ್ಯಾರ್ಥಿಗಳ ಪೈಕಿ 23 ವಿದ್ಯಾರ್ಥಿಗಳಿಗೆ ಹೊಟ್ಟೆನೋವು ಕಾಣಿಸಿಕೊಂಡಿದೆ. ಪ್ರೌಢಶಾಲೆಯಲ್ಲಿ ಊಟ ಮಾಡಿದ 200 ವಿದ್ಯಾರ್ಥಿಗಳ ಪೈಕಿ ಮೂವರಿಗೆ ಹೊಟ್ಟೆನೋವು ಕಾಣಿಸಿಕೊಂಡಿದೆ. ‘ಆಹಾರ ಕಲುಷಿತಗೊಂಡಿರುವ ಸಾಧ್ಯತೆ ಇರುವುದಾಗಿ ವೈದ್ಯರು ಶಂಕೆ ವ್ಯಕ್ತಪಡಿಸಿದ್ದಾರೆ’ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ನಾಗಭೂಷಣ್ ಮಾಹಿತಿ ನೀಡಿದ್ದಾರೆ.

‘ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ’ ಎಂದು ಜಿಲ್ಲಾ ಆಸ್ಪತ್ರೆಯ ವೈದ್ಯ ದೇವರಾಜ್ ತಿಳಿಸಿದರು.

ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಮಂಗಳವಾರ ಹೆಚ್ಚಿನ ಸಂಖ್ಯೆಯ ಭಕ್ತರು ಭೇಟಿ ನೀಡಿದ್ದರು

ಆಶ್ಲೇಷಾ ನಕ್ಷತ್ರ: ಕುಕ್ಕೆಯಲ್ಲಿ ಭಕ್ತ ಸಾಗರ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಆಶ್ಲೇಷಾ ನಕ್ಷತ್ರ ಶುಭ ದಿನವಾದ ಮಂಗಳವಾರ ಕುಕ್ಕೆ ಶ್ರೀಸುಬ್ರಹ್ಮಣ್ಯ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯ ಭಕ್ತರು ಭೇಟಿ ನೀಡಿದ್ದರು. ಈ ವರ್ಷದ ದಾಖಲೆ ಪ್ರಮಾಣದಲ್ಲಿ ಆಶ್ಲೇಷ ಬಲಿ ಸೇವೆ ನಡೆದಿದೆ.

ಆಶ್ಲೇಷಾ ನಕ್ಷತ್ರ ದಿನ ಸುಬ್ರಹ್ಮಣ್ಯ ದೇವರಿಗೆ ವಿಶೇಷವಾಗಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸೇವೆ ನೆರವೇರಿಸುತ್ತಾರೆ.

ಮಂಗಳವಾರ ಬೆಳಿಗ್ಗೆ 1,719 ಆಶ್ಲೇಷ ಬಲಿ ಹಾಗೂ ಸಂಜೆ ಸುಮಾರು 190 ಆಶ್ಲೇಷ ಬಲಿ ಸೇವೆಗಳು ನಡೆದಿವೆ. ಇದು ಈ ವರ್ಷದ ದಾಖಲೆಯಾಗಿದೆ ಎಂದು ದೇವಾಲಯದ ಮೂಲಗಳು ತಿಳಿಸಿವೆ.

ಕ್ಷೇತ್ರದ ರಥಬೀದಿ ಮತ್ತು ಹೊರಾಂಗಣ ಭಕ್ತರಿಂದ ತುಂಬಿತ್ತು. ಪೇಟೆಯಲ್ಲಿ ವಾಹನಗಳ ಓಡಾಟವೂ ಅಧಿಕವಾಗಿತ್ತು. ಸೋಮವಾರ ಸಂಜೆಯಿಂದಲೇ ಕ್ಷೇತ್ರಕ್ಕೆ ಅಧಿಕ ಸಂಖ್ಯೆಯ ಭಕ್ತರು ಬಂದಿದ್ದರು.

ಬೀದರ್: ಮಗಳ ಮದುವೆಗಾಗಿ ಸಾಲ

₹1 ಲಕ್ಷ ಸಾಲ: 7 ವರ್ಷ ಜೀತದಾಳಾದ ತಂದೆ

ಪ್ರಜಾವಾಣಿ ವಾರ್ತೆ

ಬೀದರ್: ‘ಮಗಳ ಮದುವೆಗಾಗಿ ₹1 ಲಕ್ಷ ಸಾಲ ಪಡೆದದ್ದಕ್ಕೆ ಏಳು ವರ್ಷ ಜೀತದಾಳಾಗಿ ನನ್ನನ್ನು ದುಡಿಸಿಕೊಂಡಿದ್ದಾರೆ’ ಎಂದು ತಾಲ್ಲೂಕಿನ ಅಲಿಯಂಬರ್ ಗ್ರಾಮದ ವ್ಯಕ್ತಿಯೊಬ್ಬರು ಅದೇ ಗ್ರಾಮದ ಇನ್ನೊಬ್ಬ ವ್ಯಕ್ತಿ ವಿರುದ್ಧ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ.

ಗ್ರಾಮದ 60 ವರ್ಷ ವಯಸ್ಸಿನ ಶಂಕರ್ ಹಲಕುಡೆ ಅವರು ವಿಶ್ವನಾಥ ಗಂಗಶೆಟ್ಟಿ ಪಾಟೀಲ ವಿರುದ್ಧ ನೀಡಿರುವ ದೂರಿನ ಮೇರೆಗೆ ತಾಲ್ಲೂಕಿನ ಜನವಾಡ ಪೊಲೀಸ್ ಠಾಣೆಯಲ್ಲಿ ಸೆಪ್ಟೆಂಬರ್ 10ರಂದು ಪ್ರಕರಣ ದಾಖಲಾಗಿದೆ.

> **ಶಂಕರ್ ಹಲಕುಡೆ ಕೊಟ್ಟಿರುವ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದು, ಎಲ್ಲ ಕೋನಗಳಿಂದ ತನಿಖೆ ನಡೆಸಲಾಗುತ್ತಿದೆ**
> **ಚನ್ನಬಸವಣ್ಣ ಎಸ್.ಎಲ್.**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬೀದರ್

‘2016ರ ಜೂನ್ 1ರಿಂದ ಸತತ ಏಳು ವರ್ಷ ನನ್ನನ್ನು ವಿಶ್ವನಾಥ ಅವರು ಅವರ ಹೊಲದಲ್ಲಿ ನಸುಕಿನ ಜಾವ ನಾಲ್ಕು ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಜೀತದಾಳಾಗಿ ಕೆಲಸ ಮಾಡಿಸಿಕೊಂಡಿದ್ದಾರೆ. ವಿಶ್ವನಾಥ ಅವರ ಮಗ ಬಸವರಾಜ ಪಾಟೀಲ ಅವರು ಮಾನಸಿಕವಾಗಿ ಕಿರುಕುಳ ಕೊಟ್ಟಿದ್ದಾರೆ. ಅವಾಚ್ಯ ಶಬ್ದಗಳಿಂದ ನನಗೆ ಹಾಗೂ ನನ್ನ ಕುಟುಂಬದ ಸದಸ್ಯರನ್ನು ನಿಂದಿಸಿ ಸ್ವಂತ ಮನೆ ಮಾರಾಟ ಮಾಡಲು ಒತ್ತಡ ಹೇರಿದ್ದಾರೆ’ ಎಂದು ಶಂಕರ್ ದೂರಿನಲ್ಲಿ ವಿವರಿಸಿದ್ದಾರೆ.

ಶಂಕರ್ ಹಲಕುಡೆ ಅವರು 2016ರಲ್ಲಿ ವಿಶ್ವನಾಥ ಗಂಗಶೆಟ್ಟಿ ಪಾಟೀಲ ಅವರಿಂದ ಮಗಳ ಮದುವೆಗಾಗಿ ₹1 ಲಕ್ಷ ಸಾಲ ಪಡೆದುಕೊಂಡಿದ್ದರು. ಮೂರು ವರ್ಷಗಳ ನಂತರ ಶಂಕರ್ ಅವರು ಸಾಲ ತೀರಿಸಿದ್ದಾರೆ. ಆದರೆ, ಇದನ್ನು ಒಪ್ಪದ ವಿಶ್ವನಾಥ, ಬಡ್ಡಿ ಸೇರಿ ಒಟ್ಟು ₹7.50 ಲಕ್ಷ ಸಾಲ ಹಿಂತಿರುಗಿಸಬೇಕಿತ್ತು ಎಂಬ ಕಾರಣ ನೀಡಿ ವರ್ಷಕ್ಕೆ ₹65 ಸಾವಿರ ಲೆಕ್ಕದಲ್ಲಿ ಜೀತದಾಳಾಗಿ ಕೆಲಸ ಮಾಡಿಸಿಕೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ಕೊಟ್ಟಿದ್ದಾರೆ.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ

‘ಜೆಡಿಎಸ್ ಜೊತೆಗೆ ಬಿಜೆಪಿ ಮೈತ್ರಿ: ಮೋದಿ, ಶಾ ನಿರ್ಧಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2024ರ ಲೋಕಸಭೆ ಚುನಾವಣೆ ಸಂಬಂಧ ಜೆಡಿಎಸ್ ಜತೆಗಿನ ಮೈತ್ರಿ ವಿಷಯ ಕುರಿತು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರೇ ನಿರ್ಧಾರ ಕೈಗೊಳ್ಳಲಿದ್ದಾರೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

‘ಪಕ್ಷದ ಚುನಾವಣೆ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ಬುಧವಾರ ದೆಹಲಿಗೆ ಹೋಗುತ್ತೇನೆ. ರಾಜ್ಯದಲ್ಲಿನ ರಾಜಕೀಯ ಪರಿಸ್ಥಿತಿ ಕುರಿತು ಸಭೆಯಲ್ಲಿ ಪರಾಮರ್ಶಿಸಲಾಗುವುದು’ ಎಂದು ಸುದ್ದಿಗಾರರಿಗೆ ಮಂಗಳವಾರ ಹೇಳಿದರು.

‘ಜೆಡಿಎಸ್ ಜತೆಗಿನ ಮೈತ್ರಿ ಕುರಿತು ಹೆಚ್ಚಿನ ಮಾಹಿತಿ ಇಲ್ಲ. ಚರ್ಚೆಗಳು ಯಾವ ರೀತಿ ನಡೆಯುತ್ತವೆ ಎನ್ನುವುದನ್ನು ಕಾದು ನೋಡೋಣ. ನರೇಂದ್ರ ಮೋದಿ ಮತ್ತು ಶಾ ಅವರೇ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುತ್ತಾರೆ. ಕೇಂದ್ರದ ವರಿಷ್ಠರು ಕೈಗೊಳ್ಳುವ ನಿರ್ಧಾರಕ್ಕೆ ನಾವು ಬದ್ಧ’ ಎಂದರು.

ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ: ನಗರದಲ್ಲಿ ಮಂಗಳವಾರ ನಡೆದ ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಯಡಿಯೂರಪ್ಪ ಅವರು, ‘ಕೇವಲ 100 ದಿನಗಳಲ್ಲಿ ಕಾಂಗ್ರೆಸ್ ಸರ್ಕಾರ ಜನಪ್ರಿಯತೆ ಕಳಕೊಂಡಿದೆ. ಎಲ್ಲ ರಂಗಗಳಲ್ಲೂ ವಿಫಲವಾಗಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಜನವಿರೋಧಿ ನೀತಿಯನ್ನು ಜನರಿಗೆ ತಿಳಿಸಬೇಕು’ ಎಂದು ಕರೆ ಕೊಟ್ಟರು.

‘ಇದೇ 18ರಿಂದ ಕುರುಡುಮಲೆಯಿಂದ ರಾಜ್ಯದಾದ್ಯಂತ ರಾಜಕೀಯ ಪ್ರವಾಸ ಆರಂಭಿಸಲಾಗುವುದು. ಇಡೀ ರಾಜ್ಯದಾದ್ಯಂತ ಪ್ರವಾಸ ಮಾಡಿ ಪಕ್ಷ ಸಂಘಟನೆಗೆ ಶ್ರಮಿಸಲಾಗುವುದು’ ಎಂದು ತಿಳಿಸಿದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಅಭಿವೃದ್ಧಿಗೆ ಮೀಸಲಿರಿಸಿದ ಅನುದಾನವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ಈ ಸಮುದಾಯಗಳಿಗೆ ಸರ್ಕಾರ ಅನ್ಯಾಯ ಮಾಡುತ್ತಿದೆ. ರಾಜ್ಯದಲ್ಲಿ ಭೀಕರ ಬರ ಇದ್ದರೂ ಸರ್ಕಾರ ಗಮನಹರಿಸುತ್ತಿಲ್ಲ. ತಕ್ಷಣವೇ ಬರಪೀಡಿತ ಪ್ರದೇಶಗಳನ್ನು ಘೋಷಿಸಬೇಕು’ ಎಂದು ಆಗ್ರಹಿಸಿದರು.

‘ರಾಹುಲ್ ಗಾಂಧಿಯವರು ವಿದೇಶಿ ನೆಲದಲ್ಲಿ ಹಿಂದುತ್ವದ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ. ಈ ಸಂಬಂಧ ರಾಹುಲ್ ಗಾಂಧಿ ಅವರು ಕ್ಷಮೆ ಕೇಳಬೇಕು’ ಎಂದು ಒತ್ತಾಯಿಸಿದರು.

ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ನಡೆದ ರಾಜ್ಯ ಪದಾಧಿಕಾರಿಗಳ ಸಭೆಗೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಶಾಸಕ ಬಸವರಾಜ ಬೊಮ್ಮಾಯಿ ಹಾಗೂ ಸಂಸದ ಡಿ.ವಿ. ಸದಾನಂದಗೌಡ ಬಂದರು –ಪ್ರಜಾವಾಣಿ ಚಿತ್ರ

ಅನಿಷ್ಟ ಸರ್ಕಾರದ ವಿರುದ್ಧ ಹೋರಾಟಕ್ಕೆ ಮೈತ್ರಿ: ಬೊಮ್ಮಾಯಿ

‘ರಾಜ್ಯದಲ್ಲಿನ ಅನಿಷ್ಟ ಸರ್ಕಾರದ ವಿರುದ್ಧ ಹೋರಾಟ ನಡೆಸುವುದು ಅಗತ್ಯವಿದೆ. ಹೀಗಾಗಿ, ಜೆಡಿಎಸ್ ಜತೆ ಮೈತ್ರಿ ಅನಿವಾರ್ಯ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎರಡೂ ವಿರೋಧ ಪಕ್ಷಗಳು ಒಂದಾಗಬೇಕು ಎಂಬ ನಿರೀಕ್ಷೆ ಇದೆ. ಮುಂದಿನ ಸಾಧಕ ಬಾಧಕಗಳ ಬಗ್ಗೆ ಚರ್ಚೆಯಾಗಬೇಕಿದೆ. ಉಭಯ ಪಕ್ಷಗಳ ವರಿಷ್ಠರು ಸೇರಿ ತೀರ್ಮಾನ ಕೈಗೊಳ್ಳಲಿದ್ದಾರೆ’ ಎಂದರು.

ಕಾಂಗ್ರೆಸ್ ಟೀಕೆಗೆ ಪ್ರತಿಕ್ರಿಯಿಸಿದ ಅವರು, ‘ಕಾಂಗ್ರೆಸ್ ಸಹ ಇತರ ಪಕ್ಷಗಳ ಜತೆ ಸೇರಿ ಇಂಡಿಯಾ ಮೈತ್ರಿಕೂಟ ರಚಿಸಿಕೊಂಡಿದೆ. ಪರಸ್ಪರ ವಿರೋಧ ಮಾಡುತ್ತಿದ್ದ ಪಕ್ಷಗಳು ಒಗ್ಗೂಡಿವೆ. ಈ ಪಕ್ಷಗಳು ಅಸಹಾಯಕ ಸ್ಥಿತಿಯಲ್ಲಿವೇ’ ಎಂದು ಪ್ರಶ್ನಿಸಿದರು.

ಪಕ್ಷದ ಆಂತರಿಕ ಕಲಹದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಭ್ರಮನಿರಸನಗೊಂಡಿದ್ದಾರೆ. ಕೇವಲ ಮೂರು ತಿಂಗಳಲ್ಲಿ ಇಷ್ಟೊಂದು ಜನವಿರೋಧಿ ಸರ್ಕಾರವನ್ನು ಯಾವುದೇ ರಾಜ್ಯದಲ್ಲಿ ನಾನು ಕಂಡಿಲ್ಲ

ಡಿ.ವಿ. ಸದಾನಂದಗೌಡ ಸಂಸದ

‘ಮೈತ್ರಿ ಸುದ್ದಿ ಕೇಳಿ ಕಾಂಗ್ರೆಸ್‌ಗೆ ನಡುಕ’

ಬೆಂಗಳೂರು: ಬಿಜೆಪಿ– ಜೆಡಿಎಸ್ ಒಂದಾಗಲು ಹೊರಟರೆ ಕಾಂಗ್ರೆಸ್ ನವರಿಗೆ ಏಕೆ ಹೊಟ್ಟೆ ಉರಿ? ಮೈತ್ರಿಯ ಸುದ್ದಿ ಕೇಳುತ್ತಿದ್ದಂತೆ ಹೊಟ್ಟೆ ಉರಿ ಆರಂಭವಾಗಿದೆ. ಅಂದರೆ ಅವರಿಗೆ ನಡುಕ ಶುರುವಾಗಿದೆ ಎಂದು ಬಿಜೆಪಿ ಶಾಸಕ ಆರ್.ಅಶೋಕ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಮೈತ್ರಿಯನ್ನು ಜನ ಒಪ್ಪಿಗೊಂಡರೆ 28 ಕ್ಷೇತ್ರಗಳನ್ನೂ ಗೆದ್ದು ದಾಖಲೆ ಸೃಷ್ಟಿಸಲು ಸಾಧ್ಯವಿದೆ. ಕಾಂಗ್ರೆಸ್ ಗೆಲ್ಲುವ ಒಂದು ಕ್ಷೇತ್ರದ ಹೆಸರನ್ನಾದರೂ ಹೇಳಲಿ ನೋಡೋಣ ಎಂದರು.

ಮಂಡ್ಯ ಲೋಕಸಭಾ ಕ್ಷೇತ್ರದ ಬಗ್ಗೆ ಇನ್ನೂ ಅಂತಿಮ ಆಗಿಲ್ಲ. ಸಂಸದೆ ಸುಮಲತಾ ಅವರೂ ಪಟ್ಟು ಹಿಡಿದು ಕುಳಿತಿಲ್ಲ. ಹಾಸನ ಮತ್ತು ಗ್ರಾಮಾಂತರ ಕ್ಷೇತ್ರದ ಬಗ್ಗೆ ಸಮಸ್ಯೆ ಇಲ್ಲ. ಕೆಲವರಂತೂ ಸ್ಪರ್ಧೆ ಮಾಡುವುದಿಲ್ಲ ಎಂದಿದ್ದಾರೆ. ಮೊದಲು ಯಾವ ಚುನಾವಣೆ ಬರುತ್ತದೆಯೋ ಅದಕ್ಕೆ ಮೈತ್ರಿ ಆಗುತ್ತದೆ. ಮೈತ್ರಿ ಮತ್ತು ಟಿಕೆಟ್ ಹಂಚಿಕೆ ವಿಚಾರ ಹೈಕಮಾಂಡ್ ನೋಡಿಕೊಳ್ಳಲಿದೆ ಎಂದು ತಿಳಿಸಿದರು.

ಹರಿಪ್ರಸಾದ್ ವಿರುದ್ಧ ಈಶ್ವರಾನಂದಪುರಿ ಸ್ವಾಮೀಜಿ ವಾಗ್ದಾಳಿ

‘ಸಿದ್ದರಾಮಯ್ಯ ವಿರುದ್ಧ ಮಾತಾಡುವುದನ್ನು ಸಹಿಸಲ್ಲ’

ಪ್ರಜಾವಾಣಿ ವಾರ್ತೆ

ಹೊಸದುರ್ಗ: ‘ರಾಜ್ಯದ ಜನರು ಸಿದ್ದರಾಮಯ್ಯ ಅವರನ್ನು ನೋಡಿಯೇ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ಹೈಕಮಾಂಡ್ ನಿರ್ಧಾರದಿಂದ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿಯಾಗಿದ್ದಾರೆ. ಸ್ಥಾನಮಾನ ಸಿಕ್ಕಿಲ್ಲ ಎಂಬ ಕಾರಣಕ್ಕೆ ಸಿದ್ದರಾಮಯ್ಯ ವಿರುದ್ಧ ಮಾತನಾಡುವುದನ್ನು ನಾವು ಸಹಿಸುವುದಿಲ್ಲ’ ಎಂದು ಕಾಗಿನೆಲೆ ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ವಿರುದ್ಧ ವಾಗ್ದಾಳಿ ನಡೆಸಿದರು.

ಈಶ್ವರಾನಂದಪುರಿ ಸ್ವಾಮೀಜಿ

ತಾಲ್ಲೂಕಿನ ನಾಗೇನಹಳ್ಳಿಯಲ್ಲಿ ಸೋಮವಾರ ರಾತ್ರಿ ನಡೆದ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ ಮತ್ತು ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು.

‘ಪ್ರಬುದ್ಧ ರಾಜಕಾರಣಿ ಎನ್ನಿಸಿಕೊಂಡಿರುವ ಬಿ.ಕೆ. ಹರಿಪ್ರಸಾದ್ ಅವರಿಂದ ಇಂತಹ ಹೊಟ್ಟೆಕಿಚ್ಚಿನ ಮಾತುಗಳನ್ನು ನಾವು ನಿರೀಕ್ಷಿಸಿರಲಿಲ್ಲ. ಸಿದ್ದರಾಮಯ್ಯ ಎಂದೂ ಜಾತಿ ರಾಜಕಾರಣ ಮಾಡಿಲ್ಲ. ಬದಲಿಗೆ, ಶೋಷಿತರಿಗೆ, ಅವಕಾಶ ವಂಚಿತರಿಗೆ ಶಕ್ತಿ ತುಂಬಿದ್ದಾರೆ. ರಾಜ್ಯ ಸಚಿವ ಸಂಪುಟ ಬಸವಣ್ಣನವರ ಅನುಭವ ಮಂಟಪದ ಮಾದರಿಯಲ್ಲಿದೆ. ಇದನ್ನು ಹರಿಪ್ರಸಾದ್ ಅರ್ಥ ಮಾಡಿಕೊಳ್ಳಬೇಕು’ ಎಂದರು.

‘ಜೆಡಿಎಸ್ ಪಕ್ಷದಲ್ಲಿದ್ದಾಗ ಸಿದ್ದರಾಮಯ್ಯ ಅಧಿಕಾರಕ್ಕೆ ಅಂಟಿಕೊಳ್ಳದೆ, ಅಹಿಂದ ಪರ ನಿಂತು ಉಪಮುಖ್ಯಮಂತ್ರಿ ಸ್ಥಾನ ಕಳೆದುಕೊಂಡರು. ಅದು ಅವರು ಶೋಷಿತರ ಪರ ಎಂಬುದನ್ನು ಸಾಬೀತು ಮಾಡಿದೆ’ ಎಂದು ಅವರು ಹೇಳಿದರು.

ತಿನಿಸು ತಿಂದು ಪ್ರಜ್ಞಾಹೀನರಾದರು

ಬೆಳಗಾವಿ: ವಾಸ್ಕೊ–ನಿಜಾಮುದ್ದೀನ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಸೋಮವಾರ ಅಪರಿಚಿತರು ನೀಡಿದ ತಿನಿಸು ತಿಂದು ಪ್ರಜ್ಞೆ ಕಳೆದುಕೊಂಡ 8 ಪ್ರಯಾಣಿಕರ ಪೈಕಿ 6 ಮಂದಿಗೆ ಪ್ರಜ್ಞೆ ಬಂದಿದ್ದು, ಇನ್ನಿಬ್ಬರಿಗೆ ಜಿಲ್ಲಾ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿದಿದೆ.

‘ಮಧ್ಯಪ್ರದೇಶದ ಖಂಡ್ವಾ ಎಂಬ ಊರಿನ ಈ ಎಂಟೂ ಮಂದಿ ಗೋವಾದಲ್ಲಿ ಕಾರ್ಮಿಕರಾಗಿದ್ದು, ಹಬ್ಬದ ಹಿನ್ನೆಲೆಯಲ್ಲಿ ರೈಲಿನ ಜನರಲ್ ಬೋಗಿಯಲ್ಲಿ ಊರಿಗೆ ಹೊರಟಿದ್ದರು. ಅಪರಿಚಿತರು ಕೊಟ್ಟ ಚಾಕೊಲೇಟ್, ಬಿಸ್ಕತ್ತು ಮತ್ತು ಕುರುಕುರೆ ತಿಂದು ಕೆಲವೇ ನಿಮಿಷಗಳಲ್ಲಿ ಅವರು ಪ್ರಜ್ಞೆ ಕಳೆದುಕೊಂಡರು. ಎಷ್ಟು ಹೊತ್ತಾದರೂ ಎಚ್ಚರವಾಗದಿರುವುದು ಕಂಡು ಸಹಪ್ರಯಾಣಿಕರು ನಮಗೆ ಮಾಹಿತಿ ನೀಡಿದರು’ ಎಂದು ರೈಲ್ವೆ ಪೊಲೀಸರು ತಿಳಿಸಿದರು.

ಪಿಯು ಪೂರಕ ಪರೀಕ್ಷೆ: ಶೇ 35 ಫಲಿತಾಂಶ

ಒಂದನೇ ಪುಟದಿಂದ

ಪರೀಕ್ಷೆ ಬರೆದಿದ್ದ 75,967 ಯುವಕರಲ್ಲಿ ಶೇ 32.7 ತೇರ್ಗಡೆಯಾದರೆ, 43,216 ಯುವತಿಯರಲ್ಲಿ 39.61ರಷ್ಟು ತೇರ್ಗಡೆಯಾಗಿದ್ದಾರೆ. 88,799 ನಗರ ಪ್ರದೇಶದ ವಿದ್ಯಾರ್ಥಿಗಳಲ್ಲಿ ಶೇ 34.9, 30,384 ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಶೇ 36.11ರಷ್ಟು ಫಲಿತಾಂಶ ಪಡೆದಿದ್ದಾರೆ.

ಕನ್ನಡ ಮಾಧ್ಯಮದ 73,574 ವಿದ್ಯಾರ್ಥಿಗಳಲ್ಲಿ ಶೇ 35.71 ಹಾಗೂ ಇಂಗ್ಲಿಷ್ ಮಾಧ್ಯಮದ 45,609 ವಿದ್ಯಾರ್ಥಿಗಳಲ್ಲಿ 34.4ರಷ್ಟು ತೇರ್ಗಡೆಯಾಗಿದ್ದಾರೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ 2022–23ನೇ ಶೈಕ್ಷಣಿಕ ಸಾಲಿನ ಮುಖ್ಯ ಪರೀಕ್ಷೆಯನ್ನು ಇದೇ ವರ್ಷದ ಮಾರ್ಚ್‌ನಲ್ಲಿ ನಡೆಸಿತ್ತು. ಮತ್ತೆ ಮೇ-ಜೂನ್‌ನಲ್ಲಿ ಮೊದಲ ಪೂರಕ ಪರೀಕ್ಷೆ ನಡೆದಿತ್ತು. ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಎರಡನೇ ಪೂರಕ ಪರೀಕ್ಷೆ ನಡೆಸಲಾಗಿತ್ತು.

ಪರೀಕ್ಷೆ	ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ	ಉತ್ತೀರ್ಣ
ಮಾರ್ಚ್	7,02,067	5,24,209
ಮೇ-ಜೂನ್	1,57,756	50,478
ಆಗಸ್ಟ್-ಸೆಪ್ಟೆಂಬರ್	1,19,183	41,961

‘ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ಪಾಲ್ಗೊಳ್ಳಲ್ಲ’

ವಿಜಯಪುರ: ‘ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಡೆದಿರುವ ಲಿಂಗಾಯತ ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ಪದೇ ಪದೇ ಪಾಲ್ಗೊಳ್ಳಲು ಆಗದು’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

‘ಬಿಜೆಪಿ ಸರ್ಕಾರದ ಅವಧಿಯಲ್ಲೇ ಮೀಸಲಾತಿ ನೀಡಿ, ಅಧಿಸೂಚನೆ ಹೊರಡಿಸಲಾಗಿದೆ. ಸುಗ್ರೀವಾಜ್ಞೆಯೂ ಆಗಿದೆ. ಅದನ್ನು ರಾಜ್ಯ ಸರ್ಕಾರ ಜಾರಿಗೊಳಿಸಬೇಕಿದೆ’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ಮೀಸಲಾತಿಗೆ ಸಂಬಂಧಿಸದ ಕೆಲಸಗಳನ್ನು ಶಿಷ್ಯಂದಿರಾದ ಲಕ್ಷ್ಮಿ ಹೆಬ್ಬಾಳಕರ, ವಿನಯ ಕುಲಕರ್ಣಿ, ವಿಜಯಾನಂದ ಕಾಶಪ್ಪನವರ ಮೂಲಕ ಗುರುಗಳು ಮಾಡಿಸಲಿ. ಹಿಂದುಳಿದ ವರ್ಗಗಳ 2 ‘ಎ’ಗೆ ಇರುವ ಶೇ 15ರಷ್ಟು ಮೀಸಲಾತಿ ಪಂಚಮಸಾಲಿಗಳಿಗೆ ಕೊಡಬೇಕು ಎಂದು ಈ ಹಿಂದೆ ಶಾಸಕ ವಿಜಯಾನಂದ ಕಾಶಪ್ಪನವರ ಕೋರಿದ್ದರು. ಈಗ ಅವರದ್ದೇ ಸರ್ಕಾರವಿದೆ. ಇದನ್ನು ಜಾರಿಗೊಳಿಸಲಿ’ ಎಂದು ಸವಾಲು ಹಾಕಿದರು.

‘ನನ್ನ ಹೆಣ ಕೂಡ ಬಿಜೆಪಿಗೆ ಹೋಗಲ್ಲ’ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಸಿದ್ದರಾಮಯ್ಯ ಸಜೀವವಾಗಿ ಬಂದರೂ ಬಿಜೆಪಿಗೆ ತೆಗೆದುಕೊಳ್ಳಲ್ಲ. ಹೆಣವಾಗಿ ಬಂದರೆ ತೆಗೆದುಕೊಳ್ಳುತ್ತೇವಾ’ ಎಂದು ಕೇಳಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ ಆಯೋಜನೆ

ಅ.6, 7ರಂದು ‘ಆಳ್ವಾಸ್ ಪ್ರಗತಿ’ ಉದ್ಯೋಗ ಮೇಳ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹೊರ ಜಿಲ್ಲೆಯವರಿಗೆ ವಸತಿ ವ್ಯವಸ್ಥೆ
- 13ನೇ ಆವೃತ್ತಿಯ ಮೇಳ

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ಅಕ್ಟೋಬರ್ 6 ಮತ್ತು 7ರಂದು ‘ಆಳ್ವಾಸ್ ಪ್ರಗತಿ 2023’ ಉದ್ಯೋಗ ಮೇಳ ಮೂಡಬಿದಿರೆಯ ವಿದ್ಯಾಗಿರಿಯಲ್ಲಿರುವ ಆಳ್ವಾಸ್ ಕಾಲೇಜಿನಲ್ಲಿ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಈ ಮಾಹಿತಿ ನೀಡಿದ ಕಾಲೇಜಿನ ಪ್ರಾಂಶುಪಾಲ ಕುರಿಯನ್, ‘ಗ್ರಾಮೀಣ ಪ್ರತಿಭಾನ್ವಿತ ಯುವಕರಿಗೆ ಉತ್ತಮ ವೇದಿಕೆ ಕಲ್ಪಿಸಿಕೊಡುವ ಉದ್ದೇಶದಿಂದ ಪ್ರತಿಷ್ಠಾನವು ಉದ್ಯೋಗ ಮೇಳ ಆಯೋಜಿಸುತ್ತಾ ಬಂದಿದೆ. ಈ ವರ್ಷ 13ನೇ ಆವೃತ್ತಿಯ ಮೇಳ ನಡೆಯಲಿದೆ’ ಎಂದು ತಿಳಿಸಿದರು.

‘ಐಟಿ, ತಯಾರಿಕೆ, ಮಾರಾಟ, ಚಿಲ್ಲರೆ ವ್ಯಾಪಾರ, ಆತಿಥ್ಯ, ಟೆಲಿಕಮ್ಯುನಿಕೇಷನ್, ಆರೋಗ್ಯ, ಮಾಧ್ಯಮ, ನಿರ್ಮಾಣ, ಶಿಕ್ಷಣ, ಎನ್‌ಜಿಒ ಮುಂತಾದ ವಲಯಗಳ ದೇಶಿ ಮತ್ತು ವಿದೇಶಿ ಕಂಪನಿಗಳು ಪಾಲ್ಗೊಳ್ಳಲಿವೆ. ವಿವಿಧ ಪದವಿ, ಸ್ನಾತಕೋತ್ತರ ಪದವಿ, ವೈದ್ಯಕೀಯ, ಅರೆ ವೈದ್ಯಕೀಯ, ಎಂಜಿನಿಯರಿಂಗ್, ಆಡಳಿತ ನಿರ್ವಹಣೆ, ಮೂಲ ವಿಜ್ಞಾನ, ನರ್ಸಿಂಗ್, ಐಟಿಐ, ಡಿಪ್ಲೊಮಾ, ಪಿಯುಸಿ, ಎಸ್ಸೆಸ್ಸೆಲ್ಸಿ ಶಿಕ್ಷಣ ಪೂರೈಸಿದ ಆಕಾಂಕ್ಷಿಗಳು ಭಾಗವಹಿಸಬಹುದು. ಕಂಪನಿಗಳ ವಿವರ ಹಾಗೂ ಇತರ ಮಾಹಿತಿಯನ್ನು www.alvaspragati.com ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಉದ್ಯೋಗ ಮೇಳದಲ್ಲಿ ಭಾಗವಹಿಸಲು ಇಚ್ಛಿಸುವವರು ಕಡ್ಡಾಯವಾಗಿ http://alvaspragati.com/CandidateRegistrationPage ನಲ್ಲಿ ನೋಂದಣಿ ಮಾಡಬೇಕು’ ಎಂದು ಅವರು ತಿಳಿಸಿದರು.

ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, ‘ಉದ್ಯೋಗ ಮೇಳ ಉಚಿತವಾಗಿದ್ದು, ಅಭ್ಯರ್ಥಿಗಳಿಗೆ ವಸತಿ, ಊಟ ಮುಂತಾದ ಸೌಲಭ್ಯ ಹಾಗೂ ಐಟಿಐ ಅಭ್ಯರ್ಥಿಗಳಿಗೆ ಬಸ್ ಸೌಲಭ್ಯವನ್ನೂ ಪ್ರತಿಷ್ಠಾನದ ವತಿಯಿಂದ ಕಲ್ಪಿಸಲಾಗುತ್ತದೆ. ಹೊರ ಜಿಲ್ಲೆಗಳ ಅಭ್ಯರ್ಥಿಗಳಿಗೆ ಅ. 5ರಿಂದ ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿರುವ ಸಂಖ್ಯೆ/ಐಡಿಯನ್ನು ತರಬೇಕು. ಅಂಕಪಟ್ಟಿ, ಪ್ರಮಾಣಪತ್ರಗಳ ಜೆರಾಕ್ಸ್ ಪ್ರತಿ, ಪಾಸ್‌ಪೋರ್ಟ್ ಅಳತೆಯ 5ರಿಂದ 10 ಭಾವಚಿತ್ರ ತರಬೇಕು. ಬೆಳಿಗ್ಗೆ 8ರಿಂದ ನೋಂದಣಿ ಪ್ರಕ್ರಿಯೆ ಆರಂಭಗೊಳ್ಳುತ್ತದೆ’ ಎಂದು ಮಾಹಿತಿ ನೀಡಿದರು.

‘ಈವರೆಗೆ 112 ಕಂಪನಿಗಳು ನೋಂದಾಯಿಸಿಕೊಂಡಿದ್ದು, ಇನ್ನೂ 97 ಕಂಪನಿಗಳು ಬರುವ ನಿರೀಕ್ಷೆ ಇದೆ. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು: 90089 07716, 96631 90590, 79752 23865 ಅಥವಾ 97414 40490 ಮತ್ತು ಕಂಪನಿಗಳು: 89712 50414 ಸಂಪರ್ಕಿಸಬಹುದು’ ಎಂದು ಅವರು ತಿಳಿಸಿದರು.

ಪ್ರತಿಷ್ಠಾನದ ಉದ್ಯೋಗ ಮತ್ತು ತರಬೇತಿ ವಿಭಾಗದ ಮುಖ್ಯಸ್ಥ ಸುಶಾಂತ್ ಅನಿಲ್ ಲೋಬೊ, ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ಮುಖ್ಯಸ್ಥ ಪ್ರಸಾದ್ ಶೆಟ್ಟಿ ಇದ್ದರು.

ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ವಿಡಿಯೊ: ಸಚಿವರಿಂದ ಸ್ಪಷ್ಟೀಕರಣ

ದೂರುದಾರರಿಗೆ ಡಿ.ಸುಧಾಕರ್ ಬೆದರಿಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ವಿರುದ್ಧ ಭೂಕಬಳಿಕೆ, ಹಲ್ಲೆ ಹಾಗೂ ಜಾತಿ ನಿಂದನೆಯ ದೂರು ದಾಖಲಿಸಿದ ದೂರದಾರರಿಗೆ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಬೆದರಿಕೆ ಹಾಕಿದ್ದಾರೆ ಎಂದು ಹೇಳಲಾಗುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ದೊಡ್ಡ ಸದ್ದು ಮಾಡಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಇದೊಂದು ಸುಳ್ಳು ಪ್ರಕರಣ ಎಂದಿದ್ದಾರೆ.

ಸೆವೆನ್ ಹಿಲ್ಸ್ ಡೆವಲಪರ್ಸ್ ಅಂಡ್ ಟ್ರೇಡರ್ಸ್‌ನ ಪಾಲುದಾರ ಸುಧಾಕರ್ ಸೇರಿದಂತೆ ಮೂವರು ಮೋಸದಿಂದ ಜಮೀನು ಕಬಳಿಸಿದ್ದಾರೆ ಎಂದು ಸುಬ್ಬಮ್ಮ ಅವರು ಯಲಹಂಕ ಠಾಣೆಗೆ ದೂರು ನೀಡಿದ್ದರು. ಇದನ್ನು ಆಧರಿಸಿ, ಸುಧಾಕರ್ ಮತ್ತಿತರರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಇದರ ಬೆನ್ನಲ್ಲೇ, ಸುಧಾಕರ್ ಬೆದರಿಕೆ ಹಾಕಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. 'ಆ ವಿಡಿಯೊ ನನ್ನದು ಅಲ್ಲ' ಎಂದು ಸಚಿವರು ಸ್ಪಷ್ಟನೆ ನೀಡಿದ್ದಾರೆ.

'ಯಲಹಂಕ ನನಗೆ ಹೊಸದಲ್ಲ. ಕರ್ನಾಟಕ, ಆಂಧ್ರಪ್ರದೇಶದಲ್ಲಿ ಮಚ್ಚು, ಕೊಡ್ಲಿ ಇಟ್ಟುಕೊಂಡು ಓಡಾಟ ನಡೆಸಿದ್ದೇವೆ. ಈ ಕುಚೇಷ್ಟೆಗಳು ನಡೆಯಲ್ಲ. ನಾನು ಎಲ್ಲಿಗೆ ಹೋಗಬೇಕು ಅಲ್ಲಿಗೆ ಹೋಗ್ತೀನಿ.... ನನ್ನ ಹತ್ತಿರ ಯಾರ ಗಾಂಚಾಲಿಯೂ ನಡೆಯೋದಿಲ್ಲ. ದುಡ್ಡು ಹಾಕಲು ದಡ್ಡ ಅಲ್ಲ' ಎಂದು ಸುಧಾಕರ್ ಹೇಳಿದ್ದಾರೆ ಎಂಬುದು ವಿಡಿಯೊದಲ್ಲಿದೆ.

ದಾಖಲೆ ಸಲ್ಲಿಸಲು ಸೂಚನೆ: ಸಚಿವರ ಮೇಲೆ ದೂರು ದಾಖಲಿಸಿರುವ ಯಲಹಂಕದ ಸುಬ್ಬಮ್ಮ ಅವರಿಗೆ ಸರ್ವೆ ನಂಬರ್ 108/1ರ ಜಮೀನಿನ ದಾಖಲೆ ಸಲ್ಲಿಸುವಂತೆ ಪೊಲೀಸರು ಸೂಚಿಸಿದ್ದಾರೆ.

ಸುಳ್ಳು ದೂರು: ಡಿ.ಕೆ. ಶಿವಕುಮಾರ್

'ಸಚಿವ ಡಿ. ಸುಧಾಕರ್ ವಿರುದ್ಧ ದಾಖಲಾಗಿರುವುದು ಸುಳ್ಳು ದೂರು. ಹೀಗಾಗಿ ಅವರು ರಾಜೀನಾಮೆ ನೀಡುವ ಅಗತ್ಯವಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಸುಧಾಕರ್ ವಿರುದ್ಧ ದಾಖಲಾಗಿರುವುದು ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣ. ಧಮಕಿ ಪ್ರಕರಣಕ್ಕೂ ಖಾಸಗಿ ದೂರಿಗೂ ಬಹಳ ವ್ಯತ್ಯಾಸವಿದೆ. ನಾನು ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ' ಎಂದರು.

'ಸುಧಾಕರ್ ಅವರು ಒಪ್ಪಿಗೆ ಮೇರೆಗೆ ಖಾಸಗಿ ಜಮೀನು ಖರೀದಿಸಿದ್ದಾರೆ. ಚುನಾವಣೆ ಸಮಯದಲ್ಲಿ ಬೇರೆಯವರು ಕಾಂಪೌಂಡ್ ನಿರ್ಮಿಸಿದ್ದರು. ನಂತರ ಜಮೀನು ಸ್ವಾಧೀನಕ್ಕೆ ಪಡೆಯಲು ಸಚಿವರ ಕಡೆಯವರು ಮುಂದಾಗಿದ್ದರು. ಈ ವಿಚಾರಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಯವರು ದೂರು ಸಲ್ಲಿಸಿದ್ದು, ಖಾಸಗಿ ದೂರು ದಾಖಲಾಗಿದೆ' ಎಂದು ಹೇಳಿದರು. 'ದೂರು ನೀಡುವ ವೇಳೆ ಸುಧಾಕರ್ ಚಿತ್ರದುರ್ಗದಲ್ಲಿದ್ದರು. ಹೀಗಾಗಿ ಇದು ಸುಳ್ಳು ದೂರು ಎಂಬುದು ಗೊತ್ತಾಗುತ್ತದೆ. ಸುಧಾಕರ್ ರಾಜೀನಾಮೆ ನೀಡುತ್ತಾರೆ ಎಂದು ಬಿಜೆಪಿಯವರು ಕನಸು ಕಾಣುವುದು ಬೇಡ. ಕಾನೂನಿನ ಮುಂದೆ ಯಾರೂ ದೊಡ್ಡವರಿಲ್ಲ. ಎಲ್ಲರೂ ಕಾನೂನಿಗೆ ಗೌರವ ನೀಡಲೇಬೇಕು' ಎಂದರು.

'ಯಾರಿಗೂ ಬೆದರಿಕೆ ಹಾಕಿಲ್ಲ'

ಸೆವೆನ್ ಹಿಲ್ಸ್ ಡೆವೆಲಪರ್ಸ್ ಅಂಡ್ ಟ್ರೇಡರ್ಸ್‌ನಲ್ಲಿ ನಾನೂ ಒಬ್ಬ ನಿರ್ದೇಶಕ. ಇದು ರಾಜಕೀಯ ಪ್ರೇರಿತ ದೂರು. ನನ್ನ ತೇಜೋವಧೆ ಮಾಡಲು ದೂರು ನೀಡಲಾಗಿದೆ. ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇನೆ. 10 ವರ್ಷಗಳ ಹಿಂದಿನ ಪ್ರಕರಣ ಇದಾಗಿದ್ದು, ನಾನು ಸಚಿವನಾದ ಮೇಲೆ ಪ್ರಕರಣ ಮುನ್ನೆಲೆಗೆ ಬರುತ್ತಿದೆ. ಯಾರಿಗೂ ಬೆದರಿಕೆ ಹಾಕಿಲ್ಲ. ಜಾತಿ ನಿಂದನೆ ಮಾಡಿಲ್ಲ. ಕಾನೂನು ಪ್ರಕಾರವೇ ಜಮೀನು ಖರೀದಿಸಿದ್ದೇವೆ. ಭೂಕಬಳಿಕೆಯ ಪ್ರಶ್ನೆಯೇ ಇಲ್ಲ. ದಾಖಲೆಗಳು ಇವೆ.

–**ಡಿ.ಸುಧಾಕರ್**, ಸಚಿವ

ಈ ವಿಷಯವಾಗಿ ಮಾಧ್ಯಮಗಳಲ್ಲಿ ಬಂದ ಸುದ್ದಿಯನ್ನು ನೋಡಿದ್ದೇನೆ. ಸುಧಾಕರ್ ಅವರನ್ನು ಕರೆದು ಮಾತನಾಡುತ್ತೇನೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಂವಿಧಾನ ವಿರೋಧಿ ನಡವಳಿಕೆ ತೋರಿರುವ ಸಚಿವ ಡಿ.ಸುಧಾಕರ ರಾಜೀನಾಮೆ ನೀಡಬೇಕು. ದಲಿತರ ಬಗ್ಗೆ ಗೌರವವಿದ್ದರೆ, ಅವರನ್ನು ಸಂಪುಟದಿಂದ ವಜಾಗೊಳಿಸಲು ಮುಖ್ಯಮಂತ್ರಿ ಕ್ರಮ ತೆಗೆದುಕೊಳ್ಳಬೇಕು

ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಅಧಿಕಾರಿಗೆ ಸಿ.ಎಂ ಒತ್ತಡ: ಕುಮಾರಸ್ವಾಮಿ

ದಲಿತರ ಮೇಲೆ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಸಚಿವ ಡಿ.ಸುಧಾಕರ್ ಅವರ ರಕ್ಷಣೆಗೆ ಸರ್ಕಾರ ನಿಂತಿದೆ. ಎಫ್‌ಐಆರ್ ದಾಖಲಿಸಿದ ಅಧಿಕಾರಿಗೆ ಮುಖ್ಯಮಂತ್ರಿಯೇ ಒತ್ತಡ ಹಾಕುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ನಗರದಲ್ಲಿ ಮಂಗಳವಾರ ಮಾತನಾಡಿದ ಅವರು, ದಲಿತರ ರಕ್ಷಣೆ ಮಾಡುತ್ತೇವೆ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದ ಕಾಂಗ್ರೆಸ್‌ನ ಸಚಿವರೇ ದಬ್ಬಾಳಿಕೆ ನಡೆಸುತ್ತಿದ್ದಾರೆ. ದಲಿತ ವಿರೋಧಿ ಮನೋಸ್ಥಿತಿಯ ಸುಧಾಕರ್ ಅವರನ್ನು ಸಂಪುಟದಿಂದ ವಜಾಮಾಡಬೇಕು. ತಕ್ಷಣ ಬಂಧಿಸಬೇಕು ಎಂದು ಒತ್ತಾಯಿಸಿದರು.

ಬೇರೆ ಪಕ್ಷದವರಿಗೆ ಮಾನ ಮರ್ಯಾದೆ ಇದೆಯೇ ಎಂದು ಪ್ರಶ್ನಿಸುವ ಸಿದ್ದರಾಮಯ್ಯ ಅವರೇ ಪೊಲೀಸರ ಮೇಲೆ ಒತ್ತಡ ಹಾಕುತ್ತಿದ್ದಾರೆ. ಅವರಿಗೆ ಆತ್ಮಸಾಕ್ಷಿ ಇದೆಯೇ? ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರ ಮೇಲೆ ಕಾಗದದ ಚೂರು ಎಸೆದ ಘಟನೆ ಖಂಡಿಸಿದ್ದ ಸಿದ್ದರಾಮಯ್ಯ, ಕೃಷ್ಣ ಬೈರೇಗೌಡ ಅವರೇ ದಲಿತ ಸಮುದಾಯದ ಹೆಣ್ಣು ಮಗಳ ಮೇಲಿನ ದೌರ್ಜನ್ಯದ ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತಿರುವುದು ವಿಪರ್ಯಾಸ ಎಂದರು. ದಲಿತ ಸಂಘಟನೆಗಳು ಅನ್ಯಾಯ ಖಂಡಿಸಬೇಕು. ಸಚಿವ ಸುಧಾಕರ್ ವಿರುದ್ಧ ಹೋರಾಟ ನಡೆಸಬೇಕು ಎಂದು ಸಲಹೆ ನೀಡಿದರು.

'ರಾಜೀನಾಮೆ ನೀಡಲಿ'

'ಸಚಿವ ಡಿ. ಸುಧಾಕರ್ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಾಗಿರುವುದರಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಒತ್ತಾಯಿಸಿದ್ದಾರೆ.

'ಬೇರೆಯವರ ವಿಚಾರಣೆ ಹೇಗೆ ನಡೆಯುತ್ತದೆಯೋ, ಅದೇ ರೀತಿ ಈ ಪ್ರಕರಣದಲ್ಲಿಯೂ ನಡೆಯಲಿ. ಈ ಪ್ರಕರಣದಲ್ಲಿ ಗೃಹ ಸಚಿವ ಪರಮೇಶ್ವರ ಅವರು ಮಧ್ಯಪ್ರವೇಶಿಸುತ್ತಿದ್ದಾರೆ. ಪೊಲೀಸರಿಗೆ ತನಿಖೆ ನಡೆಸಲು ಮುಕ್ತ ಅವಕಾಶ ಕಲ್ಪಿಸಬೇಕು. ತಾವೇ ತನಿಖೆಗೆ ಮುಂದಾಗಬಾರದು. ಯಾವುದೇ ತನಿಖೆ ಮಾಡಲು ಗೃಹ ಸಚಿವರಿಗೆ ಅವಕಾಶ ಇಲ್ಲ. ಸಚಿವರ ವಿರುದ್ಧದ ಪ್ರಕರಣದ ವರದಿ ಪಡೆಯುವುದಾಗಿ ಹೇಳುತ್ತಾರೆ.

ಈಗಾಗಲೇ ಎಫ್‌ಐಆರ್ ದಾಖಲಾಗಿದೆ. ಆದ್ದರಿಂದ, ವರದಿ ಪಡೆಯಲು ಅವಕಾಶ ಇಲ್ಲ' ಎಂದರು. 'ಸುಧಾಕರ್ ಪ್ರಕರಣದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉಡಾಫೆಯಿಂದ ಮಾತನಾಡಿದ್ದಾರೆ. ಸಿದ್ದರಾಮಯ್ಯ ಅವರಿಗೆ ಸಂವಿಧಾನದ ಮೇಲೆ ವಿಶ್ವಾಸ ಇದ್ದರೆ ಸಚಿವ ಸುಧಾಕರ್ ಅವರ ರಾಜೀನಾಮೆ ಪಡೆಯಲಿ' ಎಂದು ಆಗ್ರಹಿಸಿದರು.

'ಸಂಪುಟದಿಂದ ಕೈಬಿಡಿ'

ಬೆಂಗಳೂರು: 'ಬ್ರಾಹ್ಮಣ ಸಮುದಾಯದ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್ ಅವರನ್ನು ಸಂಪುಟದಿಂದ ಕೈಬಿಡಬೇಕು' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಗ್ರಹಿಸಿದೆ.

ಈ ಕುರಿತು ಮಂಗಳವಾರ ಪತ್ರಿಕಾ ಹೇಳಿಕೆ ನೀಡಿರುವ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ, 'ಭಾರತದ ಸಾರ್ವಭೌಮತ್ವ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯುತ್ತೇನೆ. ರಾಜ್ಯದ ಮಂತ್ರಿಯಾಗಿ ಆತ್ಮಸಾಕ್ಷಿಯಂತೆ ನಿರ್ವಹಿಸುತ್ತೇನೆ ಎಂದು ಸುಧಾಕರ್ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದ್ದರು. ಸಂವಿಧಾನ ಮತ್ತು ಕಾನೂನಿನ ಪ್ರಕಾರ ಎಲ್ಲ ನಾಗರಿಕರನ್ನು ಸಮಾನವಾಗಿ ನೋಡುತ್ತೇನೆ, ಯಾವುದೇ ದ್ವೇಷವಿಲ್ಲದೆ ಕಾರ್ಯನಿರ್ವಹಿಸುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದರು.

ಈ ರೀತಿ ಕೆಲವು ಸಮುದಾಯದ ಮೇಲೆ ದ್ವೇಷ ಹೊಂದಿರುವ ವ್ಯಕ್ತಿಗಳು ಸಂಪುಟದಲ್ಲಿ ಮುಂದುವರಿಯಲು ಅರ್ಹರಲ್ಲ' ಎಂದು ಹೇಳಿದ್ದಾರೆ.

'ಸಚಿವರ ಈ ರೀತಿಯ ಬೇಜವಾಬ್ದಾರಿ ವರ್ತನೆ ಹಾಗೂ ಬ್ರಾಹ್ಮಣ ಜನಾಂಗದ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವುದನ್ನು ಬ್ರಾಹ್ಮಣ ಮಹಾಸಭಾ ಖಂಡಿಸುತ್ತದೆ. ಈ ರೀತಿ ಜಾತಿ ನಿಂದನೆ ಮಾಡಿರುವ ಸುಧಾಕರ್ ಅವರನ್ನು ಕೂಡಲೆ ಸಂಪುಟದಿಂದ ಕೈಬಿಡಬೇಕು' ಎಂದು ಆಗ್ರಹಿಸಿದ್ದಾರೆ.

ಅಧಿಕಾರಿಗಳಿಗೆ ಸಿ.ಎಂ ಚಾಟಿ

ಒಂದನೇ ಪುಟದಿಂದ...

'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮೂರು ಜಿಲ್ಲೆಗಳಲ್ಲಿ ಕಲುಷಿತ ನೀರು ಸೇವನೆಯಿಂದ ಹಲವರು ಮೃತಪಟ್ಟಿದ್ದಾರೆ. ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಇತ್ತೀಚೆಗೆ ರಾಜ್ಯ ದಲ್ಲಿ ಡೆಂಗಿ ಜ್ವರ ಹೆಚ್ಚಾಗಿದೆ. ಅದರಲ್ಲೂ ಬಿಬಿಎಂಪಿ ವ್ಯಾಪ್ತಿಯಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಪ್ರಕರಣಗಳು ಕಂಡು ಬಂದಿವೆ. ಈ ಸಾಂಕ್ರಾಮಿಕ ತಡೆಗಟ್ಟಲು ಒತ್ತು ನೀಡಬೇಕು' ಎಂದರು.

ಫಸಲ್ ಬೀಮಾ ಯೋಜನೆಯ ಲಾಭವನ್ನು ಖಾಸಗಿ ಕಂಪನಿಗಳು ಲೂಟಿ ಹೊಡೆಯುತ್ತಿವೆ. ಆದ್ದರಿಂದ ಈ ಯೋಜನೆಯಡಿ ಸರ್ಕಾರಿ ವಿಮಾ ಕಂಪನಿಗಳನ್ನು ಸೇರಿಸಬೇಕು. ಇದರಿಂದ ರೈತರಿಗೂ ಲಾಭವಾಗುತ್ತದೆ ಎಂಬುದಾಗಿ ಹೇಳಿದರು.

ಬರಪೀಡಿತ ಪ್ರದೇಶದಲ್ಲಿ ನೀರಿನ ಸಮಸ್ಯೆ ಕಂಡು ಬಂದರೆ 24 ಗಂಟೆಯೊಳಗೆ ಟ್ಯಾಂಕರ್ ಮೂಲಕ ಪೂರೈಕೆ ಮಾಡಲು ತಹಶೀಲ್ದಾರ್ ಹಂತದಲ್ಲಿಯೇ ಕ್ರಮಕೈಗೊಳ್ಳಬೇಕು. ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡಲು ಕ್ರಿಯಾ ಯೋಜನೆ ರೂಪಿಸಬೇಕು ಎಂದು ಸಿದ್ದರಾಮಯ್ಯ ತಿಳಿಸಿದರು.

ಬೆಳೆ ಸಮೀಕ್ಷೆ ಸೆಪ್ಟೆಂಬರ್ ಒಳಗೆ ಪೂರ್ಣಗೊಳ್ಳಬೇಕು. ಇದನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬೇಕು. ಮತ್ತೆ ಮತ್ತೆ ಸಮೀಕ್ಷೆಗೆ ಅವಕಾಶ ನೀಡಬಾರದು. ಈ ದತ್ತಾಂಶವನ್ನು ಪರಿಹಾರ ತಂತ್ರಾಂಶದೊಂದಿಗೆ ಸಂಯೋಜನೆಗೊಳಿಸಿ, ರೈತರಿಗೆ ನೇರವಾಗಿ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು..

'ಗ್ರಾಮಲೆಕ್ಕಿಗರು ಕಚೇರಿಗಳಲ್ಲೇ ಕೆಲಸ ಮಾಡಲಿ'

ಒಂದನೇ ಪುಟದಿಂದ

'ಸರ್ವೆಗೆ ಸಂಬಂಧಿಸಿದ ವ್ಯಾಜ್ಯಗಳು ಶೀಘ್ರ ವಿಲೇವಾರಿಗಾಗಿ ಕ್ರಮ ತೆಗೆದುಕೊಳ್ಳಬೇಕು. ಭೂಮಾಪಕರಿಂದ ಸರ್ವೆ ಪ್ರಕರಣಗಳು ಬಾಕಿ ಉಳಿಯಬಾರದು. ರೈತರು ಸರ್ವೆ ವ್ಯಾಜ್ಯಗಳಿಗಾಗಿ ಕಚೇರಿಗಳಿಗೆ ಅಲೆಯುವುದನ್ನು ತಕ್ಷಣವೇ ತಪ್ಪಿಸಬೇಕು' ಎಂದು ಹೇಳಿದರು. 'ಕಂದಾಯ ಇಲಾಖೆಯಲ್ಲಿ ಕಡತಗಳನ್ನು ಆನ್‌ಲೈನ್ ಮೂಲಕ 5ರಿಂದ 10 ದಿನಗಳೊಳಗೆ ವಿಲೇವಾರಿ ಮಾಡಬೇಕು. ನಿಗದಿತ ಅವಧಿಯೊಳಗೆ ಜೋಡಿ ಗ್ರಾಮಗಳ ಸರ್ವೆ ಕಾರ್ಯಪೂರ್ಣಗೊಳಿಸಬೇಕು. ಬೆಂಗಳೂರು ಸುತ್ತಮುತ್ತ ಹಸಿರು ವಲಯ ಪ್ರದೇಶದಲ್ಲಿ ಅನಧಿಕೃತ ಬಡಾವಣೆಗಳನ್ನು ನಿರ್ಮಿಸಲಾಗುತ್ತಿದ್ದು, ಇದಕ್ಕೆ ಸಹಕಾರ ನೀಡುತ್ತಿರುವ ಪಿಡಿಒ, ಕಂದಾಯ ಅಧಿಕಾರಿ ಮತ್ತು ಗ್ರಾಮಲೆಕ್ಕಿಗರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಅವರು ಸೂಚನೆ ನೀಡಿದರು.

ಗಣೇಶ ಹಬ್ಬ: ಕಾನೂನು ಸುವ್ಯವಸ್ಥೆ ಕಾಪಾಡಲು ಸೂಚನೆ

'ಗಣೇಶ ಹಬ್ಬದ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಬೇಕು. ಪರಿಸರಕ್ಕೆ ಹಾನಿಯಾಗದಂತೆ ಹಬ್ಬವನ್ನು ಆಚರಿಸಲು ಕ್ರಮ ತೆಗೆದುಕೊಳ್ಳಬೇಕು ಮತ್ತು ಯಾವುದೇ ಧರ್ಮದವರಿಗೆ ತೊಂದರೆ ಆಗಬಾರದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಕಾನೂನು ಸುವ್ಯವಸ್ಥೆ ಹಾಳು ಮಾಡುವ ಕೋಮು ಶಕ್ತಿಗಳ ವಿರುದ್ಧ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು' ಎಂದೂ ಹೇಳಿದರು.

ರಿವಾರ್ಡ್ ಪಾಯಿಂಟ್ಸ್‌ಗೆ ಕನ್ನ ಹಾಕಿದ್ದ ಹ್ಯಾಕರ್!

ಒಂದನೇ ಪುಟದಿಂದ...

'ರಿವಾರ್ಡ್ 360 ಕಂಪನಿಯ ವೆಬ್‌ಸೈಟ್ ಅನ್ನು ನಿರಂತರವಾಗಿ ಪರಿಶೀಲಿಸುತ್ತಿದ್ದ ಆರೋಪಿ ಬಳಿಕ ಆ ರಿವಾರ್ಡ್ ಪಾಯಿಂಟ್ಸ್ ಅನ್ನು ತಾನೇ ಬಳಸಿಕೊಂಡಿದ್ದ. ಇ-ಕಾಮರ್ಸ್ ಕಂಪನಿಗಳ ಮೂಲಕ ಚಿನ್ನ, ಬೆಳ್ಳಿ ಸಾಮಗ್ರಿ, ಬೈಕ್, ಎಲೆಕ್ಟ್ರಾನಿಕ್ ಉಪಕರಣ ಗಳನ್ನು ಖರೀಸಿದ್ದ' ಎಂದು ತಿಳಿಸಿದರು.

ಹಲವು ಕೃತ್ಯ: 'ಆರೋಪಿಯು ರಿವಾರ್ಡ್ 360 ವೆಬ್‌ಸೈಟ್ ಜೊತೆಗೆ ವಿವಿಧ ಬ್ಯಾಂಕ್ ಹಾಗೂ ವಿವಿಧ ಕಂಪನಿಗಳ ಗ್ರಾಹಕರಿಗೆ ತಲುಪಬೇಕಿದ್ದ ರಿವಾರ್ಡ್ ಪಾಯಿಂಟ್ಸ್ ಅನ್ನು ತಾನೇ ಬಳಕೆ ಮಾಡಿಕೊಳ್ಳುತ್ತಿದ್ದ. ಆ ಕಂಪನಿಯವರು ದೂರು ನೀಡಿದ್ದು ತನಿಖೆ ಮುಂದುವರಿಸಲಾಗಿದೆ' ಎಂದು ಗೊತ್ತಾಗಿದೆ.

ಬೆಂಗಳೂರಿನ ರಿವಾರ್ಡ್ 360 ಕಂಪನಿಯು ಖಾಸಗಿ ಬ್ಯಾಂಕ್‌ಗಳ ಜತೆಗೆ ಕಾರ್ಯನಿರ್ವಹಿಸುತ್ತಿದೆ. ಗ್ರಾಹಕರು ಬಳಸಿದ ಕ್ರೆಡಿಟ್ ಕಾರ್ಡ್‌ಗಳ ಪಾಯಿಂಟ್ಸ್ ಗಳನ್ನು ಈ ಕಂಪನಿ ನಿರ್ವಹಣೆ ಮಾಡುತ್ತಿದ್ದು, ಖರೀದಿ ಆಧರಿಸಿ ಅವರ ಹೆಸರಿಗೆ ಪಾಯಿಂಟ್ಸ್ ಹಾಕಲಾಗುತ್ತಿತ್ತು. ಗ್ರಾಹಕರ ಹೆಸರಿಗೆ ಸಂದಾಯವಾದ ಪಾಯಿಂಟ್ಸ್ ಅನ್ನು ಆರೋಪಿಯು ತನ್ನ ವೋಚರ್‌ಗೆ ಬದಲಾವಣೆ ಮಾಡಿಕೊಂಡು ಫ್ಲಿಪ್‌ಕಾರ್ಟ್, ಅಮೆಜಾನ್ ವಾಲೆಟ್‌ನಿಂದ ದುಬಾರಿ ಬೆಲೆಯ ವಸ್ತುಗಳನ್ನು ಖರೀದಿಸುತ್ತಿದ್ದ. ಲಕ್ಷ್ಮೀಪತಿ ವಿದ್ಯಾರ್ಥಿಯಾಗಿದ್ದ ಅವಧಿಯಲ್ಲಿ ಬ್ಯಾಂಕ್‌ವೊಂದರಲ್ಲಿ ಡೆಬಿಟ್, ಕ್ರೆಡಿಟ್ ಕಾರ್ಡ್ ಪಡೆದುಕೊಂಡಿದ್ದ. ಆ ಬ್ಯಾಂಕ್ ಕಾರ್ಡ್‌ಗಳಿಗೆ ರಿವಾರ್ಡ್ ಪಾಯಿಂಟ್ಸ್ ಕೊಡಲು ನಿರಾಕರಿಸಿತ್ತು. ಆಗ ಬ್ಯಾಂಕ್ ಸರ್ವರ್ ಹ್ಯಾಕ್ ಮಾಡುವಂತಹ ಪ್ರೋಗ್ರಾಂ ಅಭಿವೃದ್ಧಿಪಡಿಸಿದ್ದ. ವೋಚರ್‌ಗಳನ್ನು ಡಿಜಿಟಲ್ ಕರೆನ್ಸಿಯಾಗಿಯೂ ಪರಿವರ್ತಿಸಿಕೊಳ್ಳುತ್ತಿದ್ದ ಎಂದು ಪೊಲೀಸರು ಹೇಳಿದರು.

ಶ್ರೀಕಿ ಮನೆಯಲ್ಲಿ ಶೋಧ

ಒಂದನೇ ಪುಟದಿಂದ...

ಶ್ರೀಕಿಯನ್ನು ಇತ್ತೀಚೆಗೆ ವಿಚಾರಣೆ ನಡೆಸಲಾಗಿತ್ತು. 'ನನ್ನನ್ನು ಬೆದರಿಸಿದ್ದ ಕೆಲವು ಪೊಲೀಸ್ ಅಧಿಕಾರಿಗಳು ಹಾಗೂ ಕೆಲವು ರಾಜಕಾರಣಿಗಳು, ನೂರಾರು ಕೋಟಿ ರೂಪಾಯಿ ಮೌಲ್ಯದ ಬಿಟ್ ಕಾಯಿನ್‌ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಸಿಕೊಂಡಿದ್ದಾರೆ' ಎಂಬುದಾಗಿ ಶ್ರೀಕಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದ. ಅದಾದ ಮೇಲೆ ತನಿಖೆ ಚುರುಕುಗೊಂಡಿದೆ.

ಡಾರ್ಕ್‌ವೆಬ್ ಮೂಲಕ ವಿದೇಶದಿಂದ 'ಹೈಡ್ರೊ ಗಾಂಜಾ' ತರಿಸಿದ್ದ ಆರೋಪದಡಿ ಶ್ರೀಕಿ ಹಾಗೂ ಇತರರ ವಿರುದ್ಧ ಕೆಂಪೇಗೌಡ ನಗರ ಠಾಣೆಯಲ್ಲಿ 2020ರಲ್ಲಿ ಪ್ರಕರಣ ದಾಖಲಾಗಿತ್ತು. ಇದೇ ಪ್ರಕರಣದಲ್ಲಿ ಶ್ರೀಕಿ ಹಾಗೂ ಇತರರನ್ನು ಬಂಧಿಸಿದ್ದ ಸಿಸಿಬಿ ಅಧಿಕಾರಿಗಳು, 2 ಪೆನ್‌ಡ್ರೈವ್, ಹಾರ್ಡ್‌ಡಿಸ್ಕ್ ಹಾಗೂ ಆ್ಯಪಲ್ ಮ್ಯಾಕ್‌ಬುಕ್ ಜಪ್ತಿ ಮಾಡಿಕೊಂಡಿದ್ದರು. ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಹಾಗೂ ಅಂತರರಾಷ್ಟ್ರೀಯ ಗೇಮಿಂಗ್ ಆ್ಯಪ್‌ಗಳನ್ನು ಹ್ಯಾಕ್ ಮಾಡಿ ಬಿಟ್‌ಕಾಯಿನ್ ಮೂಲಕ ಹಣ ಲೂಟಿ ಮಾಡುತ್ತಿದ್ದ ಎಂಬುದು ತನಿಖೆಯಲ್ಲಿ ಪತ್ತೆಯಾಗಿತ್ತು. ಈ ಸಂಬಂಧ ಸಿಸಿಬಿ ಪೊಲೀಸರು ಹೆಚ್ಚುವರಿ ತನಿಖೆ ನಡೆಸಿ, ಆರೋಪಪಟ್ಟಿ ಸಲ್ಲಿಸಿದ್ದರು.

ಬಿಟ್‌ಕಾಯಿನ್ ಹಗರಣದಲ್ಲಿ ಹಲವು ಪ್ರಭಾವಿಗಳ ಪಾತ್ರವಿರುವ ಆರೋಪವಿದೆ. ಈಗಿನ ಕಾಂಗ್ರೆಸ್ ಸರ್ಕಾರವು ಪ್ರಕರಣವನ್ನು ಸಿಐಡಿಗೆ ವಹಿಸಿದೆ.

ಕಲಬುರಗಿಯಲ್ಲಿ ಮಂಗಳವಾರ ಸೂರ್ಯನ ಸುತ್ತ ಉಂಗುರದ ಆಕಾರ ಕಂಡುಬಂದಿತು

–ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಅಧಿಕಾರಿಗಳ ನಿಯೋಜನೆ: ನಿಯಮ ಪಾಲನೆಗೆ ಸುತ್ತೋಲೆ

ಬೆಂಗಳೂರು: ಯಾವುದೇ ಇಲಾಖೆಯ ಅಧಿಕಾರಿಗಳು, ನೌಕರರನ್ನು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವಿರುದ್ಧವಾಗಿ ಅನ್ಯ ಇಲಾಖೆಗಳಿಗೆ ನಿಯೋಜನೆ ಮಾಡದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಗಳವಾರ ಸುತ್ತೋಲೆ ಹೊರಡಿಸಿದೆ.

ಒಬ್ಬ ನೌಕರನನ್ನು ಯಾವುದೇ ಹುದ್ದೆಗೆ ಗರಿಷ್ಠ ಐದು ವರ್ಷಗಳವರೆಗೆ ನಿಯೋಜನೆ ಮಾಡಬಹುದು. ಬಳಿಕ ಆ ನೌಕರ ಎರಡು ವರ್ಷಗಳವರೆಗೆ ಮಾತ್ರ ಇಲಾಖೆಯಲ್ಲಿ ಕಾರ್ಯನಿರ್ವಹಿಸುವುದು ಕಡ್ಡಾಯ. ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅನ್ಯ ಇಲಾಖೆಗಳಿಂದ ನಿಯೋಜನೆಗೆ ಅವಕಾಶ ಕಲ್ಪಿಸದ ಹುದ್ದೆಗಳಿಗೆ ನಿಯೋಜನೆ ಮಾಡುವುದನ್ನು ನಿರ್ಬಂಧಿಸಲಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಅಥವಾ ಸರ್ಕಾರದ ವಿಶೇಷ ಆದೇಶಗಳ ಮೂಲಕ ಐದು ವರ್ಷ ಪೂರ್ಣಗೊಂಡ ಬಳಿಕವೂ ನಿಯೋಜನೆ ಮೇಲೆ ಮುಂದುವರಿದಿರುವವರನ್ನು ಕೂಡಲೆ ಮಾತೃ ಇಲಾಖೆಗೆ ಹಿಂದಿರುಗಿಸಬೇಕು ಎಂದು ತಿಳಿಸಿದೆ.

ಕನ್ನಡ ಚಿತ್ರರಂಗ ಚುಕ್ಕಾಣಿಯಿಲ್ಲದ ಹಡಗು: ಹಂಸಲೇಖ

ಪ್ರಜಾವಾಣಿ ವಾರ್ತೆ

ಮೈಸೂರು: 'ಕನ್ನಡ ಚಲನಚಿತ್ರರಂಗ ಚುಕ್ಕಾಣಿ ಇಲ್ಲದ ಹಡಗಿನಂತಾಗಿದೆ' ಎಂದು ಸಂಗೀತ ನಿರ್ದೇಶಕ ಹಂಸಲೇಖ ಬೇಸರ ವ್ಯಕ್ತಪಡಿಸಿದರು.

ಮಂಗಳವಾರ ಮಾಧ್ಯಮ ಸಂವಾದದಲ್ಲಿ ಮಾತನಾಡಿ, 'ಚಲನ ಚಿತ್ರ ವಾಣಿಜ್ಯ ಮಂಡಳಿ ಮೊದಲು ನಿರ್ಮಾಪಕ, ಪ್ರದರ್ಶಕ ಹಾಗೂ ವಿತರಕರನ್ನು ಒಟ್ಟಿಗೆ ನೋಡುತ್ತಿತ್ತು. ಈಗ ಅದಿಲ್ಲ' ಎಂದರು.

'ಪ್ಯಾನ್ ಇಂಡಿಯಾದ ವ್ಯಾಪಾರದ ಸೋಗಿನಿಂದ ಕನ್ನಡ ಚಿತ್ರರಂಗದ ದಿಕ್ಕು ತಪ್ಪಿದೆ. ಕನ್ನಡದಲ್ಲೇ ಬದುಕಬೇಕಾ ಅಥವಾ ಕನ್ನಡವನ್ನಿಟ್ಟುಕೊಂಡು ಎಲ್ಲರ ಜೊತೆಯಲ್ಲಿ ಬದುಕಬೇಕಾ ಎನ್ನುವ ದೊಡ್ಡ ತಾಪತ್ರಯ ಎದುರಾಗಿದೆ. ಇಂದಿನ ಸಿನಿಮಾಗಳಲ್ಲಿ ಸಂಬಂಧಗಳ ಮೌಲ್ಯ ಕಾಣುತ್ತಿಲ್ಲ. ಹೊಡಿ ಬಡಿ ಎನ್ನುವ, ಕಿವಿ ಮುಚ್ಚುವ ಸಂಗೀತ ಬರುತ್ತಿದೆ' ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ

ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು– 560023, ದೂರವಾಣಿ ಸಂಖ್ಯೆ: 080–29557023, ಇ–ಮೇಲ್: cekhsdrp@gmail.com

ಸಂಖ್ಯೆ: ಆಕುಕ/ಇಂಘ/ಮುಇಂ/ತಾಸ–3/ಸಇಂ–8/ಶವಗಾರ ಬ್ಲಾಕ್/2023–24/972 ದಿನಾಂಕ: 12.09.2023

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ 2ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ Karnataka public procurement portal platform ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಲಕ್ಷಗಳಲ್ಲಿ)	ಕಾಲಾವಧಿ (ಮಳೆಗಾಲ ಸೇರಿದಂತೆ)
1	ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿಧಿವೈದ್ಯಶಾಸ್ತ್ರ ವಿಭಾಗದ ಉಪನ್ಯಾಸ ಕೊಠಡಿ ಮತ್ತು ಹೊಸ ಶವಗಾರ ನಿರ್ಮಾಣ ಕಾಮಗಾರಿ.	400.00	6.00	9 ತಿಂಗಳು

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು–

1. ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : 16.10.2023 ರಂದು 16.00 ಗಂಟೆಯವರೆಗೆ
2. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : 18.10.2023 ರಂದು 16.00 ಗಂಟೆಗೆ

ಟೆಂಡರ್‌ಗಳ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through Karnataka public procurement portal platform) www.kppp.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು www.kppp.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Karnataka public procurement portal platform) ನೋಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಮುಖ್ಯ ಇಂಜಿನಿಯರ್,
ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು.

Khadi India — Ministry of Micro, Small and Medium Eterprises, Government of India — आज़ादी का अमृत महोत्सव — G20 भारत 2023 INDIA वसुधैव कुटुम्बकम् ONE EARTH · ONE FAMILY · ONE FUTURE

ಸಂಖ್ಯೆ: KNT/legal/Panel Advocate/2023-24 ದಿನಾಂಕ:11.09.2023

ವಕೀಲರುಗಳ ನೇಮಕಾತಿ

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ (ಕೆವಿಐಸಿ), ರಾಜ್ಯ ಕಛೇರಿ, ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ವಿವಿಧ ನ್ಯಾಯಾಲಯಗಳಲ್ಲಿರುವ ಸಿವಿಲ್, ಕ್ರಿಮಿನಲ್, ಕಾರ್ಮಿಕ ಹಾಗೂ ಸೇವಾ ವಿಷಯಗಳ ಪ್ರಕರಣಗಳನ್ನು ನಡೆಸಲು ವಕೀಲರ ಸಂಘದಲ್ಲಿ ಸುಮಾರು ಹತ್ತು ವರ್ಷಗಳ ವಕೀಲ ವೃತ್ತಿಯಲ್ಲಿ ಅಭ್ಯಾಸ ಹಾಗೂ ಅನುಭವ ಹೊಂದಿರುವ ವಕೀಲರುಗಳನ್ನು ನೇಮಕಾತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು website **www.kvic.org.in** link-*Circulars>Orders>Standing Orders>Panel of Advocates and Advocates fee Scheme 2015 Standing order No.1738.* ನಿಂದ ಪಡೆದುಕೊಳ್ಳಬಹುದು. ಸ್ವ ದೃಢೀಕೃತ ಪ್ರಮಾಣಪತ್ರಗಳೊಂದಿಗೆ ಅರ್ಜಿಗಳನ್ನು (ಪಾಸ್‌ಪೋರ್ಟ್ ಅಳತೆಯ ಫೋಟೊದೊಂದಿಗೆ) ಕೆಳಸಹಿದಾರರಿಗೆ ದಿನಾಂಕ : **07.10.2023**ರೊಳಗೆ ಸಲ್ಲಿಸುವುದು.

ಸಹಿ/– ರಾಜ್ಯ ನಿರ್ದೇಶಕರು

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ
(ಎಂ.ಎಸ್.ಎಂ.ಇ, ಭಾರತ ಸರ್ಕಾರ)
ರಾಜ್ಯ ಕಛೇರಿ, ವಿಜಿನಾಪುರ, ದೂರವಾಣಿ ನಗರ, ಎಫ್‌ಸಿಐ ಗೋಡೌನ್ ಹತ್ತಿರ, ಬೆಂಗಳೂರು–560 016.
ದೂರವಾಣಿ: 080–25665883, 25665885

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/02/2023–24 ದಿನಾಂಕ: 11–09–2023

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2023–24 ನೇ ಸಾಲಿನ JJM ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **21–09–2023 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ಪ್ರಭಾರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/1267/ಅಡ್ವರ್ಟೋ/2023–24

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವಿಚಾರಣೆ ಸಂಖ್ಯೆಗಳು: ಬೆವಿಕಂ/2023–24/ಯುಸಿ/ವರ್ಕ್_ಇಂಡೆಂಟ್15 ಮತ್ತು ಬೆವಿಕಂ/2023–24/ಯುಸಿ/ವರ್ಕ್_ಇಂಡೆಂಟ್16 ರಂತೆ ಅರ್ಹ ಬಿಡ್‌ದಾರರಿಂದ **"ಬೆವಿಕಂನ ಉತ್ತರ ಮತ್ತು ಪಶ್ಚಿಮ ವೃತ್ತ ಪ್ರದೇಶಗಳಲ್ಲಿ ಹೆಚ್‌ಟಿ/ಎಲ್‌ಟಿ 11ಕೆವಿ ಭೂಗತ ಕೇಬಲ್‌ನಲ್ಲಿನ ದೋಷಗಳ ದುರಸ್ತಿ / ಸರಿಪಡಿಸುವಿಕೆಗಾಗಿ ಎರಡು ವರ್ಷಗಳ ಅವಧಿಗೆ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ"** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ಲಾಟ್‌ಫಾರಂ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಬಿಡ್ ದಸ್ತಾವೇಜುಗಳ ಲಭ್ಯತೆ: 15.09.2023. **ಬಿಡ್ ಸಲ್ಲಿಸಲು ಕೊನೆಯ ದಿನಾಂಕ:** 16.10.2023, 15:00 ಗಂಟೆಗಳು. **ಬಿಡ್ ದಸ್ತಾವೇಜು ತೆರೆಯುವುದು:** 17.10.2023, 15:00 ಗಂಟೆಗಳು.

ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in** ಮೂಲಕ ಪಡೆಯಬಹುದು. ಆಸಕ್ತ ಬಿಡ್‌ದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಬಿಡ್ಡುದಾರರು ಕೆಪಿಪಿಪಿ ಸಹಾಯವಾಣಿ ಸಂಪರ್ಕ ಸಂಖ್ಯೆ (+91–8046010000, +91–8068948777) ಅಥವಾ ಇಮೇಲ್ support@eprochelpdesk.comಗೆ ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ಪ್ರಧಾನ ವ್ಯವಸ್ಥಾಪಕರು (ವಿ.),
ಖರೀದಿ, ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವಿಚಾರಣೆ ಸಂಖ್ಯೆಗಳು: ಬೆವಿಕಂ/2023–24/ಯುಸಿ/ವರ್ಕ್_ಇಂಡೆಂಟ್14 ಮತ್ತು ಬೆವಿಕಂ/2023–24/ಯುಸಿ/ವರ್ಕ್_ಇಂಡೆಂಟ್17 ರಂತೆ ಅರ್ಹ ಬಿಡ್‌ದಾರರಿಂದ **"ಬೆವಿಕಂನ ಪೂರ್ವ ಮತ್ತು ದಕ್ಷಿಣ ವೃತ್ತ ಪ್ರದೇಶಗಳಲ್ಲಿ ಹೆಚ್‌ಟಿ/ಎಲ್‌ಟಿ 11ಕೆವಿ ಭೂಗತ ಕೇಬಲ್‌ನಲ್ಲಿನ ದೋಷಗಳ ದುರಸ್ತಿ / ಸರಿಪಡಿಸುವಿಕೆಗಾಗಿ ಎರಡು ವರ್ಷಗಳ ಅವಧಿಗೆ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ"** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ಲಾಟ್‌ಫಾರಂ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಬಿಡ್ ದಸ್ತಾವೇಜುಗಳ ಲಭ್ಯತೆ: 15.09.2023. **ಬಿಡ್ ಸಲ್ಲಿಸಲು ಕೊನೆಯ ದಿನಾಂಕ:** 16.10.2023, 15:00 ಗಂಟೆಗಳು. **ಬಿಡ್ ದಸ್ತಾವೇಜು ತೆರೆಯುವುದು:** 17.10.2023, 15:00 ಗಂಟೆಗಳು.

ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in** ಮೂಲಕ ಪಡೆಯಬಹುದು. ಆಸಕ್ತ ಬಿಡ್‌ದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಬಿಡ್ಡುದಾರರು ಕೆಪಿಪಿಪಿ ಸಹಾಯವಾಣಿ ಸಂಪರ್ಕ ಸಂಖ್ಯೆ (+91–8046010000, +91–8068948777) ಅಥವಾ ಇಮೇಲ್ support@eprochelpdesk.comಗೆ ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ಪ್ರಧಾನ ವ್ಯವಸ್ಥಾಪಕರು (ವಿ.),
ಖರೀದಿ, ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

Mob No: 9448496026 E-Mail: dmkarwarkfcsc@yahoo.com Office Ph: 08382-226243

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ
KARNATAKA FOOD & CIVIL SUPPLIES CORPORATION LIMITED
(Government of Karnataka Undertaking)
Room No. 08, D.C.Office Complex, M.G.Road, Karwar-581 301.
ಕೊಠಡಿ ಸಂಖ್ಯೆ. 08, ಡಿಸಿ ಕಛೇರಿ ಸಂಕೀರ್ಣ, ಎಂ.ಜಿ.ರಸ್ತೆ, ಕಾರವಾರ–581301

ನಂ.ಕಆನಾಸನಿನಿ/ಮೀ.ಸೀ.ಎಣ್ಣೆ/ಟೆಂಡರ್/2023–24 ದಿನಾಂಕ:12.09.2023

ಟೆಂಡರ್ ಪ್ರಕಟಣೆ

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ, ಕಾರವಾರ ಜಿಲ್ಲಾ ಕಛೇರಿಯ ವತಿಯಿಂದ ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಮೀನುಗಾರಿಕೆ ಸೀಮೆ ಎಣ್ಣೆಯನ್ನು ಎತ್ತುವಳಿ ಮಾಡಲು ಸಾಗಾಣಿಕೆ ಗುತ್ತಿಗೆದಾರರನ್ನು ಒಂದು ವರ್ಷದ ಅವಧಿಗೆ ನಿಯೋಜಿಸಿಕೊಳ್ಳಲು E-procurement portal ಮೂಲಕ **ದಿನಾಂಕ: 12.09.2023 ರಂದು** ಪ್ರಕಟಣೆಯನ್ನು ನೀಡಲಾಗಿದೆ. ಆಸಕ್ತಿಯುಳ್ಳವರು ಇ–procurement portal (http://www.kppp.karnataka.gov.in Tender Number KFCSCL/2023-24/SE0020) ಮೂಲಕ ಮಾಹಿತಿ ಪಡೆದುಕೊಂಡು Online (Download) ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಅರ್ಜಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 26.09.2023ರ ಸಂಜೆ 5:00 ಗಂಟೆಯವರೆಗೆ ಇರುತ್ತದೆ.** ಇತರ ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯೂಮೆಂಟ್ ಮೂಲಕ ಪಡೆಯಬಹುದಾಗಿದೆ.

ಟೆಂಡರ್ ಸಂಖ್ಯೆ: **KFCSCL/2023-24/SE0020**

ಸಹಿ/– ಜಿಲ್ಲಾ ವ್ಯವಸ್ಥಾಪಕರು
ಕಆನಾಸನಿನಿ., ಕಾರವಾರ

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಮೆರೀನ್ ಇಂಜಿನೀಯರ್‌ರವರ ಕಛೇರಿ, ಬೈತ್‌ಖೋಲ್, ಕಾರವಾರ–581302

ಕ್ರಸಂ: ಎಂಇ/ಜಿಎನ್‌ಎಲ್/ಸಿಆರ್–01/2023 ದಿನಾಂಕ: 11.09.2023

ಆಸಕ್ತಿ ವ್ಯಕ್ತಪಡಿಸುವಿಕೆ (EXPRESSION OF INTEREST) (2ನೇ ಕರೆ)

"ಕಾರವಾರ ಬಂದರಿನಲ್ಲಿ ಹಡಗುಗಳ ಬರ್ತಿಂಗ್/ಅನ್‌ಬರ್ತಿಂಗ್ ಸೇವೆಗಾಗಿ ಬಾಡಿಗೆ ಆಧಾರದ ಮೇಲೆ 3 ವರ್ಷಗಳ ಅವಧಿಗೆ ಪಡೆಯಲು ಹಾಗೂ ಅವಶ್ಯವಿದ್ದಲ್ಲಿ 2 ವರ್ಷಗಳ ಅವಧಿಗೆ ವಿಸ್ತರಿಸಲು (as per same terms and conditions) 2 ಸಂಖ್ಯೆ ಕನಿಷ್ಟ 30 ಟನ್ ಬೋಲಾರ್ಡ್ ಪುಲ್ ಸಾಮರ್ಥ್ಯದ ಟಗ್ಗ್ ಸೇವೆಯನ್ನು" ಇದೇ ರೀತಿಯ ಕೆಲಸದಲ್ಲಿಯ ಹೆಸರಾಂತ, ಬೋನಾಫೈಡ, ವ್ಯವಹಾರಕುಶಲ ಹಾಗೂ ಅನುಭವ ಹೊಂದಿರುವ ಆಸಕ್ತ ಗುತ್ತಿಗೆದಾರರು/ಸಂಸ್ಥೆಗಳಿಂದ ಕೆಳಸಹಿದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆಹ್ವಾನಿಸಿದ್ದಾರೆ. **round the clock (24 hrs a day) Indent No. IDD/2023-24/PREQUAL_TENDER_NUMBER_5/CALL-2**

ಕಾರವಾರ ಬಂದರಿಗೆ ಅವಶ್ಯಕವಾದ ಟಗ್‌ಗಳ ವಿಶಿಷ್ಟ ವಿವರಣಾ ಪಟ್ಟಿಯನ್ನು ಅನುಬಂಧ–A ರಲ್ಲಿ ನೀಡಲಾಗಿದೆ. ದರಪಟ್ಟಿ ಕೋಟೆಶನ್ ಸಲ್ಲಿಸುವವರು ಇವುಗಳನ್ನು ಮನವರಿಕೆ ಮಾಡಿಕೊಂಡ ಬಳಿಕವೇ ದರಗಳನ್ನು ನಮೂದಿಸಲು ಕೋರಿದೆ. ಈ ದರವು ಟಗ್ಗನ ನಡೆಸುವಿಕೆ, **ನಿರ್ವಹಣೆ ಮತ್ತು ಕಾರ್ಯಾಚರಣೆ (H.O.M)** ವೆಚ್ಚಗಳು, ಇಂಧನ, ನೀರು, ಸಿಬ್ಬಂದಿ, ನಿರ್ವಹಣೆ ಇತ್ಯಾದಿ ಹಾಗೂ ದರಪಟ್ಟಿ ಸಲ್ಲಿಸುವ ದಿನ ಅನ್ವಯವಾಗುವ ಎಲ್ಲಾ ತೆರಿಗೆಗಳು ಹಾಗೂ ಸುಂಕಗಳನ್ನು ಒಳಗೊಂಡಂತೆ ಮತ್ತು ಜಿಎಸ್‌ಟಿ (GST) ಯನ್ನು ಹೊರತುಪಡಿಸಿ ಸಂಪೂರ್ಣವಾಗಿ ಪೂರ್ಣಗೊಂಡ ದರಗಳನ್ನು **ದಿನಾಂಕ: 21.09.2023** ರಂದು ಅಥವಾ ಮುಂಚಿತವಾಗಿ ಕೆಳಸಹಿದಾರರಿಗೆ ಸಲ್ಲಿಸುವುದು. ಕೊಟೇಶನ್ ದರಗಳು ಅಂದಾಜು ಪಟ್ಟಿ ತಯಾರಿಸಲು / ಇಲಾಖೆಯ ಅನುದಾನ ಪಡೆಯುವ ಸಲುವಾಗಿ ಮಾತ್ರ ಸೀಮಿತವಾಗಿರುತ್ತದೆ.

ಯಾವುದೇ ಇತರ ಮಾಹಿತಿಗಾಗಿ ಮತ್ತು ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

(1) E-mail: marineengineerkwr@gmail.com (2) Phone:08382-221402 (3) https://kppp.karnataka.gov.in

ಸಹಿ/– ಮೆರೀನ್ ಇಂಜಿನೀಯರ್,
ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಾರವಾರ

DIPR/ADK/KSMCA/199/23-24 dt. 11.09.2023

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ–1:ಟೆಂಡರ್11/2023–24
ದಿನಾಂಕ: 06.09.2023

ಟೆಂಡರ್ ಪ್ರಕಟಣೆ ಸಂ.11/2023–24 ದಿನಾಂಕ: 06.09.2023

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 11/2023–24:ದಿನಾಂಕ 06.09.2023 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ನಬಾರ್ಡ್ ಆರ್.ಐ.ಡಿ.ಎಫ್–28 ಲೆಕ್ಕ ಶೀರ್ಷಿಕೆ ಅಡಿಯಲ್ಲಿ 01 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ ರೂ.417.00 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.625500/–, ಅರ್ಹ ಗುತ್ತಿಗೆದಾರರು : 2 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 08 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 05–10–2023 ರ 17.30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 07.09.2023 ರಿಂದ 06–10–2023 ರ 17–00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 06.10.2023 ರ ಸಂಜೆ 17–00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 07–10–2023 ರ ಸಂಜೆ 17–15 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 09–10–2023ರ ಬೆಳಿಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/161/KSMCA/2023-24

ವಾಹನ ದಟ್ಟಣೆ: 6 ವಾರಗಳಲ್ಲಿ ಅನುಪಾಲನಾ ವರದಿ ಸಲ್ಲಿಸಲು ಸರ್ಕಾರಕ್ಕೆ ಹೈಕೋರ್ಟ್ ಆದೇಶ

ಶಾಲೆ ಸಮಯ ಬದಲಾವಣೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾ ನಗರದಲ್ಲಿ ದಿನನಿತ್ಯ ಉಂಟಾಗುತ್ತಿರುವ ವಾಹನ ದಟ್ಟಣೆ ತಪ್ಪಿಸಲು ಶಾಲೆಗಳು ಮತ್ತು ಕೈಗಾರಿಕೆಗಳ ಕಾರ್ಯನಿರ್ವಹಣೆ ಸಮಯ ಬದಲಾವಣೆ ಮಾಡಬೇಕು ಎಂದು ಸರ್ಕಾರಕ್ಕೆ ಹೈಕೋರ್ಟ್ ಸಲಹೆ ನೀಡಿದೆ.

ಈ ಸಂಬಂಧ ಶಾಲೆಗಳು, ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಕಂಪನಿಗಳ ಪ್ರತಿನಿಧಿಗಳು ಸೇರಿದಂತೆ ಸಂಬಂಧಿಸಿದ ಪಾಲುದಾರರ ಸಭೆ ಕರೆದು ಚರ್ಚೆ ನಡೆಸುವಂತೆ ನ್ಯಾಯಾಲಯ ತಾಕೀತು ಮಾಡಿದೆ.

ಬಳ್ಳಾರಿ ರಸ್ತೆ ವಿಸ್ತರಣೆ ಸಂಬಂಧ ಸರ್ಕಾರೇತರ ಸಂಸ್ಥೆ ಸಮರ್ಪಣಾ ಸಾಮಾಜಿಕ- ಸಾಂಸ್ಕೃತಿಕ ಸಂಸ್ಥೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ಕೆಲ ಕಾಲ ವಾದ ಆಲಿಸಿದ ಬಳಿಕ ನ್ಯಾಯಾಲಯ 'ರಾಜ್ಯ ಸರ್ಕಾರ ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ಮೂಲಕ ಎಲ್ಲ ಸರ್ಕಾರಿ ಮತ್ತು ಖಾಸಗಿ ಶಾಲೆಗಳು, ಶಾಲಾ ಬಸ್ ಆಪರೇಟರ್‌ಗಳು, ಪೋಷಕರ ಸಂಘಗಳು ಸೇರಿ ಸಂಬಂಧಿಸಿದ ಎಲ್ಲರ ಸಭೆ ಕರೆಯಬೇಕು. ವಾಹನ ದಟ್ಟಣೆ ತಗ್ಗಿಸಲು ಶಾಲಾ ಸಮಯ ಬದಲಾವಣೆ ಮಾಡುವ ಬಗ್ಗೆ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಬಹುದು. ಈ ವೇಳೆ ಶಾಲಾ ಮಕ್ಕಳ ಸುರಕ್ಷತೆ ಮತ್ತು ಭದ್ರತೆಯನ್ನೂ ಪರಿಗಣಿಸಬೇಕಾಗುತ್ತದೆ' ಎಂದು ನಿರ್ದೇಶನ ನೀಡಿದೆ.

ಅಂತೆಯೇ, ಕೈಗಾರಿಕೆ ಮತ್ತು ಕಾರ್ಮಿಕ ಇಲಾಖೆ ಕಾರ್ಯದರ್ಶಿ ಮೂಲಕ ಎಲ್ಲ ಕೈಗಾರಿಕೆಗಳ ಒಕ್ಕೂಟಗಳು, ಕಾರ್ಮಿಕ ಸಂಘಟನೆಗಳು, ವಾಣಿಜ್ಯ ಮತ್ತು ಕೈಗಾರಿಕೆಗಳ ಮಹಾ ಸಂಸ್ಥೆಗಳ ಒಕ್ಕೂಟ, ಕಂಪನಿಗಳ ಪ್ರತಿನಿಧಿಗಳ ಜತೆ ಚರ್ಚೆ ನಡೆಸಿ ಕೆಲಸದ ಅವಧಿಯನ್ನು ಬದಲಾವಣೆ ಮಾಡಬಹುದು ಎಂದು ಸೂಚಿಸಿತು.

ದುಡಿಯುವ ಸಮಯವನ್ನು ಸರಳಗೊಳಿಸುವುದು, ಜನದಟ್ಟಣೆ ಸಮಯದಲ್ಲಿ ವಾಹನ ದಟ್ಟಣೆ ತಗ್ಗಿಸುವ ಸಂಬಂಧ ಸಂಬಂಧಿಸಿದ ಎಲ್ಲರಿಂದಲೂ ಸಲಹೆ-ಸೂಚನೆಗಳನ್ನು ಪಡೆದು ಸರ್ಕಾರ ಮುಂದುವರಿಯಬಹುದು ಎಂದು ನ್ಯಾಯಾಲಯ ಹೇಳಿತು.

ಸಾದಹಳ್ಳಿ ಗೇಟ್‌ನಿಂದ ಹೆಬ್ಬಾಳ ಮೇಲ್ಸೇತುವೆವರೆಗೆ ಬೆಳಿಗ್ಗೆ 6ರಿಂದ ರಾತ್ರಿ 10ರವರೆಗೆ ಭಾರಿ ವಾಹನಗಳು ನಗರಕ್ಕೆ ಪ್ರವೇಶಿಸುವುದನ್ನು ನಿರ್ಬಂಧಿಸಿ 2014ರಲ್ಲಿ ನಗರ ಪೊಲೀಸ್ ಕಮಿಷನರ್ ಹೊರಡಿಸಿದ್ದ ಆದೇಶವನ್ನು ಉಲ್ಲೇಖಿಸಿದ ನ್ಯಾಯಪೀಠ 'ನಮ್ಮ ಪ್ರಕಾರ ಈ ಅಧಿಸೂಚನೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದ್ದೇ ಆದರೆ ವಾಹನ ದಟ್ಟಣೆ ಖಂಡಿತಾ ತಗ್ಗುತ್ತದೆ' ಎಂದಿತು.

ಮೆಟ್ರೊ ರೈಲು ಮಾರ್ಗ ವಿಸ್ತರಣೆ, ರೈಲುಗಳ ಸಮಯ ವಿಸ್ತರಣೆ ಸೇರಿದಂತೆ 2023-24ನೇ ವರ್ಷಕ್ಕೆ ಯೋಜನಾ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಬೇಕು. ಆ ಕಾರ್ಯವನ್ನು ತ್ವರಿತವಾಗಿ ಮಾಡಬೇಕು ಎಂದು ನ್ಯಾಯಾಲಯ ಸೂಚನೆ ನೀಡಿತು. ಅರ್ಜಿದಾರರು ನೀಡಿರುವ ಸಲಹೆಗಳು, ಈ ನ್ಯಾಯಪೀಠ ನೀಡಿರುವ ನಿರ್ದೇಶನಗಳನ್ನು ಆಧರಿಸಿ ವಾಹನ ದಟ್ಟಣೆ ತಗ್ಗಿಸಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಆರು ವಾರಗಳಲ್ಲಿ ವಸ್ತು ಸ್ಥಿತಿ ವರದಿ ಹಾಗೂ ಅನುಪಾಲನಾ ವರದಿಯನ್ನು ಸಲ್ಲಿಸಬೇಕು ಎಂದು ನಿರ್ದೇಶನ ನೀಡಿ ವಿಚಾರಣೆಯನ್ನು ಮುಂದೂಡಿತು.

ಮೈಸೂರು ವಿ.ವಿ ಕುಲಪತಿ ನೇಮಕ: ಆದೇಶ ರದ್ದು

ಬೆಂಗಳೂರು: ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ಪ್ರೊ. ಎನ್.ಕೆ. ಲೋಕನಾಥ್ ಅವರನ್ನು ನೇಮಕ ಮಾಡಿ ರಾಜ್ಯಪಾಲರು ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ.

ಮೈಸೂರು ವಿವಿ ಕುಲಪತಿ ಹುದ್ದೆಗೆ ಲೋಕನಾಥ್ ಅವರನ್ನು ನೇಮಿಸಿ 2023ರ ಮಾರ್ಚ್ 23ರಂದು ರಾಜ್ಯಪಾಲರು ಹೊರಡಿಸಿದ್ದ ಆದೇಶ ರದ್ದು ಕೋರಿ ಪ್ರೊ.ಶರತ್ ಅನಂತಮೂರ್ತಿ ಮತ್ತು ಡಾ.ಜಿ. ವೆಂಕಟೇಶ್ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎನ್.ಎಸ್. ಸಂಜಯ್ ಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000ರ ಮತ್ತು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ-20018ರ ನಿಯಮಗಳ ಅನುಸಾರ ಮೈಸೂರು ವಿವಿ ಕುಲಪತಿ ಹುದ್ದೆಗೆ ಹೊಸದಾಗಿ ನೇಮಕಾತಿ ಪ್ರಕ್ರಿಯೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ನ್ಯಾಯಪೀಠ ಇದೇ ವೇಳೆ ನಿರ್ದೇಶಿಸಿದೆ.

ಲೋಕನಾಥ್ ಅವರನ್ನು ಮೈಸೂರು ವಿವಿ ಕುಲಪತಿ ಹುದ್ದೆಗೆ ನೇಮಕ ಮಾಡುವ ವೇಳೆ ನಿಯಮಾವಳಿಗಳನ್ನು ಸೂಕ್ತವಾಗಿ ಪಾಲನೆ ಮಾಡಿಲ್ಲ. ಇದರಿಂದ ಅವರ ನೇಮಕಾತಿಯನ್ನು ರದ್ದುಗೊಳಿಸಲಾಗುತ್ತಿದೆ ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

ಆದೇಶದ ವಿಸ್ತೃತ ಪ್ರತಿ ಇನ್ನಷ್ಟೇ ಬಿಡುಗಡೆಯಾಗ ಬೇಕಿದ್ದು, ರಾಜ್ಯ ಸರ್ಕಾರವು ಮೈಸೂರು ವಿವಿ ಕುಲಪತಿ ನೇಮಕ ಪ್ರಕ್ರಿಯೆಯನ್ನು ಹೊಸದಾಗಿ ಮಾಡಬೇಕು. ಅದಕ್ಕಾಗಿ ಹಿಂದಿನ ಶೋಧನಾ ಸಮಿತಿ ಲಭ್ಯವಿಲ್ಲದ ಹಿನ್ನೆಲೆಯಲ್ಲಿ ಕುಲಪತಿ ಹುದ್ದೆಗೆ ಅರ್ಹರಾದವರ ಮೂವರು ಹೆಸರು ಸೂಚಿಸಲು ಹೊಸದಾಗಿ ಶೋಧನಾ ಸಮಿತಿಯನ್ನು ರಚನೆ ಮಾಡಬೇಕು. ಲೋಕನಾಥ್ ಅವರ ಅರ್ಜಿ ಸೇರಿದಂತೆ ಎಲ್ಲಾ ಅರ್ಹರ ಅರ್ಜಿಗಳನ್ನು ಹೊಸದಾಗಿ ಪರಿಗಣಿಸಬೇಕು. ನಂತರ ಅರ್ಹರ ಹೆಸರನ್ನು ರಾಜ್ಯ ಸರ್ಕಾರಕ್ಕೆ ರವಾನಿಸಬೇಕು ಎಂದು ಸೂಚಿಸಿದೆ.

ಸಮಿತಿಯು ಶಿಫಾರಸು ಮಾಡಿದ ಮೂವರು ಅರ್ಹರ ಹೆಸರನ್ನು ರಾಜ್ಯಪಾಲರಿಗೆ ಕಳುಹಿಸಬೇಕು. ಬಳಿಕ, ರಾಜ್ಯಪಾಲರು ಆ ಮೂವರ ಹೆಸರಲ್ಲಿ ಒಬ್ಬರ ಹೆಸರು ಅಂತಿಮಗೊಳಿಸಿ, ರಾಜ್ಯ ಸರ್ಕಾರದಿಂದ ಒಪ್ಪಿಗೆ ಪಡೆದ ನಂತರ ಕುಲಪತಿ ಹುದ್ದೆಗೆ ತಮ್ಮ ನಾಮಿನಿಯನ್ನು ನೇಮಕ ಪ್ರಕ್ರಿಯೆಯನ್ನು ಹೊಸದಾಗಿ ಮಾಡಬೇಕು. ಅದಕ್ಕಾಗಿ ಹಿಂದಿನ ಶೋಧನಾ ಸಮಿತಿ ಲಭ್ಯವಿಲ್ಲದ ಹಿನ್ನೆಲೆಯಲ್ಲಿ ಕುಲಪತಿ ಹುದ್ದೆಗೆ ಅರ್ಹರಾದವರ ಮೂವರು ಹೆಸರು ಸೂಚಿಸಲು ಹೊಸದಾಗಿ ಶೋಧನಾ ಸಮಿತಿಯನ್ನು ರಚನೆ ಮಾಡಬೇಕು. ಲೋಕನಾಥ್ ಅವರ ಅರ್ಜಿ ಸೇರಿದಂತೆ ಎಲ್ಲಾ ಅರ್ಹರ ಅರ್ಜಿಗಳನ್ನು ಹೊಸದಾಗಿ ಪರಿಗಣಿಸಬೇಕು. ನಂತರ ಅರ್ಹರ ಹೆಸರನ್ನು ರಾಜ್ಯ ಸರ್ಕಾರಕ್ಕೆ ರವಾನಿಸಬೇಕು ಎಂದು ತಿಳಿಸಿದೆ.

ಪ್ರಕರಣವೇನು?

ಕುಲಪತಿಯಾಗಿ ನೇಮಕವಾಗುವವರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ಬಾಕಿ ಇರಬಾರದು. ಆದರೆ, ಕುಲಪತಿಯಾಗಿ ನೇಮಕಗೊಂಡಿರುವ ಲೋಕನಾಥ್ ವಿರುದ್ಧ ಕ್ರಿಮಿನಲ್ ಪ್ರಕರಣ ಬಾಕಿ ಇದೆ. ಆದರೆ, ಆ ವಿಷಯವನ್ನು ಅವರು ಮರೆಮಾಚಿದ್ದಾರೆ. ಕುಲಪತಿಗಳ ನೇಮಕಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿಗೆ ವಿರುದ್ಧವಾಗಿ ಹಾಗೂ ನಿಯಮಗಳನ್ನು ಗಾಳಿಗೆ ತೂರಿ ಲೋಕನಾಥ್ ಅವರನ್ನು ನೇಮಕ ಮಾಡಲಾಗಿದೆ ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

ಸುದ್ದಿ 2 ನಿಮಿಷ

ಉದಯನಿಧಿ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಸನಾತನ ಧರ್ಮದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಅವರ ವಿರುದ್ಧ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಏಕಂ ಸನಾತನ ಭಾರತ್ ದಳ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಳ ರಾಜ್ಯ ಘಟಕದ ಅಧ್ಯಕ್ಷ ಜ್ಞಾನೇಶ್ ಎನ್., 'ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಕೋಮು ಪ್ರಚೋದನೆ ಹಾಗೂ ರಾಷ್ಟ್ರದ್ರೋಹದ ಹೇಳಿಕೆ ನೀಡಿರುವ ತಮಿಳುನಾಡಿನ ಉದಯನಿಧಿ ಸ್ಟಾಲಿನ್ ಅವರ ಹೇಳಿಕೆ ಖಂಡನೀಯ' ಎಂದರು.

'ಉದಯನಿಧಿ ಸ್ಟಾಲಿನ್ ಅವರ ಹೇಳಿಕೆಯನ್ನು ಬೆಂಬಲಿಸಿದ ಸಚಿವರಾದ ಪ್ರಿಯಾಂಕ್ ಖರ್ಗೆ, ಜಿ. ಪರಮೇಶ್ವರ್ ಅವರ ವಿರುದ್ಧ ಐಪಿಸಿ ಸೆಕ್ಷನ್ 295ಎ (ಧಾರ್ಮಿಕ ನಂಬಿಕೆ, ಭಾವನೆಗೆ ಉದ್ದೇಶಪೂರ್ವಕವಾಗಿ ಧಕ್ಕೆ ತರುವುದು) ಹಾಗೂ 153ಎ (ಧರ್ಮ, ಜಾತಿ, ಜನಾಂಗ, ಹುಟ್ಟಿದ ಸ್ಥಳ, ಭಾಷೆ ಇತ್ಯಾದಿ ಆಧಾರದಲ್ಲಿ ಭಿನ್ನ ಸಮುದಾಯಗಳ ನಡುವೆ ದ್ವೇಷ ಮೂಡಿಸಲು ಯತ್ನ) ಅಡಿ ಪ್ರಕರಣ ದಾಖಲಿಸಬೇಕು' ಎಂದು ಒತ್ತಾಯಿಸಿದರು.

15 ಆಂಬುಲೆನ್ಸ್‌ಗಳಿಗೆ ಚಾಲನೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಾವೇರಿ ಆಸ್ಪತ್ರೆಯು ನಗರದಲ್ಲಿ ಮಂಗಳವಾರ 15 ಆಂಬುಲೆನ್ಸ್‌ಗಳಿಗೆ ಚಾಲನೆ ನೀಡಿದ್ದು, ತುರ್ತು ಕರೆ ಸ್ವೀಕರಿಸಿದ ಕೆಲವೇ ನಿಮಿಷಗಳಲ್ಲಿ ಆಂಬುಲೆನ್ಸ್ ಸ್ಥಳದಲ್ಲಿ ಇರುವುದಾಗಿ ತಿಳಿಸಿದೆ.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಆಸ್ಪತ್ರೆಯ ಡಾ.ಕೃಷ್ಣ ಚೈತನ್ಯ, 'ತುರ್ತು ಕರೆ ಸ್ವೀಕರಿಸಿದ 120 ಸೆಕೆಂಡ್‌ಗಳಲ್ಲಿ ಸ್ಥಳಕ್ಕೆ ಆಂಬುಲೆನ್ಸ್ ಕಳಿಸಲು ಕ್ರಮವಹಿಸಲಾಗುತ್ತದೆ. ಆಸ್ಪತ್ರೆಯ 10 ಕಿ.ಮೀ. ವ್ಯಾಪ್ತಿಯ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಆಂಬುಲೆನ್ಸ್‌ಗಳು ಕಾರ್ಯಾಚರಣೆ ಮಾಡಲಿವೆ. ಪಾರ್ಶ್ವವಾಯು, ಹೃದಯಾಘಾತ, ಬೆನ್ನುಮೂಳೆ ಮತ್ತು ತಲೆಯ ಗಾಯಗಳಿಗೆ ತ್ವರಿತ ಹಾಗೂ ನಿಖರವಾದ ಚಿಕಿತ್ಸೆಗೆ ಸಹಕಾರಿಯಾಗಲಿವೆ' ಎಂದು ಹೇಳಿದರು.

ಆಸ್ಪತ್ರೆಯ ಅಪಘಾತ ಮತ್ತು ತುರ್ತು ಆರೈಕೆಯ ಮುಖ್ಯಸ್ಥ ಡಾ.ಪ್ರಭಾಕರ್ ರೆಡ್ಡಿ, 'ಹೃದಯಾಘಾತ ಹಾಗೂ ಅಪಘಾತಗಳು ಸಂಭವಿಸಿದಾಗ ನಿಗದಿತ ಅವಧಿಯೊಳಗೆ ಚಿಕಿತ್ಸೆ ನೀಡದಿದ್ದರೆ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ವೇಗದ ವೈದ್ಯಕೀಯ ಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿದೆ' ಎಂದು ತಿಳಿಸಿದರು.

ಅತಿ ಭದ್ರತೆಯ ನೋಂದಣಿ ಫಲಕ ಅಧಿಸೂಚನೆ: ತಡೆಗೆ ಅರ್ಜಿ

ಬೆಂಗಳೂರು: ವಾಹನಗಳಿಗೆ 'ಅತಿ ಭದ್ರತೆಯ ನೋಂದಣಿ ಫಲಕ' (ಎಚ್‌ಎಸ್‌ಆರ್‌ಪಿ) ಅಳವಡಿಸುವ ಕುರಿತು ರಾಜ್ಯ ಸರ್ಕಾರ ಹೊರಡಿಸಿರುವ ಅಧಿಸೂಚನೆಗೆ ತಡೆ ನೀಡಬೇಕು ಎಂಬ ಅರ್ಜಿದಾರರ ಮಧ್ಯಂತರ ಮನವಿಯ ಬಗ್ಗೆ ಇದೇ 19ರಂದು ಪರಿಗಣಿಸಲಾಗುವುದು ಎಂದು ಹೈಕೋರ್ಟ್ ಹೇಳಿದೆ.

ರಾಜ್ಯ ಸರ್ಕಾರದ ಅಧಿಸೂಚನೆಗೆ ತಡೆ ನೀಡುವಂತೆ ಕೋರಿ 'ಹೈ ಸೆಕ್ಯುರಿಟಿ ರೆಜಿಸ್ಟ್ರೇಷನ್ ಪ್ಲೇಟ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ' ಸೇರಿದಂತೆ ಕೆಲವು ಸಂಸ್ಥೆಗಳು ಸಲ್ಲಿಸಿದ್ದ ತಕರಾರು ಅರ್ಜಿಗಳನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್ ಅವರಿದ್ದ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರಾಥಮಿಕ ವಾದ ಆಲಿಸಿದ ನ್ಯಾಯಪೀಠ, ಅರ್ಜಿದಾರರ ಮಧ್ಯಂತರ ಮನವಿಯನ್ನು ಸೆ.19ರಂದು ಪರಿಗಣಿಸಲಾಗುವುದು. ಅಷ್ಟೊರಳಗೆ ಅರ್ಜಿದಾರರು ರಾಜ್ಯ ಸರ್ಕಾರಕ್ಕೆ ತಮ್ಮ ಆಕ್ಷೇಪಣೆ ಸಲ್ಲಿಸಬಹುದು ಎಂದಿತು.

ರಾಜ್ಯದಲ್ಲಿ 2019ರ ಏಪ್ರಿಲ್ 1ಕ್ಕಿಂತ ಮೊದಲು ನೋಂದಣಿಯಾದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಲು 'ಮೂಲ ಉಪಕರಣ ತಯಾರಕ' (ಒಇಎಂ) ಅಧಿಕೃತ ಮಾರಾಟಗಾರರ ಮೂಲಕ ಅಳವಡಿಸಿಕೊಳ್ಳಬೇಕು ಎಂದು ರಾಜ್ಯ ಸರ್ಕಾರ ಆಗಸ್ಟ್ 17ರಂದು ಅಧಿಸೂಚನೆ ಹೊರಡಿಸಿದೆ. ಕೆಲವು ಪ್ರಭಾವಿ ಸಂಸ್ಥೆಗಳಿಗಷ್ಟೇ ಎಚ್‌ಎಸ್‌ಆರ್‌ಪಿ ಅಳವಡಿಕೆಗೆ ಅವಕಾಶ ಮಾಡಿಕೊಡಲಾಗಿದೆ ಎಂಬುದು ಅರ್ಜಿದಾರರ ಆಕ್ಷೇಪ.

ಅರ್ಜಿದಾರರ ಪರ ಹಿರಿಯ ವಕೀಲರಾದ ಆದಿತ್ಯ ಸೋಂಧಿ, ಸಜನ್ ಪೂವಯ್ಯ, ಹಿರಿಯ ವಕೀಲ ದೇವದತ್ತ ಕಾಮತ್ ವಾದ ಮಂಡಿಸಿದರೆ, ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿಕ್ರಂ ಹುಯಿಲಗೋಳ ವಾದ ಮಂಡಿಸಿದರು.

'ಭಿಕ್ಷುಕರ ಸೆಸ್: ಪ್ರಮಾಣ ಪತ್ರ ಸಲ್ಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಬಾಕಿ ಉಳಿಸಿಕೊಂಡಿರುವ ₹80 ಕೋಟಿ ಭಿಕ್ಷುಕರ ಸೆಸ್ ಅನ್ನು ಕೇಂದ್ರ ಪರಿಹಾರ ಸಮಿತಿಗೆ ಜಮೆ ಮಾಡುವ ಬಗ್ಗೆ ಒಂದು ವಾರದಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಹೈಕೋರ್ಟ್ ನಿರ್ದೇಶಿಸಿದೆ.

ನಗರದ ರಸ್ತೆಗಳಲ್ಲಿ ಮಕ್ಕಳನ್ನು ಆಟಿಕೆ ಸಾಮಾನು ಮಾರಾಟ ಮಾಡಲು ಹಾಗೂ ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿರುವ ವಿಚಾರವಾಗಿ ಲೆಟ್ಜ್‌ಕಿಟ್ ಫೌಂಡೇಷನ್ 2020ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ಬಿಬಿಎಂಪಿ ಪರ ವಕೀಲ ಎನ್.ಕೆ. ರಮೇಶ್ ವಾದ ಮಂಡಿಸಿ, 2008-09ರಿಂದ 2023-24ರವರೆಗೆ ಸಂಗ್ರಹ ಮಾಡಲಾದ ಭಿಕ್ಷುಕರ ಸೆಸ್‌ನ ಒಟ್ಟು ಮೊತ್ತದಲ್ಲಿ ₹470 ಕೋಟಿಯನ್ನು ಕೇಂದ್ರ ಪರಿಹಾರ ಸಮಿತಿಗೆ ಪಾವತಿಸಲಾಗಿದೆ. ₹80 ಕೋಟಿ ಬಾಕಿ ಇದ್ದು, ಅದನ್ನು ಪಾವತಿಸಲು ಮೂರು ವಾರ ಕಾಲಾವಕಾಶಬೇಕು ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ದೊಡ್ಡ ಮೊತ್ತವನ್ನು ಪಾವತಿ ಮಾಡಿದ್ದು, ಕೇವಲ ₹80 ಕೋಟಿ ಬಾಕಿ ಉಳಿದಿದೆ. ಇಷ್ಟು ಸಣ್ಣ ಮೊತ್ತವನ್ನು ಪಾವತಿಸಲು ಮೂರು ವಾರ ಏಕೆ? ತಲಾ ₹40 ಕೋಟಿಯಂತೆ ಎರಡು ವಾರಗಳಲ್ಲಿ ₹80 ಕೋಟಿಯನ್ನು ಕೇಂದ್ರ ಪರಿಹಾರ ಸಮಿತಿಗೆ ಪಾವತಿಸಬಹುದಲ್ಲವೇ? ಎಂದು ಹೇಳಿತು.

ಅದಕ್ಕೆ ಬಿಬಿಎಂಪಿ ಪರ ವಕೀಲರು, ಪಾಲಿಕೆಯ ಆರ್ಥಿಕ ಸ್ಥಿತಿ ನೋಡಿ ಮುಂದಡಿ ಇಡಬೇಕಾಗುತ್ತದೆ ಎಂದರು.

ಆಗ, 'ಎಷ್ಟು ದಿನ ಅಂತ ಹೀಗೆ ಬಿಡಲು ಆಗುತ್ತದೆ. ಅಷ್ಟಕ್ಕೂ ಸಂಗ್ರಹವಾದ ಭಿಕ್ಷುಕರ ಸೆಸ್ ಹಣವನ್ನು ನೀವೇನು ಪಾಲಿಕೆ ಕಚೇರಿಯಲ್ಲಿ ಇಟ್ಟುಕೊಂಡಿರಲಿಲ್ಲ ಅಲ್ಲವೇ? ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿರುತ್ತೀರಿ. ಆ ಮೂಲಕ ಹಣವನ್ನು ಪಾಲಿಕೆ 'ದುಡಿಸಿಕೊಂಡಿದೆ' ಮತ್ತು ಆ ಹಣದಿಂದ 'ಲಾಭ' ಸಹ ಪಡೆದುಕೊಂಡಿರುತ್ತೀರಿ. ಹೀಗಿದ್ದಾಗ ತಕ್ಷಣ ಪಾವತಿಸಲು ಸಮಸ್ಯೆಯೇನು ಎಂದು ನ್ಯಾಯಪೀಠ ಪ್ರಶ್ನಿಸಿತು.

'ಬಾಕಿ ₹80 ಕೋಟಿಯನ್ನು ಕೇಂದ್ರ ಪರಿಹಾರ ಸಮಿತಿಗೆ ಜಮೆ ಮಾಡುವ ಬಗ್ಗೆ ಒಂದು ವಾರದಲ್ಲಿ ಪ್ರಮಾಣಪತ್ರ ಸಲ್ಲಿಸಿ. ಅದನ್ನು ಆಧರಿಸಿ ಮುಂದಿನ ನಿರ್ದೇಶನ ನೀಡಲಾಗುವುದು' ಎಂದು ಬಿಬಿಎಂಪಿ ಪರ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಮುಂದೂಡಿತು.

ಇದೇ ವೇಳೆ ಸರ್ಕಾರದ ಪರ ವಾದ ಮಂಡಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ, 'ರಾಜ್ಯದ ಉಳಿದ ಪಂಚಾಯಿತಿಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ಬಾಕಿ ಬರಬೇಕಿದ್ದ ₹50 ಕೋಟಿ ಭಿಕ್ಷುಕರ ಸೆಸ್ ಪೈಕಿ ₹20 ಕೋಟಿ ವಸೂಲಿ ಮಾಡಲಾಗಿದೆ. ಉಳಿದ ಮೊತ್ತವನ್ನು ವಸೂಲಿ ಮಾಡುವ ಪ್ರಕ್ರಿಯೆ ನಡೆದಿದೆ' ಎಂದು ಹೇಳಿದರು. ಅದಕ್ಕೂ ಪ್ರಮಾಣಪತ್ರ ಸಲ್ಲಿಸುವಂತೆ ನ್ಯಾಯಪೀಠ ಸೂಚಿಸಿತು.

ಅರ್ಜಿದಾರರ ಪರ ವಕೀಲರ ಪುತ್ತಿಗೆ ರಮೇಶ್, ಭಿಕ್ಷುಕರ ಸೆಸ್‌ಗೆ ಸಂಬಂಧಿಸಿದಂತೆ ಪಾಲಿಕೆ ಹಿಂದಿನ ವಿಚಾರಣೆ ನೀಡಿದ್ದ ಅಂಕಿ-ಅಂಶಗಳಿಗೂ ಈಗ ಕೊಟ್ಟಿರುವ ಮಾಹಿತಿಗೂ ವ್ಯತ್ಯಾಸವಿದೆ ಎಂದರು.

'ಅದಕ್ಕೆ ನಿಮ್ಮ ಬಳಿ ಇರುವ ಸರಿಯಾದ ಮಾಹಿತಿಯೊಂದಿಗೆ ಒಂದು ವಾರದಲ್ಲಿ ಪ್ರಮಾಣಪತ್ರ ಸಲ್ಲಿಸಿ, ಇದೇ ಅವಧಿಯಲ್ಲಿ ಬಿಬಿಎಂಪಿ ಅದಕ್ಕೆ ಆಕ್ಷೇಪಣೆ ಸಲ್ಲಿಸಲಿ' ಎಂದು ನ್ಯಾಯಪೀಠ ಸೂಚನೆ ನೀಡಿತು.

ಹಿಂದಿ ದಿವಸ್ ಆಚರಣೆಗೆ ವಿರೋಧ

ಬೆಂಗಳೂರು: 'ವಿವಿಧತೆಗೆ ಧಕ್ಕೆ ತರುವ 'ಹಿಂದಿ ದಿವಸ್' ಆಚರಣೆಯನ್ನು ನಿಲ್ಲಿಸಿ, ದೇಶದ ಎಲ್ಲಾ ಭಾಷೆಗಳಿಗೂ ಸಮಾನ ಗೌರವ ಹಾಗೂ ಅವಕಾಶ ನೀಡಬೇಕು' ಎಂದು ಕನ್ನಡ ಗೆಳೆಯರ ಬಳಗ ಆಗ್ರಹಿಸಿದೆ.

ಇದೇ 14ರಂದು ನಡೆಯಲಿರುವ ಹಿಂದಿ ದಿವಸ್ ಆಚರಣೆಗೆ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ವಿರೋಧ ವ್ಯಕ್ತಪಡಿಸಿದ್ದು, 'ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಇತ್ತೀಚೆಗೆ ಹಿಂದಿ ಬಳಕೆ ಹೆಚ್ಚಿಸುವ ಪ್ರಯತ್ನ ತೀವ್ರಗತಿಯಲ್ಲಿ ನಡೆಯುತ್ತಿದೆ. ಕರ್ನಾಟಕದಲ್ಲಿರುವ ಅಂಚೆ, ವಿಮೆ, ರೈಲ್ವೆ, ಪಾಸ್‌ಪೋರ್ಟ್, ಬ್ಯಾಂಕ್ ಮುಂತಾದ ಕಡೆಗಳಲ್ಲಿ ಕನ್ನಡ ಬಳಕೆಗೆ ಸೀಮಿತ ಅವಕಾಶವಿದ್ದು, ಕನ್ನಡಿಗರಿಗೆ ಇಲ್ಲಿಯೇ 'ಪರಕೀಯ ಪ್ರಜ್ಞೆ' ಕಾಡುತ್ತಿದೆ. ಈಗ ಹಿಂದಿ ಹೇರಿಕೆ ಅತಿರೇಕಕ್ಕೆ ಹೋಗಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮತದಾನ: ವಿದ್ಯಾರ್ಥಿಗಳಲ್ಲಿ ಅರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾಪ್ರಭುತ್ವದಲ್ಲಿ ಮತದಾನ ಮಾಡುವ ಹಕ್ಕು ಪಡೆಯುವ ಪ್ರತಿಯೊಬ್ಬರೂ ತಪ್ಪದೇ ಮತ ಚಲಾಯಿಸಬೇಕು ಎಂದು ಬಿಬಿಎಂಪಿ ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ಹೇಳಿದರು.

ಎನ್.ಆರ್ ಕಾಲೊನಿಯ ಆಚಾರ್ಯ ಪಾಠಶಾಲೆ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನಲ್ಲಿ ಮತದಾರರ ಸಾಕ್ಷರತಾ ಸಂಘ ಉದ್ಘಾಟಿಸಿದರು. ನಂತರ, ಮತದಾರರಿಗೆ ವ್ಯವಸ್ಥಿತ ಶಿಕ್ಷಣ ಮತ್ತು ಪಾಲ್ಗೊಳ್ಳುವಿಕೆ (ಸ್ವೀಪ್) ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಒಳ್ಳೆಯ ಆಡಳಿತ ಹಾಗೂ ಸರ್ಕಾರಕ್ಕಾಗಿ ಉತ್ತಮ ಜನಪ್ರತಿನಿಧಿಗಳನ್ನು ನಾವು ಆಯ್ಕೆ ಮಾಡಬೇಕು. ಈ ಸಂಬಂಧ ಯುವ ಮತದಾರರಲ್ಲಿ ಆಲೋಚನೆ ಮಾಡುವ ಶಕ್ತಿಯಿದ್ದು, ಉತ್ತಮ ಅಭ್ಯರ್ಥಿಗೆ ಮತ ಚಲಾಯಿಸಿ, ಒಳ್ಳೆಯ ಜನ ಪ್ರತಿನಿಧಿಯನ್ನು ಆಯ್ಕೆ ಮಾಡಿ ಉತ್ತಮ ಸಮಾಜವನ್ನು ರೂಪಿಸುವಲ್ಲಿ ಕೈಜೋಡಿಸಬೇಕು' ಎಂದು ತಿಳಿಸಿದರು.

'ಸ್ವೀಪ್ ಕಾರ್ಯದಡಿ ನಗರದಾದ್ಯಂತ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಲೋಕಸಭಾ ಚುನಾವಣೆ ಬರಲಿದ್ದು, 18 ವರ್ಷ ತುಂಬುವ ಎಲ್ಲ ಯುವಕರು ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕು. 18 ವರ್ಷ ತುಂಬಿದ ಪ್ರತಿಯೊಬ್ಬರಿಗೂ ಧರ್ಮ, ಜಾತಿ ಹಾಗೂ ವರ್ಗವನ್ನು ನೋಡದೆ ಚುನಾಯಿತ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಹಕ್ಕನ್ನು ಸಂವಿಧಾನ ನೀಡಿದೆ' ಎಂದು ಹೇಳಿದರು.

ಎನ್‌ಆರ್ ಕಾಲೊನಿಯ ಆಚಾರ್ಯ ಪಾಠಶಾಲೆಯಲ್ಲಿ ಮತದಾರರಿಗೆ ವ್ಯವಸ್ಥಿತ ಶಿಕ್ಷಣ ಮತ್ತು ಪಾಲ್ಗೊಳ್ಳುವಿಕೆ ಕಾರ್ಯಕ್ರಮದಲ್ಲಿ ಬಿಬಿಎಂಪಿ ದಕ್ಷಿಣ ವಲಯದ ಆಯುಕ್ತ ಜಯರಾಂ ರಾಯಪುರ ಮಾತನಾಡಿದರು.

'ಚುನಾವಣೆಯಲ್ಲಿ ಯಾರು ಬೇಕಾದರು ಸ್ಪರ್ಧೆ ಮಾಡಬಹುದು. ಜನ ಮನ್ನಣೆ ಪಡೆಯುವವರು ಚುನಾಯಿತ ಪ್ರತಿನಿಧಿಗಳಾಗಲು ಸಾಧ್ಯವಿದೆ. ಚುನಾವಣೆಯಲ್ಲಿ ಪಾಲ್ಗೊಂಡು ಹೆಚ್ಚು ಮತಗಳನ್ನು ಪಡೆಯುವವರು ಜನಪ್ರತಿನಿಧಿಗಳಾಗಿ ಆಯ್ಕೆಯಾಗುತ್ತಾರೆ. ಆಯ್ಕೆಯಾದ ನಂತರ ಜನ ನಿರೀಕ್ಷಿಸಿದ ಕೆಲಸ ಮಾಡದಿದ್ದರೆ 5 ವರ್ಷಗಳ ನಂತರ ಬದಲಾವಣೆ ಮಾಡುವ ಹಕ್ಕು ಪ್ರಜೆಗಳಲ್ಲಿರುತ್ತದೆ' ಎಂದು ತಿಳಿಸಿದರು.

'ಬೆಂಗಳೂರು ವ್ಯಾಪ್ತಿಯಲ್ಲಿ ಸದ್ಯ ಶೇ 54 ರಷ್ಟು ಮಾತ್ರ ಮತದಾನವಾಗುತ್ತಿದೆ. ಅದನ್ನು ಕನಿಷ್ಠ ಶೇ 70ಕ್ಕಾದರೂ ಹೆಚ್ಚಳ ಮಾಡಬೇಕಿದೆ. ಅದಕ್ಕೆ ಭಾರತ ಚುನಾವಣಾ ಆಯೋಗವು ಸಾಕಷ್ಟು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಯುವ ಮತದಾರರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿ, ತಪ್ಪದೆ ಮತದಾನ ಚಲಾಯಿಸಬೇಕು' ಎಂದು ಮನವಿ ಮಾಡಿದರು.

ಸಭೆಯಲ್ಲಿ ಎನ್.ಎಸ್ಎಸ್ ಸ್ವೀಪ್ ನೋಡಲ್ ಅಧಿಕಾರಿ ಹಾಗೂ ರಾಜ್ಯ ಶಾಸ್ತ್ರ ಪ್ರಾಧ್ಯಾಪಕರಾದ ಕೆ. ವೀಣಾ, ಎ.ಪಿ.ಎಸ್ ಕಾಲೇಜು ಪ್ರಾಂಶುಪಾಲ ಎಸ್. ನಾಗರಾಜ್ ಇದ್ದರು.

ಓಣಂ ಹಬ್ಬ ಆಚರಣೆ

ಕೆ.ಆರ್.ಪುರ: ಕ್ಯಾಲಸನಹಳ್ಳಿ ಪೂರ್ವ ಫಾಮ್ ಬೀಚ್ ವಸತಿ ಸಮುಚ್ಚಯದ ನಿವಾಸಿಗಳು ಸಾಂಪ್ರದಾಯಿಕ ಓಣಂ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಪೂರ್ವ ಫಾಮ್ ಬೀಚ್ ಕೇರಳ ಸಾಂಸ್ಕೃತಿಕ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಚಂಡೆ ಮೇಳ, ಮನರಂಜನೆ, ಸಂಗೀತ, ಗೀತ ಗಾಯನ, ಮೇಗಾ ತಿರುವಾತೀರಾ ನೃತ್ಯ ಪ್ರದರ್ಶನ, ವಿವಿಧ ಕ್ರೀಡಾ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಪೂರ್ವ ಫಾಮ್ ಬೀಚ್ ನಿವಾಸಿ ಮತ್ತು ಸಾಮಾಜಿಕ ಕಾರ್ಯಕರ್ತ ವಿಜಯಕುಮಾರ್ ಘನಶ್ಯಾಮ್ ಮಾತನಾಡಿ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹೊಂದಿರುವ ಓಣಂ ಹಬ್ಬವನ್ನು ಪ್ರತಿವರ್ಷ ಧಾರ್ಮಿಕವಾಗಿ ಹಬ್ಬವಾಗಿ ಆಚರಣೆ ಮಾಡುವ ಪದ್ಧತಿ ರೂಢಿಯಲ್ಲಿದೆ. ಎಲ್ಲ ಭಾಷೆ ಧರ್ಮದವರು ಒಂದಾಗಿ ಈ ಹಬ್ಬವನ್ನು ಹಮ್ಮಿಕೊಳ್ಳಲಾಗಿದೆ. ವಿವಿಧ ಸಾಂಸ್ಕೃತಿಕ ಚಟುವಟಿಕೆ ಹಾಗೂ ಕ್ರೀಡಾ ಸ್ಪರ್ಧೆಗಳನ್ನು ಅಯೋಜಿಸಲಾಗಿದೆ ಎಂದರು.

ಸಾಮಾಜಿಕ ಕಾರ್ಯಕರ್ತ ವಿಜಯಕುಮಾರ್ ಘನಶ್ಯಾಮ್, ಪಿಪಿಬಿ ಕೇರಳ ಸಾಂಸ್ಕೃತಿಕ ಸಮಿತಿಯ ಶಿಜು ಥಾಮಸ್, ದಿಲೀಪ್ ಮೋಹನ್, ಖ್ಯಾತ ಯೂಟ್ಯೂಬರ್ ಜೋರ್ಡಿಂಡಿಯನ್ ಹಾಗೂ ವಸತಿ ಸಮುಚ್ಚಯದ ನಿವಾಸಿಗಳು ಇದ್ದರು.

'ಚಿಂತಕರ ಚಾವಡಿ ರಚನೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಂಜಾರ ಸಮುದಾಯದವರನ್ನು ನಿಗಮ ಮಂಡಳಿ, ಅಕಾಡೆಮಿಗಳಿಗೆ ನೇಮಿಸುವ ನಿಟ್ಟಿನಲ್ಲಿ ಚಿಂತಕರ ಚಾವಡಿ ರಚಿಸಲಾಗುವುದು' ಎಂದು ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಎಂ. ಲಮಾಣಿ ಹೇಳಿದರು.

ನಗರದಲ್ಲಿ ಮಂಗಳವಾರ ಬಂಜಾರ ವಿದ್ಯಾರ್ಥಿ ಹಾಗೂ ಇತರೆ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ನಡೆದ ಬಂಜಾರ ಜನಸ್ಪಂದನಾ ಹಾಗೂ ನೂತನ ಶಾಸಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮೆರಿಟ್ ಆಧಾರದ ಮೇಲೆ ಅರ್ಹ ಪ್ರಾಮಾಣಿಕರನ್ನು ನೇಮಿಸುತ್ತೇವೆ. ಬಗರ್ ಹುಕ್ಕುಂ ಸಾಗುವಳಿಗೆ ಕೇಂದ್ರ ಸರ್ಕಾರದಿಂದ ಇರುವ ಅಡೆತಡೆಗಳ ನಿವಾರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಮುಖಂಡರಾದ ಮನೋಹರ್ ಐನಾಪುರ್, ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ಜಯದೇವ ನಾಯ್ಕ, ಎ.ಆರ್. ಗೋವಿಂದಸ್ವಾಮಿ, ಸುಭಾಷ್ ರಾಥೋಡ್, ಖಂಡೋಬ, ರಾಹುಲ್, ಹನುಮಂತ ನಾಯ್ಕ, ಬಾಬುಹೊನ್ನಾ ನಾಯಕ್, ವಸುಂಧರ ಐನಾಪುರ, ಇದ್ದರು.

ಬಂಜಾರ ಜನಸ್ಪಂದನಾ ಹಾಗೂ ನೂತನ ಶಾಸಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಎಂ. ಲಮಾಣಿ ಭಾಗವಹಿಸಿದ್ದರು.

ನಿರ್ಣಯಗಳು:

- ಸ್ವಾತಂತ್ರ್ಯ ಬಂದ 76 ವರ್ಷವಾದರೂ ಸಮುದಾಯ ಆರ್ಥಿಕ ಪ್ರಗತಿ ಕಂಡಿಲ್ಲ. ಈ ನಿಟ್ಟಿನಲ್ಲಿ ಬಂಜಾರ ಸಮುದಾಯದ ನಾಯಕರು ಪಕ್ಷಾತೀತವಾಗಿ ಒಂದಾಗಿ ಸಮುದಾಯದ ಪ್ರಗತಿಗೆ ಸಂವಿಧಾನಾತ್ಮಕ ನೆಲೆಯಲ್ಲಿ ಕೆಲಸ ನಿರ್ವಹಿಸಬೇಕು.
- ಮೀಸಲಾತಿಗೆ ಅನುಗುಣವಾಗಿ ನಮ್ಮ ಹಕ್ಕನ್ನು ವಿಶ್ವವಿದ್ಯಾಲಯಗಳು, ನಿಗಮ ಮಂಡಳಿಗಳು, ಅಕಾಡೆಮಿಗಳಿಗೆ ರಾಜಕೀಯ ಹಾಗೂ ಇತರೆ ವಲಯಗಳ ಧರ್ಮ ಗುರುಗಳು, ಸಾಹಿತ್ಯ ಹಾಗೂ ಕಲಾ ವಿಭಾಗಗಳ ನಾಯಕರನ್ನು ನಿಗಮ ಮಂಡಳಿ ಅಕಾಡೆಮಿಗಳಿಗೆ ಆಯ್ಕೆ ಮಾಡಬೇಕು.
- ಒಳಮೀಸಲಾತಿ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆಯಾಗದಂತೆ ಒತ್ತಾಯಿಸಬೇಕು.
- ಬಂಜಾರ ಸಮುದಾಯಕ್ಕೆ ಲೋಕಸಭೆ ಚುನಾವಣೆಯ ನಂತರ ಸಚಿವ ಸ್ಥಾನ ನೀಡಬೇಕು.

ಬೈಡನ್ ಕುಟುಂಬದ ಅಕ್ರಮ: ತನಿಖೆಗೆ ಸ್ಪೀಕರ್ ಸೂಚನೆ

ವಾಷಿಂಗ್ಟನ್ (ಎಪಿ): ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಕುಟುಂಬಕ್ಕೆ ಸಂಬಂಧಿಸಿದ ವ್ಯವಹಾರಗಳ ಕುರಿತು ವಿಚಾರಣೆ ನಡೆಸಲು ಸದನ ಸಮಿತಿಗೆ ನಿರ್ದೇಶಿಸುತ್ತಿರುವುದಾಗಿ ಸ್ಪೀಕರ್ ಕೆವಿನ್ ಮೆಕಾರ್ತಿ ಮಂಗಳವಾರ ತಿಳಿಸಿದ್ದಾರೆ.

ಬೈಡೆನ್ ಅವರ ಕುಟುಂಬದ ಅಧಿಕಾರದ ದುರುಪಯೋಗ ಮತ್ತು ಭ್ರಷ್ಟಾಚಾರದ ಆರೋಪಗಳ ವಿಸ್ತೃತ ತನಿಖೆಯನ್ನು ಸಮಿತಿ ನಡೆಸಲಿದೆ ಎಂದು ಅವರು ಹೇಳಿದರು.

ಈ ವರ್ಷದ ಜನವರಿಯಲ್ಲಿ ಅಮೆರಿಕ ಜನಪ್ರತಿನಿಧಿ ಸಭೆಯ ಚುಕ್ಕಾಣಿ ಹಿಡಿದಿರುವ ರಿಪಬ್ಲಿಕನ್ ಪಕ್ಷ, ಅಧ್ಯಕ್ಷ ಜೋ ಬೈಡನ್ ಅವರ ಅಕ್ರಮಗಳ ತನಿಖೆ ನಡೆಸುತ್ತಿದೆ. ಬೈಡನ್ ಕುಟುಂಬದ ಭ್ರಷ್ಟಾಚಾರ ತನಿಖೆ ವೇಳೆ ಕಂಡು ಬಂದಿದೆ ಎಂದು ಮೆಕಾರ್ತಿ ಹೇಳಿದ್ದಾರೆ.

ಬೈಡನ್ ವಿರುದ್ಧ ಕ್ರಮ ಜರುಗಿಸುವಂತೆ ಮೆಕಾರ್ತಿ ರಿಪಬ್ಲಿಕನ್ ಪಕ್ಷದಿಂದ ಒತ್ತಡ ಎದುರಿಸುತ್ತಿದ್ದರು. ಈ ಮಧ್ಯೆಯೇ ಈ ಮಹತ್ವದ ಘೋಷಣೆ ಹೊರಬಿದ್ದಿದೆ.

'ವನ್ಯಜೀವಿ-ಮಾನವ ಸಂಘರ್ಷ ತಡೆಗೆ ಅರಣ್ಯ ಸಂರಕ್ಷಣೆಯೇ ಪರಿಹಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒತ್ತುವರಿ ತಡೆದು, ಕಾಡನ್ನು ಸಂರಕ್ಷಿಸುವುದೇ ವನ್ಯಜೀವಿ-ಮಾನವ ಸಂಘರ್ಷ ತಡೆಯಲು ಇರುವ ಶಾಶ್ವತ ಪರಿಹಾರ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಅರಣ್ಯ ಭವನದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಹುತಾತ್ಮರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದ ನಂತರ ಅವರು ಮಾತನಾಡಿದರು.

ಪರಿಸರ ಸೂಕ್ಷ್ಮ ಪಶ್ಚಿಮಘಟ್ಟ, ನಗರಗಳ ಸುತ್ತಲ ಸಾಮಾಜಿಕ ಅರಣ್ಯ ಸೇರಿದಂತೆ ರಾಜ್ಯದ ಅರಣ್ಯಭೂಮಿ ಉಳಿಸಲು ಅರಣ್ಯಾಧಿಕಾರಿಗಳು, ಸಿಬ್ಬಂದಿ ಇನ್ನಷ್ಟು ಶ್ರಮಿಸಬೇಕು. ಅರಣ್ಯ ನಾಶದಿಂದ ಜಾಗತಿಕ ತಾಪಮಾನ ಏರಿಕೆ, ಹವಾಮಾನ ವೈಪರೀತ್ಯದಂತಹ ಕಠಿಣ ಸವಾಲು ಎದುರಿಸುತ್ತಿದ್ದೇವೆ. ಇದೇ ಸ್ಥಿತಿ ಮುಂದುವರಿದರೆ ಭೂಮಿ ಅಪಾಯಕ್ಕೆ ಸಿಲುಕುತ್ತದೆ. ಪಶ್ಚಿಮಘಟ್ಟದ ಸಂರಕ್ಷಣೆಗೂ ಒತ್ತು ನೀಡಬೇಕು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು

ಮರಗಳ್ಳರು, ಕಳ್ಳಬೇಟೆಗಾರರು, ಕಾಳ್ಗಿಚ್ಚು, ಅರಣ್ಯ ಒತ್ತುವರಿ ಮೊದಲಾದ ಕಾರಣಗಳಿಂದ ವನ್ಯಜೀವಿ-ಮಾನವ ಸಂಘರ್ಷ ಹೆಚ್ಚಾಗಿದೆ. ವನ್ಯ ಮೃಗಗಳ ಚರ್ಮ, ಉಗುರು, ದಂತಕ್ಕಾಗಿ ಕಳ್ಳಬೇಟೆ ನಡೆಯುತ್ತಿದೆ. ಅಮೂಲ್ಯ ಮರಗಳನ್ನು ಕಡಿಯಲಾಗುತ್ತಿದೆ. ಅರಣ್ಯ ಸಂಪತ್ತಿನ ರಕ್ಷಣೆಗಾಗಿ ಸಿಬ್ಬಂದಿ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಇಂತಹ ಕಾರ್ಯದಲ್ಲಿ ತೊಡಗುವ ಅರಣ್ಯ ಸಿಬ್ಬಂದಿ ಮೃತರಾಗುತ್ತಿದ್ದಾರೆ. ಆನೆ ಕಾರ್ಯಾಚರಣೆ ವೇಳೆ 57 ಅರಣ್ಯ ಸಿಬ್ಬಂದಿ ಹುತಾತ್ಮರಾಗಿದ್ದಾರೆ. ಅವರ ಸೇವೆ, ತ್ಯಾಗ ಸ್ಮರಿಸುವುದು ಎಲ್ಲರ ಕರ್ತವ್ಯ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ವಸತಿ ಸಚಿವ ಜಮೀರ್ ಅಹಮದ್ ಖಾನ್ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು. ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಜೀವ್ ರಂಜನ್ ಉಪಸ್ಥಿತರಿದ್ದರು.

ಆಹಾರ ತಜ್ಞ ಖಾದರ್ ವಲಿ ಕಳವಳ

'ಆಧುನಿಕ ಆಹಾರದಿಂದ ಅನಾರೋಗ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಧುನಿಕ ಆಹಾರ ಪದ್ಧತಿಯಿಂದಾಗಿ ಚಿಕ್ಕ ವಯಸ್ಸಿನಲ್ಲಿಯೇ ಮಧುಮೇಹದಂತಹ ರೋಗಗಳು ಕಾಣಿಸಿಕೊಳ್ಳುತ್ತಿವೆ. ಈ ರೋಗಗಳ ನಿಯಂತ್ರಣ ಹಾಗೂ ಉತ್ತಮ ಆರೋಗ್ಯಕ್ಕೆ ಸಿರಿಧಾನ್ಯ ಸಹಕಾರಿ' ಎಂದು ಆಹಾರ ತಜ್ಞ ಖಾದರ್ ವಲಿ ತಿಳಿಸಿದರು.

ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಹಾಗೂ ಜೈನ್ ವಿಶ್ವವಿದ್ಯಾಲಯ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡ ಎರಡು ದಿನಗಳ ಅಂತರರಾಷ್ಟ್ರೀಯ ಸಿರಿಧಾನ್ಯ ಸಮಾವೇಶಕ್ಕೆ ಮಂಗಳವಾರ ಚಾಲನೆ ನೀಡಲಾಯಿತು. ಈ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಅಕ್ಕಿ, ಗೋಧಿ, ಸಕ್ಕರೆ ಹಾಗೂ ಹಾಲು ಆರೋಗ್ಯಕ್ಕೆ ಒಳ್ಳೆಯದಲ್ಲ. ಆದರೆ, ನಮ್ಮಲ್ಲಿ ಅತಿಯಾದ ಪ್ರಮಾಣದಲ್ಲಿ ಇವುಗಳನ್ನೇ ಪ್ರತಿನಿತ್ಯ ಸೇವಿಸಲಾಗುತ್ತಿದೆ. 100 ಗ್ರಾಂ ಅಕ್ಕಿ, ಗೋಧಿಯಲ್ಲಿ ನಾರಿನಾಂಶ ಕ್ರಮವಾಗಿ 0.2 ಗ್ರಾಂ ಹಾಗೂ 1.2 ಗ್ರಾಂ ಇದ್ದರೆ, ಪಂಚ ಸಿರಿಧಾನ್ಯಗಳಾದ ನವಣೆ, ಊದಲು, ಅರ್ಕ, ಸಾಮೆ, ಕೊರಲೆಯಲ್ಲಿ ಈ ಪ್ರಮಾಣ 8 ಗ್ರಾಂನಿಂದ 12.5 ಗ್ರಾಂವರೆಗೆ ಇರುತ್ತದೆ. ಹೆಚ್ಚು ಪೌಷ್ಟಿಕಾಂಶ ಹಾಗೂ ನಾರಿನಾಂಶ ಸಿರಿಧಾನ್ಯಗಳಲ್ಲಿ ಇರಲಿದ್ದು, ಈ ಬೆಳೆಗಳು ನಿಸರ್ಗಕ್ಕೂ ಹಾನಿಯಲ್ಲ' ಎಂದು ಹೇಳಿದರು.

'ಆಧುನಿಕ ಆಹಾರ ಪದ್ಧತಿ ನಮ್ಮ ಆರೋಗ್ಯಕ್ಕೆ ವಿಷವಾಗಿ ಮಾರ್ಪಡುತ್ತಿದೆ. ಪಿಜ್ಜಾದಂತಹ ತಿನಿಸುಗಳ ಅತಿಯಾದ ಸೇವನೆಯಿಂದ ಸ್ತ್ರೀಯರಲ್ಲಿ ಋತುಚಕ್ರ ವ್ಯತ್ಯಾಸವಾಗುತ್ತಿದೆ. ಪುರುಷರಲ್ಲಿ ವೀರ್ಯಾಣುಗಳ ಪ್ರಮಾಣ ಕಡಿಮೆ ಆಗುತ್ತಿದೆ. ಇದರಿಂದಾಗಿಯೇ ಐವಿಎಫ್ ಕೇಂದ್ರಗಳು ಹೆಚ್ಚುತ್ತಿವೆ. ಸಿರಿಧಾನ್ಯಗಳ ಬಳಕೆಯಿಂದ ರೋಗನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಈ ಸತ್ಯ ತಿಳಿದಿರುವ ವೈದ್ಯರು, ಸೂಕ್ತ ಆಹಾರ ಸೇವನೆಗೆ ಉತ್ತೇಜನ ನೀಡದೆ, ಔಷಧ ಸೇವನೆ ಪ್ರಮಾಣ ಹೆಚ್ಚಿಸಲು ಮುಂದಾಗುತ್ತಿದ್ದಾರೆ. ಕಾಯಿಲೆಗಳನ್ನು ವಾಸಿ ಮಾಡುವ ಬದಲು, ಔಷಧ ಕಂಪನಿಗಳ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಐಸಿಎಆರ್–ಅಗ್ರಿಕಲ್ಚರ್ ಟೆಕ್ನಾಲಜಿ ಅಪ್ಲಿಕೇಷನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಬೆಂಗಳೂರು ವಲಯದ ನಿರ್ದೇಶಕ ವಿ. ವೆಂಕಟಸುಬ್ರಮಣಿಯನ್, 'ಸಿರಿಧಾನ್ಯದಿಂದಲೂ ರುಚಿಕರವಾದ ತಿನಿಸುಗಳನ್ನು ಸಿದ್ಧಪಡಿಸಬಹುದು. ದೈನಂದಿನ ಆಹಾರದಲ್ಲಿ ಸಿರಿಧಾನ್ಯಗಳು ಸ್ಥಾನ ಪಡೆದುಕೊಳ್ಳುವಂತಾಗಬೇಕು. ಇದಕ್ಕೆ ಜನರ ಮನಃಸ್ಥಿತಿಯನ್ನು ಬದಲಾಯಿಸುವ ಕೆಲಸವಾಗಬೇಕು. ಕೇಂದ್ರ ಸರ್ಕಾರ ಕೂಡ ಸಿರಿಧಾನ್ಯ ಬಳಕೆಗೆ ಪ್ರೋತ್ಸಾಹ ನೀಡುತ್ತಿದೆ. ಸಿರಿಧಾನ್ಯಗಳು ಮನುಷ್ಯನ ಆರೋಗ್ಯದ ಜತೆಗೆ ಜಗತ್ತಿನ ಆರೋಗ್ಯ ವೃದ್ಧಿಗೂ ಸಹಕಾರಿಯಾಗಿದೆ. ಇವುಗಳನ್ನು ಬೆಳೆಯುವುದರಿಂದ ಭೂಮಿ ಹಾಗೂ ಪ್ರಾಣಿಗಳ ಆರೋಗ್ಯವೂ ವೃದ್ಧಿಸುತ್ತದೆ' ಎಂದು ಹೇಳಿದರು.

ಸಮಾವೇಶದಲ್ಲಿ ವಿ. ವೆಂಕಟಸುಬ್ರಮಣಿಯನ್, ಜೈನ ವಿ.ವಿ ಕುಲಪತಿ ರಾಜ್ ಸಿಂಗ್, ಖಾದರ್ ವಲಿ, ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕಿ ಶ್ರೀದೇವಿ ಅನ್ನಪೂರ್ಣ ಸಿಂಗ್, ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದ ಪ್ರೊ.ಪಿ.ಬಿ. ಕವಿ ಕಿಶೋರ್ ಅವರು ಸಿರಿಧಾನ್ಯ ಉತ್ಪನ್ನಗಳನ್ನು ಪರಿಶೀಲಿಸಿದರು – ಪ್ರಜಾವಾಣಿ ಚಿತ್ರ

ಸಿರಿಧಾನ್ಯ ಉತ್ಪನ್ನಗಳ ಪ್ರದರ್ಶನ

ವಿವಿಧ ಜಿಲ್ಲೆಗಳ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರದ ಮಳಿಗೆಗಳು ಮೇಳದಲ್ಲಿ ಇದ್ದವು. 10ಕ್ಕೂ ಅಧಿಕ ಮಳಿಗೆಗಳಲ್ಲಿ ಸಿರಿಧಾನ್ಯ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ನಡೆಯಿತು. ಪ್ರದರ್ಶಕರು ಸಿರಿಧಾನ್ಯ ಉತ್ಪನ್ನಗಳ ಸೇವನೆಯ ಮಹತ್ವವನ್ನೂ ವಿವರಿಸಿದರು. ಸಿರಿಧಾನ್ಯಗಳಿಂದ ತಯಾರಿಸಿದ ನಿಪ್ಪಟ್ಟು, ಒಬ್ಬಟ್ಟು, ಬರ್ಫಿ, ಚಕ್ಕುಲಿ, ಕರ್ಜಿಕಾಯಿ, ಉಂಡೆ, ಬಿಸ್ಕತ್ತು ಸೇರಿ ವಿವಿಧ ತಿನಿಸಿಗಳು ಇದ್ದವು. ಸಿರಿಧಾನ್ಯಗಳನ್ನು ಸಹ ಮಾರಾಟಕ್ಕೆ ಇಡಲಾಗಿದೆ.

ಡಿಕ್ಕಿ: ಸ್ಥಳದಲ್ಲೇ ಪೌರಕಾರ್ಮಿಕ ಸಾವು

ಗಂಗಾಧರ

ಪೀಣ್ಯ ದಾಸರಹಳ್ಳಿ: ಪೀಣ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಚೊಕ್ಕಸಂದ್ರದ ಬಳಿ ರಸ್ತೆ ದಾಟುತ್ತಿದ್ದ ವೇಳೆ ಪೌರ ಕಾರ್ಮಿಕನಿಗೆ ಮಂಗಳವಾರ ಬೆಳಿಗ್ಗೆ ಕ್ಯಾಂಟರ್ ಡಿಕ್ಕಿಯಾಗಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಲ್ಲಸಂದ್ರದ ರವೀಂದ್ರ ನಗರದ ನಿವಾಸಿ ಗಂಗಾಧರ (49) ಮೃತಪಟ್ಟವರು.

ಬೆಳಿಗ್ಗೆ ಕೆಲಸಕ್ಕೆ ಹೋಗುತ್ತಿದ್ದ ವೇಳೆ ದಾಸರಹಳ್ಳಿ ವಲಯದ ಚೊಕ್ಕಸಂದ್ರ ಕೆರೆ ರಸ್ತೆ ಸಮೀಪ ರಸ್ತೆ ದಾಟುವಾಗ ವೇಗವಾಗಿ ಬಂದ ಕ್ಯಾಂಟರ್ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯ ಗೊಂಡಿದ್ದ ಅವರು ಸ್ಥಳದಲ್ಲೇ ಮೃತ ಪಟ್ಟಿದ್ದಾರೆ.

ಅಪಘಾತ ಸಂಭವಿಸುತ್ತಿದ್ದಂತೆ ಕ್ಯಾಂಟರ್ ವಾಹನದ ಚಾಲಕ ಕ್ಯಾಂಟರ್ ಅನ್ನು ಸ್ಥಳದಲ್ಲಿ ಬಿಟ್ಟು ಪರಾರಿಯಾಗಿದ್ದಾನೆ ಎಂದು ಮೂಲಗಳು ತಿಳಿಸಿವೆ. ಪೀಣ್ಯ ಸಂಚಾರ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು.

ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರಿಂದ ₹ 2.34 ಕೋಟಿ ಮೊತ್ತದ ಮಾದಕ ವಸ್ತುಗಳ ಜಪ್ತಿ

34 ಅಂತರರಾಜ್ಯ ಡ್ರಗ್ಸ್ ಪೆಡ್ಲರ್‌ಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಪೂರೈಸುತ್ತಿದ್ದ ಒಬ್ಬ ವಿದೇಶಿ ಪ್ರಜೆ ಸೇರಿದಂತೆ 34 ಅಂತರರಾಜ್ಯ ಡ್ರಗ್ಸ್‌ಪೆಡ್ಲರ್‌ಗಳನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಕೇರಳದ 15, ಕರ್ನಾಟಕದ 10, ಬಿಹಾರದ ನಾಲ್ವರು, ಒಡಿಶಾದ ಇಬ್ಬರು, ಅಸ್ಸಾಂ ಹಾಗೂ ಹರಿಯಾಣದ ತಲಾ ಒಬ್ಬ, ನೈಜೀರಿಯಾದ ಒಬ್ಬ ಪೆಡ್ಲರ್ ಅನ್ನು ಬಂಧಿಸಲಾಗಿದೆ. ಬಂಧಿತರಿಂದ ₹ 2.42 ಕೋಟಿ ಮೊತ್ತದ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಬಂಧಿತರಿಂದ 37 ಕೆ.ಜಿ ಗಾಂಜಾ, 167 ಗ್ರಾಂ ಎಂಡಿಎಂಎ ಕ್ರಿಸ್ಟಲ್, 70 ಎಲ್‌ಎಸ್‌ಡಿ ಸ್ಟ್ರಿಪ್ಸ್, 495 ಗ್ರಾಂ ಚರಾಸ್, 84 ಗ್ರಾಂ ಹೈಡ್ರೊ ಗಾಂಜಾ, ಕೊಕೇನ್ 72 ಗ್ರಾಂ, ಹಾಶಿಶ್ ಆಯಿಲ್ 1 ಕೆ.ಜಿ 26 ಗ್ರಾಂ, 30 ಮೊಬೈಲ್, 5 ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಮೂಲಗಳು ಹೇಳಿವೆ.

ಒಟ್ಟು 24 ಪ್ರಕರಣ ಪತ್ತೆ ಹಚ್ಚಲಾಗಿದೆ. ನಗರದ ಪ್ರಮುಖ ಕಾಲೇಜುಗಳ ವಿದ್ಯಾರ್ಥಿಗಳಿಗೆ ಆರೋಪಿಗಳು ಮಾದಕ ವಸ್ತುಗಳನ್ನು ಪೂರೈಸುತ್ತಿದ್ದರು. ವೈಟ್‌ಫೀಲ್ಡ್, ವರ್ತೂರು, ಕಾಟನ್‌ಪೇಟೆ, ಮೈಕೋಲೇಔಟ್, ಆರ್‌ಟಿ ನಗರ, ಬೊಮ್ಮನಹಳ್ಳಿ, ಕೆಂಗೇರಿ, ಚಾಮರಾಜಪೇಟೆ, ಬೈಯಪ್ಪನ ಹಳ್ಳಿ, ರಾಮಮೂರ್ತಿ ನಗರ, ಕೊಡಿಗೇಹಳ್ಳಿ, ಕೆಆರ್ ಪುರ, ಪರಪ್ಪನ ಅಗ್ರಹಾರ, ಗಿರಿನಗರ, ಹೆಣ್ಣೂರು, ಕೊತ್ತನೂರು, ಯಲಹಂಕ, ಮಾರತ್‌ಹಳ್ಳಿ, ಹುಳಿಮಾವು, ಜೆ.ಜೆ. ನಗರ, ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಕಡಿಮೆ ಸಮಯದಲ್ಲಿ ಹೆಚ್ಚು ಹಣ ಸಂಪಾದನೆ ಮಾಡುವ ಉದ್ದೇಶದಿಂದ ಮಾದಕ ವಸ್ತುಗಳ ಮಾರಾಟ ದಂಧೆಗೆ ಇಳಿದಿದ್ದರು. ಪರಿಚಯಸ್ಥ ಗ್ರಾಹಕರು, ಕಾಲೇಜು ವಿದ್ಯಾರ್ಥಿಗಳು, ಐಟಿ- ಬಿಟಿ ಉದ್ಯೋಗಿಗಳಿಗೆ ಮಾದಕ ವಸ್ತು ಪೂರೈಸುತ್ತಿದ್ದರು. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ತನಿಖಾಧಿಕಾರಿಗಳು ಹೇಳಿದರು.

ಬೈಕ್ ಕಳವು: ಆರೋಪಿ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಹ್ಯಾಂಡಲ್ ಲಾಕ್ ಮುರಿದು ದ್ವಿಚಕ್ರ ವಾಹನ ಕಳವು ಹಾಗೂ ಸಾರ್ವಜನಿಕರ ಅಡ್ಡಗಟ್ಟಿ ಸುಲಿಗೆ ಮಾಡುತ್ತಿದ್ದ ಆರೋಪಿಯನ್ನು ವಿಲ್ಸನ್ ಗಾರ್ಡನ್ ಪೊಲೀಸರು ಬಂಧಿಸಿದ್ದಾರೆ.

ನಾಯಂಡಹಳ್ಳಿ ನಿವಾಸಿ ವಾಹೀದ್ ಖಾನ್(25) ಬಂಧಿತ.

ಆರೋಪಿಯಿಂದ ₹4.64 ಲಕ್ಷ ಮೌಲ್ಯದ ವಿವಿಧ ಕಂಪನಿಗಳ ಆರು ದ್ವಿಚಕ್ರ ವಾಹನಗಳು ಹಾಗೂ 10 ಮೊಬೈಲ್ ಜಪ್ತಿ ಮಾಡಲಾಗಿದೆ.

‘ನಗರದ ವಿವಿಧೆಡೆ ಸುತ್ತಾಡಿ ಮನೆ ಎದುರು ನಿಲುಗಡೆ ಮಾಡಿದ ದ್ವಿಚಕ್ರ ವಾಹನಗಳನ್ನು ರಾತ್ರಿ ವೇಳೆ ಹ್ಯಾಂಡಲ್ ಲಾಕ್ ಮುರಿದು ಕಳವು ಮಾಡಿ ಪರಾರಿಯಾಗುತ್ತಿದ್ದ. ಕದ್ದ ದ್ವಿಚಕ್ರ ವಾಹನಗಳನ್ನು ಪರಿಚಿತರ ಮೂಲಕ ಮಾರಾಟ ಮಾಡಿಸಿ ಹಣ ಪಡೆದು ಮೋಜುಮಸ್ತಿ ಮಾಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

ತಮಿಳುನಾಡು ಸರ್ಕಾರಿ ಬಸ್‌ಗೆ ಕಲ್ಲು ಎಸೆತ, ಗಾಜು ಪುಡಿ

ಬೆಂಗಳೂರು: ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣ ಸಮೀಪದ ಭಾರತ್ ಪೆಟ್ರೋಲ್ ಬಂಕ್ ಬಳಿ ಸೋಮವಾರ ತಡರಾತ್ರಿ ತಮಿಳುನಾಡಿನ ಸರ್ಕಾರಿ ಬಸ್ ಮೇಲೆ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದು, ಬಸ್‌ನ ಬಲಬದಿಯ ಕಿಟಕಿಯ ಗಾಜುಗಳು ಪುಡಿಯಾಗಿವೆ.

ಚಾಲಕ ಗುಣಶೇಖರನ್ ಅವರು ನೀಡಿದ ದೂರಿನ ಮೇರೆಗೆ ಚಾಮರಾಜಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದೇವೆ. ಸ್ಯಾಟಲೈಟ್ ಬಸ್ ನಿಲ್ದಾಣ, ಪೆಟ್ರೋಲ್ ಬಂಕ್, ಹೋಟೆಲ್‌ಗಳಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿದೆ. ಕಿಡಿಗೇಡಿಗಳು ಓಡಾಡಿದ ದೃಶ್ಯ ಸಿಕ್ಕಿದೆ’ ಎಂದು ಮೂಲಗಳು ತಿಳಿಸಿವೆ.

ಹಿರಿಯ ಅಧಿಕಾರಿಗಳಿಗೆ ಮಾಹಿತಿ: ಬಸ್ ಅನ್ನು ಡಿಪೊಗೆ ತಂದು ನಿಲುಗಡೆ ಮಾಡಿದ ಮೇಲೆ ಚಾಲಕ ಹಾಗೂ ನಿರ್ವಾಹಕ ಘಟನೆ ಕುರಿತು ತಮಿಳುನಾಡು ಸಾರಿಗೆ ಇಲಾಖೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಅವರ ಸೂಚನೆ ಮೇರೆಗೆ ಚಾಲಕ ದೂರು ನೀಡಿದ್ದಾರೆ ಎಂದು ತಿಳಿದುಬಂದಿದೆ.

‘ಸೋಮವಾರ ನಗರದಲ್ಲಿ ರಾಜ್ಯ ಖಾಸಗಿ ಸಾರಿಗೆ ಒಕ್ಕೂಟ ನಡೆಸಿದ್ದ ಬಂದ್ ವೇಳೆ ಹೊರರಾಜ್ಯದ ಖಾಸಗಿ ಹಾಗೂ ಸರ್ಕಾರಿ ಬಸ್ ನಿಲುಗಡೆ ಮಾಡುವ ಸ್ಥಳದಲ್ಲಿ ಹೆಚ್ಚಿನ ಭದ್ರತೆ ಕಲ್ಪಿಸಲಾಗಿತ್ತು. ಕೃತ್ಯಕ್ಕೆ ಕಾರಣ ತಿಳಿದುಬಂದಿಲ್ಲ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡಿಎಂಕೆ ನಾಯಕನ ಹತ್ಯೆಗೆ ಯತ್ನ: ಮತ್ತೆ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ಡಿಎಂಕೆ ನಾಯಕ ಗುರುಸ್ವಾಮಿ ಕೊಲೆ ಯತ್ನ ಪ್ರಕರಣದ ಮತ್ತಿಬ್ಬರು ಆರೋಪಿಗಳನ್ನು ಬಾಣಸವಾಡಿ ಪೊಲೀಸರು ತಮಿಳುನಾಡಿನಲ್ಲಿ ಮಂಗಳವಾರ ಬಂಧಿಸಿದ್ದಾರೆ.

ಮಧುರೈನ ವಿನೋದ್ ಕುಮಾರ್(20) ಮತ್ತು ಕಾರ್ತಿಕ್ ಅಲಿಯಾಸ್ ಪುಲಿಯುರು ಕಾರ್ತಿಕ್(28)ಬಂಧಿತರು.

ಇತ್ತೀಚೆಗೆ ಪ್ರಸನ್ನ ಎಂಬಾತನನ್ನು ಬಂಧಿಸಲಾಗಿತ್ತು. ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬಂಧಿಸಿದಂತಾಗಿದೆ. ಇತರೆ ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳು ಇತರೆ ಸಹಚರರ ಜತೆ ಸೇರಿಕೊಂಡು ಸೆ.4ರಂದು ಡಿಎಂಕೆ ನಾಯಕ ಹಾಗೂ ತಮಿಳುನಾಡಿನ ವಿವಿಧ ಪೊಲೀಸ್ ಠಾಣೆಗಳ ರೌಡಿಶೀಟರ್ ಗುರುಸ್ವಾಮಿ ಹತ್ಯೆಗೆ ಯತ್ನಿಸಿದ್ದರು.

ನಾಡಪ್ರಭು ಕೆಂಪೇಗೌಡರ ಕುರಿತ ವಿಚಾರಸಂಕಿರಣದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಗೌರವಿಸಲಾಯಿತು. ಕುಲಪತಿ ಜಯಕರ ಎಸ್.ಎಂ, ಕುಲಸಚಿವ ಷೇಕ್ ಲತೀಫ್, ಸಿ.ಶ್ರೀನಿವಾಸ್, ಹಣಕಾಸು ಅಧಿಕಾರಿ ಅಜಿತ್ ಕುಮಾರ್ ಹೆಗ್ಡೆ ಇದ್ದರು

ಕೆಂಪೇಗೌಡರ ಇತಿಹಾಸ ಅಧ್ಯಯನದ ಅಗತ್ಯ: ನಿರ್ಮಲಾನಂದನಾಥ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಡಪ್ರಭು ಕೆಂಪೇಗೌಡರ ವಿಚಾರಗಳನ್ನು ಪಠ್ಯದಲ್ಲೂ ಅಳವಡಿಸಿಲ್ಲ. ಬೆಂಗಳೂರು ನಗರದ ಕುರಿತು 500 ವರ್ಷದ ಹಿಂದೆಯೇ ದೂರದೃಷ್ಟಿ ಹೊಂದಿದ್ದ ವ್ಯಕ್ತಿಯ ಬಗ್ಗೆ ಇಂದಿನ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು’ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ನಗರದಲ್ಲಿ ಮಂಗಳವಾರ ನಡೆದ ‘ಯಲಹಂಕ ನಾಡಪ್ರಭುಗಳ ಪರಂಪರೆ: ರಣಭೈರೇಗೌಡರಿಂದ ಮುಮ್ಮಡಿ ಕೆಂಪವೀರಪ್ಪಗೌಡರ ವರೆಗಿನ’ ಕುರಿತು ನಡೆದ ರಾಷ್ಟ್ರೀಯ ವಿಚಾರಸಂಕಿರಣದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

‘ಬೆಂಗಳೂರು ಮಹಾನಗರ ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಇತಿಹಾಸ, ವಿಚಾರಗಳನ್ನು ಬೆಂಗಳೂರು ವಿ.ವಿ ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯ ಕೈಗೊಂಡಿರುವುದು ಶ್ಲಾಘನೀಯ’ ಎಂದು ಹೇಳಿದರು.

ಬೆಂಗಳೂರು ವಿ.ವಿ ಕುಲಪತಿ ಜಯಕರ ಎಸ್.ಎಂ., ‘ನಾಡಪ್ರಭು ಕೆಂಪೇಗೌಡರ ಬಗ್ಗೆ ನಾವೆಷ್ಟು ತಿಳಿದುಕೊಂಡರೂ ಕಡಿಮೆಯೇ. ಈ ವಿಚಾರಸಂಕಿರಣದಲ್ಲಿ ಮಂಡನೆಯಾದ ವಿಷಯಗಳಿಗೆ ಪುಸ್ತಕ ರೂಪ ನೀಡಬೇಕು. ಕೆಂಪೇಗೌಡರ ಬಗ್ಗೆ ಕನ್ನಡದಲ್ಲಿ ಮಾತ್ರ ಪುಸ್ತಕಗಳಿವೆ. ಅವುಗಳನ್ನು ಇಂಗ್ಲಿಷ್‌ಗೆ ಭಾಷಾಂತರ ಮಾಡಬೇಕು’ ಎಂದು ಹೇಳಿದರು.

‘ಹಿಸ್ಟರಿ ಆ್ಯಂಡ್ ಹೆರಿಟೇಜ್ ಆಫ್ ಬೆಂಗಳೂರು’ ಪುಸ್ತಕವನ್ನು ಈ ಬಿಡುಗಡೆಗೊಳಿಸಲಾಯಿತು.

ನಿರ್ಮಲಾನಂದನಾಥ ಸ್ವಾಮೀಜಿ ಅವರು ವಿಶ್ವವಿದ್ಯಾಲಯ ಆವರಣದಲ್ಲಿ ಕೆಂಪೇಗೌಡ ಅಧ್ಯಯನ ಪೀಠ ಕಟ್ಟಡದ ಕಾಮಗಾರಿಯನ್ನು ವೀಕ್ಷಿಸಿದರು.

ವಿಷ ಕುಡಿದ ಪ್ರೇಮಿಗಳು: ಯುವಕ ಸಾವು, ಬಾಲಕಿ ಪರಿಸ್ಥಿತಿ ಗಂಭೀರ

ಕನಕಪುರ: ಮೂರು ದಿನದ ಹಿಂದೆ ನಾಪತ್ತೆಯಾಗಿದ್ದ ತಾಲ್ಲೂಕಿನ ಚಾಮುಂಡಿಪುರದ ಪ್ರೇಮಿಗಳಿಬ್ಬರು ಮಂಗಳವಾರ ಬೆಳಗ್ಗೆ ತಮಿಳನಾಡಿನ ಹೊಗೇನೆಕಲ್ ಜಲಪಾತದ ಬಳಿ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಘಟನೆಯಲ್ಲಿ ಯುವಕ ಉಮೇಶ್ (23) ಕೊನೆಯುಸಿರೆಳೆದಿದ್ದು, ಬಾಲಕಿ ಸಾವು-ಬದುಕಿನ ನಡುವೆ ಹೋರಾಡುತ್ತಿದ್ದಾಳೆ.

ಇರುಳಿಗ ಸಮುದಾಯದ ಉಮೇಶ್ ಹಾಗೂ ಲಂಬಾಣಿ ಸಮುದಾಯದ ಬಾಲಕಿ ಒಂದೇ ಗ್ರಾಮದವರಾಗಿದ್ದು, ಪರಸ್ಪರ ಪ್ರೀತಿಸುತ್ತಿದ್ದರು. ಬಾಲಕಿ ಪಿಯು ವಿದ್ಯಾರ್ಥಿನಿ. ಸೆ. 9ರಿಂದ ಇಬ್ಬರೂ ನಾಪತ್ತೆಯಾಗಿದ್ದರು. ಬಾಲಕಿ ಕುಟುಂಬದವರು ಕೋಡಿಹಳ್ಳಿ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು.

ಹೊಗೇನೆಕಲ್ ಜಲಪಾತದ ಬಳಿ ಪ್ರೇಮಿಗಳಿಬ್ಬರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಅಲ್ಲಿಗೆ ಹೋಗಿ ಪರಿಶೀಲಿಸಿದಾಗ ಇಬ್ಬರೂ ಚಾಮುಂಡಿಪುರದವರು ಎಂಬುದು ಖಚಿತವಾಯಿತು.

ಆಸ್ಪತ್ರೆಗೆ ಸಾಗಿಸುವಾಗ ಉಮೇಶ್ ಮೃತಪಟ್ಟಿದ್ದಾರೆ. ಅಸ್ವಸ್ಥಗೊಂಡ ಯುವತಿಗೆ ಧರ್ಮಪುರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಬೆಂಗಳೂರಿನ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

‘ಸೈಬರ್ ವಂಚಕರಿಂದ ದೂರವಿರಲು ದಿನಕ್ಕೊಂದು ಸೈಬರ್ ಸಲಹೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿನದಿಂದ ದಿನಕ್ಕೆ ಸೈಬರ್ ವಂಚನೆ ಪ್ರಕರಣ ಹೆಚ್ಚುತ್ತಿವೆ. ಈ ಸೈಬರ್ ವಂಚಕರ ಹಾವಳಿಯಿಂದ ಜನರು ಪಾರಾಗುವುದು ಹೇಗೆಂದು ಜಾಗೃತಿ ಮೂಡಿಸಲು ನಗರ ಪೊಲೀಸ್ ಇಲಾಖೆ ವಿನೂತನ ಪ್ರಯತ್ನ ಆರಂಭಿಸಿದೆ.

‘ಸೈಬರ್ ವಂಚಕರಿಂದ ದೂರವಿರಲು, ದಿನಕ್ಕೊಂದು ಸೈಬರ್ ಸಲಹೆ’ ಅಭಿಯಾನ ಆರಂಭಿಸಲಾಗಿದೆ.



ದಯಾನಂದ್

ಪ್ರತಿನಿತ್ಯ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರೇ ಸಲಹೆ ನೀಡಲಿದ್ದಾರೆ. ಧ್ವನಿ ರೂಪದಲ್ಲಿ ಅದು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾಗಲಿದೆ.

‘ರಾಜ್ಯ ಹಾಗೂ ದೇಶದಲ್ಲಿ ಸೈಬರ್ ಅಪರಾಧ ಸಂಖ್ಯೆ ಏರಿಕೆಯಾಗುತ್ತಿದೆ. ಅಂಕಿಅಂಶಗಳ ಪ್ರಕಾರ ದೇಶದ ಪ್ರತಿ ಮೂರನೇ ವ್ಯಕ್ತಿ ಒಂದಲ್ಲ ಒಂದು ರೀತಿಯಲ್ಲಿ ಸೈಬರ್ ವಂಚನೆಗೆ ಒಳಗಾಗುತ್ತಿದ್ದಾನೆ. ಸೈಬರ್ ವಂಚನೆಗೆ ಒಳಗಾಗಿ ದುಡಿಮೆಯ ಹಣ ಕಳೆದುಕೊಳ್ಳುವ ಪರಿಸ್ಥಿತಿಯಿದೆ. ಸೈಬರ್ ವಂಚನೆ ಯಿಂದ ದೂರ ಉಳಿಯಬೇಕಿದ್ದರೆ ಜನರಿಗೆ ತಿಳಿವಳಿಕೆ ಅಗತ್ಯ’ ಎಂದು ಅವರು ತಿಳಿಸಿದ್ದಾರೆ.

‘ಸೈಬರ್ ಅಪರಾಧಗಳಿಗೆ ತಿಲಾಂಜಲಿ ಹೇಳಬೇಕಿದೆ. ಪೊಲೀಸರು ನೀಡುವ ಸಲಹೆ ಅನುಸರಿಸಿ ಸೈಬರ್ ವಂಚಕರಿಂದ ಪಾರಾಗಿ’ ಎಂದು ನಾಗರಿಕರಲ್ಲಿ ಕೋರಿದ್ದಾರೆ.

ಗುರಿ ಮೀರಿದ ನೋಂದಣಿ

ಮಡಿಕೇರಿ: ಅಂತರರಾಷ್ಟ್ರೀಯ ಪ್ರಜಾ ಪ್ರಭುತ್ವ ದಿನಾಚರಣೆ ಪ್ರಯುಕ್ತ ಸೆ. 15ರಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿರುವ ‘ಸಂವಿಧಾನ ಪೀಠಿಕೆ ವಾಚನ’ ಕಾರ್ಯಕ್ರಮಕ್ಕೆ ಕೊಡಗು ಜಿಲ್ಲೆಯಿಂದ ಅಭೂತಪೂರ್ವವಾದ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸರ್ಕಾರ ನಿಗದಿಪಡಿಸಿದ್ದು 54 ಸಾವಿರ ಗುರಿ. ಆದರೆ, ನೋಂದಣಿ ಮಾಡಿಕೊಂಡಿರುವುದು 2 ಲಕ್ಷಕ್ಕೂ ಅಧಿಕ ಮಂದಿ.

ಈ ಕುರಿತು ಇಲ್ಲಿ ವಿವಿಧ ಸಮಾಜಗಳ ಮುಖಂಡರ ಜೊತೆ ಮಂಗಳವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶೇಖರ್ ಈ ಮಾಹಿತಿ ನೀಡಿದರು.

ವಿಚ್ಛೇದಿತ ಪತ್ನಿ, ಮಾವನ ಬರ್ಬರ ಹತ್ಯೆ: ಬಂಧನ

ಸಿಲಿಂಡರ್ ಬ್ಲಾಸ್ಟ್ ಮಾಡುವ ಬೆದರಿಕೆ • ಆರೋಪಿಯ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ (ಕೋಲಾರ): ತಾಲ್ಲೂಕಿನ ನಂಬಿಹಳ್ಳಿ ಗ್ರಾಮದಲ್ಲಿ ಮಂಗಳವಾರ ಮಾಂಸದ ವ್ಯಾಪಾರಿಯೊಬ್ಬ ತನ್ನ ವಿಚ್ಛೇದಿತ ಪತ್ನಿ ಹಾಗೂ ಆಕೆಯ ತಂದೆಯನ್ನು ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿದ್ದಾನೆ.

ರಾಧಾ (32) ಮತ್ತು ಆಕೆಯ ತಂದೆ ಮುನಿಯಪ್ಪ (60) ಕೊಲೆಯಾದವರು. ಶ್ರೀನಿವಾಸಪುರದ ಮಾಂಸದ ವ್ಯಾಪಾರಿ ನಾಗೇಶ (40) ಕೊಲೆ ಆರೋಪಿ. ಕೊಲೆಗೆ ಕಾರಣ ತಿಳಿದು ಬಂದಿಲ್ಲ.

ಶ್ರೀನಿವಾಸಪುರದಿಂದ ನಂಬಿಹಳ್ಳಿಗೆ ಬಂದ ನಾಗೇಶ, ಅಂಗಡಿಯಲ್ಲಿ ಕುಳಿತಿದ್ದ ಮೊದಲ ಪತ್ನಿ ರಾಧಾ ಮತ್ತು ಮಾವನ ತಲೆಗೆ ಮಚ್ಚಿನಿಂದ ಹೊಡೆದು ಕೊಲೆ ಮಾಡಿದ್ದಾನೆ. ರಾಧಾ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಮುನಿಯಪ್ಪ ಶ್ರೀನಿವಾಸಪುರ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ.

ಹಲ್ಲೆ ತಡೆಯಲು ಬಂದ ರಾಧಾ ಅಣ್ಣನ ಹೆಂಡತಿ ಅನುಷಾ (26) ಅಣ್ಣನ ಮಗ ವರುಣ್ (16) ಗಾಯಗೊಂಡಿದ್ದಾರೆ.

ಮೊದಲ ಪತ್ನಿ ರಾಧಾಗೆ ವಿಚ್ಛೇದನ ನೀಡಿದ್ದ ನಾಗೇಶ, ನ್ಯಾಯಾಲಯದ ಆದೇಶದಂತೆ ಆಕೆಗೆ ಜೀವನಾಂಶ ನೀಡುತ್ತಿದ್ದ. ಎರಡನೇ ಪತ್ನಿಯೊಂದಿಗೆ ಶ್ರೀನಿವಾಸಪುರದಲ್ಲಿ ವಾಸವಾಗಿದ್ದ. ಮಾಂಸದ ಅಂಗಡಿ ಇಟ್ಟುಕೊಂಡಿದ್ದ. ರಾಧಾ ಮತ್ತು ಆಕೆಯ ತಂದೆ ಜೀವನ ನಿರ್ವಹಣೆಗಾಗಿ ಪುಟ್ಟದೊಂದು ಅಂಗಡಿ ಇಟ್ಟುಕೊಂಡಿದ್ದರು. ಅಂಗಡಿಯಲ್ಲಿ ಕುಳಿತಿರುವಾಗಲೇ ರಾಧಾ ಮೇಲೆ ನಾಗೇಶ ಹಲ್ಲೆ ನಡೆಸಿದ್ದಾನೆ.

ಆರೋಪಿಯನ್ನು ಹಿಡಿಯಲು ಗ್ರಾಮಸ್ಥರು ದೊಣ್ಣೆಗಳೊಂದಿಗೆ ಸ್ಥಳಕ್ಕೆ ಹೋದಾಗ ಆರೋಪಿ ಮನೆಯೊಂದರಲ್ಲಿ ಸೇರಿಕೊಂಡಿದ್ದಾನೆ. ಕೈಯಲ್ಲಿ ಬೆಂಕಿಪೊಟ್ಟಣ ಹಿಡಿದು ಯಾರಾದರೂ ಮುಂದೆ ಬಂದರೆ ಗ್ಯಾಸ್ ಸೋರಿಕೆ ಮಾಡಿ ಸಿಲಿಂಡರ್ ಬ್ಲಾಸ್ಟ್ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ.

ಆರೋಪಿ ಕಾಲಿಗೆ ಗುಂಡು: ವಿಷಯ ತಿಳಿದು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಬಂದ ಪೊಲೀಸರು ಮನೆಯಲ್ಲಿ ಅವಿತು ಕುಳಿತಿದ್ದ ಆರೋಪಿಗೆ ಶರಣಾಗಲು ಸೂಚಿಸಿದರು. ಆದರೆ, ಆರೋಪಿ ಮಾರಕಾಸ್ತ್ರಗಳಿಂದ ಪೊಲೀಸರ ಮೇಲೆ ದಾಳಿ ಮಾಡಲು ಯತ್ನಿಸಿದಾಗ ಪೊಲೀಸರು ಆರೋಪಿ ಕಾಲಿಗೆ ಗುಂಡು ಹಾರಿಸಿದರು. ಕೆಳಗೆ ಬಿದ್ದ ಆತನನ್ನು ಪೊಲೀಸರು ವಶಕ್ಕೆ ಪಡೆದರು.

ಶ್ರೀನಿವಾಸಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾವೇರಿ ನೀರಿಗಾಗಿ ಸುಪ್ರೀಂ ಕೋರ್ಟ್‌ಗೆ ಮೊರೆ: ತಮಿಳುನಾಡು ಸರ್ಕಾರ

ಮುಖ್ಯಾಂಶಗಳು
- ಆಕ್ರೋಶ ವ್ಯಕ್ತಪಡಿಸಿದ ತಮಿಳುನಾಡು ಸರ್ಕಾರ
- ಉಪಮುಖ್ಯಮಂತ್ರಿ ಶಿವಕುಮಾರ್ ಹೇಳಿಕೆಗೆ ಅಸಮಾಧಾನ

ಚೆನ್ನೈ(ಪಿಟಿಐ): ‘ತಮಿಳುನಾಡಿಗೆ ಹರಿಸಲು ನೀರೆಲ್ಲಿದೆ?’ ಎಂಬ ಕರ್ನಾಟಕದ ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಮಾತಿಗೆ ತಮಿಳುನಾಡು ಸರ್ಕಾರ ಮಂಗಳವಾರ ಆಕ್ರೋಶ ವ್ಯಕ್ತಪಡಿಸಿದೆ. ಅಂತರರಾಜ್ಯ ನದಿ ನೀರಿನ ಹಂಚಿಕೆಯ ಖಾತ್ರಿಗಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗುವುದಾಗಿ ಹೇಳಿದೆ.

ಕರ್ನಾಟಕದಿಂದ ತಮಿಳುನಾಡಿಗೆ ಸೆ. 13ರಿಂದ ಹದಿನೈದು ದಿನಗಳವರೆಗೆ ಪ್ರತಿದಿನ 5 ಸಾವಿರ ಕ್ಯೂಸೆಕ್‌ನಷ್ಟು (ಅರ್ಧ ಟಿಎಂಸಿ ಅಡಿ) ನೀರನ್ನು ಬಿಡಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಮಂಗಳವಾರ ಶಿಫಾರಸು ಮಾಡಿತು.

ಡಿಕೆಶಿ ಪ್ರತಿಕ್ರಿಯೆಗೆ ಆಕ್ರೋಶ ವ್ಯಕ್ತಪಡಿಸಿರುವ ತಮಿಳುನಾಡು ಜಲಸಂಪನ್ಮೂಲ ಸಚಿವ ದೊರೈಮುರುಗನ್, ‘ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪು ಮತ್ತು ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಕೊರತೆಯ ವರ್ಷಗಳಲ್ಲಿ ಸಂಬಂಧಪಟ್ಟ ರಾಜ್ಯಗಳ ನಡುವೆ ನೀರು ಹಂಚಿಕೆಯಾಗಬೇಕು. ಸಿಡಬ್ಲ್ಯುಆರ್‌ಸಿ ಮತ್ತು ಕಾವೇರಿ ನದಿ ನಿರ್ವಹಣಾ ಪ್ರಾಧಿಕಾರವು ಮಳೆ ಕೊರತೆ ಮತ್ತು ಅಣೆಕಟ್ಟುಗಳಲ್ಲಿನ ಸಂಗ್ರಹಣೆಯ ಆಧಾರದ ಮೇಲೆ ಬಿಡುಗಡೆ ಮಾಡಬೇಕಾದ ನೀರಿನ ಪ್ರಮಾಣವನ್ನು ಲೆಕ್ಕಾಚಾರ ಮಾಡುತ್ತಿದೆ. ನೀರು ಬಿಡುವಂತೆ ಕರ್ನಾಟಕಕ್ಕೆ 15 ದಿನಗಳಿಗೊಮ್ಮೆ ನಿರ್ದೇಶನ ನೀಡಲಾಗುತ್ತಿದೆ. ಅದೂ ಸೂಚಿತ ಪ್ರಮಾಣಕ್ಕಿಂತಲೂ ಕಡಿಮೆ. ಅದನ್ನೂ ಹರಿಸಲು ಕರ್ನಾಟಕ ನಿರಾಕರಿಸುತ್ತಿರುವುದು ಆಘಾತಕಾರಿ ಬೆಳವಣಿಗೆ’ ಎಂದು ಹೇಳಿದ್ದಾರೆ.

ತಮಿಳುನಾಡಿಗೆ 5,000 ಕ್ಯೂಸೆಕ್ ನೀರು ಹರಿಸುವಂತೆ ಕರ್ನಾಟಕಕ್ಕೆ ಹೇಳಿದ ಸಿಡಬ್ಲ್ಯುಆರ್‌ಸಿಯ ಮಂಗಳವಾರದ ಶಿಫಾರಸನ್ನು ಉಲ್ಲೇಖಿಸಿದ ಅವರು, ‘ಕೊರತೆಯ ಅನುಪಾತವನ್ನು ಲೆಕ್ಕ ಹಾಕಿದರೆ ಇದು ನಮಗೆ ಸಿಗಬೇಕಾದ ಪಾಲಿನಲ್ಲಿ ಕಡಿಮೆ ಪ್ರಮಾಣದ್ದಾಗಿದೆ’ ಎಂದಿದ್ದಾರೆ.

‘ನೀರು ಹರಿಸಲು ಸಾಧ್ಯವಿಲ್ಲ ಎಂಬ ಕರ್ನಾಟಕದ ಸಚಿವ ಡಿ.ಕೆ ಶಿವಕುಮಾರ್ ಅವರ ಹೇಳಿಕೆ ಯಾವುದೇ ರೀತಿಯಲ್ಲೂ ನ್ಯಾಯಸಮ್ಮತವಲ್ಲ. ಕರ್ನಾಟಕವು ಕುಡಿಯುವ ನೀರಿನ ನೆಪ ಮುಂದಿಟ್ಟು ನೀರು ಹರಿಸುವುದನ್ನು ನಿರಾಕರಿಸುವ ಮೂಲಕ ತಮಿಳುನಾಡಿನ ರೈತರಿಗೆ ದ್ರೋಹ ಮಾಡುತ್ತಿದೆ. ನಮ್ಮ ರೈತರಿಗೆ ಅನ್ಯಾಯವಾಗುವುದಕ್ಕೆ ನಾವು ಬಿಡುವುದಿಲ್ಲ. ನೀರಿನ ಖಾತ್ರಿಗಾಗಿ ಸುಪ್ರೀಂ ಕೋರ್ಟ್‌ಗೆ ಹೋಗುತ್ತೇವೆ’ ಎಂದೂ ದೊರೈಮುರುಗನ್ ತಿಳಿಸಿದ್ದಾರೆ.

ಹೆಚ್ಚುವರಿಯಾಗಿ 12 ಸಾವಿರ ಬಸ್‌ಗಳು ಅಗತ್ಯ: ರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ರಾಜ್ಯದ ಈಗಿರುವ ಜನಸಂಖ್ಯೆಗೆ ಹೆಚ್ಚುವರಿಯಾಗಿ ಇನ್ನೂ 12 ಸಾವಿರ ಬಸ್‌ಗಳು ಅಗತ್ಯ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೌಕರರ ಕ್ಷೇಮಾಭಿವೃದ್ಧಿ ಸಂಘ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಬಿ.ಆರ್. ಅಂಬೇಡ್ಕರ್ ಅವರ ಜಯಂತ್ಯುತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ‘ಕೋವಿಡ್ ಸೇರಿ ವಿವಿಧ ಕಾರಣಗಳಿಂದ ಸಾರಿಗೆ ಸಂಸ್ಥೆಗಳಿಗೆ ಕಳೆದ ವರ್ಷ ₹ 3,300 ಕೋಟಿ ನಷ್ಟವಾಗಿದೆ’ ಎಂದು ತಿಳಿಸಿದರು.

‘ಖಾಸಗಿ ಸಂಸ್ಥೆಗಳಿಗೆ ನಷ್ಟವಾದರೆ ಬಸ್‌ಗಳನ್ನು ಓಡಿಸುವುದಿಲ್ಲ. ನಮ್ಮ ಸಂಸ್ಥೆಗಳು ಪ್ರತಿ ಹಳ್ಳಿಗೆ ಸಂಪರ್ಕ ಕಲ್ಪಿಸಬೇಕೆಂಬ ಉದ್ದೇಶದಿಂದ ನಷ್ಟವಾದರೂ ಬಸ್‌ಗಳನ್ನು ಓಡಿಸುತ್ತಿವೆ. ಇದರಿಂದಾಗಿ ಕೆಎಸ್ಆರ್‌ಟಿಸಿ ಹಾಗೂ ಬಿಎಂಟಿಸಿ ದೇಶದಲ್ಲಿಯೇ ಉತ್ತಮವಾದ ಸಾರಿಗೆ ಸಂಸ್ಥೆಗಳೆಂಬ ಹಿರಿಮೆಗೆ ಭಾಜನವಾಗಿವೆ. ಇದಕ್ಕೆ ನೌಕರರ ಪರಿಶ್ರಮವೂ ಕಾರಣ’ ಎಂದು ಹೇಳಿದರು.

ಸಮಾರಂಭದಲ್ಲಿ ವಿಧಾನ ಪರಿಷತ್ತಿನ ನೂತನ ಸದಸ್ಯ ಎಚ್.ಪಿ. ಸುಧಾಮ್ ದಾಸ್ ಅವರನ್ನು ಸನ್ಮಾನಿಸಲಾಯಿತು. ಲೇಖಕಿ ಬಿ.ಟಿ. ಲಲಿತಾ ನಾಯಕ್, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಾಹಿತಿ ತಂತ್ರಜ್ಞಾನ ವಿಭಾಗದ ನಿರ್ದೇಶಕಿ ಆರ್. ಸ್ನೇಹಲ್, ಸಚಿವ ರಾಮಲಿಂಗಾರೆಡ್ಡಿ, ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್ ಮತ್ತು ಚಿಕ್ಕತಿಮ್ಮಯ್ಯ ಇದ್ದಾರೆ —ಪ್ರಜಾವಾಣಿ ಚಿತ್ರ

‘ಸಾರಿಗೆ ಸಂಸ್ಥೆಗಳಿಗೆ 2016ರ ಬಳಿಕ ನೇಮಕಾತಿ ನಡೆದಿಲ್ಲ. ಸುಮಾರು 13 ಸಾವಿರ ಮಂದಿ ನಿವೃತ್ತರಾಗಿದ್ದಾರೆ. ಈಗ ಆ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸಲಾಗುವುದು. 4–5 ವರ್ಷಗಳಿಂದ ಬಸ್‌ಗಳ ಖರೀದಿಯೇ ನಡೆದಿಲ್ಲ. ಈಗ ₹ 500 ಕೋಟಿಯಲ್ಲಿ ಬಸ್‌ಗಳ ಖರೀದಿ ಪ್ರಕ್ರಿಯೆ ನಡೆಯುತ್ತಿದೆ’ ಎಂದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೌಕರರ ಬೇಡಿಕೆಗಳು ಗಮನದಲ್ಲಿದ್ದು, ಸಾರಿಗೆ ಸಂಸ್ಥೆಗಳ ಪರಿಸ್ಥಿತಿ ಸುಧಾರಿಸಿದ ಬಳಿಕ ಈಡೇರಿಸಲಾಗುವುದು’ ಎಂದು ಭರವಸೆ ನೀಡಿದರು.

ಇದಕ್ಕೂ ಮೊದಲು ಮಾತನಾಡಿದ ಸಂಘದ ಅಧ್ಯಕ್ಷ ಚಿಕ್ಕತಿಮ್ಮಯ್ಯ, ‘ಸಂಸ್ಥೆಯ ಧಾರ್ಮಿಕ ಹಬ್ಬಗಳ ಪಟ್ಟಿಯಲ್ಲಿರುವ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ರಾಷ್ಟ್ರೀಯ ಹಬ್ಬಗಳ ಸಾಲಿನಲ್ಲಿ ಸೇರಿಸಬೇಕು. 2021ರ ಏಪ್ರಿಲ್‌ನಲ್ಲಿ ನಡೆದ ಮುಷ್ಕರದ ಅವಧಿಯಲ್ಲಿ ವಜಾಗೊಂಡ ಸುಮಾರು 1495 ನೌಕರರಿಗೆ ನೀಡಿರುವ ಶಿಕ್ಷೆಯನ್ನು ವಾಪಸ್ ಪಡೆಯಬೇಕು. ಪುನರ್ ನೇಮಕ ಮಾಡಿಕೊಳ್ಳುವಾಗ ಕೆಲವೊಂದು ನಿಯಮ ರೂಪಿಸಿ, ಆದೇಶಿಸಲಾಗಿದೆ. ವಾರ್ಷಿಕ ಬಡ್ತಿ ಮುಂದೂಡಿಕೆ ಸೇರಿ ವಿಧಿಸಿರುವ ವಿವಿಧ ಶಿಕ್ಷೆಗಳನ್ನು ತೆರವುಗೊಳಿಸಬೇಕು. ನೌಕರರ ಮೇಲೆ ಹಾಕಿರುವ ಮೊಕದ್ದಮೆಗಳನ್ನು ವಾಪಸ್ ಪಡೆದು, ಪುನರ್ ನೇಮಕ ಮಾಡಬೇಕು. ನೌಕರರಿಗೆ ನಗದು ರಹಿತ ಆರೋಗ್ಯ ವಿಮೆ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು’ ಎಂದು ಮನವಿ ಮಾಡಿಕೊಂಡರು.

‘ನಿಪಾ ಸೋಂಕು ಆತಂಕ ಬೇಡ’

ಮಂಗಳೂರು: ಕೇರಳದ ಕೊಯಿಕ್ಕೋಡ್ ಜಿಲ್ಲೆಯಲ್ಲಿ ನಿಪಾ ವೈರಸ್ ಸೋಂಕಿನಿಂದ ಇಬ್ಬರು ಮೃತಪಟ್ಟಿರುವುದು ಖಚಿತವಾಗುತ್ತಿದ್ದಂತೆಯೇ, ನೆರೆಯ ರಾಜ್ಯದಿಂದ ಜಿಲ್ಲೆಗೆ ಸೋಂಕು ಹರಡುವುದನ್ನು ತಡೆಯಲು ದಕ್ಷಿಣ ಕನ್ನಡ ಜಿಲ್ಲಾಡಳಿತ ಮುನ್ನೆಚ್ಚರಿಕಾ ಕ್ರಮ ಅನುಸರಿಸಲು ಮುಂದಾಗಿದೆ.

‘ನಿಪಾ ಸೋಂಕು ಹರಡುವುದನ್ನು ತಡೆಯಲು ಸಿದ್ಧತೆ ನಡೆದಿದೆ. ಈ ರೋಗ ಹರಡದಂತೆ ತಡೆಯಲು ಸಾರ್ವಜನಿಕರು ಏನೆಲ್ಲ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಆರೋಗ್ಯ ಇಲಾಖೆಯ ಮಾರ್ಗಸೂಚಿಯನ್ನು ಎದುರು ನೋಡುತ್ತಿದ್ದೇವೆ. ನಾಳೆ ಈ ಬಗ್ಗೆ ಆರೋಗ್ಯ ಅಧಿಕಾರಿಗಳ ವಿಶೇಷ ಸಭೆಯನ್ನು ಕರೆಯಲಾಗಿದೆ’ ಎಂದು ಡಿಎಚ್‌ಒ ಡಾ.ಸುದರ್ಶನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಿಪಾ ವೈರಾಣುವಿನ ಸೋಂಕಿನಿಂದ ಜ್ವರ ಕಾಣಿಸಿಕೊಳ್ಳುತ್ತದೆ. ಇದರ ಬಗ್ಗೆ ಜನರು ಆತಂಕಪಡ ಬೇಕಿಲ್ಲ. ಈ ರೋಗ ಕಾಣಿಸಿಕೊಂಡರೂ, ಚಿಕಿತ್ಸೆ ಒದಗಿಸಲು ಆರೋಗ್ಯ ಇಲಾಖೆ ಸಿದ್ಧತೆ ಮಾಡಿಕೊಂಡಿದೆ’ ಎಂದು ಅವರು ತಿಳಿಸಿದರು.

ತ್ಯಾಜ್ಯ ವಿಲೇವಾರಿಗೆ ಸಮರ್ಪಕ ಜಾಗದ ಕೊರತೆ

ರಸ್ತೆಯ ಇಕ್ಕೆಲಗಳಲ್ಲಿ ಕಸದ ರಾಶಿ

• ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿ ಸಮರ್ಪಕ ತ್ಯಾಜ್ಯ ವಿಲೇವಾರಿಯಾಗದ ಕಾರಣ ರಸ್ತೆಯ ಸುತ್ತ–ಮುತ್ತ ಎಲ್ಲೆಂದರಲ್ಲೇ ರಾಶಿಗಟ್ಟಲೇ ಕಸ ಹಾಕಲಾಗಿದ್ದು, ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದೆ.

ಗಣಪತಿನಗರದಿಂದ ತಮ್ಮೇನಹಳ್ಳಿಗೆ ಸಂಪರ್ಕಿಸುವ ರಸ್ತೆ, ಹೆಸರಘಟ್ಟ ಮುಖ್ಯರಸ್ತೆ, ಆಚಾರ್ಯ ಕಾಲೇಜು ರಸ್ತೆ, ಎನ್.ಆರ್.ಆರ್ ಕಾಲೇಜು ರಸ್ತೆ, ಅಬ್ಬಿಗೆರೆ ಮುಖ್ಯರಸ್ತೆ, ದ್ವಾರಕಾನಗರ, ನಂದಿನಗರ, ಮಾರುತಿನಗರ, ಕೆರೆಗುಡ್ಡದಹಳ್ಳಿ ರಸ್ತೆಗಳ ಇಕ್ಕೆಲ್ಲಗಳಲ್ಲಿ ಕಸದ ರಾಶಿ ಬಿದ್ದಿದ್ದೆ. ಮಳೆ ಬಂದರೆ ತ್ಯಾಜ್ಯವೆಲ್ಲ ಕೊಳೆತು ದುರ್ನಾತ ಬೀರುತ್ತಿದೆ.

ಇದರಿಂದಾಗಿ, ಸೊಳ್ಳೆಗಳು ಮತ್ತು ನೊಣಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದ್ದು, ಸ್ಥಳೀಯರಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಶುರುವಾಗಿದೆ. ಬೀಡಾಡಿ ದನ ಮತ್ತು ನಾಯಿಗಳು ಈ ಕಸವನ್ನು ರಸ್ತೆ ಹರಡಿ ಪರಿಸರವನ್ನು ಹಾಳು ಮಾಡುತ್ತಿವೆ.

ರೈಲ್ವೆ ಕೆಳಸೇತುವೆ ರಸ್ತೆಯಿಂದ ಶ್ರೀಕೃಷ್ಣ ಕಾಲೇಜಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ಇಕ್ಕೆಲಗಳಲ್ಲಿ ಬಿದ್ದಿರುವ ಕಸ

‘ಕಳೆದ ಹಲವಾರು ವರ್ಷಗಳಿಂದ ಈ ಭಾಗದಲ್ಲಿ ಕಸದ ಸಮಸ್ಯೆ ಬಗೆಹರಿದಿಲ್ಲ. ಪುರಸಭೆ ಅಧಿಕಾರಿಗಳು ಯಾವುದೇ ಕ್ರಮಕೈಗೊಳ್ಳದೆ ಜಾಣ ಕುರುಡರಂತೆ ವರ್ತಿಸುತ್ತಿದ್ದಾರೆ. ಸಾರ್ವಜನಿಕರು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವ ಮುನ್ನ ತ್ಯಾಜ್ಯ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು’ ಎಂದು ಸ್ಥಳೀಯ ನಿವಾಸಿ ಎಂ.ಎಚ್. ಪಾಟೀಲ್ ಆಗ್ರಹಿಸಿದರು.

‘ಪುರಸಭೆ ವ್ಯಾಪ್ತಿಯಲ್ಲಿ ಕಸ ಹಾಕಲು ಸರಿಯಾದ ಜಾಗವಿಲ್ಲ. ಲಭ್ಯವಿದ್ದ ಸರ್ಕಾರಿ ಜಾಗವನ್ನು ಬಿಡಿಎ ತೆಗೆದುಕೊಂಡಿದೆ. ಈ ಭಾಗದಲ್ಲಿ ಪ್ರತಿದಿನ ಸುಮಾರು 20 ಟನ್ ಕಸ ಉತ್ಪತ್ತಿಯಾಗುತ್ತದೆ. ಆದರೆ, ನಾವು 10 ಟನ್ ಕಸವನ್ನು ಮಾತ್ರ ದೊಡ್ಡಬಳ್ಳಾಪುರಕ್ಕೆ ಕಳಿಸುತ್ತಿದ್ದೇವೆ. ಭಾನುವಾರ ಕಸ ವಿಲೇವಾರಿಯಾಗುವುದಿಲ್ಲ’ ಎಂದು ಪುರಸಭೆ ಮುಖ್ಯಾಧಿಕಾರಿ ಎಚ್.ಎ. ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಆಲೂರು ಪಂಚಾಯಿತಿ ವ್ಯಾಪ್ತಿಯಲ್ಲಿ ಎರಡು ಎಕರೆ ಜಾಗವನ್ನು ಜಿಲ್ಲಾಧಿಕಾರಿ ಮಂಜೂರು ಮಾಡಿದ್ದರು. ಅದು ಯಲಹಂಕ ವ್ಯಾಪ್ತಿಗೆ ಬರುವುದರಿಂದ ನಮಗೆ ನೀಡಲು ವಿರೋಧ ವ್ಯಕ್ತಪಡಿಸಿದರು. ಇತ್ತೀಚೆಗೆ ಮಳೆ ಸುರಿದಾಗ ಕಸ ವಿಲೇವಾರಿ ಮಾಡಲು ಕಷ್ಟವಾಗುತ್ತಿದೆ. ನಮ್ಮಲ್ಲೇ ಸ್ಥಳಾವಕಾಶ ಇದ್ದಿದ್ದರೆ ಈ ರೀತಿ ಕಸ ಬೀಳುತ್ತಿರಲಿಲ್ಲ. ಕೂಡಲೇ ಕಸದ ಸಮಸ್ಯೆಗೆ ನಿವಾರಣೆ ಮಾಡಲಾಗುವುದು’ ಎಂದು ಹೇಳಿದರು.

ಅಯೋಧ್ಯೆ ಅರ್ಚಕರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ: ಸಚಿವ ಉದಯನಿಧಿ ಮಾರನ್ ತಲೆಗೆ ₹10 ಕೋಟಿ ನೀಡುವುದಾಗಿ ಪ್ರಚೋದನಕಾರಿ ಹೇಳಿಕೆ ನೀಡಿರುವ ಅಯೋಧ್ಯೆ ಅರ್ಚಕ ಪರಮಹಂಸ ಆಚಾರ್ಯ ಸ್ವಾಮೀಜಿ ವಿರುದ್ಧ ಇಲ್ಲಿನ ಸರ್ಕಾರಿ ಅಧಿನಿಯಮಗಳ ಜಾರಿಗಾಗಿ ಕಾವಲು ಸಮಿತಿ ಸದಸ್ಯರು ಹಾಗೂ ಮುಖಂಡರು ನಗರ ಪೊಲೀಸ್ ಠಾಣೆಗೆ ಮಂಗಳವಾರ ದೂರು ನೀಡಿದ್ದಾರೆ.

ತಮಿಳುನಾಡಿನ ಸಚಿವ ಉದಯ ನಿಧಿ ಸ್ಟಾಲಿನ್ ಸಾಹಿತಿಗಳ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿ, ‘ಸನಾತನ ಧರ್ಮ ವಿರೋಧಿಸುವುದು ಮಾತ್ರವಲ್ಲ. ಅದು ಮಲೇರಿಯಾ, ಡೆಂಗಿ, ಕೊರೊನಾ ರೋಗದಂತೆ ಸರ್ವನಾಶ ಮಾಡಬೇಕು’ಎಂದಿದ್ದರು.

ಇದನ್ನು ನೋಡಿದ ಅಯೋಧ್ಯೆ ಅರ್ಚಕರು ತಮ್ಮ ಫೇಸ್‌ಬುಕ್ ಪುಟದಲ್ಲಿ ಉದಯನಿಧಿ ತಲೆ ಕಡಿದರೆ ₹10 ಕೋಟಿ ಕೊಡುವ ಹೇಳಿಕೆ ನೀಡಿದ್ದರು.

ಲಕ್ಷ ವೃಕ್ಷ ಅಭಿಯಾನ: ಛಾಯಾಚಿತ್ರ ಪ್ರದರ್ಶನ ನಾಳೆ

ರವೀಂದ್ರ ನಾಯ್ಕ

ಬೆಂಗಳೂರು: ಉತ್ತರ ಕನ್ನಡ ಜಿಲ್ಲಾ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ವತಿಯಿಂದ ಲಕ್ಷ ವೃಕ್ಷ ಸಸಿ ನೆಡುವ ಅಭಿಯಾನದ ಆಯ್ದ ಒಂದು ಸಾವಿರ ಛಾಯಾ ಚಿತ್ರಗಳ ಪ್ರದರ್ಶನವನ್ನು ಸೆ. 14ರ ಬೆಳಿಗ್ಗೆ 10 ಗಂಟೆಗೆ ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಪರಿಸರ ಜಾಗೃತಿ ಮತ್ತು ಅರಣ್ಯ ಸಾಂದ್ರತೆ ಹೆಚ್ಚಿಸುವ ಉದ್ದೇಶದಿಂದ ವೇದಿಕೆಯು ಅರಣ್ಯ ಭೂಮಿ ಹಕ್ಕಿಗಾಗಿ ಕಳೆದ 32 ವರ್ಷಗಳಿಂದ ಹೋರಾಟ ನಡೆಸುತ್ತಿದೆ. ಉತ್ತರ ಕನ್ನಡ ಜಿಲ್ಲೆಯಾದ್ಯಂತ ಜುಲೈ 30ರಿಂದ ಆಗಸ್ಟ್ 14 ರವರೆಗೆ ಸಸಿ ನೆಡುವ ಅಭಿಯಾನಕ್ಕೆ ಚಾಲನೆ ನೀಡಲಾಗಿತ್ತು. ಇವುಗಳಲ್ಲಿನ ಆಯ್ದ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗುವುದು ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರ ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ 167 ಗ್ರಾ.ಪಂ ವ್ಯಾಪ್ತಿಯ ಸುಮಾರು 836 ಹಳ್ಳಿಗಳಲ್ಲಿ, ಸುಮಾರು 41 ಸಾವಿರ ಕುಟುಂಬಗಳು 2 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಟ್ಟಿವೆ. ಇದರ ಅನಾವರಣ ಮಾಡಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದ್ದಾರೆ.

ಅರಣ್ಯವಾಸಿಗಳು ಅರಣ್ಯ ಪ್ರದೇಶದಲ್ಲಿ ಮಾವು, ಹಲಸು, ನೇರಳೆ, ಗೇರು, ಪೇರಲೆ, ಮುರುಗಲು ಮುಂತಾದ ಸಸಿಗಳನ್ನು ಆಸಕ್ತಿಯಿಂದ ನೆಟ್ಟಿದ್ದಾರೆ. ಮಹಿಳೆಯರು ಮತ್ತು ವೃದ್ಧರು ಸಹಿತ ವಿಶೇಷ ಆಸಕ್ತಿಯಿಂದ ಸಸಿ ನೆಡುವ ಕಾರ್ಯದಲ್ಲಿ ಭಾಗಿಯಾಗಿರುವುದು ಅಭಿಯಾನದ ಮಹತ್ವವನ್ನು ಹೆಚ್ಚಿಸಿತ್ತು ಎಂದು ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಪ್ರಾಜ್ಞರಂತೆ ಚಿಂತಿಸು, ಸಾಮಾನ್ಯ ಜನರಂತೆ ಮಾತನಾಡು.
-ಅರಿಸ್ಟಾಟಲ್

ಪ್ರಜ್ವಲ್ ಆಯ್ಕೆ ಅಸಿಂಧು: ಚುನಾವಣೆಗೆ ಸ್ಪರ್ಧಿಸುವವರಿಗೆ ಎಚ್ಚರಿಕೆ ಗಂಟೆ

ಚುನಾವಣಾ ಅಕ್ರಮಗಳು ಸರ್ವೇಸಾಮಾನ್ಯ ಎಂಬ ಪರಿಸ್ಥಿತಿ ಭಾರತದಲ್ಲಿ ಇದೆ. ಆದರೆ, ಚುನಾವಣಾ ಅಕ್ರಮದ ಕಾರಣಕ್ಕಾಗಿಯೇ ಒಬ್ಬ ಸಂಸದ ಅಥವಾ ಶಾಸಕನ ಆಯ್ಕೆಯನ್ನು ಅಸಿಂಧು ಎಂದು ಘೋಷಿಸಿದ ಪ್ರಕರಣಗಳು ವಿರಳ. ಅಂತಹ ಒಂದು ವಿರಳ ಪ್ರಕರಣದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಮೊಮ್ಮಗ, ಹಾಸನ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಜೆಡಿಎಸ್‌ನ ಸಂಸದ ಪ್ರಜ್ವಲ್ ರೇವಣ್ಣ ಅವರ ಆಯ್ಕೆಯನ್ನು ಅಸಿಂಧುಗೊಳಿಸಿ ಕರ್ನಾಟಕ ಹೈಕೋರ್ಟ್ ಇತ್ತೀಚೆಗೆ ತೀರ್ಪು ನೀಡಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಹಾಸನ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ಪ್ರಜ್ವಲ್ 6.75 ಲಕ್ಷಕ್ಕೂ ಹೆಚ್ಚು ಮತ ಪಡೆದಿದ್ದರು. ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಎ.ಮಂಜು ಅವರನ್ನು 1.4 ಲಕ್ಷ ಮತಗಳ ಅಂತರದಿಂದ ಸೋಲಿಸಿದ್ದರು. ಹಾಸನ ಕ್ಷೇತ್ರದ ಮತದಾರರೂ ಆಗಿರುವ ವಕೀಲ ಜಿ.ದೇವರಾಜೇಗೌಡ ಮತ್ತು ಪರಾಜಿತ ಅಭ್ಯರ್ಥಿ ಎ.ಮಂಜು ಅವರು ಪ್ರಜ್ವಲ್ ಆಯ್ಕೆ ಪ್ರಶ್ನಿಸಿ ಹೈಕೋರ್ಟ್‌ಗೆ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು. ನಾಮಪತ್ರ ಸಲ್ಲಿಕೆ ವೇಳೆ ಪ್ರಮಾಣಪತ್ರದಲ್ಲಿ ಆಸ್ತಿ ವಿವರಗಳನ್ನು ಸಮಗ್ರವಾಗಿ ಬಹಿರಂಗಪಡಿಸದ ಆರೋಪದ ಮೇಲೆ ಪ್ರಜ್ವಲ್ ಆಯ್ಕೆಯನ್ನು ಅರ್ಜಿದಾರರು ಪ್ರಶ್ನಿಸಿದ್ದರು.

ಆಸ್ತಿ, ಆದಾಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮುಚ್ಚಿಟ್ಟಿರುವುದನ್ನೂ 'ಚುನಾವಣಾ ಭ್ರಷ್ಟಾಚಾರ' ಎಂದು ಘೋಷಿಸುವ ಮೂಲಕ, ಕಾನೂನಿನ ಒಳಗೇ ಇದ್ದ ಪ್ರಮುಖ ಕೊರತೆಯೊಂದನ್ನು ಹೈಕೋರ್ಟ್ ತೀರ್ಪು ನಿವಾರಿಸಿದೆ

ಚುನಾವಣಾ ತಕರಾರು ಅರ್ಜಿಯ ಪ್ರಕಾರ, ಪ್ರಜ್ವಲ್ ಆದಾಯದ ಮಾಹಿತಿಯನ್ನು ಮುಚ್ಚಿಟ್ಟಿದ್ದರು. ನಕಲಿ ಮತದಾನಕ್ಕೆ ಪೂರಕವಾಗಿ ಕೆಲಸ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ಅವರ ತಂದೆ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ಡಿ.ರೇವಣ್ಣ ಮತ್ತು ವಿಧಾನ ಪರಿಷತ್‌ನ ಹಾಸನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಸದಸ್ಯ ಸೂರಜ್ ರೇವಣ್ಣ ಅವರಿಗೆ ಜನಪ್ರಾತಿನಿಧ್ಯ ಕಾಯ್ದೆಯಡಿ ನೋಟಿಸ್ ಜಾರಿಗೊಳಿಸುವಂತೆಯೂ ಹೈಕೋರ್ಟ್ ಆದೇಶಿಸಿದೆ. ಚುನಾವಣಾ ತಕರಾರು ಅರ್ಜಿಯನ್ನು ಭಾಗಶಃ ಸ್ವೀಕರಿಸಿರುವ ನ್ಯಾಯಾಲಯವು ಎ.ಮಂಜು ಅವರನ್ನು ವಿಜೇತ ಅಭ್ಯರ್ಥಿ ಎಂಬುದಾಗಿ ಘೋಷಿಸಬೇಕೆಂಬ ಮನವಿಯನ್ನು ತಿರಸ್ಕರಿಸಿದೆ. ಮಂಜು ಕೂಡ ಚುನಾವಣಾ ಅಕ್ರಮಗಳಲ್ಲಿ ಭಾಗಿಯಾಗಿರುವುದರಿಂದ ಅವರ ಮನವಿಯನ್ನು ಒಪ್ಪಲಾಗದು ಎಂದು ಹೈಕೋರ್ಟ್ ಹೇಳಿದೆ.

ಚುನಾವಣೆಗಳಲ್ಲಿ ಸ್ಪರ್ಧಿಸುವವರು ನಾಮಪತ್ರಗಳ ಜತೆಗಿನ ಪ್ರಮಾಣಪತ್ರಗಳಲ್ಲಿ ಮಾಹಿತಿಗಳನ್ನು ಮುಚ್ಚಿಡುವುದು ಹೊಸತೇನೂ ಅಲ್ಲ. ಆದರೆ, ಈ ಪ್ರಕರಣದಲ್ಲಿ ಹೈಕೋರ್ಟ್ ನೀಡಿರುವ ತೀರ್ಪು, ಚುನಾವಣೆಗಳಲ್ಲಿ ಸ್ಪರ್ಧಿಸುವವರಿಗೆ ಎಚ್ಚರಿಕೆಯ ಗಂಟೆಯಂತಿದೆ. ಮತದಾರರಿಗೆ ಲಂಚ ನೀಡಿದ, ಆಮಿಷ ಒಡ್ಡಿದಂತಹ ಕಾರಣಗಳಿಗಾಗಿ ಶಾಸಕರು, ಸಂಸದರನ್ನು ಅನರ್ಹಗೊಳಿಸಿದ ಕೆಲವು ಉದಾಹರಣೆಗಳು ಸಿಗುತ್ತವೆ. ಆದರೆ, ನಾಮಪತ್ರದಲ್ಲಿ ಮಾಹಿತಿ ಮುಚ್ಚಿಟ್ಟ ಕಾರಣಕ್ಕಾಗಿಯೇ ಆಯ್ಕೆಯನ್ನು ಅನೂರ್ಜಿತಗೊಳಿಸಿರುವುದು ಈ ಪ್ರಕರಣದ ವಿಶೇಷ. ಚುನಾವಣೆಗಳಲ್ಲಿ ಸ್ಪರ್ಧಿಸುವವರು ನಾಮಪತ್ರದ ಜತೆ ಸಲ್ಲಿಸುವ ಪ್ರಮಾಣಪತ್ರದಲ್ಲಿ ತಮ್ಮ ಆಸ್ತಿ, ಸಾಲ ಮತ್ತು ಹೊಣೆಗಾರಿಕೆ, ಶೈಕ್ಷಣಿಕ ಅರ್ಹತೆ ಹಾಗೂ ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ಕುರಿತು ಪ್ರಾಥಮಿಕ ಮಾಹಿತಿ ಒದಗಿಸಲು ವಿಫಲರಾದರೆ ಅಥವಾ ಸುಳ್ಳು ಮಾಹಿತಿ ಒದಗಿಸಿದರೆ ಆರು ತಿಂಗಳವರೆಗೂ ಜೈಲು ಶಿಕ್ಷೆ ವಿಧಿಸಲು ಜನಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 125-ಎ ಅಡಿಯಲ್ಲಿ ಅವಕಾಶವಿದೆ. ಆದರೆ, ಮತದಾರರಿಗೆ ಲಂಚ ನೀಡುವುದು, ಆಮಿಷ ಒಡ್ಡುವುದು ಅಥವಾ ಪ್ರಭಾವ ಬೀರುವುದು, ಮತದಾನ ಮಾಡುವಂತೆ ಅಥವಾ ಮಾಡದಂತೆ ಜಾತಿ, ಧರ್ಮದ ಹೆಸರಿನಲ್ಲಿ ಮನವೊಲಿಸುವುದು ಸೇರಿದಂತೆ ಚುನಾವಣಾ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವುದು ಸಾಬೀತಾದರೆ ಜನಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್-123ರ ಅಡಿಯಲ್ಲಿ ಅಂತಹವರನ್ನು ಅನರ್ಹಗೊಳಿಸಲು ಅವಕಾಶವಿದೆ. ಸೆಕ್ಷನ್ 125-ಎಗೆ ಸಂಬಂಧಿಸಿದಂತೆ ಅಸ್ಪಷ್ಟತೆ ಇರುವ ಕಾರಣ ಮಾಹಿತಿ ಬಹಿರಂಗಪಡಿಸದ ಪ್ರಕರಣಗಳಲ್ಲಿ ನ್ಯಾಯಾಲಯಗಳು ಮೃದು ನಿಲುವು ತಳೆಯುವುದೇ ಹೆಚ್ಚು. ಆಸ್ತಿ, ಆದಾಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮುಚ್ಚಿಟ್ಟಿರುವುದನ್ನೂ 'ಚುನಾವಣಾ ಭ್ರಷ್ಟಾಚಾರ' ಎಂದು ಘೋಷಿಸುವ ಮೂಲಕ ಕಾನೂನಿನ ಒಳಗೇ ಇದ್ದ ಪ್ರಮುಖ ಕೊರತೆಯೊಂದನ್ನು ಹೈಕೋರ್ಟ್ ತೀರ್ಪು ನಿವಾರಿಸಿದೆ. ಇದರಿಂದಾಗಿ ಮಾಹಿತಿ ಮುಚ್ಚಿಟ್ಟ ಆಧಾರದಲ್ಲೇ ಆಯ್ಕೆಯನ್ನು ಅಸಿಂಧುಗೊಳಿಸುವ ನಿರ್ಧಾರ ಹೊರಬಿದ್ದಿದೆ. ಈ ದೃಷ್ಟಿಯಿಂದ ಇದೊಂದು ಐತಿಹಾಸಿಕ ತೀರ್ಪು. ಹೈಕೋರ್ಟ್‌ನ ಈ ತೀರ್ಪು ಚುನಾವಣೆಗೆ ಸ್ಪರ್ಧಿಸುವವರು ನಾಮಪತ್ರಗಳಲ್ಲಿ ಸುಳ್ಳು ಮಾಹಿತಿ ನೀಡುವುದಕ್ಕೆ ಕಡಿವಾಣ ಹಾಕುವುದಕ್ಕೆ ಕಾರಣವಾಗುವುದರ ಜತೆಯಲ್ಲಿ, ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಪಡೆಯುವ ಮತದಾರರ ಹಕ್ಕಿಗೆ ಇನ್ನಷ್ಟು ಬಲ ನೀಡಲಿದೆ.

ದಿನದ ಟ್ವೀಟ್

ಸುಸಜ್ಜಿತ ಆಸ್ಪತ್ರೆ ನಿರ್ಮಿಸಿ

ಮಲೆನಾಡಿನಲ್ಲಿ ಸರಿಯಾದ ಆಸ್ಪತ್ರೆಗಳೇ ಇಲ್ಲ. ಹೃದಯಾಘಾತ, ಪಾರ್ಶ್ವವಾಯು, ಅಪಘಾತದಂತಹ ಸಂದರ್ಭದ 'ಗೋಲ್ಡನ್ ಅವರ್'ನಲ್ಲಿ ಚಿಕಿತ್ಸೆ ಸಿಗಬೇಕಾದಾಗ ಸಿಗದೇ ಜೀವಗಳು ಹೋಗುವುದನ್ನು ನೋಡಿದರೆ ಬೇಸರವಾಗುತ್ತದೆ. ಆದರೆ ಇದನ್ನು ಮರೆಮಾಚಿ ಕಾಶ್ಮೀರ, ಬಾಂಗ್ಲಾವಲಸೆ, ಪಾಕಿಸ್ತಾನ ಇವೇ ಇಲ್ಲಿನ ಚುನಾವಣೆಯ ವಿಷಯಗಳಾಗಿರುವುದು ವಿಪರ್ಯಾಸ.

ಗಿರೀಶ್ ಕಾರ್ಗದ್ದೆ

ಕಿಡಿನುಡಿ

ಕನ್ನಡದಲ್ಲಿ 250 ಜನ ಹೊಸ ನಿರ್ದೇಶಕರು, 500 ಹೊಸ ನಿರ್ಮಾಪಕರಿದ್ದಾರೆ. ಇವರ್‍ಯಾರಿಗೂ ಚಲನಚಿತ್ರ ವಾಣಿಜ್ಯ ಮಂಡಳಿಯ ಸಂಪರ್ಕವೇ ಇಲ್ಲ. ಇವರೆಲ್ಲರನ್ನೂ ಕರೆದು ಮಾತನಾಡುವವರೇ ಮಂಡಳಿಯಲ್ಲಿ ಇಲ್ಲ. ಮುಂದಿನ ದಿನಗಳಲ್ಲಿ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಯಾರಾದರೂ ಮಂಡಳಿಯ ಚುಕ್ಕಾಣಿ ಹಿಡಿಯಬೇಕು.

ಹಂಸಲೇಖ, ಸಂಗೀತ ನಿರ್ದೇಶಕ

25 ವರ್ಷಗಳ ಹಿಂದೆ

ಭಾನುವಾರ, 13-9-1998

- **'ಸಾಹಿತ್ಯ ಪ್ರಕಟಣೆಗೆ ಸಂಕೋಚ ಬೇಡ'**

ಧಾರವಾಡ, ಸೆ.12- ಮಹಿಳೆಯರ ಸಾಹಿತ್ಯವನ್ನು ಲಘುವಾಗಿ ಪರಿಗಣಿಸುವ ಪ್ರವೃತ್ತಿ ಇಂದಿಗೂ ಮುಂದುವರಿದಿದ್ದು, ಲೇಖಕಿಯರು ಕತೆ, ಕವಿತೆಗಳನ್ನು ರಚಿಸುವುದರ ಜೊತೆಗೆ ಪ್ರಾಚೀನ ಸಾಹಿತ್ಯದ ಸಂಗ್ರಹಣೆ, ವಿಶ್ಲೇಷಣೆ, ಸಂಶೋಧನೆ ಹಾಗೂ ಗ್ರಂಥ ಸಂಪಾದನೆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಲೀಲಾದೇವಿ ಪ್ರಸಾದ್ ಅವರು ಲೇಖಕಿಯರಿಗೆ ಕರೆ ನೀಡಿದರು.

ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದ ನೂತನ ಅತಿಥಿಗೃಹ 'ಮಾನಸೋಲ್ಲಾಸ' ಸಭಾಂಗಣದಲ್ಲಿ ಉತ್ತರ ಕರ್ನಾಟಕದ ಲೇಖಕಿಯರ ಸಂಘದ 13ನೇ ವಾರ್ಷಿಕೋತ್ಸವದ ಅಂಗವಾಗಿ ಆರಂಭವಾದ 2 ದಿನಗಳ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಿದ್ದರು.

- **ಶಾಸಕರ ಭವನ ಕಬ್ಬನ್‌ಪಾರ್ಕಿನಲ್ಲಿ ಅಲ್ಲ**

ಬೆಂಗಳೂರು, ಸೆ. 12- ಶಾಸಕರ ವಸತಿಗಾಗಿ ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಮುಂದಾಗಿರುವುದರಿಂದ ಕಬ್ಬನ್‌ಪಾರ್ಕಿನ ಗಿಡಮರಗಳಿಗೆ ಕೊಡಲಿಪೆಟ್ಟು ಬೀಳಲಿದೆ ಎಂದು ಪರಿಸರ ಪ್ರೇಮಿಗಳು ವಾದಿಸುತ್ತಿದ್ದರೂ, ಇದರಿಂದ ಪರಿಸರಕ್ಕೆ ಹಾನಿಯಾಗುವುದಿಲ್ಲ ಎಂಬ ವಾದ ಸರ್ಕಾರದ ವತಿಯಿಂದ ಕೇಳಿಬರುತ್ತಿರುವುದು ಈ ವಿವಾದಕ್ಕೆ ಹೊಸ ತಿರುವು ಬಂದಂತಾಗಿದೆ.

ವಿಧಾನಸೌಧ, ಶಾಸಕರ ಭವನ, ರಾಜಭವನ, ಹೈಕೋರ್ಟ್ ಸುತ್ತಮುತ್ತಲ ಪ್ರದೇಶಗಳಲ್ಲಿರುವ ಗಿಡಮರಗಳ ಪಾಲನೆ ಪೋಷಣೆ ಮಾಡುವ ಜವಾಬ್ದಾರಿಯನ್ನು ಕಬ್ಬನ್‌ಪಾರ್ಕಿನ ನಿರ್ವಹಣೆ ಮಾಡುತ್ತಿರುವ ತೋಟಗಾರಿಕೆ ಇಲಾಖೆಗೆ ವಹಿಸಲಾಗಿತ್ತು.

50 ವರ್ಷಗಳ ಹಿಂದೆ

ಗುರುವಾರ, 13-9-1973

- **ಅಶ್ರುವಾಯು, ಲಾಠಿಪ್ರಹಾರ ವಿದ್ಯಾರ್ಥಿಗಳ ಬಂಧನ**

ಬೆಂಗಳೂರು, ಸೆ. 12- ಸೆಂಟ್ರಲ್ ಕಾಲೇಜಿನ ಸುತ್ತಮುತ್ತಲಿನ ರಸ್ತೆಗಳಲ್ಲಿ ನಗರದ ಪೊಲೀಸರು ನಾಲ್ಕು ಬಾರಿ ಅಶ್ರುವಾಯು ಷೆಲ್ ಸಿಡಿಸಿ ಮತ್ತು ಹಲವಾರು ಬಾರಿ ಲಾಠಿಪ್ರಹಾರ ಮಾಡಿ, ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ್ದ ಉದ್ರಿಕ್ತ ವಿದ್ಯಾರ್ಥಿಗಳ ಗುಂಪನ್ನು ಚದುರಿಸಿದರು.

ಕಳೆದ ವಾರ ಹಾಸನದಲ್ಲಿ ನಡೆದ ಘಟನೆಯ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಬೇಕೆಂದು ಒತ್ತಾಯಿಸಿರುವ ವಿದ್ಯಾರ್ಥಿಗಳ ಚಳವಳಿಯು ಮೂರನೇ ದಿನವಾದ ಇಂದು ವಿಕೋಪದ ಹಂತಕ್ಕೆ ಮುಟ್ಟಿತು.

ವಿದ್ಯಾರ್ಥಿಗಳಿಂದ ಸತತ ಕಲ್ಲಿನ ಸುರಿಮಳೆ, ಪೊಲೀಸರಿಂದ ಪದೇಪದೇ ಲಾಠಿಪ್ರಹಾರ ನಡೆದು, ಸೆಂಟ್ರಲ್ ಕಾಲೇಜಿನ ಪ್ರದೇಶ ಕಾಳಗದ ಕಣದಂತೆ ಕಂಡುಬಂತು. ಘಟನೆಯ ಸಂಬಂಧ ಪೊಲೀಸರು 47 ವಿದ್ಯಾರ್ಥಿಗಳನ್ನು ಬಂಧಿಸಿದ್ದಾರೆ.

ಇತಿಹಾಸ ಅಧ್ಯಾಪಕರೇ ಇತಿಹಾಸದ ಬಗ್ಗೆ ಮಾತನಾಡುವುದು ಹೆಚ್ಚು ಅಪೇಕ್ಷಣೀಯ

ಇತಿಹಾಸ ಮತ್ತು ಸತ್ಯದ ಅನಾವರಣ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ದಕ್ಷಿಣ ಕನ್ನಡ ಜಿಲ್ಲೆಯ ಪದವಿಪೂರ್ವ ಕಾಲೇಜುಗಳ ಇತಿಹಾಸ ಉಪನ್ಯಾಸಕರ ಶೈಕ್ಷಣಿಕ ಚಿಂತನ ಕಾರ್ಯಕ್ರಮ ಮಂಗಳೂರಿನಲ್ಲಿ ಇತ್ತೀಚೆಗೆ ನಡೆಯಿತು. ಅದು, ಒಂದು ಸಮಾರಂಭದ ಹಾಗೆ ಇರುವ ಬದಲಿಗೆ ಸಂವಾದದ ರೂಪದಲ್ಲಿ ಇತ್ತು. ಪ್ರಸ್ತುತ ದಿನಗಳಲ್ಲಿ ಇತಿಹಾಸದ ಕುರಿತಾಗಿ ಆಗುತ್ತಿರುವ ಹಲವು ಮಗ್ಗುಲುಗಳ ಅಪವ್ಯಾಖ್ಯಾನಗಳು ಮತ್ತು ಸತ್ಯಕ್ಕೆ ದೂರವಾದ ಮಾಹಿತಿಗಳ ಕುರಿತಾಗಿ ಉಪನ್ಯಾಸಕರು ನಿಜವಾದ ಆತಂಕ ಮತ್ತು ಬೇಸರದಿಂದ ಪ್ರಶ್ನೆಗಳನ್ನು ಎತ್ತಿದರು. ಈ ನೆಲೆಯಲ್ಲಿ, ಇತಿಹಾಸ ಉಪನ್ಯಾಸಕರ ಸಂಘದ ಪ್ರಯತ್ನ ಗಮನಾರ್ಹ.

ಸಂವಾದದಲ್ಲಿ ನನಗೆ, 'ಕಲಾ ವಿಭಾಗಕ್ಕೆ ಕಡಿಮೆ ಅಂಕಗಳನ್ನು ಪಡೆದವರು ಹೆಚ್ಚಾಗಿ ಬರುತ್ತಾರೆ. ಅವರಲ್ಲಿ ಕಲಿಕಾ ದಕ್ಷತೆಯನ್ನು ಮೂಡಿಸುವುದು ಹೇಗೆ?' ಎನ್ನುವ ಶೈಕ್ಷಣಿಕ ಕಾಳಜಿಯ ಪ್ರಶ್ನೆ ಬಂದ ಹಾಗೆಯೇ, 'ಎಡ-ಬಲ ರಾಜಕೀಯ ಸಿದ್ಧಾಂತಿಗಳು ನಿರೂಪಿಸುವ ಇತಿಹಾಸದ ಅಬ್ಬರದಲ್ಲಿ ಇತಿಹಾಸದ ಪದ್ಧತಿಗೆ ಅನುಗುಣವಾದ ಇತಿಹಾಸವನ್ನು ಬಿಡಿಸಿ ಹೇಳುವುದು ಹೇಗೆ?', 'ಸ್ಥಳೀಯ ಇತಿಹಾಸವು ಪಠ್ಯಪುಸ್ತಕಗಳಿಂದ ದೊಡ್ಡ ಪ್ರಮಾಣದಲ್ಲಿ ಕಣ್ಮರೆಯಾಗಿರುವ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ?' ಎಂಬೆಲ್ಲ ಪ್ರಶ್ನೆಗಳು ಬಂದವು.

'ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸತ್ಯಕ್ಕೆ ದೂರವಾದ ಮಾಹಿತಿಗಳನ್ನು ತಿದ್ದಿ ಸರಿಯಾದದ್ದನ್ನು ಹೇಳಿದ ತಕ್ಷಣ, ನಮ್ಮ ಮೇಲೆ ಕೀಳುಮಟ್ಟದ ನಿಂದನೆಗಳು ನಡೆಯುತ್ತವೆ. ಅದೇ ಭಾಷೆಯಲ್ಲಿ ಉತ್ತರಿಸಲು ನಮಗೆ ಆಗುವುದಿಲ್ಲ. ಆಗ ನಾವು ಮೌನಿಗಳಾಗಿಬಿಡುತ್ತೇವೆ. ಈ ಸನ್ನಿವೇಶವನ್ನು ಎದುರಿಸಿ ಮಾತನಾಡುವುದು ಹೇಗೆ?' ಎಂದೆಲ್ಲ ಇತಿಹಾಸಕ್ಕೆ ಸಂಬಂಧಿಸಿದ ಸಾಮಾಜಿಕ ಕಾಳಜಿಯ ಪ್ರಶ್ನೆಗಳು ಬಂದವು.

ಇತಿಹಾಸದ ಅಧ್ಯಾಪಕರ ರಾಜಕೀಯ ಒಲವು ಯಾವ ಕಡೆಗೇ ಇರಬಹುದು. ಆದರೆ ಇತಿಹಾಸ ಎಂಬ ವಿಷಯ ಅವರಿಗೆ ಅನ್ನ ಕೊಡುವ ವಿಷಯವೂ ಹೌದು ಮತ್ತು ಅವರು ಇತಿಹಾಸವನ್ನು ವ್ಯವಸ್ಥಿತ ಪದ್ಧತಿಯ ಮೂಲಕವೇ ಅಭ್ಯಾಸ ಮಾಡಿದವರೂ ಹೌದು. ಆದ್ದರಿಂದ ರಾಜಕೀಯ ಒಲವನ್ನು ಮೀರಿದ ಒಂದು ಅಕಡೆಮಿಕ್ ಬದ್ಧತೆ ಅವರಿಗೆ ತಮ್ಮ ಬೋಧನಾ ವಿಷಯದ ಬಗ್ಗೆ ಇರುತ್ತದೆ. ತೀರಾ ತಪ್ಪಾಗಿ ವ್ಯಾಖ್ಯಾನಿಸಲು ಆತ್ಮಸಾಕ್ಷಿ ಒಪ್ಪುವುದಿಲ್ಲ. ಆದ್ದರಿಂದ ಇತಿಹಾಸ ಅಧ್ಯಾಪಕರೇ ಇತಿಹಾಸದ ಬಗ್ಗೆ ಮಾತನಾಡುವುದು ಹೆಚ್ಚು ಅಪೇಕ್ಷಣೀಯವಾಗಿರುತ್ತದೆ.

ಇತಿಹಾಸವನ್ನು ಸರಿಯಾದ ರೀತಿಯಲ್ಲಿ ಹೇಳುವವರು ಒಂಟಿಯಾಗಿದ್ದಾಗ ವೈಚಾರಿಕ ದಾಳಿಗಳ ಮುಖಾಂತರ ಅವರ ಬಾಯಿ ಮುಚ್ಚಿಸಲು ಸಾಧ್ಯವಾಗುತ್ತದೆ. ಆದರೆ ಅವರು ಸಂಘಟಿತರಾಗಿ ಸರಿಯಾದುದನ್ನು ಹೇಳಲು ಹೊರಟರೆ ಬಾಯಿ ಮುಚ್ಚಿಸಲು ಆಗುವುದಿಲ್ಲ. ಆದ್ದರಿಂದ ಇತಿಹಾಸ ಉಪನ್ಯಾಸಕರ ಸಂಘ ಎನ್ನುವ ಒಂದು ಸಂಘಟಿತ ವೇದಿಕೆಯ ಮೂಲಕವೇ ಸಮರ್ಪಕ ಇತಿಹಾಸವನ್ನು ಹೇಳಬಹುದು.

ಸಾಮಾಜಿಕ ಜಾಲತಾಣದಲ್ಲಾಗಲೀ ಬೇರೆ ರೀತಿಯಲ್ಲಾಗಲೀ ತೊಡಗಿಕೊಳ್ಳುವಿಕೆಗಳು ವ್ಯಕ್ತಿಯ ಹೆಸರಿನಲ್ಲಿರದೆ ಸಂಘಟನೆಯ ಹೆಸರಿನಲ್ಲಿ ಇರಬೇಕು. ಸಂಘಟನೆಯಲ್ಲಿ ಯಾರಾದರೊಬ್ಬರು ಅಥವಾ ತಿಂಗಳಿಗೆ ಒಬ್ಬೊಬ್ಬರ ಹಾಗೆ ಇದನ್ನು ನಿರ್ವಹಿಸಬೇಕು. ಸಂಘಟನೆಯ ಹೆಸರಿನಲ್ಲೇ ಚರ್ಚೆಗಳು ನಡೆದಾಗ ವೈಯಕ್ತಿಕ ನೆಲೆಯಲ್ಲಿ ತೇಜೋವಧೆ ಮಾಡಲು ಮತ್ತು ಒಂದು ವೇಳೆ ಅಂತಹ ಪ್ರಯತ್ನಗಳು ನಡೆದಾಗಲೂ ಅದರಿಂದ ವೈಯಕ್ತಿಕವಾಗಿ ಯಾರನ್ನೂ ಕುಗ್ಗಿಸಲು ಆಗುವುದಿಲ್ಲ. ಸಮರ್ಪಕವಾದದ್ದನ್ನು ಹಲವರು ಒಟ್ಟೊಟ್ಟಾಗಿ ಹೇಳಲು ಹೊರಟಾಗಲೂ ವೈಯಕ್ತಿಕ ತೇಜೋವಧೆಯ ಮೂಲಕ ಬಾಯಿಮುಚ್ಚಿಸುವುದು ಕಷ್ಟವಾಗುತ್ತದೆ. ಅಲ್ಲದೆ, ಇತಿಹಾಸ ಉಪನ್ಯಾಸಕರೇ ಆದದ್ದರಿಂದ ಸ್ವಾಭಾವಿಕವಾಗಿ ಅವರ ವಿಚಾರಗಳಿಗೆ ಸ್ವೀಕೃತಿಯ ಅರ್ಹತೆ ಜಾಸ್ತಿ ಇರುತ್ತದೆ.

ನಿಜವಾಗಿ ಮನವರಿಕೆ ಮಾಡಿಕೊಡಬೇಕಾದ್ದು ಯಾರಿಗೆ? ಸೈದ್ಧಾಂತಿಕ ನೆಲೆಯಲ್ಲಿ ರಾಜಕೀಯವಾಗಿ ವಿಭಜನೆಗೊಂಡವರಿಗೆ ಮನವರಿಕೆ ಮಾಡಿಕೊಡಲು ಆಗುವುದಿಲ್ಲ, ಮತ್ತವರಿಗೆ ಮನವರಿಕೆ ಮಾಡಿಕೊಡಬೇಕಾಗಿಯೂ ಇಲ್ಲ. ಹೀಗೆ ರಾಜಕೀಯವಾಗಿ ವಿಭಜನೆಗೊಳ್ಳದ ಮೂರನೆಯ ದೊಡ್ಡ ಜನಸಮುದಾಯವನ್ನು ತಮ್ಮೊಂದಿಗೆ ತರುವುದಕ್ಕಾಗಿ ಅಸಮರ್ಪಕ ಇತಿಹಾಸವನ್ನು ಪ್ರಚುರಪಡಿಸಲಾಗುತ್ತದೆ. ಸಮರ್ಪಕವಾದದ್ದನ್ನು ಹೇಳಿದರೆ ಈ ವರ್ಗ ಅದನ್ನು ಸ್ವೀಕರಿಸುತ್ತದೆ. ಇವರಿಗೆ ಸೈದ್ಧಾಂತಿಕ ತಟಸ್ಥರು ಹೇಳುವ ವಿಷಯಗಳು ಮಹತ್ವದ್ದಾಗುತ್ತವೆ. ಅಧ್ಯಾಪಕರು ಸಹಜವಾಗಿ ರಾಜಕೀಯ ಸಿದ್ಧಾಂತದಲ್ಲಿ ತಟಸ್ಥರಾಗಿಯೂ ಅವರ ಬೋಧನಾ ವಿಷಯದಲ್ಲಿ ಕ್ರಿಯಾಶೀಲರಾಗಿಯೂ ಇರಬೇಕಾದವರಾಗಿದ್ದಾರೆ. ಆದ್ದರಿಂದ ಅವರ ತೊಡಗಿಕೊಳ್ಳುವಿಕೆಗೆ ತಾನೇ ತಾನಾಗಿ ಜಾಸ್ತಿ ಮಹತ್ವ ಇದೆ.

ಸ್ಥಳೀಯ ಇತಿಹಾಸದ ಪರಿಚಯವನ್ನು ವಿದ್ಯಾರ್ಥಿಗಳಿಗೆ ಕೊಡುವುದರಲ್ಲಿ ಎರಡು ವಿಧಾನಗಳಿವೆ. ಮೊದಲನೆಯದು, ಪಠ್ಯಕ್ರಮದಲ್ಲೇ ಸ್ಥಳೀಯ ಇತಿಹಾಸ ಸೇರಿಕೊಂಡಿದ್ದಾಗ ನೇರವಾಗಿ ಅದನ್ನೇ ಬೋಧಿಸಲು ಸಾಧ್ಯವಾಗುತ್ತದೆ. ಮೂರು-ನಾಲ್ಕು ದಶಕಗಳ ಹಿಂದೆ ಪ್ರಾರಂಭಿಕ ಶಿಕ್ಷಣದ ಯಾವುದೋ ಒಂದು ತರಗತಿಯಲ್ಲಿ ರಾಜ್ಯದ ಎಲ್ಲ ಮಕ್ಕಳಿಗೂ ಅನ್ವಯವಾಗುವ ಒಂದು ಪಾಠ ಪುಸ್ತಕ ಮತ್ತು ಅದಕ್ಕೆ ಪೂರಕವಾಗಿ ಆಯಾ ಜಿಲ್ಲೆಯ ವಿದ್ಯಾರ್ಥಿಗಳಿಗಾಗಿ ಜಿಲ್ಲೆಯ ವಿಚಾರಗಳನ್ನು ಮಾತ್ರ ಒಳಗೊಂಡಿರುವ ಇನ್ನೊಂದು ಪಾಠ ಪುಸ್ತಕ ಇರುತ್ತಿತ್ತು. ಬೋಧನೆಯ ವಿವಿಧ ಹಂತಗಳಲ್ಲಿಯೂ ಸ್ಥಳೀಯ ವಿಚಾರಗಳು ಸೇರ್ಪಡೆಯಾಗುತ್ತಿದ್ದವು.



ಎರಡನೆಯದು, ಪರೋಕ್ಷವಾಗಿ ಸ್ಥಳೀಯ ಇತಿಹಾಸವನ್ನು ತಂದು ಬೋಧಿಸಲು ಸೂಕ್ತವಾಗುವ ರೀತಿಯಲ್ಲಿ ಪಠ್ಯಕ್ರಮವನ್ನು ವಿನ್ಯಾಸಗೊಳಿಸುವುದು. ಈ ಪದ್ಧತಿಯಲ್ಲಿ ಪಠ್ಯಕ್ರಮದಲ್ಲಿ ನೇರವಾಗಿ ಸ್ಥಳೀಯ ವಿಷಯಗಳ ವಿವರಣೆ ಇರುವುದಿಲ್ಲ. ಆದರೆ ಸಾಮಾನ್ಯೀಕೃತ ಪಠ್ಯಕ್ರಮದ ನಿರೂಪಣೆಯು ಬೋಧಕರು ಸ್ಥಳೀಯ ಇತಿಹಾಸವನ್ನು ಸಾಮಾನ್ಯೀಕೃತ ಇತಿಹಾಸದೊಂದಿಗೆ ಸಂಯೋಜಿಸಿ ಬೋಧಿಸಲು ಸಾಧ್ಯವಾಗುವ ಹಾಗೆ ಇರುತ್ತದೆ. ಅಧ್ಯಾಪಕರಿಗೆ ವೈಯಕ್ತಿಕ ನೆಲೆಯಲ್ಲಿ ಸ್ಥಳೀಯ ಇತಿಹಾಸದ ಜ್ಞಾನವಿದ್ದು ಎಲ್ಲಿಗೆ ಅದನ್ನು ಸಂಯೋಜಿಸಬಹುದು ಎನ್ನುವ ಬೋಧನಾ ಪದ್ಧತಿಯ ತಜ್ಞತೆ ಇರಬೇಕು ಮತ್ತು ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ತಯಾರಿಸುವುದರಲ್ಲಿ, ಬೋಧಿಸಿದ ಅಧ್ಯಾಪಕರಿಗೆ ಸ್ವಾತಂತ್ರ್ಯ ಇರಬೇಕು.

ಈಗ ಅಂತರರಾಷ್ಟ್ರೀಯ ಮಟ್ಟದ ಪಠ್ಯಕ್ರಮಗಳ ಮಾದರಿಯಲ್ಲಿ ಪ್ರಶ್ನೆಪತ್ರಿಕೆಯು ಹೆಚ್ಚಾಗಿ ಸಾರ್ವತ್ರಿಕ ಮಾದರಿಯಲ್ಲಿಯೇ ಇರುವುದರಿಂದ, ಸ್ಥಳೀಯ ಇತಿಹಾಸ ಬೋಧಿಸಿದರೂ ಪರೀಕ್ಷೆಯಲ್ಲಿ ಅದಕ್ಕೆ ಮಹತ್ವ ಇರುವುದಿಲ್ಲ. ಆಗ ವಿದ್ಯಾರ್ಥಿಗಳು ಅದನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಈ ದಿಸೆಯಲ್ಲಿ ಇತಿಹಾಸ ಉಪನ್ಯಾಸಕರ ಸಂಘಗಳು ಎಲ್ಲೆಲ್ಲಿ ಸ್ಥಳೀಯ ಇತಿಹಾಸವನ್ನು ಹೇಗೆ ಕೊಡಬಹುದು ಎಂಬುದರ ಪಟ್ಟಿ ಮಾಡಿ, ಪಠ್ಯ ಪರಿಷ್ಕರಣೆಯಲ್ಲಿ ಸ್ಥಳೀಯ ಇತಿಹಾಸ ಸೇರಿಕೊಳ್ಳುವ ಹಾಗೆ ಮಾಡಲು ಪ್ರಯತ್ನಿಸಬೇಕು.

ಕಲಾ ವಿದ್ಯಾರ್ಥಿಗಳು ಸಾಮಾನ್ಯವಾಗಿ ಕಲಿಕೆಯಲ್ಲಿ ಹಿಂದುಳಿದವರಾಗಿರುತ್ತಾರೆ, ಅವರಲ್ಲಿ ಕಲಿಕಾ ದಕ್ಷತೆಯನ್ನು ಹೆಚ್ಚಿಸುವುದು ಹೇಗೆ ಎಂಬುದು ಇತಿಹಾಸ ಉಪನ್ಯಾಸಕರಿಗೆ ಮಾತ್ರ ಇರುವ ಪ್ರಶ್ನೆಯಲ್ಲ. ಮಾನವಿಕಗಳನ್ನು ಬೋಧಿಸುವ ಎಲ್ಲ ಉಪನ್ಯಾಸಕರ ಪ್ರಶ್ನೆಯೂ ಹೌದು. ಇಲ್ಲಿ ವಿದ್ಯಾರ್ಥಿಗಳನ್ನು ಕಲಿಕೆಗೆ ತೊಡಗಿಸಬೇಕಾದರೆ ಬೋಧನೆಯನ್ನು ಹೆಚ್ಚು ಆಕರ್ಷಕವೂ ಕುತೂಹಲಕಾರಿಯಾಗಿಯೂ ರೂಪಿಸಿಕೊಳ್ಳಬೇಕು.

ಎರಡನೆಯದಾಗಿ, ಕಾಲೇಜು ಹಂತದ ವಿದ್ಯಾರ್ಥಿಗಳಿಗೆ ಮನೆಯ ಸಮಸ್ಯೆ, ಔದ್ಯೋಗಿಕ ಭವಿಷ್ಯ, ಮದುವೆಯಂತಹ ವಿಚಾರಗಳ ಬಗ್ಗೆ ಬಹಳಷ್ಟು ಅರಿವು ಮೂಡಿದ್ದರೂ ಅವುಗಳನ್ನು ನಿಭಾಯಿಸುವ ಶಕ್ತಿ ಬಂದಿರುವುದಿಲ್ಲ. ಆಗ ಉಪನ್ಯಾಸಕರು ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಪ್ರತ್ಯೇಕವಾಗಿ ನಿರ್ವಹಿಸಿ ಅವರ ಮಾನಸಿಕ ತಡೆಗಳನ್ನು ನಿವಾರಿಸಬೇಕಾಗುತ್ತದೆ. ವಿದ್ಯಾರ್ಥಿಗಳ ವೈಯಕ್ತಿಕ ತಡೆಗಳನ್ನು ನಿವಾರಿಸುವುದು ಮತ್ತು ಕಲಿಕಾ ವಿಷಯಗಳ ಮೂಲಕ ಸಿಗುವ ಅವಕಾಶಗಳ ಭರವಸೆಯನ್ನು ಮನವರಿಕೆ ಮಾಡಿಕೊಡುವುದು ಪರಸ್ಪರ ಸಂಯೋಜಿಸಲ್ಪಟ್ಟಾಗ ವಿದ್ಯಾರ್ಥಿಗಳು ಚೆನ್ನಾಗಿ ಕಲಿಯುತ್ತಾರೆ.

ಈ ಎಲ್ಲ ನೆಲೆಗಟ್ಟಿನಲ್ಲಿ ಬಹಳಷ್ಟು ಕೆಲಸಗಳನ್ನು ಮಾಡಲು ಇತಿಹಾಸ ಉಪನ್ಯಾಸಕರ ಸಂಘಗಳಿಗೆ ಅವಕಾಶವಿದೆ. ಉಪನ್ಯಾಸಕರ ಸಂಘಗಳೇ ಇಂಥದ್ದನ್ನು ಮಾಡಿದಾಗ ಸಾಮಾಜಿಕವಾಗಿಯೂ ಶೈಕ್ಷಣಿಕವಾಗಿಯೂ ಹೆಚ್ಚು ಒಳ್ಳೆಯ ಸಾಮಾಜಿಕ ಪರಿಸರ ಸಾಧ್ಯವಾಗುತ್ತದೆ.

ಚುರುಮುರಿ

ಆಪರೇಷನ್ ಆಟ

• ಮಣ್ಣೆ ರಾಜು

ಕಮಲಕ್ಕ, ತೆನೆಯಕ್ಕ ಪಾರ್ಲಿಮೆಂಟ್ ಪರೀಕ್ಷೆಗೆ ಕಂಬೈಂಡ್ ಸ್ಟಡಿ ಮಾಡುತ್ತಿದ್ದರು.

'ಹಳೆ ಮೈಸೂರು ಪ್ರಾಂತ್ಯದ ನಾಲ್ಕೈದು ಸಬ್ಜೆಕ್ಟ್‌ಗಳನ್ನು ನೀನು ಸ್ಟಡಿ ಮಾಡು, ಉಳಿದ ಸಬ್ಜೆಕ್ಟ್‌ಗಳನ್ನು ನಾನು ಓದಿಕೊಳ್ತೀನಿ' ಎಂದಳು ಕಮಲಕ್ಕ.

'ನನಗೆ ಇನ್ನೆರಡು ಸಬ್ಜೆಕ್ಟ್‌ಗಳನ್ನು ಜಾಸ್ತಿ ಕೊಡು, ಚೆನ್ನಾಗಿ ಓದಿಕೊಳ್ತೀನಿ' ತೆನೆಯಕ್ಕ ಕೇಳಿಕೊಂಡಳು.

'ಸದ್ಯಕ್ಕೆ ಅಷ್ಟನ್ನು ಓದಿಕೊ, ಮುಂದೆ ಎಲ್ಲ ಸಬ್ಜೆಕ್ಟ್‌ಗಳನ್ನೂ ಓದುವೆಯಂತೆ. ಎಕ್ಸಾಂ ಟೆನ್ಷನ್ ಮಾಡಿಕೊಳ್ಳಬೇಡ, ನಮಗೆ ಮೋದಿಯ ಬೋನಸ್ ಅಂಕ, ಕಾವೇರಿ ಹೋರಾಟದ ಕೃಪಾಂಕ ಸಿಗುತ್ತದೆ'.

ಆಗ ಕಿಟಕಿಯಲ್ಲಿ ಇಣುಕಿದ ಕೈಯಣ್ಣ, 'ಬಾಗಿಲು ತೆರೆಯಿರಿ, ನಿಮ್ಮ ಜೊತೆ ಗ್ರೂಪ್ ಸ್ಟಡಿಗೆ ನಾನೂ ಬರ್ತೀನಿ...' ಎಂದು ರಿಕ್ವೆಸ್ಟ್ ಮಾಡಿಕೊಂಡ.

'ಕೈಯಣ್ಣ ಬಂದ್ರೆ ಬಾಗಿಲು ತೆರೆಯಬೇಡಿ ಅಂತ ನಮ್ಮ ಹಿರಿಯರು ಹೇಳಿದ್ದಾರೆ, ಡಿಸ್ಟರ್ಬ್ ಮಾಡ್ಬೇಡ ಹೋಗು' ಕಮಲಕ್ಕ ರೇಗಿದಳು.

'ಹಿಂದೆ ನಾನು ಕೈಯಣ್ಣನ ಜೊತೆ ಕಂಬೈಂಡ್ ಸ್ಟಡಿ ಮಾಡಿ ಫೇಲಾದೆ' ತೆನೆಯಕ್ಕ ಸಂಕಟಪಟ್ಟಳು.

'ನನ್ನ ಹತ್ರ ಗ್ಯಾರಂಟಿ ಗೈಡ್ ಇದೆ. ಓದಿಕೊಂಡರೆ ಸುಲಭವಾಗಿ ಪಾರ್ಲಿಮೆಂಟ್ ಪರೀಕ್ಷೆ ಪಾಸಾಗಬಹುದು' ಎಂದ ಕೈಯಣ್ಣ.

'ಬೇಡ, ನಮ್ಮ ಟೀಚರ್ ಹೇಳಿರುವ ಪಾಠ, ಕೊಟ್ಟಿರುವ ನೋಟ್ಸ್ ಓದಿಕೊಳ್ತೀವಿ'.

'ಬರೀ ಓದಿದರೆ ಸರ್ವತೋಮುಖ ಬೆಳವಣಿಗೆ ಆಗಲ್ಲ, ಪಠ್ಯದ ಜೊತೆ ಆಪರೇಷನ್ ಆಟದಂತಹ ಪಠ್ಯೇತರ ಚಟುವಟಿಕೆಯಲ್ಲೂ ಭಾಗವಹಿಸಬೇಕು, ಆಡೋಣ ಬನ್ನಿ' ಕೈಯಣ್ಣ ಕರೆದ.

'ನಿನ್ನ ಜೊತೆ ಆಪರೇಷನ್ ಆಟ ಆಡೋದು ಅಪಾಯ ಅಂತ ನಮ್ಮ ಹಿರಿಯರು ಹೇಳಿದ್ದಾರೆ, ನಿನ್ನ ಸಹವಾಸ ಬೇಡ' ತೆನೆಯಕ್ಕ ತಿರಸ್ಕರಿಸಿದಳು.

'ಆಪರೇಷನ್ ಆಟವಾಡುವ ಆಸೆ ನಿಮಗಿಲ್ವೇ?'

'ಆಸೆ ಇದೆ, ಆದರೆ ನಿನ್ನ ಜೊತೆ ಆಡಲ್ಲ. ನಾವಿಬ್ಬರೇ ಆಪರೇಷನ್ ಆಟವಾಡಿಕೊಂಡು ಆನಂದಪಡುತ್ತೇವೆ' ಎಂದು ಕಮಲಕ್ಕ ತೆನೆಯಕ್ಕನನ್ನು ಪ್ರೀತಿಯಿಂದ ಆಲಿಂಗಿಸಿದಳು.

ಸಂಗತ

ಕಲೆ: ದುರಿತ ಕಾಲದ 'ಮಂತ್ರಶಕ್ತಿ'

ಎಲ್ಲ ಬಗೆಯ ಕಲೆಗಳು ಬಹುತ್ವದ ಧ್ವನಿಗಳೇ ಆಗಿರುತ್ತವೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದ ವೀರಭದ್ರಪ್ಪ ಶ್ರೇಷ್ಠ ಜಾನಪದ ಕಲಾವಿದರಾಗಿದ್ದರು. ಅವರಿಗೆ 90 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದ್ದರಿಂದ ನಿಲ್ಲಲು, ನಡೆದಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಅವರ ಕೊರಳಿಗೆ ಕರಡಿವಾದ್ಯ ಹಾಕಿ ನಿಲ್ಲಿಸಿಬಿಟ್ಟರೆ, ಕುಣಿಕುಣಿದು ಬಾರಿಸುತ್ತಿದ್ದರು. ಕರಡಿವಾದನದ ಮೂಲಕ, ದೂರದಲ್ಲಿ ನಿಂತ ಶಿಷ್ಯನಿಗೆ ಟೆಲಿಗ್ರಾಂ ಮಾದರಿಯಲ್ಲಿ ಸಂದೇಶ ರವಾನಿಸುತ್ತಿದ್ದರು. ಮುಖ್ಯಮಂತ್ರಿ ಆಗಿದ್ದ ದೇವರಾಜ ಅರಸರ ಮುಂದೆ ಅವರು ಕರಡಿವಾದನ ಟೆಲಿಗ್ರಾಂ ಪ್ರದರ್ಶಿಸಿ 'ವ್ಹಾವ್!' ಎಂದು ತಮ್ಮ ಇಳಿವಯಸ್ಸಿನಲ್ಲಿ ಚಪ್ಪಾಳೆ ಗಿಟ್ಟಿಸಿಕೊಂಡು ಸಂಭ್ರಮಿಸಿದ್ದರು.

ನಟ ರಾಘವೇಂದ್ರ ರಾಜ್‌ಕುಮಾರ್ ತಮ್ಮ '13' ಚಿತ್ರ ತೆರೆಕಾಣಲಿರುವುದರ ಅಂಗವಾಗಿ ಇತ್ತೀಚೆಗೆ ನೀಡಿದ ಸಂದರ್ಶನವೊಂದರಲ್ಲಿ 'ಅಭಿನಯವೇ ನನಗೆ ಚಿಕಿತ್ಸೆ. ಲಕ್ವ ಹೊಡೆದು ಚೇತರಿಸಿಕೊಂಡ ನಂತರ ಸಿನಿಮಾ ಚಿತ್ರೀಕರಣದಲ್ಲಿ ಭಾಗವಹಿಸುವುದು ಒಂದು ರೀತಿಯ ಚಿಕಿತ್ಸೆಯಂತೆ ಭಾಸವಾಗುತ್ತದೆ' ಎಂದು ಹೇಳಿದ ಅನುಭೂತಿಯ ಸಂಗತಿ ಓದಿದಾಗ, ವೀರಭದ್ರಪ್ಪ ಅವರ ಚಿತ್ರ ಥಟ್ಟನೆ ಕಣ್ಣ ಮುಂದೆ ಬಂದಿತು.

ಕಲೆಗೆ ಒಂದು ವಿಚಿತ್ರ ಶಕ್ತಿ ಇದೆ. ಅದು ಎಲ್ಲ ದುರಿತ ಕಾಲಗಳಲ್ಲಿ 'ಮಂತ್ರಶಕ್ತಿ'ಯಾಗಿ ಸಮಾಜವನ್ನು ಪೊರೆಯುತ್ತದೆ. ಮುದುಡಿದ ಮನಸ್ಸನ್ನು ಕ್ಷಣಮಾತ್ರದಲ್ಲಿ ಅರಳಿಸುತ್ತದೆ. ದೇಹದಲ್ಲಿ ಸಂತೋಷದ ಹೊಳೆ ಉಕ್ಕುವಂತೆ ಮಾಡುತ್ತದೆ. ಕಲಾವಿದರಿಗೆ ವಯಸ್ಸಾಗುತ್ತದೆ, ಆದರೆ ಮುಪ್ಪು ಬರುವುದಿಲ್ಲ. ಯಾವ ಕಲಾವಿದನೂ ದುರ್ಬಲನಲ್ಲ ಎನ್ನುತ್ತಿದ್ದರು ಡಿವಿಜಿ.

ಪಿಟೀಲು ವಾದಕರಾಗಿದ್ದ ಟಿ.ಎನ್.ಕೃಷ್ಣನ್ 80ರ ಗಡಿ ದಾಟಿದ ನಂತರವೂ ಕಾರ್ಯಕ್ರಮ ಕೊಡುತ್ತಿದ್ದರು. ವೇದಿಕೆ ಹತ್ತಿ ಬರುವುದಕ್ಕೆ ಅವರಿಗೆ ತುಂಬಾ ಕಷ್ಟವಾಗುತ್ತಿತ್ತು. ಪಿಟೀಲು ಕೈಗೆತ್ತಿಕೊಳ್ಳುತ್ತಲೇ ಅವರು ತರುಣರಾಗಿ ಬಿಡುತ್ತಿದ್ದರು. 'ನನಗೆ ಮುಪ್ಪು ಬಂದಿರುವುದು ತಿಳಿಯುತ್ತದೆ. ಆದರೆ ಯಾವಾಗ ಕೈಗೆ ಈ ಪಿಟೀಲು ಬರುತ್ತದೋ ಆಗ ವೃದ್ಧಾಪ್ಯ ಮರೆತು 18ರ ಯೌವನ ಮರುಕಳಿಸುತ್ತದೆ' ಎಂದು ಅವರು ಹೇಳುತ್ತಿದ್ದರು.

ಬದುಕಿನ ನಿರಂತರ ಸಂತೋಷಕ್ಕೆ ಕಲೆಯೊಂದು ಜೊತೆಗಿರಬೇಕು. ಅದನ್ನು ಶ್ರದ್ಧೆ, ಶ್ರಮ, ತಾಳ್ಮೆ, ಸತತ ಅಭ್ಯಾಸದಿಂದ ಉನ್ನತೀಕರಿಸಿಕೊಳ್ಳಬೇಕು. ಕಲಾಕ್ಷೇತ್ರದಲ್ಲಿ ಹೆಚ್ಚು ಗಳಿಕೆ ಇಲ್ಲ ಎಂಬ ಮಾತೊಂದು ಇದೆ. ಆದರೆ ಸಂತೋಷ ಕೂಡ ದೊಡ್ಡ ಸಂಪತ್ತು ಎಂಬುದನ್ನು ಮರೆಯಬಾರದು.

ಬದುಕಿನ ಅರ್ಥವನ್ನು ಶೋಧಿಸುವ ಶಕ್ತಿ ಕಲೆಗೆ ಮಾತ್ರ ಇದೆ. ಅದು ಬದುಕಿಗೆ ಹೊಸ ಆಯಾಮ ಕೊಡುತ್ತದೆ. ಮುಖ್ಯವಾಗಿ, ಎಲ್ಲ ಕಲೆಗಳು ಬಹುತ್ವದ ಧ್ವನಿಯಾಗಿರುತ್ತವೆ. ವಿಧಾನಸಭೆ, ಲೋಕಸಭೆಯ ಕಲಾಪಗಳು ಜಡಗೊಂಡಾಗ ಕಾವ್ಯದ ಒಂದು ಸಾಲು ಉಲ್ಲೇಖವಾದರೆ ಹೊಸ ಉತ್ಸಾಹ ಮೂಡುತ್ತದೆ. ಬಜೆಟ್ ಮಂಡನೆಯಲ್ಲಿ ಕಾವ್ಯದ ಸಾಲುಗಳನ್ನು ಉಲ್ಲೇಖಿಸುವುದು ಒಂದು ಒಳ್ಳೆಯ ಸಂಪ್ರದಾಯವಾಗಿ ರೂಪುಗೊಂಡಿದೆ. ಕಾವ್ಯವು ಬಜೆಟ್‌ಗಿಂತಲೂ ಹೆಚ್ಚು ತೂಗುತ್ತದೆ.

ಅಂತರಿಕವಾದ ಒಳಬೇಗುದಿಗಳಿಂದ ಬಿಡುಗಡೆ ಆಗಲು ಕಲೆ ಒಂದು ಉತ್ತಮ ಮಾಧ್ಯಮ, ದಿವ್ಯ ಔಷಧಿ. ಕಲೆಯ ಅಭ್ಯಾಸವೇ ಒಂದು ಧ್ಯಾನ. ಕಲೆ ಯಾವತ್ತೂ ಪ್ರಭುತ್ವದ ಸ್ನೇಹಿತ ಅಲ್ಲ. ಅದು ಸದಾ ಪ್ರತಿಪಕ್ಷವಾಗಿ ಕೆಲಸ ಮಾಡುತ್ತದೆ. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಜನರನ್ನು ಬಡಿದೆಬ್ಬಿಸುವ ಹಾಡುಗಳು ಎಲ್ಲ ಭಾಷೆಗಳಲ್ಲಿಯೂ ಹುಟ್ಟಿಕೊಂಡವು. ಇವು ಜನರ ಮನಸ್ಸನ್ನು ಗಾಢವಾಗಿ ತಟ್ಟಿ ಸ್ವಾತಂತ್ರ್ಯ ಹೋರಾಟಕ್ಕೆ ಸೆಳೆದವು. ಪ್ರತ್ಯೇಕ ತೆಲಂಗಾಣ ರಾಜ್ಯ ಹೋರಾಟಕ್ಕೆ ಕಾವು ಬಂದದ್ದು ಕ್ರಾಂತಿಕಾರಿ ಕವಿ ಗದ್ದರ್ ಅವರ ಹಾಡುಗಳಿಂದ.

ಚಳವಳಿಗಳನ್ನು ರೂಪಿಸುವಲ್ಲಿ ಕಲೆಯ ಪಾತ್ರ ದೊಡ್ಡದು. ಯುದ್ಧ, ರೋಗಬಾಧೆ, ಅತಿವೃಷ್ಟಿ, ಅನಾವೃಷ್ಟಿ, ವಿಪ್ಲವಗಳು ಹುಟ್ಟಿಕೊಂಡಾಗ ಕಲೆ ಪರ್ಯಾಯ ಮಾರ್ಗಗಳನ್ನು ಶೋಧಿಸುತ್ತದೆ. ಕೊರೊನಾ ತೀವ್ರವಾಗಿದ್ದ ಕಾಲಘಟ್ಟದಲ್ಲಿ ಅನೇಕರು ಸಾಹಿತ್ಯ ರಚನೆ, ಸಂಗೀತ ಮತ್ತು ಭಾಷೆಗಳ ಕಲಿಕೆಯಲ್ಲಿ ತೊಡಗಿದ್ದನ್ನು ನೆನೆಯಬಹುದು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜೈಲುಸೇರಿದವರು ಖಿನ್ನತೆಗೆ ಒಳಗಾಗದಂತೆ ಕಾಪಾಡಿಕೊಳ್ಳಲು ಓದುವ, ಬರೆಯುವ, ಬೇರೆ ಭಾಷೆಗಳನ್ನು ಕಲಿಯುವ ಹವ್ಯಾಸವನ್ನು ಬೆಳೆಸಿಕೊಂಡಿದ್ದರು.



ಕಲೆಗೆ ಜಾತಿ, ಧರ್ಮ, ಭಾಷೆಯ ಗಡಿಗಳಿಲ್ಲ. ತಳ ಸಮುದಾಯದ ಜಾನಪದ ಕಲಾವಿದ ಸನಾದಿ ಅಪ್ಪಣ್ಣ, ಕಲೆಯಿಂದ ಕೀಳರಿಮೆಯನ್ನು ಗೆಲ್ಲುವುದು ಸಾಧ್ಯವಾಯಿತು ಎಂದು ಹೇಳುತ್ತಿದ್ದರು. ಸನಾದಿ ನುಡಿಸಲು ಪೂಜೆ ವೇಳೆಗೆ ಅವರಿಗೆ ಬೀಳಗಿ ಮಂದಿರದ ಪ್ರವೇಶ ದೊರೆಯುತ್ತಿತ್ತು. ಎಸ್ಕಿಮೊ ಜನರು ಹಿಮದ ಕೆಳಗೆ ಸಿಲುಕಿದಾಗ ಸಾವಿನ ಭೀತಿ ಗೆಲ್ಲಲು ಒಬ್ಬರಿಗೊಬ್ಬರು ಕಥೆ ಹೇಳುತ್ತಾರಂತೆ. ಕಥೆ ಹೇಳುವುದು ಮತ್ತು ಕಥೆ ಕಟ್ಟುವ ಕಲೆ ಎಸ್ಕಿಮೊ ಜನರ ಬದುಕಿನ ಭಾಗವೇ ಆಗಿದೆ.

ಮಕ್ಕಳು ಪಠ್ಯದ ಆಚೆಗೆ ಲಲಿತಕಲೆ, ಸಂಸ್ಕೃತಿ, ಸಾಹಿತ್ಯದ ಬಗ್ಗೆ ಒಲವು ಬೆಳೆಸಿಕೊಳ್ಳುವಂತೆ ಪ್ರೇರೇಪಿಸುವುದು ಬಹಳ ಅವಶ್ಯ. ಪರೀಕ್ಷೆಯಲ್ಲಿ ಪಡೆದ ಅಂಕಗಳಿಂದ ಅಲ್ಲ, ಕಲೆಯಿಂದ ಮಾತ್ರ ಅವರು ಮುಂದಿನ ಬದುಕು ಎದುರಿಸುವ ಸಾಮರ್ಥ್ಯ ಪಡೆದುಕೊಳ್ಳಬಲ್ಲರು.

ಮನೆಯಲ್ಲಿ ಬೆಳಗಿನ ಉಪಾಹಾರ ತಡವಾದರೆ 'ಮುನಿಸು ತರವೇ ಮುಗುದೆ, ಹಿತವಾಗಿ ನಗಲೂ ಬಾರದೆ' ಎಂದು ಕವಿ ಸುಬ್ರಾಯ ಚೊಕ್ಕಾಡಿ ಅವರ ಭಾವಗೀತೆಯನ್ನು ಸಣ್ಣಗೆ ಹಾಡಿದರೆ ಸಾಕು, ಕೆಲವೇ ಕ್ಷಣಗಳಲ್ಲಿ ಉಪ್ಪಿಟ್ಟಿನ ಘಮಘಮ ವಾಸನೆ ಬರುತ್ತದೆ.

ವಾಚಕರ ವಾಣಿ

ಆಟೊ ಚಾಲಕರ ಅಮಾನುಷ ನಡೆ

ಬೆಂಗಳೂರಿನಲ್ಲಿ ಸೋಮವಾರ ನಡೆದ ಬಂದ್ ಸಂದರ್ಭದಲ್ಲಿ ಕೆಲವು ಆಟೊ ಚಾಲಕರು ನಡೆಸಿದ ಅಟಾಟೋಪವನ್ನು ಖಂಡಿಸಬೇಕಿದೆ. ರ್‍ಯಾಪಿಡೊ ಚಾಲಕರು ಸಹ ಎಲ್ಲರ ಹಾಗೆ ಬದುಕು ಕಟ್ಟಿಕೊಳ್ಳಲು ರಾಜಧಾನಿಗೆ ಬಂದ ಯುವಕರೇ ಆಗಿದ್ದಾರೆ. ತಮಗೆ ಆಗಿದೆ ಎನ್ನಲಾದ ಅನ್ಯಾಯದ ವಿರುದ್ಧ ಹೋರಾಟ ಮಾಡುವ ಹಕ್ಕು ಆಟೊ ಚಾಲಕರಿಗೆ ನಿಸ್ಸಂದೇಹವಾಗಿಯೂ ಇದೆ. ಆದರೆ ಇವರಂತೆಯೇ ದುಡಿದು ತಿನ್ನಲು ಬಂದ ಯುವಕರ ಮೇಲೆ ಕೈಮಾಡುವ ಅಮಾನುಷ ನಡೆಯು ಆಟೊ ಚಾಲಕರ ಬಗೆಗಿನ ಸಾರ್ವಜನಿಕ ಅಭಿಪ್ರಾಯವನ್ನು ಇನ್ನಷ್ಟು ಕುಂಠಿತಗೊಳಿಸಿದೆ.

ಕಡಿಮೆ ಖರ್ಚಿನಲ್ಲಿ ಪ್ರಯಾಣ ಬಯಸುವ ಜನರಿಗೆ ಅನುಕೂಲಕರವಾಗಿರುವ ರ್‍ಯಾಪಿಡೊ ಸೇವೆಯನ್ನು ತಡೆಯುವ ಹಕ್ಕನ್ನು ಇವರಿಗೆ ಕೊಟ್ಟವರು ಯಾರು? ಇಂತಹ ಗೂಂಡಾ ನಡೆ ನಿಲ್ಲಲೇಬೇಕು.

ಕೆ.ಪುರುಷೋತ್ತಮ ರೆಡ್ಡಿ, ಪಾವಗಡ

ಸ್ವಾಮೀಜಿಯಿಂದ ಈ ಬಗೆಯ ಹೇಳಿಕೆ ತರವೇ?

ಗೋಹತ್ಯೆ ನಿಷೇಧ ಹಾಗೂ ಮತಾಂತರ ನಿಷೇಧ ಕಾಯ್ದೆಗಳನ್ನು ಮುಂದುವರಿಸಬೇಕು ಎಂದು ಶ್ರೀ ಕೃಷ್ಣಧಾಮ ಚಾತುರ್ಮಾಸ್ಯ ಸಮಿತಿ, ವಿಶ್ವ ಹಿಂದೂ ಪರಿಷತ್ ವತಿಯಿಂದ ಮೈಸೂರಿನಲ್ಲಿ ಆಯೋಜಿಸಿದ್ದ ಧರ್ಮಸಭೆಯಲ್ಲಿ ಪೇಜಾವರ ಮಠಾಧೀಶರ ನೇತೃತ್ವದಲ್ಲಿ ನಿರ್ಣಯಗಳನ್ನು ತೆಗೆದುಕೊಂಡಿರುವುದು (ಪ್ರ.ವಾ., ಸೆ.11) ಸರಿಯಾದ ನಿಲುವಲ್ಲ.

'ವ್ಯವಸ್ಥೆಯಲ್ಲಿ ಇರುವ ದೋಷಗಳನ್ನು ಸರಿಪಡಿಸುವ ಪ್ರಯತ್ನಗಳು ಆಗಬೇಕೆ ವಿನಾ ಧರ್ಮವನ್ನೇ ಕಿತ್ತು ಹೊರಹಾಕುತ್ತೇವೆ ಎಂದು ಹೇಳುವುದಲ್ಲ. ದೇಶದ ತುಂಬ ಸನಾತನ ಧರ್ಮೀಯರು ಇದ್ದಾರೆ' ಎಂದು ಹೇಳಿರುವುದು ಮೇಲ್ನೋಟಕ್ಕೆ ಒಂದರ್ಥದಷ್ಟು ಸರಿ ಎನಿಸುತ್ತದೆ. ಆದರೆ ವಾಸ್ತವದಲ್ಲಿ ಬಹುಪಾಲು ಸ್ವಾಮೀಜಿಗಳು ಸನಾತನ ಎಂದು ರೂಢಿಗತವಾಗಿ ಕರೆಯುತ್ತಿರುವ ಧರ್ಮದಲ್ಲಿನ ದೋಷಗಳನ್ನು ಸರಿಪಡಿಸುವ ಪ್ರಯತ್ನ ಮಾಡುತ್ತಲೇ ಇಲ್ಲ. ಬದಲಿಗೆ ಆ ದೋಷಗಳು ವಿಜೃಂಭಿಸುವುದಕ್ಕೆ ಕಾರಣರಾಗಿರುವುದು ಕಂಡುಬರುತ್ತಿದೆ.

'ಕಿರುತೆರೆ, ಒಟಿಟಿ, ಸಾಮಾಜಿಕ ಮಾಧ್ಯಮಕ್ಕೂ ಸೆನ್ಸಾರ್ ತರಬೇಕು' ಎಂಬ ಅವರ ಆಗ್ರಹ, ಸಂವಿಧಾನದತ್ತವಾದ ವ್ಯಕ್ತಿಯ ವಾಕ್ ಸ್ವಾತಂತ್ರ್ಯವನ್ನು ಕಸಿಯುವ ನಿರಂಕುಶಾಧಿಕಾರದ ಅಭೀಪ್ಸೆಯನ್ನು ವ್ಯಕ್ತಪಡಿಸುತ್ತದೆ. ಮಣಿಪುರದ ಬೆಂಕಿಯ ಬಗ್ಗೆ ಕಳಕಳಿ ವ್ಯಕ್ತಪಡಿಸಿರುವುದು ಪ್ರಶಂಸಾರ್ಹವಾದರೂ ಕಿಡಿ ಹೊತ್ತಿಸಿದವರ ಬಗೆಗೆ ಮತ್ತು ಆ ಕಾಳ್ಗಿಚ್ಚನ್ನು ಆರಿಸಲು ಪ್ರಯತ್ನ ಮಾಡದೇ ಇರುವವರ ಬಗ್ಗೆ ಜಾಣಮೌನ ತಳೆದದ್ದು ಯಾಕೆ ಎಂಬ ಪ್ರಶ್ನೆ ಉಳಿಯುತ್ತದೆ. ಮಹಿಷಾಸುರ ಉತ್ಸವದ ಆಕಾಂಕ್ಷಿಗಳ ತರ್ಕಬದ್ಧವಾದ ಅಭಿಮತವನ್ನು ಗ್ರಹಿಸಲಾಗದೆ, 'ಶಕುನಿ, ದುಶ್ಶಾಸನರ ದಸರಾ' ಎಂದು ಗೇಲಿ ಮಾಡಿರುವುದು ಪಟ್ಟಭದ್ರಹಿತಾಸಕ್ತಿಯ ಸೂಚಕವಾಗಿದೆ. ಇದು ಎಂತಹ ಧಾರ್ಮಿಕತೆ ಅಥವಾ ಸಂಸ್ಕೃತಿ ಎಂದು ವಿಚಾರವಂತ ಸಾರ್ವಜನಿಕರು ಪ್ರಶ್ನಿಸಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ ಮಾತನಾಡಿ, '... ಶ್ರೀಗಳು ಧ್ವನಿ ಎತ್ತಿದರೆ ಮಹದೇವ, ಪರಮೇಶ್ವರರೆಲ್ಲರೂ ಮುದುಡಿಕೊಳ್ಳಬೇಕಾಗುತ್ತದೆ' ಎಂದು ಬೆದರಿಕೆಯ ಧ್ವನಿಯಲ್ಲಿ ಹೇಳಿರುವುದು ವಿಷಾದನೀಯ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಹಣ ಹೋಗುವುದೆಲ್ಲಿಗೆ?!

'ನನ್ನ ಹಣ ಕೂಡ ಬಿಜೆಪಿಗೆ ಹೋಗಲ್ಲ'
ಸಿದ್ದರಾಮಯ್ಯ ಹೇಳಿಕೆ (ಪ್ರ.ವಾ., ಸೆ.12).
ಹೌದು ಸ್ವಾಮಿ! ಜೀವಂತ
ಇರುವವರು ಮಾತ್ರ ಪಕ್ಷಗಳಿಗೆ
ವಲಸೆ ಹೋಗುವುದು,
ಹಣ ಖಂಡಿತಾ ಪಕ್ಷಕ್ಕೆ ಹೋಗಲಾರದು,
ಅದೇನಿದ್ದರೂ ಸ್ಮಶಾನಕ್ಕೆ
ಹೋಗುವುದು ತಾನೇ?!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ರಾಜಕೀಯ ಹೊಟ್ಟೆಪಾಡಿಗಾಗಿ ಅಲ್ಲ

ಎಲ್ಲಾ ಪಕ್ಷಗಳು ಮಾಡುವುದು ತಮ್ಮ ಉಳಿವಿಗಾಗಿ ಎಂದು ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯನ್ನು ಉದ್ದೇಶಿಸಿ ಕೆ.ವಿ.ವಾಸು ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಸೆ. 12). ಇಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಯಾರ ಉಳಿವಿಗಾಗಿ, ಯಾರ ಅಸ್ತಿತ್ವಕ್ಕಾಗಿ ಎಂಬ ಪ್ರಶ್ನೆ ಹುಟ್ಟುತ್ತದೆ. ಈ ಪ್ರಶ್ನೆಗೆ ಉತ್ತರ, ಅದು ದೇಶದ ಉಳಿವಿಗಾಗಿ ಎಂಬ ಉತ್ತರವಾಗದೆ 'ಅಪ್ಪ ಮಕ್ಕಳ ಪಕ್ಷ'ಕ್ಕಾಗಿ (ಕುಟುಂಬ ಪಕ್ಷ) ಎಂಬ ಉತ್ತರವಾಗುತ್ತದೆ. ಏಕೆಂದರೆ ಈ ಹಿಂದೆ ಜೆಡಿಎಸ್ ಅನ್ನು ಕಟ್ಟಿ ಬೆಳೆಸಿದ ಎಂ.ಪಿ.ಪ್ರಕಾಶ್, ಸಿಂಧ್ಯಾ, ಸಿದ್ದರಾಮಯ್ಯನವರಂತಹ ಅನೇಕ ಹಿರಿಯರನ್ನು ಬದಿಗೆ ಸರಿಸಿ, ಜಾತ್ಯತೀತ ಮೌಲ್ಯವನ್ನೂ ಕಡೆಗಣಿಸಿ ಒಮ್ಮೆ ಬಿಜೆಪಿಯೊಂದಿಗೆ ಮತ್ತೊಮ್ಮೆ ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿತು. ಆ ಮೂಲಕ ಅದು ಸಾರ್ವಜನಿಕ ಪಕ್ಷವಾಗದೆ ಕುಟುಂಬದ ಪಕ್ಷವಾಗಿಬಿಟ್ಟಿತು. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸಹ ಜೆಡಿಎಸ್ ಇದೇ ಬಿಜೆಪಿ ಕುರಿತು ಆಡಿದ ಮಾತುಗಳನ್ನು ಗಮನಿಸಿದರೆ ಸಾಕು, ಅದರ ಸೈದ್ಧಾಂತಿಕ ಬದ್ಧತೆ ಎಷ್ಟು ಗೌಣ ಎಂಬುದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಮತದಾರರು ಸಹ ಇದನ್ನು ಮರೆತಿಲ್ಲ ಅಲ್ಲವೇ?

ಇಲ್ಲಿ 'ಎಲ್ಲಾರು ಮಾಡುವುದು ಹೊಟ್ಟೆಗಾಗಿ...' ಎಂಬ ಮಾತು ಕೇಳಿಬರುತ್ತಿರುವುದು ಸಹ ಸರಿಯಲ್ಲ. ಏಕೆಂದರೆ ಹೊಟ್ಟೆಪಾಡಿಗಾಗಿ ಮಾಡಲು ಬೇಕಾದಷ್ಟು ಬೇರೆ ಬೇರೆ ಅವಕಾಶಗಳಿವೆ. ಆದರೆ ರಾಜಕೀಯ ಅದಕ್ಕಾಗಿ ಅಲ್ಲ. ರಾಜಕೀಯ ಇರುವುದು ದೇಶದ ಅನೇಕ ಸಮಸ್ಯೆಗಳನ್ನು ಪರಿಹರಿಸಲು ಮತ್ತು ದೇಶದ ಆರ್ಥಿಕ ಅಭಿವೃದ್ಧಿಗಾಗಿಯೇ ವಿನಾ ಹೊಟ್ಟೆಪಾಡಿನ ರಾಜಕೀಯಕ್ಕಾಗಿ ಅಲ್ಲ. ರೈತರ ಸಂಕಷ್ಟ, ನಿರುದ್ಯೋಗದಂತಹ ಅನೇಕ ಸಮಸ್ಯೆಗಳು ದೇಶವನ್ನು ಕಾಡುತ್ತಿರುವಾಗ ಅವುಗಳ ಪರಿಹಾರಕ್ಕಾಗಿ ಹೋರಾಟ ಮಾಡಿ ಜೆಡಿಎಸ್ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಬಹುದಿತ್ತು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಮಸ್ತ ಭಾರತೀಯರ ಸಾಂವಿಧಾನಿಕ ಹಕ್ಕು

• ತೇಜಸ್ವಿ ಸೂರ್ಯ

ಏಕರೂಪ ನಾಗರಿಕ ಸಂಹಿತೆ ಚರ್ಚೆ

> ಭಾರತೀಯ ಸಂವಿಧಾನದ ಮೂಲ ಆಶಯವನ್ನು ಸರ್ವರಿಗೂ ತಲುಪಿಸುವ, ಸರ್ವರನ್ನೂ ಮುಖ್ಯವಾಹಿನಿಗೆ ತರುವ ಜವಾಬ್ದಾರಿಯುತ ಕಾರ್ಯವನ್ನು ಬಿಜೆಪಿ ಮಾಡುತ್ತಿದೆ. ಪಕ್ಷದ ಸೈದ್ಧಾಂತಿಕ ಬದ್ಧತೆಯ ಪ್ರತೀಕ ಹಾಗೂ ದೇಶದ ಜನರ ಹಿತದೃಷ್ಟಿಯಿಂದ ಯುಸಿಸಿಯು ಶೀಘ್ರವೇ ಜಾರಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ

'ಕುಟುಂಬದ ಒಬ್ಬ ಸದಸ್ಯನಿಗೆ ಒಂದು ನಿಯಮ, ಇನ್ನೊಬ್ಬ ಸದಸ್ಯನಿಗೆ ಮತ್ತೊಂದು ನಿಯಮ ಇರುವ ಪದ್ಧತಿ ಜಾರಿಯಲ್ಲಿದ್ದರೆ ಅಂಥ ಕುಟುಂಬವು ನೆಮ್ಮದಿ, ಶಾಂತಿಯಿಂದ ಬದುಕಲು ಸಾಧ್ಯವೇ? ಹಾಗೆಯೇ, ಭಾರತದಂಥ ರಾಷ್ಟ್ರದಲ್ಲಿ ಎಲ್ಲರಿಗೂ ಸಮಾನ ಕಾನೂನು, ನಾಗರಿಕ ಸಂಹಿತೆ ಜಾರಿಯಾಗಬೇಕಿರುವುದು ಸಂವಿಧಾನದಲ್ಲಿಯೇ ಸೂಚಿತಗೊಂಡಿದೆ'– ಪ್ರಧಾನಿ ನರೇಂದ್ರ ಮೋದಿ.

ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಕುರಿತು ವಿರೋಧ ಪಕ್ಷಗಳು ಅಂತೆ–ಕಂತೆಗಳನ್ನು ಹಬ್ಬಿಸುತ್ತಿವೆ. ಜೊತೆಗೆ, ಈ ಕಾಯ್ದೆಗೆ ಹಿಂದೂ–ಮುಸ್ಲಿಂ ಬಣ್ಣ ಬಳಿದು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿರುವುದು ಅಪರಾಧವೇ ಸರಿ. ಜಗತ್ತಿನ ಎಷ್ಟೋ ದೇಶಗಳಲ್ಲಿ ತ್ರಿವಳಿ ತಲಾಖ್ ರದ್ದಾಗಿದೆ. ಇದನ್ನು ಕೂಡ ಮುಸ್ಲಿಂ ವಿರೋಧಿ ಎಂಬ ರೀತಿಯಲ್ಲಿ ಬಿಂಬಿಸಿ, ಅಲ್ಪಸಂಖ್ಯಾತ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರ ಇರಿಸುವ ಕಾರ್ಯ ಚಾಲ್ತಿಯಲ್ಲಿತ್ತು. ವಿಪಕ್ಷಗಳು ಈ ವಿಷಯವನ್ನು ರಾಜಕೀಯ ದುರುದ್ದೇಶಕ್ಕೆ ಬಳಸಿಕೊಂಡಿದ್ದು ಅಕ್ಷಮ್ಯ.

ಯುಸಿಸಿಯನ್ನು ವಿರೋಧಿಸುತ್ತಿರುವವರು ಮಹಿಳಾ ಹಕ್ಕುಗಳು ಹಾಗೂ ಆಧುನಿಕ ಮನಃಸ್ಥಿತಿಯ ವಿರೋಧಿಗಳು ಎಂಬುದು ಸ್ಪಷ್ಟವಾಗಿದೆ. ತ್ರಿವಳಿ ತಲಾಖ್ ರದ್ದತಿಯಿಂದ ದೇಶದ ಕೋಟ್ಯಂತರ ಮುಸ್ಲಿಂ ಮಹಿಳೆಯರ ಆತ್ಮಗೌರವ, ಹಕ್ಕುಗಳ ರಕ್ಷಣೆಯಾಗಿದೆ. ಆದ್ದರಿಂದ ಈ ಬಗ್ಗೆ ಕೇವಲ ರಾಜಕೀಯದ ಉದ್ದೇಶವಿಟ್ಟುಕೊಂಡು ಮಾಡುತ್ತಿರುವ ವಿರೋಧವನ್ನು ವಿಪಕ್ಷಗಳು ನಿಲ್ಲಿಸಬೇಕು.

ಯುಸಿಸಿ ಇಂದಾಗಿ ಧಾರ್ಮಿಕ ಆಚರಣೆಗಳು, ಮದುವೆ ಪದ್ಧತಿಗಳಲ್ಲಿ ಬದಲಾವಣೆ ಬರಬಹುದು ಎನ್ನುವ ತಪ್ಪು ಕಲ್ಪನೆ ಸಾರ್ವಜನಿಕರಲ್ಲಿದೆ. ಆದರೆ, ಧಾರ್ಮಿಕ ಪದ್ಧತಿ, ಆಚರಣೆಗಳಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಉದಾಹರಣೆಗೆ, ಲಿಂಗಾಯತರು ಮೃತರನ್ನು ಮಣ್ಣು ಮಾಡುವುದಾಗಲಿ ಅಥವಾ ಬ್ರಾಹ್ಮಣರು ದಹನ ಮಾಡುವಂಥ ಪ್ರಕ್ರಿಯೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಕೇವಲ ಆಸ್ತಿ ಹಕ್ಕುಗಳು, ಉತ್ತರಾಧಿಕಾರ, ಒಬ್ಬರಿಗೆ ಎಷ್ಟು ಮದುವೆ ಇಂಥ ವಿಷಯಗಳಲ್ಲಿ ಏಕರೂಪ ಕಾನೂನು ತರುವ ದಿಸೆಯಲ್ಲಿ ಯುಸಿಸಿ ನಿಯಮಾವಳಿಗಳು ಇರಲಿವೆ.

ಯುಸಿಸಿ ಕುರಿತ ಚರ್ಚೆ ಇಂದಿನದಲ್ಲ. ಸಂವಿಧಾನ ರಚನೆ ಸಂದರ್ಭದಲ್ಲಿ ಅಂಬೇಡ್ಕರ್ ಆದಿಯಾಗಿ ಇತರರು ಯುಸಿಸಿ ಜಾರಿಯಾಗಲೇಬೇಕು ಎಂಬುದರ ಕುರಿತಾಗಿ ಸಂಸತ್ತಿನಲ್ಲಿ ಮಂಡಿಸಿರುವ ಅಭಿಪ್ರಾಯ ಕೂಡ ಗಣನೆಗೆ ಅರ್ಹ. ದೇಶದಲ್ಲಿ ಯುಸಿಸಿಯ ಅಗತ್ಯ ಹಾಗೂ ಅದನ್ನು ಜಾರಿಗೊಳಿಸುವ ದಿಸೆಯಲ್ಲಿ ಕ್ರಮ ಕೈಗೊಳ್ಳುವಂತೆ ಶಾಬಾನೊ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸರ್ಕಾರಗಳಿಗೆ ಸೂಚಿಸಿದ್ದು ಗಮನಾರ್ಹ.

ವಿವಿಧ ಧರ್ಮ, ಸಮುದಾಯಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ವೈಯಕ್ತಿಕ ಕಾನೂನುಗಳಿವೆ. ಯುಸಿಸಿಯ ಮೂಲ ಆಶಯ, ಅಸಮಾನತೆಗೆ ಕಾರಣವಾಗುವ ಅಂಶಗಳನ್ನು ತೊಡೆದುಹಾಕಿ, ಸರ್ವರಿಗೂ ಸಮಾನ ಹಕ್ಕುಗಳನ್ನು ಕಲ್ಪಿಸುವುದು. ಜನಸಂಘದ ಕಾಲದಿಂದಲೂ ಪಕ್ಷವು ಏಕರೂಪ ನಾಗರಿಕ ಸಂಹಿತೆಯ ಪರವಾಗಿ ಧ್ವನಿ ಎತ್ತುತ್ತಾ ಬಂದಿದ್ದು, 1967ರಲ್ಲಿ ಪ್ರಥಮ ಬಾರಿಗೆ ತನ್ನ ಪ್ರಣಾಳಿಕೆಯ ಭಾಗವಾಗಿ ಯುಸಿಸಿಯನ್ನು ಪರಿಗಣಿಸಿದ್ದು, ನಮ್ಮ ಪಕ್ಷದ ಸೈದ್ಧಾಂತಿಕ ಬದ್ಧತೆಗೆ ಸಾಕ್ಷಿ.

ಅಲ್ಪಸಂಖ್ಯಾತರ ತುಷ್ಟೀಕರಣದ ನೀತಿಯನ್ನೇ ಕಾಂಗ್ರೆಸ್ ತನ್ನ ಆದ್ಯತೆಯನ್ನಾಗಿ ಮಾಡಿಕೊಂಡಿತು. 1985ರ ಶಾಬಾನೊ ಪ್ರಕರಣವು ಆ ಪಕ್ಷದ ಮುಖವಾಡವನ್ನೇ ಕಳಚಿತು. ಸುಪ್ರೀಂ ಕೋರ್ಟಿನ ತೀರ್ಪನ್ನು ರಾಜೀವ್ ಗಾಂಧಿ ಅವರು ಸಂಸತ್ತಿನಲ್ಲಿ ರದ್ದುಗೊಳಿಸಿದ್ದು, ತುಷ್ಟೀಕರಣದ ನೀತಿಗೆ ಸಂಪೂರ್ಣ ಶರಣಾಗಿದ್ದನ್ನು ಗಮನಿಸಬಹುದು. ಭಾರತದ ಸಂವಿಧಾನದ ಮೂಲ ಆಶಯವೇ ಸಮಾನತೆ. ಧಾರ್ಮಿಕ ಕಾರಣಗಳಿಗಾಗಿ ಹಾಗೂ ವೈಯುಕ್ತಿಕ ಹಿತಾಸಕ್ತಿಗಳಿಗಾಗಿ ಸಂವಿಧಾನವನ್ನು ಮೂಲೆಗುಂಪು ಮಾಡುವುದನ್ನು ಬಿಜೆಪಿ ವಿರೋಧಿಸುತ್ತಲೇ ಬಂದಿದೆ.

ಯುಸಿಸಿ ಪರವಾಗಿ ಸುಪ್ರೀಂ ಕೋರ್ಟ್ 1995ರಲ್ಲಿ ಮತ್ತೊಮ್ಮೆ ಸರ್ಕಾರಕ್ಕೆ ನಿರ್ದೇಶನ ನೀಡಿತು. ದೇಶದ ಶೇ 80ರಷ್ಟು ಜನರು ಈಗಾಗಲೇ ಸಮಾನವಾದ ಏಕರೂಪ ನಿಯಮಗಳಿಗೆ ಒಳಪಟ್ಟಿದ್ದು, ಕೇವಲ ಧಾರ್ಮಿಕ ಕಾರಣಗಳಿಗಾಗಿ ಮುಸ್ಲಿಂ ಮಹಿಳೆಯರು ಸಮಾನ ಹಕ್ಕುಗಳಿಂದ ವಂಚಿತರಾಗುವುದನ್ನು ತಪ್ಪಿಸುವ ಕಾಯ್ದೆಗಳನ್ನು ರೂಪಿಸಿ ಎಂದು ಸರ್ಕಾರಗಳನ್ನು ಒತ್ತಾಯಿಸುತ್ತಲೇ ಬಂದಿದೆ.

'44ನೇ ವಿಧಿಗೆ (ಏಕರೂಪ ನಾಗರಿಕ ಸಂಹಿತೆ) ತಿದ್ದುಪಡಿ ತಂದು, ದೇಶದ ಸಮಸ್ತ ನಾಗರಿಕರಿಗೆ ಒಂದೇ ಕಾನೂನು ಜಾರಿಗೆ ತರಲು ಸಾಧ್ಯವಾಗದಿರುವುದು ವಿಷಾದನೀಯ. ಯುಸಿಸಿ ಅನ್ನು ಜಾರಿಗೆ ತರಲು ಸಾಧ್ಯವಾಗದಿರುವುದಕ್ಕೆ ಸರ್ಕಾರಗಳು ನೀಡುತ್ತಿರುವ ಕಾರಣಗಳು ತೀರಾ ಬಾಲಿಶವಾಗಿವೆ. ಮತಬ್ಯಾಂಕ್ ರಾಜಕಾರಣಕ್ಕೆ ಮಣಿದು, ರಾಷ್ಟ್ರದ ಸಮಗ್ರತೆಗೆ ಧಕ್ಕೆ ತಂದಿರುವುದು ವಿಷಾದನೀಯ' ಎಂದು ಸುಪ್ರೀಂ ಕೋರ್ಟ್ 1995ರಲ್ಲಿ ಹೇಳಿರುವುದು ಗಮನಾರ್ಹ.

ಸುಪ್ರೀಂ ಕೋರ್ಟ್ ಯುಸಿಸಿ ಪರವಾಗಿ ನೀಡಿದ ಅಭಿಪ್ರಾಯದ ಮೇರೆಗೆ ಬಿಜೆಪಿಯು ಯುಸಿಸಿ ಪರವಾಗಿ ಪ್ರತಿಪಾದಿಸುತ್ತಿದೆ.

ಸಾಮಾಜಿಕ ಸುಧಾರಣೆ, ಲಿಂಗ ಸಮಾನತೆ ಹೆಸರಿನಲ್ಲಿ ಸಾಕಷ್ಟು ವಿರೋಧ ಇದ್ದರೂ ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಹಿಂದೂ ಕೋಡ್ ಬಿಲ್ ಅನ್ನು ಜಾರಿಗೆ ತಂದರು. ಇದೇ ಮಾನದಂಡಗಳನ್ನು ಇಟ್ಟುಕೊಂಡು ಅಲ್ಪಸಂಖ್ಯಾತ ಸಮುದಾಯಗಳ ಹೆಣ್ಣುಮಕ್ಕಳಿಗೆ ನ್ಯಾಯ ಒದಗಿಸುವ ಕಾರ್ಯವನ್ನು ಯಾಕೆ ಮಾಡಲಿಲ್ಲ? ಇದು ಇಂದಿಗೂ ಯಕ್ಷಪ್ರಶ್ನೆಯೇ ಅಲ್ಲವೇ? ಸಮಾನತೆ, ಸಾಮಾಜಿಕ ಸುಧಾರಣೆಗಳು ಪ್ರತಿ ಧರ್ಮಕ್ಕೂ ಬೇರೆ ಬೇರೆ ಎನ್ನುವುದಾದರೆ ಅಲ್ಪಸಂಖ್ಯಾತ ಹೆಣ್ಣುಮಕ್ಕಳಿಗೆ ಅನ್ಯಾಯ ಎಸಗಿದಂತೆಯೇ ಅಲ್ಲವೇ?

ಅಂಬೇಡ್ಕರ್ ಅವರ ಅನಿಸಿಕೆ: ಯುಸಿಸಿ ಕುರಿತು ಅತ್ಯಂತ ಸ್ಪಷ್ಟತೆ ಹೊಂದಿದ್ದ ಸಂವಿಧಾನಶಿಲ್ಪ ಡಾ. ಅಂಬೇಡ್ಕರ್ ಅವರು 1948ರ ನವೆಂಬರ್ 23ರಂದು ನಡೆದ ಸಂವಿಧಾನ ರಚನೆ ಸಂದರ್ಭದ ಚರ್ಚೆಯಲ್ಲಿ ಭಾಗವಹಿಸಿ, '1935ರ ವರೆಗೆ ನಾರ್ಥ್ ವೆಸ್ಟ್ ಫ್ರಾಂಟಿಯರ್ ಪ್ರಾವಿನ್ಸ್‌ನ (ಎನ್‌ಡಬ್ಲ್ಯುಎಫ್‌ಪಿ) ಜನರು ಷರಿಯಾ ಕಾನೂನುಗಳನ್ನು ಅನುಸರಿಸುತ್ತಿರಲಿಲ್ಲ. ಮದುವೆ, ಉತ್ತರಾಧಿಕಾರ, ಆಸ್ತಿ ಹಸ್ತಾಂತರ ಹಾಗೂ ಇತರೆ ವಿಷಯಗಳಲ್ಲಿ ಹಿಂದೂ ಕಾನೂನುಗಳನ್ನು ಅನುಸರಿಸುತ್ತಿದ್ದರು. 1939ರ ನಂತರ ತಿದ್ದುಪಡಿ ತರಲಾಯಿತು. ಮಧ್ಯ ಪ್ರಾಂತ್ಯ, ಬಾಂಬೆ ಪ್ರಾಂತ್ಯ ಹಾಗೂ ಯುನೈಟೆಡ್ ಪ್ರಾಂತ್ಯಗಳಲ್ಲಿ ಉತ್ತರಾಧಿಕಾರ ವಿಷಯಕ್ಕೆ ಸಂಬಂಧಿಸಿ ಹಿಂದೂ ಪದ್ಧತಿಯನ್ನೇ ಅನುಸರಿಸಲಾಗುತ್ತಿತ್ತು. ತೀರಾ ಇತ್ತೀಚಿನವರೆಗೆ ಭಾರತದ ಹೆಚ್ಚಿನ ಮುಸ್ಲಿಮರು ಹಿಂದೂ ಕಾನೂನನ್ನೇ ಅನುಸರಿಸುತ್ತಿದ್ದರು. ಆದ್ದರಿಂದ, ಯುಸಿಸಿಯಿಂದ ಅಲ್ಪಸಂಖ್ಯಾತರ ಧಾರ್ಮಿಕ ಹಕ್ಕುಗಳಿಗೆ ಧಕ್ಕೆ ಆಗುತ್ತದೆ ಎಂಬ ವಾದವೇ ಅಪ್ರಸ್ತುತವಾಗುತ್ತದೆ' ಎಂದು ಅಂಬೇಡ್ಕರ್ ಅವರು ಅಭಿಪ್ರಾಯಪಟ್ಟಿದ್ದರು.

ಬಿಜೆಪಿಯ ಸೈದ್ಧಾಂತಿಕ ಬದ್ಧತೆ: ಭಾರತದ ಸಮಗ್ರತೆ, ಅಖಂಡತೆ, ಸಮಾನತೆ ವಿಷಯಗಳಲ್ಲಿ ಇತರ ಪಕ್ಷಗಳಿಗೆ ಗೊಂದಲವಿದೆ. ಆದರೆ, ಜನಸಂಘ ಹಾಗೂ ನಂತರದ ಬಿಜೆಪಿಗೆ ಮಾತ್ರ ಇಂಥ ವಿಷಯಗಳಲ್ಲಿ ಗೊಂದಲಗಳಿಲ್ಲ. ರಾಮಮಂದಿರ ನಿರ್ಮಾಣ, 370ನೇ ವಿಧಿ ಅಡಿಯಲ್ಲಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದತಿ, ಯುಸಿಸಿ ಕುರಿತಾಗಿ ಪಕ್ಷವು ಮೊದಲಿನಿಂದಲೂ ತನ್ನ ಸೈದ್ಧಾಂತಿಕ ಬದ್ಧತೆ ಪ್ರದರ್ಶಿಸಿದೆ.

ಭಾರತೀಯ ಸಂವಿಧಾನದ ಮೂಲ ಆಶಯವನ್ನು ಸರ್ವರಿಗೂ ತಲುಪಿಸುವ, ಸರ್ವರನ್ನೂ ಮುಖ್ಯವಾಹಿನಿಗೆ ತರುವ ಜವಾಬ್ದಾರಿಯುತ ಕಾರ್ಯವನ್ನು ಬಿಜೆಪಿ ಮಾಡುತ್ತಿದೆ. ಯುಸಿಸಿ ಜಾರಿಗೆ ಇಷ್ಟು ವರ್ಷಗಳ ಕಾಲ ಅಡ್ಡಗಾಲು ಹಾಕಿ, ಅದನ್ನು ರಾಜಕೀಯ ಕಾರಣಗಳಿಗಾಗಿ ಬಳಸಿದ್ದು ಯಾವ ಪಕ್ಷಗಳು ಎಂಬುದು ಇಂದು ದೇಶದ ಜನತೆಗೆ ತಿಳಿದಿದೆ. ಬಿಜೆಪಿಯ ಸೈದ್ಧಾಂತಿಕ ಬದ್ಧತೆಯ ಪ್ರತೀಕ ಹಾಗೂ ದೇಶದ ಜನರ ಹಿತದೃಷ್ಟಿಯಿಂದ ಯುಸಿಸಿಯು ಶೀಘ್ರವೇ ಜಾರಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಲೇಖಕ: ಸಂಸದ, ಬಿಜೆಪಿ ಯುವಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ

ಏಕರೂಪ ಅಲ್ಲ, ಸಮಾನ ನಾಗರಿಕ ಸಂಹಿತೆ ಬೇಕು



ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಸಮಾನ ನಾಗರಿಕ ಸಂಹಿತೆ (ಇಸಿಸಿ) ತರುವ ಚರ್ಚೆ ಸಂವಿಧಾನ ರಚನಾ ಸಭೆಯಲ್ಲಿ ನಡೆದಿತ್ತು. ಬಿಜೆಪಿ ಪ್ರತಿಪಾದಿಸುವಂತೆ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಯ ಬಗ್ಗೆ ಅಲ್ಲ. ಸಮಾನ ನಾಗರಿಕ ಸಂಹಿತೆಗೂ ಏಕರೂಪ ನಾಗರಿಕ ಸಂಹಿತೆಗೂ ವ್ಯತ್ಯಾಸ ಇದೆ. 'ಏಕರೂಪ' ಎನ್ನುವುದೇ ಭಾರತದ ಬಹುತ್ವ ಮತ್ತು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು. ಸಮಾನ ನಾಗರಿಕ ಸಂಹಿತೆ ಕುರಿತು ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಚರ್ಚಿಸಿದ್ದರು. ಆದರೆ, ಮತ ಧರ್ಮಗಳನ್ನು ಆಧರಿಸಿದ ವೈಯಕ್ತಿಕ ಕಾನೂನುಗಳು ಹಾಗೂ ಆ ಕಾಲಘಟ್ಟದಲ್ಲಿ ದೇಶ ವಿಭಜನೆ ನಡೆದಿತ್ತು. ಕೆಲವು ಸಂಸ್ಥಾನಗಳು ಇನ್ನೂ ಭಾರತವನ್ನು ಸೇರದೆ ಉಳಿದಿದ್ದವು. ಈ ಕಾರಣಗಳಿಂದ ಭಾರತದಲ್ಲಿ ಸಮಾನ ನಾಗರಿಕ ಸಂಹಿತೆ ಜಾರಿಯಿಂದ ಅವರು ಹಿಂದೆ ಸರಿದಿದ್ದರು.

ಜಾತಿ ಆಧಾರಿತ ತಾರತಮ್ಯ ತಗ್ಗಿಸುವುದು, ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡುವುದು ಸೇರಿದಂತೆ ಹಿಂದೂ ವೈಯಕ್ತಿಕ ಕಾನೂನಿನಲ್ಲಿ ಕೆಲವು ಸಮಾನ ಕೋಡ್‌ಗಳನ್ನು ಸೇರಿಸಲು ಅಂಬೇಡ್ಕರ್ ಮುಂದಾಗಿದ್ದರು. ಆದರೆ, ಹಿಂದೂ ಮಹಾಸಭಾ ಮತ್ತು ಆರ್‌ಎಸ್‌ಎಸ್ ವಿರೋಧಿಸಿದ್ದವು. ಭಾರತದ ಜನರ ಹಿತಕ್ಕಾಗಿ ಈಗ ಬಿಜೆಪಿ ಮತ್ತು ಆರ್‌ಎಸ್‌ಎಸ್, ಅನುಷ್ಠಾನದ ಪ್ರಸ್ತಾವವನ್ನು ಮುಂದಿಟ್ಟಿಲ್ಲ. ಬದಲಾಗಿ ಇವರ ರಾಜಕೀಯ ಹಿತಕ್ಕಾಗಿ ಈ ಹೆಜ್ಜೆ ಇಟ್ಟಿದ್ದಾರೆ.

ಕೇಂದ್ರ ಸರ್ಕಾರಕ್ಕೆ ನಿಜವಾಗಿಯೂ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವ ಇಚ್ಛೆ ಇದ್ದರೆ ದೇಶದಲ್ಲಿ ಎಲ್ಲ ಮತ, ಧರ್ಮ, ಜಾತಿಗಳ ಹುಡುಗ ಮತ್ತು ಹುಡುಗಿ ಮುಕ್ತವಾಗಿ ವಿವಾಹವಾಗಲು ಅವಕಾಶ ಕಲ್ಪಿಸುವ ಕಾನೂನು ತರಲಿ. ಬಿಜೆಪಿಯು ತನ್ನ ರಾಜಕೀಯ ಕಾರ್ಯಸೂಚಿಯ ಭಾಗವಾಗಿ ಒಂದು ರಾಷ್ಟ್ರ, ಒಂದು ಧರ್ಮ, ಒಂದು ಭಾಷೆಯಂತೆಯೇ ಏಕರೂಪ ನಾಗರಿಕ ಸಂಹಿತೆಯನ್ನು ಮುಂದಿಟ್ಟಿದೆ. ಇದು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ವಿರುದ್ಧ ಹಿಂದೂಗಳನ್ನು ಎತ್ತಿಕಟ್ಟುವ ಹುನ್ನಾರದ ಭಾಗವಾಗಿದೆ. ಇದಕ್ಕೆ ನಮ್ಮ ವಿರೋಧವಿದೆ.

ಸಿದ್ದನಗೌಡ ಪಾಟೀಲ, ಸಿಪಿಐ ಮುಖಂಡ

'ಜನಾಭಿಪ್ರಾಯ ಪಡೆಯದಿದ್ದರೆ ಹೇರಿಕೆ'

ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಹಾಗೂ ಹೊಸ ಶಿಕ್ಷಣ ನೀತಿ ಜಾರಿಯ ವಿಚಾರದಲ್ಲಿ ಕೇಂದ್ರ ಸರ್ಕಾರ ಚರ್ಚೆಯನ್ನೇ ನಡೆಸಿರಲಿಲ್ಲ. ಏಕರೂಪ ನಾಗರಿಕ ಸಂಹಿತೆ ಜಾರಿ ವಿಚಾರದಲ್ಲೂ ಚರ್ಚೆ ನಡೆಸಿ ಜನಾಭಿಪ್ರಾಯ ಪಡೆಯದಿದ್ದರೆ ಅದು ಹೇರಿಕೆ ಆಗಲಿದೆ. ರಾಜಕೀಯ ಕಾರಣಕ್ಕೆ ಪದೇ ಪದೇ ಕೇಂದ್ರವು ಒಂದು ಸಮುದಾಯವನ್ನು ಗುರಿಯಾಗಿಸಿ ಕಾನೂನು ಜಾರಿಗೊಳಿಸುತ್ತಿದೆ. ಸದ್ಯಕ್ಕೆ ಏಕರೂಪ ನಾಗರಿಕ ಸಂಹಿತೆ ಜಾರಿ ವಿಚಾರವು ಗೊಂದಲದಿಂದ ಕೂಡಿದೆ. ಜಾರಿ ಉದ್ದೇಶದ ಹಿಂದೆ ಆರ್‌ಎಸ್‌ಎಸ್, ಬ್ರಾಹ್ಮಣ್ಯದ ವೈದಿಕ ಹುನ್ನಾರ ಅಡಗಿರುವಂತೆ ಕಾಣಿಸುತ್ತಿದೆ. ಪ್ರಾಮಾಣಿಕ ಉದ್ದೇಶವೇ ಇದ್ದಿದ್ದರೆ ದೇಶದಾದ್ಯಂತ ಚರ್ಚೆ ನಡೆಸಬೇಕಿತ್ತು. ಜನಹಿತಕ್ಕೆ ಆದ್ಯತೆ ನೀಡಬೇಕಿತ್ತು. ಸಂವಿಧಾನ ತಜ್ಞರು ಹಾಗೂ ವಿಚಾರವಂತರಿಗೆ ದೇಶದಲ್ಲಿ ಬರವಿಲ್ಲ. ಅವರ ಸಲಹೆಯಾದರೂ ಪಡೆದುಕೊಳ್ಳಬಹುದಿತ್ತು. ಆದರೆ ಅದನ್ನು ಕೇಂದ್ರ ಸರ್ಕಾರ ಮಾಡುತ್ತಿಲ್ಲ.

ಮಾವಳ್ಳಿ ಶಂಕರ್, ರಾಜ್ಯ ಪ್ರಧಾನ ಕಾರ್ಯದರ್ಶಿ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ)

ಸಿನಿ ಬಿಟ್ಸ್

ಹೊಸ ಚಿತ್ರದಲ್ಲಿ ಜೊತೆಯಾದ ರಮೇಶ್ – ಗಣೇಶ್

ಗೋಲ್ಡನ್ ಸ್ಟಾರ್ ಗಣೇಶ್ ಅವರ 'ಬಾನದಾರಿಯಲ್ಲಿ' ಇದೇ ತಿಂಗಳು ತೆರೆ ಕಾಣಲಿದೆ. 'ಕೃಷ್ಣಂ ಪ್ರಣಯ ಸಖಿ' ಕೈಯಲ್ಲಿದೆ. 'ಗಾಳಿಪಟ–2' ನಿರ್ಮಾಪಕರ ಜೊತೆ ಇನ್ನೊಂದು ಸಿನಿಮಾ ಒಪ್ಪಿಕೊಂಡಿದ್ದಾರೆ. ರಮೇಶ್ ಅರವಿಂದ್ ಕೂಡ 'ದೈಜಿ' ಸಿನಿಮಾ ಒಪ್ಪಿಕೊಂಡಿದ್ದಾರೆ. ಇದಲ್ಲದೆ ಇನ್ನೆರಡು ಸಿನಿಮಾಗಳ ಚಿತ್ರೀಕರಣ ನಡೆಯುತ್ತಿದೆ. ಅದರ ನಡುವೆ ಗೋಲ್ಡನ್ ಸ್ಟಾರ್ ಗಣೇಶ್ ಮತ್ತು ನಟ ರಮೇಶ್ ಅರವಿಂದ್ ಒಂದೇ ಸಿನಿಮಾದಲ್ಲಿ ಒಟ್ಟಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಇತ್ತೀಚೆಗಷ್ಟೇ ಚಿತ್ರದ ಫಸ್ಟ್ ಲುಕ್ ಬಿಡುಗಡೆಗೊಂಡಿದ್ದು, ಇಬ್ಬರು ನಟರೂ ವಿದೇಶಿ ಸೈನ್ಯದಲ್ಲಿ ವಿದೂಷಕರ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಮೊದಲ ನೋಟಕ್ಕೆ ಇಂಗ್ಲಿಷ್ ಸಿನಿಮಾದ ಪೋಸ್ಟರ್‌ನಂತೆ ಕಾಣುತ್ತಿದ್ದು, 'ದಿ ಗ್ರೇಟೆಸ್ಟ್ ಶೋ ಎವರ್ ಸೀನ್' ಎಂಬ ಅಡಿಬರಹವನ್ನು ಪೋಸ್ಟರ್‌ನಲ್ಲಿ ನೀಡಲಾಗಿದೆ.

ರಮೇಶ್ 107ನೇ ಸಿನಿಮಾ, ಗಣೇಶ್ ಅವರ 42ನೇ ಸಿನಿಮಾ ಇದಾಗಿರಲಿದೆ ಎಂದು ಪೋಸ್ಟರ್‌ನಲ್ಲಿ ಹೇಳಲಾಗಿದೆ. ವಿಖ್ಯಾತ್ ಚಿತ್ರ ಪ್ರೊಡಕ್ಷನ್ಸ್ ಮೂಲಕ 'ಪುಷ್ಪಕ ವಿಮಾನ', 'ಇನ್ಸ್‌ಪೆಕ್ಟರ್ ವಿಕ್ರಂ' ಮೊದಲಾದ ಚಿತ್ರಗಳನ್ನು ನಿರ್ಮಿಸಿದ್ದ ನಿರ್ಮಾಪಕ ವಿಖ್ಯಾತ್ ಈ ಸಿನಿಮಾ ಮೇಲೆ ಬಂಡವಾಳ ಹೂಡಿರುವುದರ ಜೊತೆಗೆ ಆ್ಯಕ್ಷನ್ ಕಟ್ ಕೂಡ ಹೇಳುತ್ತಿದ್ದಾರೆ.

ಚಿತ್ರರಂಗಕ್ಕೆ ಕಾಲಿಟ್ಟ ಇಂದ್ರಜಿತ್ ಲಂಕೇಶ್ ಪುತ್ರ

ಹಿರಿಯ ಸಾಹಿತಿ ಪಿ.ಲಂಕೇಶ್ ಅವರ ಮೊಮ್ಮಗ, ನಿರ್ದೇಶಕ ಇಂದ್ರಜಿತ್ ಲಂಕೇಶ್ ಅವರ ಮಗ ಸಮರ್ಜಿತ್ ಲಂಕೇಶ್ 'ಗೌರಿ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ್ದಾರೆ. ಈ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗಷ್ಟೇ ನಡೆಯಿತು.

ಇಂದ್ರಜಿತ್ ಲಂಕೇಶ್ ನಿರ್ದೇಶಿಸುತ್ತಿರುವ ಚಿತ್ರಕ್ಕೆ, ಅವರ ಪತ್ನಿ ಅರ್ಪಿತಾ ಬಂಡವಾಳ ಹೂಡಿದ್ದಾರೆ. ಕಿರುತೆರೆ ನಟಿ ಸಾನಿಯಾ ಅಯ್ಯರ್ ಚಿತ್ರದ ನಾಯಕಿ.

'ನಮ್ಮ ಅಕ್ಕನ ನೆನಪಿನಲ್ಲಿ ಈ ಶೀರ್ಷಿಕೆಯಿಟ್ಟದ್ದೇನೆ. ಈ ಚಿತ್ರ ಯುವಕರಿಗೊಂದು ಸ್ಫೂರ್ತಿದಾಯಕ ಸಿನಿಮಾ ಆಗಲಿದೆ. ಚಿತ್ರದಲ್ಲೊಂದು ಅದ್ಭುತವಾದ ಸಂದೇಶವಿದೆ. ಇದು ನಮ್ಮ ರಾಜ್ಯದ ಕಥೆ. ಇಡೀ ದೇಶಕ್ಕೇ ಇಷ್ಟವಾಗುತ್ತದೆ ಎಂಬ ನಂಬಿಕೆ ನನಗಿದೆ. ಇದೊಂದು ನೈಜ ಘಟನೆಯನ್ನಾಧರಿಸಿದ ಚಿತ್ರ. ಚಿತ್ರದಲ್ಲಿ ಬಹುದೊಡ್ಡ ತಾರಾಗಣವಿದೆ. ಮುಂದಿನ ದಿನಗಳಲ್ಲಿ ಒಂದೊಂದೇ ವಿಷಯಗಳನ್ನು ಹಂಚಿಕೊಳ್ಳುತ್ತಾ ಹೋಗುವೆ' ಎನ್ನುತ್ತಾರೆ ಇಂದ್ರಜಿತ್.

ಈ ಚಿತ್ರಕ್ಕೆ ಜೆಸ್ಸಿ ಗಿಫ್ಟ್ ಮತ್ತು ಚಂದನ್ ಶೆಟ್ಟಿ ಸಂಗೀತ ಸಂಯೋಜಿಸುತ್ತಿದ್ದಾರೆ. ಎ.ಜೆ. ಶೆಟ್ಟಿ ಅವರ ಛಾಯಾಗ್ರಹಣವಿದ್ದು, ಮಾಸ್ತಿ ಮಂಜು ಮತ್ತು ಬಿ.ಎ. ಮಧು ಸಂಭಾಷಣೆಯಿದೆ. 'ಕಾಂತಾರ' ಚಿತ್ರದ ಖ್ಯಾತಿಯ ಮಾನಸಿ ಸುಧೀರ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಸಾನಿಯಾ ಅಯ್ಯರ್, ಸಮರ್ಜಿತ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಭಾರತದ ನ್ಯಾಯಮೂರ್ತಿ ದಲ್ವೀರ್ ಭಂಡಾರಿ ಅಂತರರಾಷ್ಟ್ರೀಯ ನ್ಯಾಯಾಲಯದ (ಐಸಿಜೆ) ಮುಖ್ಯ ನ್ಯಾಯಮೂರ್ತಿಯಾಗಿ ಆಯ್ಕೆಯಾಗಿದ್ದಾರೆ. ಈ ಹುದ್ದೆಗಾಗಿ ನಡೆದ ಚುನಾವಣೆಯಲ್ಲಿ ದಲ್ವೀರ್ ಭಂಡಾರಿ ಅವರು, ಬ್ರಿಟನ್‌ನ ನ್ಯಾಯಮೂರ್ತಿ ಕ್ರಿಸ್ಟೋಫರ್ ಗ್ರೀನ್‌ವುಡ್ ಅವರನ್ನು ಸೋಲಿಸಿದರು. ಈ ಹುದ್ದೆಯ ಮೇಲೆ 71 ವರ್ಷಗಳಿಂದ ಇದ್ದ ಬ್ರಿಟನ್‌ನ ಏಕಸ್ವಾಮ್ಯವನ್ನು ಅವರು ಮುರಿದಿದ್ದಾರೆ. ಇದನ್ನು ಸಾಧಿಸಲು ಪ್ರಧಾನಿ ನರೇಂದ್ರ ಮೋದಿ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಕಳೆದ 6 ತಿಂಗಳಿಂದ ಶ್ರಮಿಸಿತ್ತು. ಮೋದಿ ಅವರ ಶ್ರಮದಿಂದಾಗಿಯೇ 193 ಮತಗಳಲ್ಲಿ ದಲ್ವೀರ್ ಅವರಿಗೆ 183 ಮತಗಳು ಬಂದವು' ಎಂಬ ವಿವರ ಇರುವ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ ಇದು ಸುಳ್ಳು ಸುದ್ದಿ.

✓ ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರು ಎಂಬ ಹುದ್ದೆಗಳಷ್ಟೇ ಇವೆ. ಅದರಲ್ಲಿ ಮುಖ್ಯನ್ಯಾಯಮೂರ್ತಿ ಎಂಬ ಹುದ್ದೆ ಈ ಹಿಂದೆ ಎಂದಿಗೂ ಇರಲಿಲ್ಲ. ಈಗಲೂ ಇಲ್ಲ. ಇನ್ನು ನ್ಯಾಯಮೂರ್ತಿ ದಲ್ವೀರ್ ಸಿಂಗ್ ಅವರು ಅಂತರರಾಷ್ಟ್ರೀಯ ನ್ಯಾಯಾಲಯದ ಸದಸ್ಯರಾಗಿದ್ದಾರೆ. ಅವರು ಮೊದಲ ಬಾರಿ ಈ ಸದಸ್ಯತ್ವ ಪಡೆದುಕೊಂಡದ್ದು 2012ರ ಏಪ್ರಿಲ್ 27ರಂದು. ಎರಡನೇ ಬಾರಿಗೆ ಆಯ್ಕೆಯಾಗಿದ್ದು 2018ರ ಫೆಬ್ರುವರಿ 6ರಂದು. ಹೀಗಾಗಿ ಮೋದಿ ಅವರ ಶ್ರಮದಿಂದಾಗಿ ನ್ಯಾಯಮೂರ್ತಿ ದಲ್ವೀರ್ ಭಂಡಾರಿ ಅವರು ಐಸಿಜೆಯ ಮುಖ್ಯನ್ಯಾಯಮೂರ್ತಿಯಾಗಿ ಚುನಾಯಿತರಾದರು ಎಂಬುದು ಸುಳ್ಳುಸುದ್ದಿ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಸೆಪ್ಟೆಂಬರ್ 13, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಚತುರ್ದಶಿ ಗಂ. 28-50 ನಕ್ಷತ್ರ: ಮಘ ಗಂ. 26-01 ಯೋಗ: ಸಿದ್ಧ ಗಂ. 26-07 ಕರಣ: ವಿಷ್ಟಿ ಗಂ. 15-36, ಸಿಂಹ ಮಾಸದ 27 ನೇ ದಿನ,
ಮಳೆನಕ್ಷತ್ರ: ಪೂರ್ವ ಫಲ್ಗುಣಿ 4. ರಾಹುಕಾಲ : ಮಧ್ಯಾಹ್ನ 12-00 – 01-30,
ಸೂರ್ಯೋದಯ : 06-23 ಸೂರ್ಯಾಸ್ತ : 06-30, ಮುಸ್ಲಿಂ ದಿನಾಂಕ : 27 ಸಫರ್
ದಿನ ಭವಿಷ್ಯ : ಅಘೋರ ಚತುರ್ದಶಿ, ಅಖೇರಿ ಚಹಾರ್ ಶುಂಬಾ (ಮುಸ್ಲಿಂ)
ಅದೃಷ್ಟ ಸಂಖ್ಯೆ : 8, 10

ಮೇಷ: ನಿಮ್ಮ ಬುದ್ಧಿವಂತಿಕೆ ಹಾಗೂ ಯೋಜನೆಗಳು ಸಂವಹನವನ್ನು ಸುಲಭಗೊಳಿಸುತ್ತದೆ. ಎಲ್ಲರೊಂದಿಗೆ ಸಹಕಾರ ಭಾವನೆಯಿಂದ ಮುಂದುವರಿಯಿರಿ. ಯಶಸ್ಸು ನಿಮ್ಮನ್ನು ಹುಡುಕಿಕೊಂಡು ಬರುವುದರಿಂದ ಸಂತಸ.

ವೃಷಭ: ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿಯೇ ಉತ್ತಮ ಸಂಬಂಧ ಕೂಡಿ ಬರುವುದು. ಕುಟುಂಬದ ಸದಸ್ಯರೊಂದಿಗೆ ಸಂತಸದಲ್ಲಿ ಕಾಲ ಕಳೆಯುವಂತಾಗುವುದು. ನಿಮ್ಮ ನಂಬಿಕೆಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ.

ಮಿಥುನ: ಸಮಾಜದಲ್ಲಿ ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಪಾಠವನ್ನು ಇಂದಿನ ದಿನವೇ ನಿಮಗೆ ಬೋಧಿಸುವುದು. ರಾಜಕೀಯ ವ್ಯಕ್ತಿಗಳಿಗೆ ಸೂಕ್ತವಾದ ಸ್ಥಾನಮಾನ ಲಭ್ಯವಾಗಲಿದೆ. ಸಿಹಿ ತಿನಿಸುಗಳ ತಯಾರಕರಿಗೆ ಲಾಭದ ದಿನ.

ಕರ್ಕಾಟಕ: ಮಕ್ಕಳೊಂದಿಗೆ ವ್ಯವಹಾರದ ವಿಚಾರಗಳ ಬಗ್ಗೆ ಸುಧೀರ್ಘ ಮಾತುಕತೆ ನಡೆಸುವಿರಿ. ಕರಕುಶಲ ವಸ್ತುಗಳ ತಯಾರಿಕಾ ವೃತ್ತಿಗಳಿಂದ ಹೆಚ್ಚಿನ ವರಮಾನ. ಸಮಸ್ಯೆ ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು.

ಸಿಂಹ: ಉದ್ಯೋಗ ಬದಲಾವಣೆಯ ಯೋಚನೆ ಮಾಡುವವರು ಸದ್ಯದ ಪರಿಸ್ಥಿತಿಯಲ್ಲಿ ಇರುವ ಕೆಲಸದಲ್ಲೇ ತೃಪ್ತಿಪಡುವುದು ಒಳ್ಳೆಯದು. ಉದ್ಯೋಗವನ್ನು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಮೂಲಕ ದೊರಕಿಸಿಕೊಳ್ಳಬಹುದು.

ಕನ್ಯಾ: ಸಾಮಾಜಿಕ ಬದುಕಿನಲ್ಲಿ ಉತ್ತಮ ಸಾಧನೆಯನ್ನು ಮಾಡಲು ಸೂಕ್ತವಾದ ಅವಕಾಶ ಸಿಗಲಿದೆ. ಅಧಿಕ ಒತ್ತಡದ ಕೆಲಸ ದೇಹಕ್ಕೆ ಆಯಾಸವನ್ನು ಮಾಡಲಿದೆ. ಧನಾಗಮನಕ್ಕೆ ಯಾವುದೇ ತೊಂದರೆ, ಅಡ್ಡಿ-ಆತಂಕ ಇರುವುದಿಲ್ಲ.

ತುಲಾ: ಕಳೆದ ವಾರದ ನಿಮ್ಮ ಎಲ್ಲ ಕೆಲಸಗಳು ಈ ದಿನ ಸಂಪೂರ್ಣಗೊಂಡು ವಿಪುಲ ಆದಾಯ ಪಡೆದುಕೊಳ್ಳುವಿರಿ. ಸಂಸಾರದ ಹೊಣೆಗಾರಿಕೆಯ ಕಾರಣದಿಂದಾಗಿ ಆದಾಯ ವೆಚ್ಚಗಳು ಸರಿ ಸಮವಾಗಿರುವುದು.

ವೃಶ್ಚಿಕ: ಹೊಸ ಮನೆಯ ಕೆಲಸಗಳು ಮುಕ್ತಾಯದ ಹಂತ ತಲುಪುವುದರಿಂದ ಮನಸ್ಸಿಗೆ ನೆಮ್ಮದಿ. ಕೌಟುಂಬಿಕವಾಗಿ ನೆಲೆ ನಿಂತದ್ದರಿಂದ ಮನಸ್ಸಿಗೆ ಸಮಾಧಾನ. ಖರ್ಚು ವೆಚ್ಚಗಳ ಮೇಲಿನ ಹಿಡಿತ ಅನಿವಾರ್ಯವೆನಿಸುವುದು.

ಧನು: ನಿಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಗುಪ್ತಚರ ಇಲಾಖೆ ಉದ್ಯೋಗಿಗಳಿಗೆ ಸರ್ಕಾರದಿಂದ ಪ್ರಶಸ್ತಿ ಮತ್ತು ಬಹುಮಾನ ದೊರೆಯಲಿದೆ.

ಮಕರ: ಅನಿರೀಕ್ಷಿತವಾಗಿ ಆದ ವರ್ಗಾವಣೆಯಿಂದ ಅನುಕೂಲ ಪಡೆದುಕೊಳ್ಳುವಿರಿ. ಗುಂಪು ಚಟುವಟಿಕೆಗಳಿಗೆ ಈ ದಿನ ನಿಮ್ಮ ಮುಂದಾಳತ್ವ ಅಗತ್ಯವಾಗಿರುವುದು. ಆತ್ಮವಿಶ್ವಾಸದಿಂದ ಹೊಸದಾದ ಕೆಲಸವನ್ನು ಆರಂಭಿಸುವಿರಿ.

ಕುಂಭ: ಕೆಲಸದ ಒತ್ತಡಕ್ಕೆ ದಿನಾಂತ್ಯದಲ್ಲಿ ಶಿರೋವೇದನೆ, ಬೆನ್ನುನೋವು ಎದುರಾಗಬಹುದು. ಹೊಸ ಯೋಜನೆಗಳ ತಯಾರಿ ಕೆಲಸಗಳಿಗೆ ಒಳ್ಳೆಯ ಸಮಯ. ಶ್ರಮ ಜಾಸ್ತಿಯಾದರೂ ಆದಾಯ ಉತ್ತಮ ಸ್ಥಿತಿಯಲ್ಲಿರುತ್ತದೆ.

ಮೀನ: ಮೇಲಧಿಕಾರಿಗಳ ಒತ್ತಾಯಕ್ಕೆ ಮಣಿದು ಕೆಲಸದಲ್ಲಿ ಸತ್ಯ ಮಾರ್ಗವನ್ನು ಬಿಡಬೇಕಾದ ಪರಿಸ್ಥಿತಿ ಎದುರಾಗಬಹುದು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಪರಿಶ್ರಮಕ್ಕೆ ತಕ್ಕಂತೆ ಯಶಸ್ಸು ಸಾಧಿಸಲು ಕಷ್ಟವಾಗುವುದು.

ಹಕ್ಕಿ ಕಲಿಸಿದ ಪಾಠ

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಬೆಳಗಿನ ಹೊತ್ತು ಮನೆಯ ಮುಂದಿನ ಉದ್ಯಾನವನ. ಅಲ್ಲಿ ಅಪ್ಪ-ಮಗ ಕಲ್ಲು ಬೆಂಚಿನ ಮೇಲೆ ಕೂತಿದ್ದಾರೆ. ಮಗ ಸಾಫ್ಟ್‌ವೇರ್ ಉದ್ಯೋಗಿ. ತನ್ನ ಕಂಪ್ಯೂಟರ್‌ನಲ್ಲಿ ಕೆಲಸ ಮಾಡುತ್ತಾ ಇದ್ದಾನೆ.

ಅಪ್ಪನಿಗೆ ಈಗ ವಯಸ್ಸಾಗಿದೆ. ಕಾಯಿಲೆ ಮನುಷ್ಯ. ಆತ ಎದುರಿಗಿನ ಪೊದೆಯನ್ನು ಗಮನಿಸುತ್ತಿದ್ದಾನೆ. ಅಲ್ಲಿ ಟುವ್ವಿ ಹಕ್ಕಿಯೊಂದು ಎಲೆ ಹೊಲಿದು ವಾರದ ಹಿಂದೆಯೇ ಗೂಡು ಕಟ್ಟಿದೆ. ಟುವ್ವಿ ಆಗಾಗ ಬಂದು ಚಿಂವ್ ಎನ್ನುವ ತನ್ನ ಮರಿಗಳಿಗೆ ಬಗೆಬಗೆಯ ಹುಳಗಳನ್ನು ಹಿಡಿದು ತಂದು ತಿನ್ನಿಸುತ್ತಿದೆ.

ಇದನ್ನು ಗಮನಿಸುತ್ತಿರುವ ಅಪ್ಪ ಮಗನಿಗೆ ಕೇಳಿದ ಈ ಹಕ್ಕಿಯ ಹೆಸರೇನು? ಮಗ ತನ್ನ ಕೆಲಸ ನಿಲ್ಲಿಸಿ ಸಮಾಧಾನದಿಂದ ಅಪ್ಪನಿಗೆ ಹಕ್ಕಿಯ ಹೆಸರನ್ನು ಹೇಳಿದ. ಇದನ್ನು ಕೇಳಿಸಿಕೊಂಡ ಅಪ್ಪ ಕೆಲವೇ ಕ್ಷಣಗಳ ನಂತರ ಮತ್ತೆ ಮಗನಿಗೆ ಈ ಹಕ್ಕಿಯ ಹೆಸರೇನು ಎಂದು ಕೇಳಿದ. ಈಗ ಮಗ ಕೊಂಚ ಜೋರಾಗಿ ಆ ಹಕ್ಕಿಯ ಹೆಸರನ್ನು ಕೂಗಿ ಹೇಳುತ್ತಾನೆ. ಹೀಗೆ ಒಂದಷ್ಟು ಕ್ಷಣ ಕಳೆಯುತ್ತವೆ. ಮತ್ತೆ ಅಪ್ಪನದು ಅದೇ ಪ್ರಶ್ನೆ ಪುನರಾವರ್ತನೆ ಆಗುತ್ತದೆ. ಮಗ ಈ ಸಲ ಸಹನೆ ಕಳೆದುಕೊಂಡು ಗದರುವ ಧ್ವನಿಯಲ್ಲಿ ಆ ಪಕ್ಷಿಯ ಹೆಸರನ್ನು ಕೂಗಿ ಹೇಳುತ್ತಾನೆ. ಕೊಂಚವೂ ಬೇಸರವಾಗದ ಅಪ್ಪ ಸುಮ್ಮನೆ ಕೂತವನು ಮತ್ತೆ ಆ ಹಕ್ಕಿಯ ಹೆಸರೇನು ಎಂದು ಪ್ರಶ್ನಿಸುತ್ತಾನೆ.

ಈ ಸಲ ತನ್ನ ಕೆಲಸ ನಿಲ್ಲಿಸಿ ಎದ್ದು ನಿಂತು ಸಿಟ್ಟು ತೋರಿಸಿ, ಹೊಡೆಯುವ ಭಂಗಿಯಲ್ಲಿ ಅರಚುವ ಮಗ 'ನಿಮಗೆ ಅಷ್ಟೂ ತಿಳಿಯುವುದಿಲ್ಲವೇ? ಒಂದೇ ಪ್ರಶ್ನೆಯನ್ನು ಎಷ್ಟು ಸಲ ಕೇಳುತ್ತೀರಿ. ಪದೇ ಪದೇ ಕೇಳಿ ನನಗೆ ತೊಂದರೆ ಕೊಡುತ್ತಿದ್ದೀರಾ? ನಿಮ್ಮ ಹಾಗೆ ಕೆಲಸವಿಲ್ಲದೆ ನಾನು ಕೂತಿಲ್ಲ' ಎಂದು ದಬಾಯಿಸುತ್ತಾನೆ.

ಅಪ್ಪ ಕ್ಷಣ ಕಾಲ ಬಿಟ್ಟು ಮತ್ತೆ ಯಥಾಪ್ರಕಾರ ಅದೇ ಪ್ರಶ್ನೆಯನ್ನು ಕೇಳಿದಾಗ ಕ್ರುದ್ಧನಾದ ಮಗ ಅಪ್ಪನಿಗೆ ಹೊಡೆಯುವವನಂತೆ ಎದ್ದು ನಿಂತ. ತಣ್ಣಗೆ ಕೂತಿದ್ದ ಅಪ್ಪ ಈ ಸಲ ಪ್ರಶ್ನೆ ಮಾಡುವುದು ಬಿಟ್ಟು ತಾನೊಬ್ಬನೇ ಮಾತಾಡತೊಡಗಿದ. 'ಈ ಹಕ್ಕಿಯ ಸಂತತಿ ಅನೇಕ ವರ್ಷಗಳಿಂದ ನಮ್ಮ ಮನೆ ತೋಟದಲ್ಲಿ ಗೂಡು ಕಟ್ಟುತ್ತಿದೆ. ಆಗ ನೀನು ಚಿಕ್ಕ ಮಗುವಾಗಿದ್ದೆ. ಇದೇ ಈ ಕಲ್ಲು ಬೆಂಚಿನ ಮೇಲೆ ನಿನ್ನ ಕೂರಿಸಿಕೊಂಡು ನಾನು ನಿನಗೆ ಊಟ ಮಾಡಿಸುತ್ತಿದ್ದೆ. ಆಗ ನೀನು ಪ್ರತಿ ಸಲವೂ ಆ ಪಕ್ಷಿಯ ಧ್ವನಿ ಕೇಳಿ 'ಅದರ ಹೆಸರೇನು ಅಪ್ಪ?' ಎಂದು ಬಿಡದೆ ನೂರಾರು ಸಲ ಕೇಳುತ್ತಿದ್ದೆ. ಪ್ರತಿ ಬಾರಿ ನೀನು ಕೇಳಿದಾಗಲೂ ಒಂದು ಅಕ್ಕರೆಯ ಮುತ್ತು ಕೊಟ್ಟು ಆ ಹಕ್ಕಿಯ ಹೆಸರು ಟುವ್ವಿ ಎಂದು ನಗುನಗುತ್ತಾ ಹೇಳುತ್ತಿದ್ದೆ. ನನ್ನ ಮಗ ಪದೇ ಪದೇ ಪ್ರಶ್ನೆ ಕೇಳುತ್ತಿರುವುದೇ ನನಗೆ ಖುಷಿ ಎನಿಸುತ್ತಿತ್ತು' ಎಂದು ಹೇಳಿ ಅಪ್ಪ ಮನೆಯ ಒಳಗೆ ಎದ್ದು ಹೋಗುತ್ತಾನೆ.

ಮಕ್ಕಳು ಒಂದೇ ಪ್ರಶ್ನೆಯನ್ನು ಕುತೂಹಲದಿಂದ ಮತ್ತೆ ಮತ್ತೆ ಕೇಳುವಂತೆ ವಯಸ್ಸಾದ ಜೀವಗಳು ಒಂದೇ ಘಟನೆಯನ್ನು ಮತ್ತೆ ಮತ್ತೆ ಹೇಳುತ್ತಾ, ವಿಚಾರಿಸುತ್ತಾ ಮಗುವಿನಂತಾಗುತ್ತಾರೆ. ಆದರೆ ಬೆಳೆದ ಮಕ್ಕಳಿಗೆ ಇದನ್ನು ಆಲಿಸುವ ತಾಳ್ಮೆ, ಪುರುಸೊತ್ತು ಇರುವುದಿಲ್ಲ. ಯಾರಾದರೂ ತಮ್ಮ ಮಾತು ಕೇಳಲಿ ಎಂದು ಹಿರಿಯರು ಹಂಬಲಿಸುತ್ತಾರೆ. ಈ ಹಪಾಹಪಿ ನಮಗೆ ಅರ್ಥವೇ ಆಗುವುದಿಲ್ಲ. ಇದೆಲ್ಲಾ ತಿಳಿಯುವ ಹೊತ್ತಿಗೆ ಅವರೇ ನಮ್ಮ ನಡುವೆ ಇರುವುದಿಲ್ಲ. ಜನ್ಮ ಕೊಟ್ಟ ತಾಯಿ ತಂದೆ ಬದುಕಿದ್ದಾಗ ಪೀಡೆಗಳಂತೆ ಕೆಲವರಿಗೆ ಕಾಣುತ್ತಾರೆ, ಸತ್ತ ಮೇಲೆ ದೇವರಂತೆ ಅರ್ಥವಾಗುತ್ತಾರೆ. ❖

ಪದಬಂಧ 5440

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉದಯ ಕಾಲದಲ್ಲಿ ಹಿಡಿದಿಟ್ಟ ನೀರು (3)
3.ಇನ್ನೂ ಕರು ಹಾಕದ ಹಸು (3)
4.ಮಣ್ಣಿನ ಪಾತ್ರೆ (3)
6.ಕುಲದೊಳಗಿನ ಕ್ಷೇಮ! (3)
7.ಇದೂ ಸಂಪ್ರದಾಯವಂತೆ! (3)
9.ಕರುವಿಗೆ ತೋರಿದ ದಯೆ! (3)
11.ನಗರದವರೆಲ್ಲ ಒಪ್ಪಿಸಿದ ಕಾಣಿಕೆ (3)
13.ಹೇಳಿದ ದಿನದೊಳಗೇ ಬಂದಿರುವ ಮಂತ್ರಿ! (3)
15.ನಿಧಾನವಾಗಿ ನಡೆದ ಒಪ್ಪಂದ! (3)
17.ಲವಂಗ ಕೇಳುತ್ತಿರುವ ಈತ ದುರಾಚಾರಿ (3)
18.ಸರಿ ಸಮನಾದವನು (3)
19.ಕುಂಬಾರನ ಚಕ್ರ (3)

ಮೇಲಿಂದ ಕೆಳಕ್ಕೆ

1.ಆ ಕೂಸು ಕುಳಿತಿದ್ದು ಈ ಮರಳ ಮೇಲೆಯೇ (3)
2.ಕಮಂಡಲದ ಹತ್ತಿರವಿರುವ ತಾವರೆ (3)
3.ಭಲ್ಲೂಕ ಇಲ್ಲಿದೆ! (3)
5.ಮಣ್ಣು ಕಲೆಸಿದ ನೀರು (3)
7.ವಾದ್ಯವನ್ನು ನುಡಿಸುವಿಕೆ (3)
8.ಕೆನ್ನೆ ಮೇಲೇ ಹರಿದಿದೆ ಈ ನೆತ್ತರು! (3)
9.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
10.ದನಕ್ಕಾಗಿಯೇ ನಡೆದ ಯುದ್ಧ! (3)
12.ಜಲ ತರುವುದೇ ಇಷ್ಟು ತೊಡಕು! (3)
14.ಚಕ ಚಕನೇ ಓದುವವ! (3)
15.ಸಂಗಾತಿ ಹೇಳಿದ ವಿಷಯ (3)
16.ಜೇನುತುಪ್ಪ ಇಲ್ಲಿದೆ (3)



5439ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭವಿ 3.ದುರುಪಯೋಗ
5.ಹಗುರ 7.ಮನಸಾಕ್ಷಿ
9.ತೋಪು 11.ತೋರಣ
12.ವೆನಾ 13.ಕಲರವ
14.ಲಲನೆ 17.ಬುದ್ಧಿಭ್ರಮಣೆ
18.ಪುಟ

ಮೇಲಿಂದ ಕೆಳಕ್ಕೆ:
2.ವಿಗ್ರಹ 3.ದುಡ್ಡು
4.ಗವಾಕ್ಷಿ 6.ರಜತೋತ್ಸವ
7.ಮರಣಕಾಲ 8.ಸಾಸಿವೆ
10.ಪುಕ್ಕಲ 13.ಕರುಬು
15.ನೆನಪು 16.ಜಾಣೆ

ಸುಡೊಕು 5826

						8	2	
8		9						5
	6	5				3		7
	8			1			5	
9		3	5	2	8	4		6
	5			3			8	
5		4		8			7	
2	9		1		7	5		4
		6		4			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5825 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,996
ಇಂದಿನ ಅಂತ್ಯ	19,993
▼	3
ದಿನದ ಕನಿಷ್ಠ	20,110

ವಿನಿಮಯ ದರ

$ ಡಾಲರ್	82.95
£ ಪೌಂಡ್	103.57
€ ಯುರೊ	88.94
¥ ಯೆನ್ (100ಕ್ಕೆ)	56.31

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1750 (1740)
ಸೋಯಾ (ರಿಫೈನ್ಡ್)	₹885 (885)
ಸೂರ್ಯಕಾಂತಿ (ರಿಫೈನ್ಡ್)	₹892 (895)
ಪಾಮೋಲಿನ್	₹820 (822)

ಕೊಬ್ಬರಿ ಧಾರಣೆ

ಅರಸೀಕೆರೆ	₹7500-8426
ಕೆ.ಆರ್.ಪೇಟೆ (ಇತರೆ)	₹8000-8000
ತುರುವೇಕೆರೆ	₹8200-8400

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹100-501
ದ್ವಿತಳಿ (ಬಿ.ವಿ)	₹302-633

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹144
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹126

ಪುಟಿನ್ ಭೇಟಿ, ರಷ್ಯಾದತ್ತ ಕಿಮ್

ಸೋಲ್ (ಎ.ಪಿ): ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭೇಟಿಗಾಗಿ ವಿಶೇಷ ರೈಲಿನಲ್ಲಿ ಉತ್ತರ ಕೊರಿಯಾದ ಅಧ್ಯಕ್ಷ ಕಿಮ್ ಜಾಂಗ್ ಉನ್ ಮಂಗಳವಾರ ತೆರಳಿದರು. ಉಭಯತ್ರರು ಯಾವ ಸ್ಥಳದಲ್ಲಿ ಭೇಟಿಯಾಗಲಿದ್ದಾರೆ ಎಂಬುದು ಖಚಿತವಾಗಿಲ್ಲ.

ಕಿಮ್ ಅವರು ಚರ್ಚೆಯ ವೇಳೆ ಆರ್ಥಿಕ ನೆರವು ಮತ್ತು ಶಸ್ತ್ರಾಸ್ತ್ರ ತಂತ್ರಜ್ಞಾನದ ಸಹಕಾರ ಕೋರುವ ನಿರೀಕ್ಷೆಯಿದೆ. ಮತ್ತೊಂದೆಡೆ, ಉಕ್ರೇನ್ ವಿರುದ್ಧದ ಯುದ್ಧದ ಕಾರಣದಿಂದ ಬರಿದಾಗಿರುವ ಶಸ್ತ್ರಾಸ್ತ್ರಗಳ ಗೋದಾಮು ಭರ್ತಿ ಮಾಡುವ ಅಗತ್ಯ ಪುಟಿನ್ ಅವರಿಗೂ ಇದೆ.

ಕಿಮ್ ಅವರು ತಮ್ಮ ಆಪ್ತ ಸಿಬ್ಬಂದಿ, ಆಡಳಿತ ಪಕ್ಷದ ಕೆಲ ಸದಸ್ಯರು, ಸರ್ಕಾರಿ, ಸೇನಾಅಧಿಕಾರಿಗಳ ಜೊತೆಗೂಡಿ ತೆರಳಿದರು. ಆದರೆ, ಅವರು ತಲುಪುವ ಸ್ಥಳದ ವಿವರ ಬಹಿರಂಗಪಡಿಸಿಲ್ಲ.

ರಷ್ಯಾದ ಕೆಲ ಸುದ್ದಿ ಮಾಧ್ಯಮಗಳ ಪ್ರಕಾರ, ಉಭಯ ಮುಖಂಡರು ವೊಸ್ಟೊಕಿನಿ ಬಾಹ್ಯಾಕಾಶ ಬಂದರಿನಲ್ಲಿ ಭೇಟಿಯಾಗುವ ಸಾಧ್ಯತೆ ಇದೆ. ಈ ಉಡಾವಣಾ ತಾಣವು ಉಸ್ಸುರಿಸ್ಕ್‌ನಿಂದ 900 ಕಿ.ಮೀ ದೂರದಲ್ಲಿದೆ.

ಒಂದು ಮೂಲದ ಪ್ರಕಾರ, ಗಡಿಗೆ ಹೊಂದಿಕೊಂಡಿರುವ ರಷ್ಯಾದ ನಗರ ವ್ಲಾಡಿವೊಸ್ಟೊಕ್‌ನಲ್ಲಿ ಕಿಮ್ ಮತ್ತು ಪುಟಿನ್ ಭೇಟಿಯಾಗುವ ಸಾಧ್ಯತೆ ಇದೆ ಎಂದೂ ಹೇಳಲಾಗಿದೆ. ಈ ಹಿಂದೆ 2019ರಲ್ಲಿಯೂ ಇದೇ ನಗರದಲ್ಲಿ ಉಭಯ ಮುಖಂಡರು ಭೇಟಿಯಾಗಿದ್ದರು.

ಆಹಾರ ವಸ್ತುಗಳ ಬೆಲೆಯಲ್ಲಿ ಅಲ್ಪ ಇಳಿಕೆ ದಾಖಲಾದ ಪರಿಣಾಮ

ಆಗಸ್ಟ್‌ನಲ್ಲಿ ತುಸು ತಗ್ಗಿದ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ/ರಾಯಿಟರ್ಸ್): ಜುಲೈ ತಿಂಗಳಲ್ಲಿ 15 ತಿಂಗಳುಗಳ ಗರಿಷ್ಠ ಮಟ್ಟವಾದ ಶೇಕಡ 7.44ಕ್ಕೆ ತಲುಪಿದ್ದ ಚಿಲ್ಲರೆ ಹಣದುಬ್ಬರ ಪ್ರಮಾಣವು ಆಗಸ್ಟ್‌ನಲ್ಲಿ ಶೇ 6.83ಕ್ಕೆ ಇಳಿಕೆ ಕಂಡಿದೆ. ತರಕಾರಿಗಳ ಬೆಲೆಯಲ್ಲಿ ಇಳಿಕೆ ಕಂಡುಬಂದಿದ್ದು ಚಿಲ್ಲರೆ ಹಣದುಬ್ಬರ ಪ್ರಮಾಣ ತಗ್ಗಲು ಒಂದು ಕಾರಣ.

ಆದರೂ, ಆಗಸ್ಟ್‌ನಲ್ಲಿ ದಾಖಲಾಗಿರುವ ಚಿಲ್ಲರೆ ಹಣದುಬ್ಬರ ಪ್ರಮಾಣವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗರಿಷ್ಠ ಮಟ್ಟಕ್ಕಿಂತ (ಶೇ 6) ಹೆಚ್ಚಿನ ಪ್ರಮಾಣದಲ್ಲಿ ಉಳಿದಿದೆ.

ಆಹಾರ ವಸ್ತುಗಳ ಬೆಲೆ ಏರಿಕೆ ಪ್ರಮಾಣವು ಆಗಸ್ಟ್‌ನಲ್ಲಿ ಶೇ 9.94ಕ್ಕೆ ಇಳಿಕೆ ಕಂಡಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ. ಇದು ಜುಲೈನಲ್ಲಿ ಶೇ 11.51ರಷ್ಟು ಇತ್ತು.

ಹಿಂದಿನ ವರ್ಷದ ಆಗಸ್ಟ್‌ನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 7ರಷ್ಟು ಆಗಿತ್ತು.

ತರಕಾರಿಗಳ ಬೆಲೆ ಏರಿಕೆ ಪ್ರಮಾಣವು ಜುಲೈನಲ್ಲಿ ಶೇ 37.4ರಷ್ಟು ಇದ್ದಿದ್ದು, ಆಗಸ್ಟ್‌ನಲ್ಲಿ ಶೇ 26.14ಕ್ಕೆ ತಗ್ಗಿದೆ. ಕೊಬ್ಬು ಹಾಗೂ ಕೊಬ್ಬಿನ ಅಂಶ ಹೆಚ್ಚಿರುವ ಪದಾರ್ಥಗಳ ಬೆಲೆ ಏರಿಕೆಯು ಆಗಸ್ಟ್‌ನಲ್ಲಿ ಶೇ 15.28ಕ್ಕೆ ತಗ್ಗಿದೆ. ಮಾಂಸ ಮತ್ತು ಮೀನು, ಮೊಟ್ಟೆಗಳು, ಸಕ್ಕರೆ, ಪಾನೀಯಗಳು, ಹಣ್ಣುಗಳು, ಸಿದ್ಧಪಡಿಸಿದ ಊಟ ಹಾಗೂ ತಿನಿಸುಗಳ ಬೆಲೆ ಏರಿಕೆ ಪ್ರಮಾಣದಲ್ಲಿ ಅಲ್ಪ ಹೆಚ್ಚಳ ಆಗಿದೆ.

ಪ್ರಸಕ್ತ ಹಣಕಾಸು ವರ್ಷಕ್ಕೆ ಹಣದುಬ್ಬರ ಪ್ರಮಾಣವು ಶೇ 5.4ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. 'ಈ ಪರಿಸ್ಥಿತಿಯಲ್ಲಿ ಆರ್‌ಬಿಐ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬಹುದು' ಎಂದು ಬ್ಯಾಂಕ್ ಆಫ್ ಬರೋಡ ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ಹೇಳಿದ್ದಾರೆ.

ಕೈಗಾರಿಕಾ ಉತ್ಪಾದನೆಯಲ್ಲಿ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ದರವು ಜುಲೈನಲ್ಲಿ ಐದು ತಿಂಗಳ ಗರಿಷ್ಠ ಮಟ್ಟವಾದ ಶೇ 5.7ಕ್ಕೆ ತಲುಪಿದೆ. ತಯಾರಿಕಾ ವಲಯ, ಗಣಿಗಾರಿಕೆ ಮತ್ತು ಇಂಧನ ವಲಯಗಳಲ್ಲಿ ಉತ್ತಮ ಬೆಳವಣಿಗೆ ಇದಕ್ಕೆ ಕಾರಣ.

ಕೈಗಾರಿಕಾ ವಲಯದ ಬೆಳವಣಿಗೆಯನ್ನು ಹೇಳುವ 'ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ'ವು (ಐಐಪಿ) ಹಿಂದಿನ ವರ್ಷದ ಜುಲೈ ತಿಂಗಳಲ್ಲಿ ಶೇ 2.2ರಷ್ಟು ಇತ್ತು. ಈ ವರ್ಷದ ಜೂನ್ ತಿಂಗಳಲ್ಲಿ ಇದು ಶೇ 3.8ರಷ್ಟು ಆಗಿತ್ತು.

ಏಪ್ರಿಲ್‌ನಿಂದ ಜುಲೈವರೆಗಿನ ಅವಧಿಯಲ್ಲಿ ಐಐಪಿ ಬೆಳವಣಿಗೆಯು ಶೇ 4.8ರಷ್ಟು ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 10ರಷ್ಟು ಬೆಳವಣಿಗೆ ಆಗಿತ್ತು.

ಎನ್‌ಎಸ್‌ಒ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ ಜುಲೈ ತಿಂಗಳಲ್ಲಿ ತಯಾರಿಕಾ ವಲಯದ ಬೆಳವಣಿಗೆ ಪ್ರಮಾಣವು ಶೇ 4.6ರಷ್ಟು ಆಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 3.1ರಷ್ಟು ಇತ್ತು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	750-800
ನಡುಗೋಲು	900-950
ರಾಶಿ	1,000-1,100
ರಾಶಿ ಉತ್ತಮ	1,150-1,200
ಹೆರಕಿದ್ದು	1,600-1,700
ಹಸಿರು ಸಾಧಾರಣ	1,200-1,250
ಹಸಿರು ಉತ್ತಮ	1,600-1,700
ಹಸಿರು ಅತಿ ಉತ್ತಮ	1,900-2,000
ಕಾಳುಮೆಣಸು	- 630

ಅಡಿಕೆ

ಬಂಟ್ವಾಳ

ಕೋಕ	13,000-25,000
ಹೊಸತು	28,000-45,000
ಹಳತು	46,000-48,500

ಕಾರ್ಕಳ

ಹೊಸತು	30,000-45,000
ಹಳತು	40,000-48,500

ಸಾಗರ

ಬಿಳಿಗೋಟು	30,290-32,829
ಚಾಲಿ	36,599-38,579
ಕೆಂಪುಗೋಟು	30,899-35,399
ರಾಶಿ	41,290-49,789
ಸಿಪ್ಪೆಗೋಟು	21,854-21,854

ಶಿವಮೊಗ್ಗ

ಬೆಟ್ಟೆ	45,369-52,599
ಗೊರಬಲು	17,009-37,269
ರಾಶಿ	35,369-50,321
ಸರಕು	54,500-84,540

ಸಿದ್ದಾಪುರ

ಬಿಳಿಗೋಟು	32,269-36,000
ಚಾಲಿ	36,399-41,099
ಕೋಕ	30,019-34,699
ಕೆಂಪುಗೋಟು	29,099-34,099
ರಾಶಿ	44,899-49,399
ತಟ್ಟಿಬೆಟ್ಟೆ	39,109-44,109

ಶಿರಸಿ

ಬೆಟ್ಟೆ	30,699-45,909
ಬಿಳಿಗೋಟು	26,099-36,809
ಚಾಲಿ	37,009-42,199
ಕೆಂಪುಗೋಟು	27,199-38,599
ರಾಶಿ	47,689-51,899

ಯಲ್ಲಾಪುರ

ಆಪಿ	55,299-63,275
ಬಿಳಿಗೋಟು	24,099-36,050
ಚಾಲಿ	37,611-42,099
ಕೋಕ	19,122-31,899
ಕೆಂಪುಗೋಟು	26,899-34,712
ರಾಶಿ	48,001-54,899
ತಟ್ಟಿಬೆಟ್ಟೆ	37,869-47,815

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12,400	12,550	-	152.85 ಸೆಂಟ್ಸ್
ಎಸಿ	6,860	6,200	-	
ಆರ್‌ಪಿ	10,100	10,000	10,000	ಲಂಡನ್
ಆರ್‌ಸಿ	5,830	234	5,900	2439 ಡಾಲರ್ಸ್

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸತೀಶ್ ಕುಮಾರ್, ಬೆಂಗಳೂರು

• **ಪ್ರಶ್ನೆ: ನಾನು ನಿವೃತ್ತ ಜೀವನ ನಡೆಸುತ್ತಿದ್ದು ಪಿಂಚಣಿ ಆದಾಯವಿದೆ. ಕಳೆದ ವರ್ಷ ನನ್ನ ತೆರಿಗೆ ವಿವರ ಸಕಾಲದಲ್ಲಿ ಸಲ್ಲಿಸಿದ್ದೆ. ಆದರೆ, ಕಾರಣಾಂತರದಿಂದ ನನ್ನ ಟಿಡಿಎಸ್ ಮಾಹಿತಿ '26 ಎಎಸ್'ನಲ್ಲಿ ಪ್ರಕಟಗೊಂಡಿರಲಿಲ್ಲ. ನನ್ನ ಆದಾಯಕ್ಕೆ ಸಂಬಂಧಿಸಿ ತೆರಿಗೆ ಇಲ್ಲದ ಕಾರಣ ತೊಂದರೆ ಆಗಲಿಲ್ಲ. ಆದರೆ, ನಂತರದ ದಿನಗಳಲ್ಲಿ ಈ ಬಗ್ಗೆ ನಾನು ಸಂಬಂಧಪಟ್ಟ ಸಂಸ್ಥೆಯೊಡನೆ ವಿಚಾರಿಸಿದಾಗ ಅವರ ಕಡೆಯಿಂದ ತಪ್ಪು ಪ್ಯಾನ್ ಮಾಹಿತಿ ಸಲ್ಲಿಸಿಕೆಯಾದ ವಿಚಾರ ಗೊತ್ತಾಯಿತು. ಬೇರೆ ವ್ಯಕ್ತಿಗಳ ಪ್ಯಾನ್ ಖಾತೆಯಡಿ ನನ್ನ ತೆರಿಗೆ ಕಡಿತ ವಿವರ ಸಲ್ಲಿಸಲಾಗಿತ್ತು. ಈ ಸಮಸ್ಯೆ ಹೇಳಿಕೊಂಡ ನಂತರ ನನ್ನ ಪ್ಯಾನ್ ಖಾತೆಗೆ ತೆರಿಗೆ ವಿವರ ಸರಿ ಮಾಡಿ ಸಲ್ಲಿಸಿರುತ್ತಾರೆ. ಈಗ ನೋಡಿದರೆ ಕಳೆದ ವರ್ಷದ '26 ಎ ಎಸ್' ವಿವರದಲ್ಲಿ ಸರಿಯಾದ ಮಾಹಿತಿ ತೋರಿಸುತ್ತಿದೆ. ಆದಾಯ ತೆರಿಗೆ ಇಲಾಖೆ ನನ್ನ ವಿವರ ಪರಿಶೀಲಿಸಿ ಯಾವುದೇ ಡಿಮಾಂಡ್ ಅಥವಾ ರಿಫಂಡ್ ಇಲ್ಲ ಎನ್ನುವ ಮಾಹಿತಿಯನ್ನು ಈಗಾಗಲೇ ನನಗೆ ಕಳುಹಿಸಿರುತ್ತದೆ. ನನ್ನ ಪ್ರಶ್ನೆ ಏನೆಂದರೆ, ನಾನು ಹಳೆಯ ವರ್ಷದ ತೆರಿಗೆ ವಿವರ ಸರಿ ಮಾಡಲು ಅವಕಾಶವಿದೆಯೇ? ಇದಕ್ಕೆ ಕಾಲಮಿತಿ 31 ಡಿಸೆಂಬರ್ ಎಂದು ತಿಳಿದಿದ್ದೇನೆ. ಆ ಕಾಲಮಿತಿ ಈಗ ಆಗಿಹೋಗಿರುವ ಕಾರಣ ನನಗೆ ಬರಬಹುದಾಗಿದ್ದ ತೆರಿಗೆ ರಿಫಂಡ್ ಈಗ ನಷ್ಟ ಎಂದು ಪರಿಗಣಿಸಿ ಬಿಟ್ಟುಬಿಡಬೇಕಾಗಿದೆಯೇ?**

ಉತ್ತರ: ಆದಾಯ ತೆರಿಗೆಯ ಯಾವುದೇ ವಿವರದಲ್ಲಿನ ಮಾಹಿತಿ ಅವಲೋಕಿಸಿದಾಗ ಮೇಲ್ನೋಟಕ್ಕೆ ದಾಖಲೆಗಳಿಂದ ಗೋಚರಿಸುವ ದೋಷಗಳಿಗೆ ಪರಿಹಾರ ಕಂಡುಕೊಳ್ಳಲು ನಿಮ್ಮ ವಿವರ ಪರಿಷ್ಕರಿಸಬೇಕು. ಆದಾಯ ತೆರಿಗೆಯ ಸೆಕ್ಷನ್ 139(5) ಅಡಿಯಲ್ಲಿ, ಒಬ್ಬ ವ್ಯಕ್ತಿಯು ತನ್ನ ತೆರಿಗೆ ವಿವರವನ್ನು ಸಲ್ಲಿಸಿದ ನಂತರ, ಯಾವುದೇ ಲೋಪ ಅಥವಾ ತಪ್ಪು ಮಾಹಿತಿ ಸಲ್ಲಿಕೆಯಾಗಿರುವುದು ಆತನಿಗೆ ಕಂಡುಬಂದರೆ ಅದನ್ನು ಆಯಾ ಆರ್ಥಿಕ ವರ್ಷದ ಕೊನೆಯಿಂದ 9 ತಿಂಗಳೊಳಗೆ (31 ಡಿಸೆಂಬರ್) ಪರಿಷ್ಕೃತ ವಿವರ ಸಲ್ಲಿಸುವ ಮೂಲಕ ಸರಿಪಡಿಸಬಹುದು. ಆದರೆ ನಿಜವಾದ ಸಮಸ್ಯೆ ಆರಂಭವಾಗುವುದು ಈ ಕಾಲಮಿತಿ ಕಳೆದ ನಂತರ.

ನೀವು ಕೊಟ್ಟ ಮಾಹಿತಿಯಲ್ಲಿ ಇರುವಂತೆ, ಮೇಲೆ ತಿಳಿಸಿದ ಗಡುವು ಮುಗಿದಿದೆ. ಈಗ ಇಂತಹ ಲೋಪ ಸರಿಪಡಿಸಲು ಆದಾಯ ತೆರಿಗೆ ಇಲಾಖೆ ಪ್ರತ್ಯೇಕವಾದ ಒಂದು ಅವಕಾಶ ಕಲ್ಪಿಸಿದೆ. ಅದೆಂದರೆ, ಸಿಪಿಸಿ ಇಲಾಖೆಯಿಂದ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 143(1) ಅಡಿ ನಿಮಗೆ ತೆರಿಗೆ ಅಧಿಕಾರಿಗಳಿಂದ ಬಂದಿರಬಹುದಾದ ಸೂಚನೆ, ಆದೇಶಕ್ಕೆ ಪ್ರತಿಯಾಗಿ ನಿಮ್ಮ ತೆರಿಗೆ ವಿವರದಲ್ಲಿ ತಿದ್ದುಪಡಿ ಕೋರಿ ಸೆಕ್ಷನ್ 154ರ ಅಡಿ ವಿನಂತಿ ಸಲ್ಲಿಸಬೇಕು. ಈ ಕೋರಿಕೆಯನ್ನು ಮೇಲೆ ಉಲ್ಲೇಖಿಸಿದ ಆದೇಶ ಬಂದ ಆರ್ಥಿಕ ವರ್ಷಾಂತ್ಯದಿಂದ ಮುಂದಿನ 4 ವರ್ಷದೊಳಗೆ ಸಲ್ಲಿಸಲು ಅವಕಾಶವಿದೆ. ನಿಮ್ಮ ತೆರಿಗೆ ರಿಫಂಡ್ ಪಡೆಯುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಈಗಾಗಲೇ '26 ಎಎಸ್'ನಲ್ಲಿ ತೆರಿಗೆ ಮಾಹಿತಿ ಇರುವ ಕಾರಣ ನಿಮ್ಮ ಸಮಸ್ಯೆಗೆ ಭಾಗಶಃ ಪರಿಹಾರ ಸಿಕ್ಕಂತಾಗಿದೆ. ಆನ್‌ಲೈನ್ ಪೋರ್ಟಲ್ ಮೂಲಕವೇ ಈ ಸಮಸ್ಯೆಗೆ ತಿದ್ದುಪಡಿ ಸಲ್ಲಿಸಬೇಕಾಗುತ್ತದೆ. ಈ ವಿಚಾರಕ್ಕೆ ಸಂಬಂಧಿಸಿದ ಸಲ್ಲಿಕೆಗಳನ್ನು ತೆರಿಗೆ ಸಲಹೆಗಾರರ ನೆರವು ಪಡೆದು ಮುಂದುವರಿಯಿರಿ.

ಹೆಸರು ಬೇಡ, ಬೆಂಗಳೂರು

• **ಪ್ರಶ್ನೆ: ನಾನು ಬೆಂಗಳೂರಿನಲ್ಲಿ ಒಂದು ಮನೆ ಹೊಂದಿದ್ದೇನೆ. ನಾನು ಉದ್ಯೋಗದಲ್ಲಿದ್ದು ಬರುವ ವೇತನಕ್ಕೆ ಆದಾಯ ತೆರಿಗೆ ಪಾವತಿಸುತ್ತಿದ್ದೇನೆ. ನನ್ನ ಹೆಸರಲ್ಲಿ ಇನ್ನೂ ಒಂದು ಮನೆ ಇದ್ದು ಅದನ್ನು ಬಾಡಿಗೆಗೆ ಕೊಟ್ಟಿರುತ್ತೇನೆ. ತಿಂಗಳ ಬಾಡಿಗೆ ₹40,000 ನನ್ನ ಪತ್ನಿಯ ಹೆಸರಲ್ಲಿ ಆಕೆಯ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿದೆ, ಬಾಡಿಗೆ ಕರಾರನ್ನು ಆಕೆಯ ಹೆಸರಲ್ಲೇ ಮಾಡಿದ್ದೇನೆ. ಬಾಡಿಗೆದಾರರು ತಮ್ಮ ಬಾಡಿಗೆಗೆ ಸಂಬಂಧಿತ ತೆರಿಗೆ ವಿನಾಯಿತಿ ಪಡೆಯಲು ಪ್ಯಾನ್ ಕೇಳುತ್ತಿದ್ದಾರೆ. ನನ್ನ ಸಮಸ್ಯೆ, ಈಗ ಯಾರ ಪ್ಯಾನ್ ಕೊಡಬೇಕೆಂಬುದು. ನನ್ನ ಪ್ಯಾನ್ ಕೊಟ್ಟರೆ ನಾನು ಬಾಡಿಗೆ ಆದಾಯ ಘೋಷಿಸಿ ತೆರಿಗೆ ಕಟ್ಟಬೇಕಲ್ಲ? ಬಾಡಿಗೆ ನನ್ನ ಪತ್ನಿಯೇ ಪಡೆಯುತ್ತಿರುವ ಕಾರಣ ಆಕೆಯ ಪ್ಯಾನ್ ಕೊಟ್ಟರೆ ಸೂಕ್ತವೆನ್ನುವುದು ನನ್ನ ನಿರ್ಣಯ. ಆಕೆಗೆ ಅನ್ಯ ಆದಾಯವಿಲ್ಲ. ಈ ಬಾಡಿಗೆ ಮನೆಯನ್ನು ಸಾಲ ತೆಗೆದುಕೊಂಡು ಕಟ್ಟಿಸಿದ್ದೇನೆ. ಬಾಡಿಗೆದಾರರು ಯಾರದೇ ಪ್ಯಾನ್ ಕೊಟ್ಟರೂ ತೊಂದರೆ ಇಲ್ಲವೆಂದು ಹೇಳಿದ್ದಾರೆ. ಈ ಬಗ್ಗೆ ಸಲಹೆ ನೀಡಿ.**

ಉತ್ತರ: ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 22ರಲ್ಲಿ ತಿಳಿಸಿರುವಂತೆ, ಮನೆಯ ಬಾಡಿಗೆಯಿಂದ ಬರುವ ಆದಾಯದ ತೆರಿಗೆಯು ಮನೆಯ ಒಡೆತನ ಇರುವವರಿಗೆ ಅನ್ವಯಿಸುತ್ತದೆ. ಇಲ್ಲಿ ಬಾಡಿಗೆದಾರ ಯಾರಿಗೆ ತೆರಿಗೆ ಕೊಡುತ್ತಾನೆ ಎಂಬುದಕ್ಕಿಂತ ಮನೆಯ ಒಡೆತನ ಯಾರ ಹೆಸರಲ್ಲಿದೆ ಎನ್ನುವುದು ಮುಖ್ಯ. ಬಾಡಿಗೆಗೆ ಕೊಟ್ಟ ಮನೆ ನಿಮ್ಮ ಹೆಸರಲ್ಲಿರುವ ಕಾರಣ, ನೀವೇ ಆ ಆದಾಯ ಘೋಷಿಸುವುದು ಕಾನೂನು ರೀತಿ ಸರಿ. ಯಾವುದೇ ಮನೆಯನ್ನು ಸಾಲ ಮಾಡಿ ಕಟ್ಟಿಸಿದಾಗ ಸಾಲಕ್ಕೆ ಕಟ್ಟುವ ಸಂಪೂರ್ಣ ಬಡ್ಡಿಗೆ ಆದಾಯ ತೆರಿಗೆ ವಿನಾಯಿತಿ ಸಿಗುತ್ತದೆ. ಹೀಗಾಗಿ ಬಾಡಿಗೆ ಆದಾಯವನ್ನು ಹಾಗೂ ಅದಕ್ಕೆ ಸಂಬಂಧಿಸಿದ ಬಡ್ಡಿಯನ್ನು ನೀವೇ ಘೋಷಿಸಿ ವಿನಾಯಿತಿಯನ್ನು ಪಡೆಯಬಹುದು. ಮನೆಯ ಮಾಲೀಕತ್ವ ನಿಮ್ಮ ಪತ್ನಿಯ ಹೆಸರಲ್ಲಿ ಇಲ್ಲದಿದ್ದರೂ ಅವರ ಹೆಸರಲ್ಲಿ ನೀವು ಕರಾರು ಮಾಡಿಸಿರುತ್ತೀರಿ. ಈ ಹಿನ್ನೆಲೆಯಲ್ಲಿ ಇದನ್ನು ನಿಮ್ಮ ಹೆಸರಲ್ಲೇ ತಿದ್ದುಪಡಿ ಮಾಡಿಕೊಳ್ಳುವುದು ಸೂಕ್ತ ಹಾಗೂ ನಿಮ್ಮದೇ ಪ್ಯಾನ್ ವಿವರ ನೀಡುವುದು ಸಮಂಜಸ.

ಇನ್ನೂ ಒಂದು ವಿಚಾರ ತಿಳಿದಿರಲಿ. ಒಂದು ವೇಳೆ, ನಿಮ್ಮ ಪತ್ನಿಯ ಹೆಸರಲ್ಲಿ ಬಾಡಿಗೆ ಆದಾಯವನ್ನು ಅವರಿಗೆ ಆರ್ಥಿಕ ಭದ್ರತೆ ಒದಗಿಸುವ ದೃಷ್ಟಿಯಿಂದ ಸಿಗುವಂತೆ ಮಾಡುವುದೇ ಆಗಿದ್ದರೆ, ಅದನ್ನು ಕಾನೂನು ಪ್ರಕ್ರಿಯೆಯ ಮೂಲಕ ಮಾಡುವುದು ಒಳಿತು. ಅದೆಂದರೆ, ನಿಮ್ಮ ಮನೆಯ ಒಡೆತನವನ್ನು ಅವರ ಹೆಸರಿಗೆ ವರ್ಗಾಯಿಸುವುದು. ಇದನ್ನು ಉಡುಗೊರೆಯಾಗಿ (ಗಿಫ್ಟ್ ಡೀಡ್) ನೀಡಿ ಹಾಗೂ ನಂತರ ಅವರ ಹೆಸರಲ್ಲಿ ಖಾತೆ ಮಾಡಿಸುವ ಮೂಲಕ ವರ್ಗಾಯಿಸಬಹುದು. ಇಲ್ಲಿ ಸಂಬಂಧಿಕರೊಳಗೆ ಮಾಲೀಕತ್ವ ವರ್ಗಾವಣೆಯಾಗುತ್ತದೆ, ಕಾನೂನು ಮೂಲಕ ಆಸ್ತಿಯ ಹಕ್ಕು ಹಸ್ತಾಂತರವಾಗುತ್ತದೆ. ತದನಂತರ ಬಾಡಿಗೆ ಅವರ ಹೆಸರಲ್ಲೇ ಪಡೆಯಬಹುದು. ಇದು ನಿಮಗೆ ಅನಿವಾರ್ಯವೇ ಆಗಿದ್ದಲ್ಲಿ ಮಾತ್ರ ಮಾಡಿ. ಹಾಗೂ ಬ್ಯಾಂಕ್ ಸಾಲ ಮುಂದುವರಿಯುತ್ತಿರುವ ಕಾರಣ ಬ್ಯಾಂಕ್ ಒಪ್ಪಿಗೆಯೂ ಇದಕ್ಕೆ ಅನಿವಾರ್ಯ. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. ರೂ.12,000- 17,000. 8951315839, 9880120052

ಛಾಬ್ರಿಯಾ & ಸನ್ಸ್ ಕಂಪನಿಗೆ ಡೆಲಿವರಿ ಮತ್ತು ಆಫೀಸ್ ಬಾಯ್ಸ್ ಬೇಕಾಗಿದ್ದಾರೆ.ಸ್ಯಾನಿಟರಿ, ಟೈಲ್ಸ್ ಶೋರೂಂಗಾಗಿ. ಕಮರ್ಷಿಯಲ್ ಸ್ಟ್ರೀಟ್ ಹತ್ತಿರ. ESI& PF. ಕರೆ: 9164887571

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್,ಟಯೋಟಾ, ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 8105161292

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

Drivers

ಆಟೋ ಚಾಲಕರು ಬೇಕಾಗಿದ್ದಾರೆ ಇಲೆಕ್ಟ್ರಿಕ್ ಆಟೋ ಬಾಡಿಗೆಗೆ ಲಭ್ಯವಿದೆ 'ಬ್ಯಾಟರಿ ವೆಚ್ಚ ಕಂಪನಿ ಬರಿಸುತ್ತದೆ' ಪಾರ್ಟ್ ಟೈಮ್ /ಫುಲ್ ಟೈಮ್ ಹಾಗು ನೈಟ್ ಶಿಫ್ಟ್ ಲಭ್ಯವಿದೆ ಆಕರ್ಷಕ ಸಂಬಳ 20000/- ವರೆಗೂ ಪಡೆಯಿರಿ ಕೂಡಲೇ ಸೇರಿಕೊಳ್ಳೋವವರಿಗೆ ಆಕರ್ಷಕ ಬೋನಸ್ ನೀಡಲಾಗುವುದು ಆಸಕ್ತಿಯುಳ್ಳವರು ಮಿಸ್ ಕಾಲ್ ನೀಡಿ 08068960971 / 8496991633

Wanted

ಡ್ರೈ ಕ್ಲೀನಿಂಗ್ ಶೋರೂಮ್ ನ ಜಯನಗರ ಮತ್ತು ಗಾಂಧಿಬಜಾರ್ ಶಾಖೆಗಳಿಗೆ ಶಾಪ್ ಹೆಲ್ಪರ್ಸ್ ಬೇಕಾಗಿದ್ದಾರೆ.ವಯಸ್ಸು 18-40 ವರ್ಷ, ಸಂಬಳ 15,000/- ಬೆಂಗಳೂರು ಜಯನಗರ ಆಸುಪಾಸಿನ ಅಭ್ಯರ್ಥಿಗಳಿಗೆ ಆದ್ಯತೆ. ಕಡ್ಡಾಯವಾಗಿ ಕನ್ನಡದಲ್ಲಿ ಮಾತನಾಡುವ ಪರಿಣಿತಿ ಹೊಂದಿರಬೇಕು. ಸಂಪರ್ಕಿಸಿ: 9880266007

ಭವಿಷ್ಯ

Astrology

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806

ಪ್ರವಾಸ

Travel

17.11.2023 02.12.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 27.10.2023 06.12.2023 ನೇಪಾಳ 9 ದಿನಗಳು. 06.10.2023 23.12.2023 ಭೂತಾನ್ 8 ದಿನಗಳು. 09.10.2023 17.11.2023 11.12.2023 ಶ್ರೀಲಂಕಾ 6 ದಿನಗಳು. 04.10.2023 22.11.2023 06.12.2023 ರಾಜಸ್ಥಾನ್ 9 ದಿನಗಳು. 27.10.2023 25.11.2023 12.12.2023 ಗುಜರಾತ್ 8 ದಿನಗಳು 27.10.2023 27.11.2023 ಅಸ್ಸಾಂ,ಮೇಘಾಲಯ 9 ದಿನಗಳು 06.10.2023 11.11.2023 11.12.2023 ಕಾಶಿ,ಗಯಾ,ಅಲಹಾಬಾದ್ 7 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

ಗುಜರಾತ್ ಪ್ರವಾಸ 12ದಿನ 26.10.23. ನೇಪಾಳ, ಮುಕ್ತಿನಾಥ್,ಕಾಶಿ, 11ದಿನ 21.11.23. ಸಿಂಗಪುರ್ ಮಲೇಶಿಯಾ 7ದಿನ 4.12.23. ಪುರಿಜಗನ್ನಾಥ್ ಪ್ರವಾಸ 3ದಿನ 15.12.23. ರಾಜಸ್ಥಾನ್ ಪ್ರವಾಸ 9ದಿನ 20.12.23.ನಂದಿನಿ ಟೂರಿಸ್ಟ್ 9916574089

ಸೆಪ್ಟಂಬರ್ ಅಕ್ಟೋಬರ್ ತಿಂಗಳಲ್ಲಿ 8/13/21 ದಿನಗಳ ಕಾಶಿ,ಗಯಾ,ಪೂರಿಜಗನ್ನಾಥ್/ ಗಂಗೋತ್ರಿ,ಯಮನೋತ್ರಿ ಬದರಿನಾಥ್,ಕೇದಾರನಾಥ್ ದೆಹಲಿ/ 12 ದಿನಗಳ ಸೋಮನಾಥ್,ದ್ವಾರಕಾ ಮಹಾಕಾಳೇಶ್ವರ,ಮಾತೃಗಯಾ ಅಹಮದಾಬಾದ್ ಓಂಕಾರೇಶ್ವರ್ ಡಿಸೆಂಬರ್ ತಿಂಗಳಲ್ಲಿ 6 ದಿನಗಳ ಕನ್ಯಾಕುಮಾರಿ ರಾಮೇಶ್ವರ,ಮಧುರೈ 'ಶ್ರೀಸುಧಾ ಟ್ರಾವಲ್ಸ್' 9448119290 9019301300

ದಸರಾ ವಿಶೇಷ ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸ: 7 ದಿನಗಳ ಸಿಂಗಾಪುರ್ ಮತ್ತು ಮಲೇಶಿಯಾ. 5 ದಿನಗಳ ಬಾಲಿ. 5 ದಿನಗಳ ಕಾಶ್ಮೀರ್. 9 ದಿನಗಳ ವಿಯೆಟ್ನಾಂ,ಕಾಂಬೋಡಿಯ. 6ದಿನಗಳ ದುಬೈ,ಅಬುದಾಬಿ,ಶಾರ್ಜಾ. ಹಾಗು ಇತರೆ ಪ್ರವಾಸಗಳಿಗೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9900080793 9880079588

10.10.2023ಮತ್ತು 10.11.2023 6ದಿನಗಳು ವಿಮಾನದಲ್ಲಿ ಅಲಹಾಬದ್,ಕಾಶಿ, ಗಯಾ,ಅಯೋಧ್ಯ (ಕೆಲವೇ ಸೀಟುಗಳಿವೆ)24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Land_Package15000/ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 25/10 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ ಪ್ಯಾಕೇಜ್. 22/10 ಹೈದರಾಬಾದ್ 4 ದಿನಗಳ ಪ್ಯಾಕೇಜ್ 9591017782, 9880621353

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
Classifieds
More value, more impact
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

ಮುಂಬೈ ಧಾರಣೆ

ಶೇಂಗಾ

12-9-2023

ಜಾವಾ 70/80(ಹೊಸ)	12800-12900
ಜಾವಾ 80/90(ಹೊಸ)	12200-12300
ದಪ್ಪ ಮಧ್ಯಪ್ರದೇಶ(ಹೊಸ)	11300-11400
ದಪ್ಪ ಗುಜರಾತ್(ಹೊಸ)	12400-12500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1760(1750)
ಒಂದು ವಾರದ ಡೆಲಿವರಿ	1755(1745)
ಸೋಯಾ ಕಚ್ಚಾ	825(833)
ಪಾಮ್ ವಾರದ ಡೆಲಿವರಿ	818(820)
ಸೂರ್ಯಕಾಂತಿ ಎಣ್ಣೆ ಕಚ್ಚಾ	827(830)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,600 (58,000)
ಬೆಳ್ಳಿ ಕೆ.ಜಿ 70,900 (71,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಹೆಚ್ಚುವರಿ ತೆರಿಗೆ ಪ್ರಸ್ತಾವ ಇಲ್ಲ'

ನವದೆಹಲಿ (ಪಿಟಿಐ): ವಾಯುಮಾಲಿನ್ಯ ತಗ್ಗಿಸುವ ಉದ್ದೇಶದಿಂದ ಡೀಸೆಲ್ ವಾಹನಗಳ ಮೇಲೆ ಹೆಚ್ಚುವರಿಯಾಗಿ ಶೇಕಡ 10ರಷ್ಟು ತೆರಿಗೆ ವಿಧಿಸುವ ಅಗತ್ಯವಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ನಂತರ ಈ ಕುರಿತು ಸ್ಪಷ್ಟೀಕರಣ ನೀಡಿರುವ ಅವರು 'ಇಂತಹ ತೆರಿಗೆ ವಿಧಿಸುವ ಯಾವುದೇ ಪ್ರಸ್ತಾವನೆ ಕೇಂದ್ರದ ಪರಿಗಣನೆಯಲ್ಲಿ ಇಲ್ಲ' ಎಂದು ಕೂಡ ಹೇಳಿದ್ದಾರೆ.

ಆಟೊಮೊಬೈಲ್ ತಯಾರಕರ ಸಂಘ ಎಸ್‌ಐಎಎಂ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಗಡ್ಕರಿ, 'ಮಾಲಿನ್ಯ ಹೆಚ್ಚುತ್ತಿರುವುದು ಆರೋಗ್ಯದ ದೃಷ್ಟಿಯಿಂದ ಗಂಭೀರವಾದುದು. ಡೀಸೆಲ್ ವಾಹನಗಳ ಮಾರಾಟವನ್ನು ಕಡಿಮೆ ಮಾಡಲು ತೆರಿಗೆ ಹೆಚ್ಚಿಸುವ ಅಗತ್ಯವಿದೆ' ಎಂದು ಹೇಳಿದ್ದರು.

'ಡೀಸೆಲ್ ವಾಹನಗಳ ಮೇಲೆ ಹೆಚ್ಚುವರಿಯಾಗಿ ಶೇ 10ರಷ್ಟು ಜಿಎಸ್‌ಟಿ ವಿಧಿಸುವಂತೆ ಹಣಕಾಸು ಸಚಿವರಲ್ಲಿ ನಾನು ಮನವಿ ಮಾಡುತ್ತಿದ್ದೇನೆ. ಡೀಸೆಲ್ ವಾಹನಗಳನ್ನು ಇಲ್ಲವಾಗಿಸಲು ಇದೊಂದೇ ಮಾರ್ಗ' ಎಂದು ಅವರು ಹೇಳಿದ್ದರು.

ನಂತರ 'ಎಕ್ಸ್' ವೇದಿಕೆಯ ಮೂಲಕ ಸ್ಪಷ್ಟನೆ ನೀಡಿದ ಅವರು, 'ಇಂತಹ ಪ್ರಸ್ತಾವನೆಯು ಸರ್ಕಾರದ ಪರಿಗಣನೆಯಲ್ಲಿ ಇಲ್ಲ' ಎಂದು ಹೇಳಿದ್ದಾರೆ. ಆದರೆ ಪರಿಸರ ಪೂರಕ ಇಂಧನ ಬಳಕೆಯನ್ನು ಹೆಚ್ಚಿಸುವ ಅಗತ್ಯವಿದೆ ಎಂದು ಅವರು ಹೇಳಿದ್ದಾರೆ.

ಎಸ್‌ಐಎಎಂ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಡ್ಕರಿ ಅವರು, ಡೀಸೆಲ್ ವಾಹನಗಳನ್ನು ಮಾರಾಟ ಮಾಡುವುದೇ ಕಷ್ಟವಾಗುವ ಮಟ್ಟಕ್ಕೆ ಸರ್ಕಾರವು ತೆರಿಗೆಯನ್ನು ಹೆಚ್ಚಿಸಬಹುದು ಎಂದು ಕೂಡ ಎಚ್ಚರಿಕೆ ನೀಡಿದ್ದರು. ದೇಶದಲ್ಲಿ ಮಾರಾಟವಾಗುವ ಬಹುತೇಕ ವಾಣಿಜ್ಯ ವಾಹನಗಳು ಡೀಸೆಲ್ ಎಂಜಿನ್ ಹೊಂದಿವೆ.

ಲಿಬಿಯಾದಲ್ಲಿ ಪ್ರವಾಹ: ಕನಿಷ್ಠ 2,300 ಸಾವು

ಬೆಂಘಾಜಿ (ಲಿಬಿಯಾ) (ಎಎಫ್‌ಪಿ): ಇಲ್ಲಿನ ಪೂರ್ವ ಕರಾವಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಭವಿಸಿದ ಭೀಕರ ಪ್ರವಾಹದಲ್ಲಿ ಸಿಲುಕಿ ಕನಿಷ್ಠ 2,300 ಜನರು ಮೃತಪಟ್ಟಿದ್ದು, ಹತ್ತು ಸಾವಿರ ಮಂದಿ ನಾಪತ್ತೆಯಾಗಿದ್ದಾರೆ.

ಕರಾವಳಿ ನಗರ ಡೆರ್ನಾ ಪ್ರವಾಹಕ್ಕೆ ಸಿಲುಕಿ ತತ್ತರಿಸಿದ್ದು, ಸುಮಾರು ಒಂದು ಲಕ್ಷ ಮಂದಿ ತಮ್ಮ ಮನೆಗಳನ್ನು ಕಳೆದುಕೊಂಡಿದ್ದಾರೆ. ನದಿ ತೀರದ ಹಲವು ಮನೆಗಳು ನೆಲಕ್ಕುರುಳಿವೆ. ಕಟ್ಟಡಗಳ ಅವಶೇಷಗಳು, ಕಾರುಗಳು ನೀರಿನಲ್ಲಿ ತೇಲಿ ಹೋಗುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ.

ಡೆರ್ನಾದಲ್ಲಿ ಮೃತದೇಹಗಳ ಗುರುತು ಪತ್ತೆಗಾಗಿ ಅವುಗಳನ್ನು ಹೊದಿಕೆಗಳಲ್ಲಿ ಸುತ್ತಿ ಸಾಲಾಗಿ ಮಲಗಿಸಿರುವ ದೃಶ್ಯಗಳು ಭೀಕರವಾಗಿವೆ.

'ತುರ್ತು ಸೇವಾ ಸಿಬ್ಬಂದಿ ಅವಿರತವಾಗಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದು, ಭಗ್ನಾವಶೇಷಗಳಡಿ ಸಿಲುಕಿದ್ದ ಸಾವಿರಾರು ಮೃತದೇಹಗಳನ್ನು ಮಂಗಳವಾರ ಹೊರತೆಗೆದರು. ಈವರೆಗೆ ಕನಿಷ್ಠ 700 ಮೃತದೇಹಗಳ ಅಂತ್ಯ ಸಂಸ್ಕಾರ ನೆರವೇರಿಸಲಾಗಿದೆ' ಎಂದು ಪೂರ್ವ ಲಿಬಿಯಾದ ಆರೋಗ್ಯ ಸಚಿವರು ತಿಳಿಸಿದ್ದಾರೆ.

'ಡೆರ್ನಾದಲ್ಲಿ ಪರಿಸ್ಥಿತಿ ಭೀಕರ ಮತ್ತು ಆಘಾತಕಾರಿಯಾಗಿದೆ. ಇನ್ನೂ ಸಾವಿರಾರು ಜನರು ಅವಶೇಷಗಳಡಿ ಸಿಲುಕಿದ್ದು ಅವರ ರಕ್ಷಣೆಗೆ ಮತ್ತಷ್ಟು ಬೆಂಬಲ ಬೇಕಿದೆ' ಎಂದು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವ ಒಸಾಮಾ ಅಲಿ ತಿಳಿಸಿದ್ದಾರೆ.

ಪೂರ್ವ ಲಿಬಿಯಾದಲ್ಲಿ ಸಂಭವಿಸಿದ ಭೀಕರ ಪ್ರವಾಹದಿಂದಾಗಿ ಮನೆಗಳಿಗೆ ಹಾನಿಯಾಗಿದ್ದು, ವಾಹನಗಳು ಜಖಂಗೊಂಡಿವೆ —ಎಎಫ್‌ಪಿ ಚಿತ್ರ

ನಾಸಾ: ದಾಖಲೆ ಮುರಿದ ಗಗನಯಾತ್ರಿ ರುಬಿಯೊ

ಸ್ಯಾನ್ ಫ್ರಾನ್ಸಿಸ್ಕೊ (ಎಪಿ): ನಾಸಾದ ಗಗನಯಾತ್ರಿ ಫ್ರ್ಯಾಂಕ್ ರುಬಿಯೊ ಅವರು ದೀರ್ಘ ಕಾಲದ ವರೆಗೆ ಬಾಹ್ಯಾಕಾಶನೌಕೆಯಲ್ಲಿರುವುದಕ್ಕೆ ಸಂಬಂಧಿಸಿ ಅಮೆರಿಕದ ದಾಖಲೆಯನ್ನು ಮುರಿದಿದ್ದಾರೆ.

ಸೋಮವಾರ ಕೊನೆಗೊಂಡ ಅವಧಿಗೆ ರುಬಿಯೊ ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 355 ದಿನಗಳನ್ನು ಕಳೆದಿದ್ದಾರೆ. ರಷ್ಯಾದ ಇಬ್ಬರು ಗಗನಯಾತ್ರಿಗಳ ಸಮೇತ ರುಬಿಯೊ ಅವರು ಕಳೆದ ಸೆಪ್ಟೆಂಬರ್‌ನಲ್ಲಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದರು. ಆದರೆ, ಅವರಿದ್ದ ಗಗನನೌಕೆಯಲ್ಲಿ ಕೂಲಂಟ್ ಸೋರಿಕೆಯಿಂದಾಗಿ ಕಂಡುಬಂದ ತೊಂದರೆ ಪರಿಣಾಮ ಅವರು ಇನ್ನೂ ಬಾಹ್ಯಾಕಾಶ ನಿಲ್ದಾಣದಲ್ಲಿಯೇ ಉಳಿಯಬೇಕಾಗಿದೆ.

ಕಜಕಸ್ತಾನದಲ್ಲಿರುವ ಉಡ್ಡಯನ ಕೇಂದ್ರದಿಂದ ಬದಲಿ ಗಗನನೌಕೆಯೊಂದನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಶುಕ್ರವಾರ ಕಳುಹಿಸಲಾಗಿದೆ. ರುಬಿಯೊ ಸೇರಿದಂತೆ ಮೂವರು ಗಗನಯಾತ್ರಿಗಳು ಈ ನೌಕೆಯಲ್ಲಿ ಸೆ.27ರಂದು ಭೂಮಿಗೆ ಮರಳಲಿದ್ದಾರೆ. ಇದರೊಂದಿಗೆ ರುಬಿಯೊ ಅವರು 371 ದಿನಗಳನ್ನು ಬಾಹ್ಯಾಕಾಶದಲ್ಲಿ ಕಳೆದಂತಾಗಲಿದೆ.

ಈ ಮೊದಲು ಅಮೆರಿಕದ ಗಗನಯಾತ್ರಿ ಮಾರ್ಕ್ ವ್ಯಾಂಡ್ ಹೀ ಅವರು ಹೆಚ್ಚು ದಿನಗಳ ಕಾಲ ಬಾಹ್ಯಾಕಾಶದಲ್ಲಿದ್ದ ದಾಖಲೆ ನಿರ್ಮಿಸಿದ್ದರು. ಈಗ, ರುಬಿಯೊ ಅವರು ಮಾರ್ಕ್ ಅವರಿಗಿಂತ ಎರಡು ವಾರಗಳಿಗೂ ಹೆಚ್ಚು ಕಾಲ ಬಾಹ್ಯಾಕಾಶದಲ್ಲಿ ಇದ್ದಂತಾಗಲಿದೆ. 'ರುಬಿಯೊ ನಿಮ್ಮ ಈ ಸಮರ್ಪಣಾಭಾವ ನಿಜಕ್ಕೂ ಅದ್ಭುತ' ಎಂದು ನಾಸಾ ಮುಖ್ಯಸ್ಥ ಬಿಲ್ ನೆಲ್ಸನ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಗಗನಯಾತ್ರಿಯೊಬ್ಬರು ಗರಿಷ್ಠ 437 ದಿನಗಳ ಬಾಹ್ಯಾಕಾಶದಲ್ಲಿದ್ದ ದಾಖಲೆಯನ್ನು ರಷ್ಯಾ ಹೊಂದಿದೆ. 1990ರಲ್ಲಿ ರಷ್ಯಾ ಗಗನಯಾತ್ರಿಗಳು ಈ ಸಾಧನೆ ಮಾಡಿದ್ದರು.

ಅ.21ಕ್ಕೆ ಪಾಕ್‌ಗೆ ನವಾಜ್ ಷರೀಫ್

ಇಸ್ಲಾಮಾಬಾದ್ (ಪಿಟಿಐ): ಲಂಡನ್‌ನಲ್ಲಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರು ಅಕ್ಟೋಬರ್ 21ರಂದು ಸ್ವದೇಶಕ್ಕೆ ಮರಳಲಿದ್ದಾರೆ ಎಂದು ಲಂಡನ್‌ನಲ್ಲಿರುವ ಅವರ ಸಹೋದರ, ಮಾಜಿ ಪ್ರಧಾನಿ ಶೆಹಬಾಜ್ ಷರೀಫ್ ಮಂಗಳವಾರ ತಿಳಿಸಿದ್ದಾರೆ.

ಪಾಕಿಸ್ತಾನ್ ಮುಸ್ಲಿಂ ಲೀಗ್–ನವಾಜ್ ಪಕ್ಷದ ನಾಯಕರಾಗಿರುವ ಷರೀಫ್ ಕಳೆದ ನಾಲ್ಕು ವರ್ಷಗಳಿಂದ ಲಂಡನ್‌ನಲ್ಲಿದ್ದು, ದೇಶಕ್ಕೆ ಮರಳಿದ ನಂತರ ಮುಂದಿನ ಚುನಾವಣೆಗೆ ಪಕ್ಷದ ನೇತೃತ್ವ ವಹಿಸಲಿದ್ದಾರೆ ಎನ್ನಲಾಗಿದೆ.

ದೇಶದ್ರೋಹ ಕಾನೂನು: ಕೇಂದ್ರ ಸರ್ಕಾರದ ಮನವಿ ತಿರಸ್ಕರಿಸಿದ ಸುಪ್ರೀಂ ಕೋರ್ಟ್

ಸಿಂಧುತ್ವದ ಪ್ರಶ್ನೆ ಸಾಂವಿಧಾನಿಕ ಪೀಠಕ್ಕೆ

ನವದೆಹಲಿ (ಪಿಟಿಐ): ದೇಶದ್ರೋಹ ಕಾನೂನಿನ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳಿರುವ ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು, ಮಂಗಳವಾರ ಅರ್ಜಿಗಳ ವಿಚಾರಣೆ ನಡೆಸಿತು.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124ಎ (ದೇಶದ್ರೋಹ) ಕುರಿತು ಸಂಸತ್‌ನಲ್ಲಿ ಮರುಪರಿಶೀಲನೆ ನಡೆಸುತ್ತಿದೆ. ಈ ಕುರಿತು ಲೋಕಸಭೆಯಲ್ಲಿ ಮಂಡಿಸಿರುವ ಮಸೂದೆಯನ್ನು ಸಂಸದೀಯ ಸ್ಥಾಯಿಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗಿದೆ. ಹಾಗಾಗಿ, ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸಬಾರದು ಎಂದು ಕೇಂದ್ರ ಸರ್ಕಾರ ಮಾಡಿದ ಮನವಿಯನ್ನು ನ್ಯಾಯಪೀಠವು ಪುರಸ್ಕರಿಸಲಿಲ್ಲ.

'ಮರುಪರಿಶೀಲನೆ ನಡೆಸಲಾಗುತ್ತಿದೆ ಎಂಬ ಏಕೈಕ ಕಾರಣ ಆಧರಿಸಿ ಈ ಅಪರಾಧ ಕಾನೂನಿನ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸುವುದರಿಂದ ಹಿಂದೆ ಸರಿಯಲು ಆಗುವುದಿಲ್ಲ' ಎಂದು ಸ್ಪಷ್ಟಪಡಿಸಿತು.

ಹೊಸ ಮಸೂದೆಯು ಕಾನೂನು ಸ್ವರೂಪ ಪಡೆದರೂ ಶಿಕ್ಷೆಯ ವಿಧಾನದಲ್ಲಿ ಬದಲಾವಣೆ ಇರುವುದಿಲ್ಲ ಎಂಬ ಊಹೆ ಸಹಜವಾದುದು. ಅಲ್ಲದೇ, ಐಪಿಸಿ ಸೆಕ್ಷನ್ 124ಎ ಇನ್ನೂ ಅಸ್ತಿತ್ವದಲ್ಲಿದೆ. ಅದರ ಆಧಾರದ ಮೇಲೆ ಈ ಅಪರಾಧ ಕಾನೂನಿನ ಮೌಲ್ಯಮಾಪನ ಮಾಡಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿತು.

ಸಂವಿಧಾನದ 19ನೇ(1)(ಎ) ವಿಧಿಯ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ ಎಂದು ಪ್ರಶ್ನಿಸಿದ್ದ 1962ರ ಕೇದಾರನಾಥ ಮತ್ತು ಬಿಹಾರ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠವು, ಸೆಕ್ಷನ್ 124ಎ ಅನ್ನು ಎತ್ತಿ ಹಿಡಿದಿರುವುದನ್ನು ನ್ಯಾಯಪೀಠವು ಉಲ್ಲೇಖಿಸಿತು.

ಬಳಿಕ ಸಾಂವಿಧಾನಿಕ ಪೀಠ ರಚನೆಗೆ ಸಂಬಂಧಿಸಿ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳಲು ಸಿಜೆಐ ಅವರ ಮುಂದೆ ಎಲ್ಲಾ ದಾಖಲೆಗಳನ್ನು ಸಲ್ಲಿಸಲು ನ್ಯಾಯಾಲಯದ ನೋಂದಣಿ ವಿಭಾಗಕ್ಕೆ ಸೂಚಿಸಿತು.

ವಸಾಹತುಶಾಹಿ ಯುಗದ ಅಪರಾಧ ಕಾನೂನುಗಳಾದ ಭಾರತೀಯ ದಂಡ ಸಂಹಿತೆ, ಅಪರಾಧ ಪ್ರಕ್ರಿಯಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಕಾಯ್ದೆಯ ಬದಲಿಗೆ ಹೊಸ ಕಾನೂನುಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಮುಂದಾಗಿದೆ. ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ಮೂರು ಹೊಸ ಮಸೂದೆಗಳನ್ನೂ ಮಂಡಿಸಿದೆ.

'ನಿವೃತ್ತ ಕರ್ನಲ್, ಪ್ರಾಧ್ಯಾಪಕ ವಿರುದ್ಧ ಬಲವಂತದ ಕ್ರಮ ಬೇಡ'

ನವದೆಹಲಿ (ಪಿಟಿಐ): ಸೇನೆಯ ನಿವೃತ್ತ ಅಧಿಕಾರಿ ಹಾಗೂ ಪ್ರಾಧ್ಯಾಪಕರೊಬ್ಬರ ವಿರುದ್ಧ ಮಣಿಪುರದಲ್ಲಿ ದಾಖಲಾಗಿರುವ ಪ್ರತ್ಯೇಕ ಎಫ್‌ಐಆರ್‌ಗಳಿಗೆ ಸಂಬಂಧಿಸಿ ಇಬ್ಬರ ವಿರುದ್ಧ ಮುಂದಿನ ವಿಚಾರಣೆ ವರೆಗೆ ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಸುಪ್ರೀಂಕೋರ್ಟ್ ಮಂಗಳವಾರ ಆದೇಶಿಸಿತು.

ನಿವೃತ್ತ ಕರ್ನಲ್ ವಿಜಯಕಾಂತ ಚೆಂಜಿ ಹಾಗೂ ಪ್ರಾಧ್ಯಾಪಕ ಹೆನ್‌ಮಿಲ್‌ಲುನ್ ಅವರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ನಡೆಸಿತು.

'ಮಣಿಪುರ ಹೈಕೋರ್ಟ್‌ನಲ್ಲಿ ನಮ್ಮ ಪರ ವಾದ ಮಂಡನೆಗೆ ಯಾವ ವಕೀಲರು ಒಪ್ಪುತ್ತಿಲ್ಲ. ನಮ್ಮ ವಿರುದ್ಧದ ಎಫ್‌ಐಆರ್‌ಗಳನ್ನು ರದ್ದುಪಡಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದೇವೆ' ಎಂದು ಇಬ್ಬರು ಕಕ್ಷಿಗಾರರು ನ್ಯಾಯಪೀಠಕ್ಕೆ ತಿಳಿಸಿದರು.

'ಮಣಿಪುರ ಹೈಕೋರ್ಟ್‌ನಲ್ಲಿ ನಿಮ್ಮ ಪರ ವಾದ ಮಂಡನೆಗೆ ಯಾವ ವಕೀಲರು ಒಪ್ಪದಿರುವ ಕಾರಣ, ಪ್ರಮಾಣಪತ್ರ ಸಲ್ಲಿಸುವಂತೆ ನಿಮಗೇ ಸೂಚಿಸುತ್ತೇವೆ. ಮುಂದಿನ ವಿಚಾರಣೆ ನಡೆಯುವ ದಿನದ ವರೆಗೆ ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳುವಂತಿಲ್ಲ' ಎಂದು ನ್ಯಾಯಪೀಠ ಹೇಳಿತು.

'ಅರ್ಜಿದಾರ ನಿವೃತ್ತ ಕರ್ನಲ್ ಆಗಿದ್ದು, ಅವರ ಕೃತಿ ಪ್ರಕಟವಾಗಿದ್ದು ಕಳೆದ ವರ್ಷ. ಹೀಗಾಗಿ ಅವರಿಗೆ ರಕ್ಷಣೆ ನೀಡಬೇಕು. ಆದರೆ, ಬಂಧನದಿಂದ ಅವರಿಗೆ ನಾವೇ ರಕ್ಷಣೆ ನೀಡಿ, ಪ್ರಕರಣವನ್ನು ಮಣಿಪುರ ಹೈಕೋರ್ಟ್‌ಗೆ ವರ್ಗಾಯಿಸಬೇಕೇ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ' ಎಂದೂ ನ್ಯಾಯಪೀಠ ಹೇಳಿತು.

ಮಣಿಪುರ ಸರ್ಕಾರ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಅರ್ಜಿದಾರರಿಗೆ ರಕ್ಷಣೆ ನೀಡುವುದಕ್ಕೆ ನನ್ನ ಆಕ್ಷೇಪವೇನೂ ಇಲ್ಲ. ಆದರೆ, ನೇರವಾಗಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸುವ ಮಾದರಿಯನ್ನು ಒಂದು ವರ್ಗ ಅನುಸರಿಸುತ್ತಿದೆ. ಮಣಿಪುರ ಹೈಕೋರ್ಟ್ ವಿಚಾರಣೆ ನಡೆಸಬಹುದಾದ ಇಂತಹ ಅರ್ಜಿಗಳನ್ನು ಮಾನ್ಯ ಮಾಡಬಾರದು' ಎಂದು ಕೋರಿದರು.

'ಒಂದು ವೇಳೆ, ವಕೀಲರು ವಾದ ಮಂಡಿಸಲು ಮುಂದಾಗದಿದ್ದಲ್ಲಿ ಕಕ್ಷಿಗಾರರಿಗೆ ಕಾನೂನು ನೆರವಿನ ವ್ಯವಸ್ಥೆ ಮಾಡಲಾಗುವುದು ಇಲ್ಲವೇ ಈ ಬಗ್ಗೆ ಹೈಕೋರ್ಟ್‌ನ ರಜಿಸ್ಟ್ರಾರ್ ಜನರಲ್ ಅವರಿಂದ ವರದಿ ಕೇಳಲಾಗುವುದು' ಎಂದೂ ನ್ಯಾಯಪೀಠ ಹೇಳಿತು.

ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಆನಂದ್ ಗ್ರೋವರ್, 'ಪ್ರಕರಣವೊಂದರಲ್ಲಿ ಹಾಜರಾಗಿದ್ದ ವಕೀಲರ ಕಚೇರಿಯನ್ನು ಧ್ವಂಸಗೊಳಿಸಲಾಗಿತ್ತು. ಹೀಗಾಗಿ ವಕೀಲರು ವಾದ ಮಂಡನೆಯಿಂದ ಹಿಂದೆ ಸರಿಯಬೇಕಾಯಿತು' ಎಂದು ನ್ಯಾಯಪೀಠದ ಗಮನಕ್ಕೆ ತಂದರು.

'ಒಂದು ವರ್ಗವನ್ನು ಸುಪ್ರೀಂಕೋರ್ಟ್ ಕದ ತಟ್ಟುವಂತೆ ಮಾಡುವ ಮಾದರಿಯೂ ಇದ್ದು, ಆರೋಪಿಗಳಿಗೆ ಎಫ್‌ಐಆರ್‌ನ ಪ್ರತಿಯೂ ಸಿಗುತ್ತಿಲ್ಲ' ಎಂದು ಗ್ರೋವರ್ ಆರೋಪಿಸಿದರು.

ನಿವೃತ್ತ ಕರ್ನಲ್ ಚೆಂಜಿ ಅವರ ಕೃತಿ 'ದಿ ಆಂಗ್ಲೊ–ಕುಕಿ ವಾರ್ 1917–1919', ಕಳೆದ ವರ್ಷ ಜನವರಿಯಲ್ಲಿ ಬಿಡುಗಡೆಯಾಗಿದೆ. ಈ ಕೃತಿಯಲ್ಲಿನ ಕೆಲ ವಿಷಯವಸ್ತುವಿಗೆ ಸಂಬಂಧಿಸಿ ಮಣಿಪುರ ಪೊಲೀಸರು ಚೆಂಜಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ದ್ವೇಷ ಭಾಷಣ ಮಾಡಿದ್ದ ಆರೋಪದ ಮೇಲೆ ಪ್ರಾಧ್ಯಾಪಕ ಹೆನ್‌ಮಿಲ್‌ಲುನ್ ಅವರ ಎಫ್‌ಐಆರ್ ದಾಖಲಿಸಲಾಗಿದೆ.

'ಸನಾತನ ಧರ್ಮ ವಿರೋಧಿಗಳ ಕಣ್ಣು, ನಾಲಗೆ ಕೀಳುವೆವು'

ಜೈಪುರ (ಪಿಟಿಐ): 'ಸನಾತನ ಧರ್ಮದ ವಿರುದ್ಧ ಮಾತನಾಡುವವರ ನಾಲಗೆ ಮತ್ತು ಕಣ್ಣುಗಳನ್ನು ಕಿತ್ತು ಹಾಕಲಾಗುವುದು' ಎಂದು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಗುಡುಗಿದ್ದಾರೆ.



ಗಜೇಂದ್ರ ಸಿಂಗ್ ಶೆಖಾವತ್

ಶೆಖಾವತ್ ಅವರ ಹೇಳಿಕೆ ಇರುವ ವಿಡಿಯೊ ತುಣುಕೊಂದು ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ರಾಜಸ್ಥಾನದಲ್ಲಿ ಈ ವರ್ಷದ ಅಂತ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು, ಬಿಜೆಪಿಯು ಕಳೆದ ವಾರ ಬಡ್‌ಮೆರ್ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ 'ಪರಿವರ್ತನಾ ಯಾತ್ರಾ' ರ್‍ಯಾಲಿಯಲ್ಲಿ ಶೆಖಾವತ್ ಅವರು ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮದ ವಿರುದ್ಧ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ್ದಾರೆ.

'ಸನಾತನ ಧರ್ಮಕ್ಕೆ ಸವಾಲೊಡ್ಡುವವರ ವಿರುದ್ಧ ನಾವೆಲ್ಲ ಎದ್ದುನಿಲ್ಲಬೇಕಿದೆ. ಯಾರೇ ಆಗಲಿ ಸನಾತನ ಧರ್ಮದ ವಿರುದ್ಧ ಮಾತನಾಡಿದರೆ ಅಂಥವರ ನಾಲಗೆಯನ್ನು ಹೊರಗೆಳೆಯಲಾಗುವುದು, ಸನಾತನ ಧರ್ಮದ ವಿರುದ್ಧ ಕೆಂಗಣ್ಣು ಬೀರುವವರ ಕಣ್ಣುಗಳನ್ನೂ ಕಿತ್ತುಹಾಕಲಾಗುವುದು' ಎಂದು ಶೆಖಾವತ್ ಬೆದರಿಕೆ ಒಡ್ಡಿದ್ದಾರೆ.

'ಸನಾತನ ಧರ್ಮದ ವಿರುದ್ಧ ಮಾತನಾಡುವವರು ಈ ದೇಶದಲ್ಲಿ ಅಧಿಕಾರ ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂದು ನಾವು ಸವಾಲು ಎಸೆಯುತ್ತೇವೆ. ಅವರು ನಮ್ಮ ಸಂಸ್ಕೃತಿ ಮತ್ತು ಇತಿಹಾಸದ ಮೇಲೆ ದಾಳಿ ಮಾಡುವ ಪ್ರಯತ್ನವನ್ನು ಮಾಡುತ್ತಾರೆ' ಎಂದೂ ಹೇಳಿದ್ದಾರೆ.

'2024ರ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಲಿಸುವ ಉದ್ದೇಶ ಇರುವ 'ಇಂಡಿಯಾ' ಮೈತ್ರಿಕೂಟ ಮೇವು ಹಗರಣ ಸೇರಿದಂತೆ ಇತರ ಹಗರಣಗಳಲ್ಲಿ ಭಾಗಿಯಾದವರ ಗುಂಪಾಗಿದೆ' ಎಂದರು.

'ಮೋದಿ ಗೆದ್ದರೆ ಸನಾತನ ಧರ್ಮ ಬಲಾಢ್ಯವಾಗುತ್ತದೆ. ಹಾಗಾಗಿ, ಅವರನ್ನು ಸೋಲಿಸುವ ಅಗತ್ಯ ವಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳುತ್ತಾರೆ. 2 ಸಾವಿರ ವರ್ಷದಿಂದಲೂ ಭಾರತದ ಸಂಸ್ಕೃತಿಯನ್ನು ದುರ್ಬಲಗೊಳಿಸಲು ಅನೇಕರು ಯತ್ನಿಸಿದ್ದಾರೆ. ಅಲ್ಲಾವುದ್ದೀನ್ ಖಿಲ್ಜಿ, ಔರಂಗಜೇಬ್ ಅವರಂಥ ಆಡಳಿತಗಾರರೂ ನಮ್ಮ ಸಂಸ್ಕೃತಿಯನ್ನು ದುರ್ಬಲಗೊಳಿಸಲು ಪ್ರಯತ್ನಿಸಿದರು. ಆದರೆ ನಿಮ್ಮ ಮತ್ತು ನನ್ನ ಪೂರ್ವಜರು ಸಮರ್ಥರಾಗಿದ್ದರು. ಅವರು ಸಂಸ್ಕೃತಿಯನ್ನು ರಕ್ಷಿಸಿದರು. ಮಹಾರಾಜ ಸೂರಜ್‌ಮಲ್, ವೀರ ದುರ್ಗಾದಾಸ್ ಮತ್ತು ಮಹಾರಾಣಾ ಪ್ರತಾಪ್ ಅವರ ಮೇಲೆ ಆಣೆ ಇಟ್ಟು ಹೇಳುತ್ತೇವೆ. ಸನಾತನ ಧರ್ಮದ ಮೇಲೆ ದಾಳಿ ಮಾಡುವವರನ್ನು ಕಿತ್ತೆಸೆಯುತ್ತೇವೆ' ಎಂದೂ ಶೆಖಾವತ್ ಹೇಳಿದ್ದಾರೆ.

'ಭಾರತಕ್ಕೆ ವಾಸ್ಕೊ ಡಿ ಗಾಮಾ ಡೈರಿಯ ಪ್ರತಿ ತರಲು ಪ್ರಯತ್ನ'

ಪಣಜಿ(ಪಿಟಿಐ): ವಿದೇಶದ ವಸ್ತು ಸಂಗ್ರಹಾಲಯದಲ್ಲಿರುವ ಪೋರ್ಚುಗೀಸ್ ಅನ್ವೇಷಕ ವಾಸ್ಕೊ ಡಿ ಗಾಮಾ ಅವರ ಡೈರಿಯ ಪ್ರತಿಯನ್ನು ಭಾರತಕ್ಕೆ ತರಲು ಸರ್ಕಾರ ಪ್ರಯತ್ನಿಸಲಿದೆ ಎಂದು ಕೇಂದ್ರ ಸಚಿವೆ ಮೀನಾಕ್ಷಿ ಲೇಖಿ ಮಂಗಳವಾರ ತಿಳಿಸಿದ್ದಾರೆ.

ಇಲ್ಲಿನ ಹಡಗುಕಟ್ಟೆಯಲ್ಲಿ ಹಡಗು ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತದ ಸಮುದ್ರಯಾನದ ಸಮೃದ್ಧ ಇತಿಹಾಸವನ್ನು ತಿಳಿದುಕೊಳ್ಳಲು ಈ ಡೈರಿಯಿಂದ ಸಾಧ್ಯವಾಗಲಿದೆ ಎಂದು ಅವರು ಹೇಳಿದ್ದಾರೆ.

ವಾಸ್ಕೊ ಡಿ ಗಾಮಾ ಅವರ ಡೈರಿಯು ವಿದೇಶದ ವಸ್ತುಸಂಗ್ರಹಾಲಯದಲ್ಲಿರುವುದಾಗಿ ಪುರಾತತ್ವ ಶಾಸ್ತ್ರಜ್ಞ ದಿವಂಗತ ಡಾ. ವಿಷ್ಣು ಶ್ರೀಧರ್ ವಾಕಂಕರ್ ಅವರು ದಾಖಲಿಸಿದ್ದರು ಎಂದಿದ್ದಾರೆ.

ವಾಸ್ಕೊ ಡಿ ಗಾಮಾ ಅವರು ನಮ್ಮ ದೇಶದ ನಾಗರಿಕರಲ್ಲದ ಕಾರಣ ಡೈರಿಯ ಮೂಲಪ್ರತಿಯನ್ನು ತರಲು ಸಾಧ್ಯವಿಲ್ಲ. ಆದರೆ ಅದರ ನಕಲು ಪ್ರತಿಯನ್ನು ತರಲು ಪ್ರಯತ್ನಿಸಿತ್ತೇವೆ ಎಂದು ಮೀನಾಕ್ಷಿ ಅವರು ಹೇಳಿದ್ದಾರೆ.

ಮುಸ್ಲಿಂ, ದಲಿತರ ಮತ ಸೆಳೆಯಲು ಕಾಂಗ್ರೆಸ್ ಲೆಕ್ಕಾಚಾರ

ಉತ್ತರ ಪ್ರದೇಶದಿಂದ ಖರ್ಗೆ ಸ್ಪರ್ಧೆ?

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಳೆಯ ವೈಭವಕ್ಕೆ ಮರಳಲು ಕಾಂಗ್ರೆಸ್ ಕಾರ್ಯತಂತ್ರ
- 'ಇಂಡಿಯಾ' ಅಭ್ಯರ್ಥಿಯಾಗಿ ಖರ್ಗೆ ಕಣಕ್ಕಿಳಿಸಲು ಚಿಂತನೆ
- ದಲಿತರ ಮೇಲೆ ಬಹುಜನ ಸಮಾಜ ಪಕ್ಷದ ಹಿಡಿತ ಸಡಿಲ

ಲಖನೌ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು 'ಇಂಡಿಯಾ' ಅಭ್ಯರ್ಥಿಯಾಗಿ ಕಣಕ್ಕೆ ಇಳಿಸಿ ದಲಿತರು ಮತ್ತು ಮುಸ್ಲಿಂ ಸಮುದಾಯದ ಮತಗಳನ್ನು ಸೆಳೆಯುವ ಮೂಲಕ ರಾಜ್ಯದಲ್ಲಿ ಪಕ್ಷದ ವರ್ಚಸ್ಸು ವೃದ್ಧಿಸಿಕೊಳ್ಳಲು ಕಾಂಗ್ರೆಸ್ ನಾಯಕರು ತಂತ್ರ ಹೆಣೆದಿದ್ದಾರೆ.

ಉತ್ತರ ಪ್ರದೇಶದಲ್ಲಿ ಬಹುಜನ ಸಮಾಜ ಪಕ್ಷದ ನಾಯಕಿ ಮಾಯಾವತಿ ಅವರ ಪ್ರಭಾವ ಕ್ಷೀಣಿಸುತ್ತಿದೆ. ದಲಿತರ ಮೇಲೆ ಬಿಎಸ್‌ಪಿ ಹಿಡಿತವೂ ಸಡಿಲಗೊಂಡಿದೆ. ಖರ್ಗೆ ಅವರು ದಲಿತ ಸಮುದಾಯವನ್ನು ಪ್ರತಿನಿಧಿಸುತ್ತಾರೆ. ಮೀಸಲು ಕ್ಷೇತ್ರದಿಂದ ಅವರು ಅಖಾಡಕ್ಕೆ ಇಳಿದರೆ ಗೆಲುವು ಸುಲಭ. ಜೊತೆಗೆ, ದಲಿತರು ಮತ್ತು ಮುಸ್ಲಿಂಮರ ಒಲವು ಸೆಳೆದು ಮತ್ತೆ ಪಕ್ಷವನ್ನು ಹಳೆಯ ವೈಭವದ ಹಳಿಗೆ ತರಬಹುದು ಎಂಬುದು ರಾಜ್ಯ ನಾಯಕರ ಲೆಕ್ಕಾಚಾರ.

'ಇಟಾವಾ ಅಥವಾ ಬರಾಬಂಕಿ ಲೋಕಸಭಾ (ಎಸ್.ಸಿ) ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಬೆಂಬಲದೊಂದಿಗೆ ಖರ್ಗೆ ಅವರನ್ನು ಕಣಕ್ಕಿಳಿಸಲು ಚಿಂತಿಸಲಾಗಿದೆ. ಖರ್ಗೆ ಅವರ ಸ್ಪರ್ಧೆಯು ರಾಜ್ಯದ ಇತರೆ ಕ್ಷೇತ್ರಗಳಲ್ಲಿ ದಲಿತರ ಮತಗಳನ್ನು ಸೆಳೆಯಲು 'ಇಂಡಿಯಾ'ಗೆ ನೆರವಾಗಲಿದೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಆದರೆ, 'ಖರ್ಗೆ ಅವರು ಉತ್ತರ ಪ್ರದೇಶದಿಂದ ಸ್ಪರ್ಧಿಸುತ್ತಾರೆಯೇ? ಎಂಬ ಪ್ರಶ್ನೆಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಜಯ್ ರೈ ಪ್ರತಿಕ್ರಿಯಿಸಲಿಲ್ಲ. 'ದಲಿತರ ಮೇಲೆ ಮಾಯಾವತಿ ಅವರ ಹಿಡಿತ ತಪ್ಪಿರುವುದು ದಿಟ. ಕಾಂಗ್ರೆಸ್‌ನತ್ತ ದಲಿತರನ್ನು ಸೆಳೆಯುವುದರ ಹೊರತಾಗಿ ನಮಗೂ ಬೇರೆ ಯಾವುದೇ ಆಯ್ಕೆಗಳು ಇಲ್ಲ' ಎಂದು ಉತ್ತರಿಸಿದರು.

ಇತ್ತೀಚೆಗೆ ನಡೆದ ಘೋಸಿ ವಿಧಾನಸಭೆಯ ಉಪ ಚುನಾವಣಾ ಫಲಿತಾಂಶವನ್ನು ಉಲ್ಲೇಖಿಸಿದ ಅವರು, 'ಸಮಾಜವಾದಿ ಪಕ್ಷದ ಅಭ್ಯರ್ಥಿಯು 42 ಸಾವಿರಕ್ಕೂ ಹೆಚ್ಚು ಮತದ ಅಂತರದಿಂದ ಬಿಜೆಪಿ ಅಭ್ಯರ್ಥಿಯನ್ನು ಮಣಿಸಿದ್ದಾರೆ. ಸಮಾಜವಾದಿ ಪಕ್ಷದ ಅಭ್ಯರ್ಥಿಗೆ ಮತ ಚಲಾಯಿಸಬಾರದು. ಅದಕ್ಕೆ ಬದಲಾಗಿ ಮತಯಂತ್ರದಲ್ಲಿ ನೋಟಾ ಬಟನ್ ಒತ್ತಿ ಎಂದು ಮಾಯಾವತಿ ಕರೆ ನೀಡಿದ್ದರು. ಆದರೂ, ದಲಿತರು ಆ ಪಕ್ಷದ ಕೈಹಿಡಿದಿದ್ದಾರೆ' ಎಂದರು.

2024ರ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಅವರು ಅಮೇಥಿಯಿಂದ ಸ್ಪರ್ಧಿಸುತ್ತಾರೆ ಎಂದು ರೈ ಅವರು ಹಿಂದೆ ಹೇಳಿದ್ದರು. ಈ ಕುರಿತು ಪ್ರಶ್ನೆಗೆ, 'ಅಮೇಥಿಯಿಂದ ರಾಹುಲ್ ಸ್ಪರ್ಧಿಸಲಿದ್ದಾರೆ' ಎಂದು ಪುನರುಚ್ಚರಿಸಿದರು. 2009 ಹಾಗೂ 2014ರ ಚುನಾವಣೆಯಲ್ಲಿ ಈ ಕ್ಷೇತ್ರದಿಂದಲೇ ರಾಹುಲ್ ಜಯಗಳಿಸಿದ್ದರು. 2019ರ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಸ್ಮೃತಿ ಇರಾನಿ ವಿರುದ್ಧ ಅವರು ಸೋಲು ಅನುಭವಿಸಿದ್ದರು.

ಪ್ರಸ್ತುತ ಪ್ರಧಾನಿ ನರೇಂದ್ರ ಮೋದಿ ಅವರು ವಾರಾಣಸಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. 'ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಈ ಕ್ಷೇತ್ರದಿಂದ ಸ್ಪರ್ಧಿಸಿದರೆ ಅವರ ಗೆಲುವಿಗೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಒಟ್ಟಾಗಿ ಶ್ರಮಿಸಲಿದ್ದಾರೆ' ಎಂದು ರೈ ಹೇಳಿದರು.

'ಸೋನಿಯಾ ಗಾಂಧಿ ಅವರು ರಾಯ್‌ಬರೇಲಿ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಆರೋಗ್ಯದ ಕಾರಣವೊಡ್ಡಿ ಅವರು ಸ್ಪರ್ಧೆಯಿಂದ ಹಿಂದೆ ಸರಿದರೆ ಪ್ರಿಯಾಂಕಾ ಅವರು ಈ ಕ್ಷೇತ್ರದಿಂದ ಸ್ಪರ್ಧಿಸುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

ಕುಶಲೋಪರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮಂಗಳವಾರ ಹಿಮಾಚಲ ಪ್ರದೇಶದ ಕುಲ್ಲುವಿನಲ್ಲಿ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಬಾಧಿತರ ಸಂಕಷ್ಟ ಆಲಿಸಿದರು –ಪಿಟಿಐ ಚಿತ್ರ

ಅ.30ರಿಂದ ನವೆಂಬರ್ 5 'ವಿಚಕ್ಷಣೆ ಜಾಗೃತಿ ವಾರ'

ನವದೆಹಲಿ (ಪಿಟಿಐ): ಭ್ರಷ್ಟಾಚಾರದ ಹಲವು ಅಪಾಯಗಳ ಕುರಿತು ಜನರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಅಕ್ಟೋಬರ್ 30ರಿಂದ ನವೆಂಬರ್ 5ರ ವರೆಗೆ 'ವಿಚಕ್ಷಣೆ ಜಾಗೃತಿ ವಾರ–2023'ರನ್ನು ಆಚರಿಸಲು ಕೇಂದ್ರೀಯ ವಿಚಕ್ಷಣಾ ಆಯೋಗ (ಸಿವಿಸಿ) ನಿರ್ಧರಿಸಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಮಗ್ರತೆ ಮತ್ತು ನೈತಿಕತೆಯ ಮಹತ್ವ ಸಾರುವಂಥ ಚಟುವಟಿಕೆಗಳಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಒಳಗೊಳ್ಳುವಂತೆ ಮಾಡುವ ಕುರಿತು ಜಾಗೃತಿ ವಾರದಲ್ಲಿ ವಿಶೇಷ ಒತ್ತು ನೀಡಲಾಗುವುದು.

ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಯುವಜನರು ಭಾಗಿಯಾಗುವುದರ ಮಹತ್ವವನ್ನು ಒತ್ತಿ ಹೇಳುವಂಥ ಚಟುವಟಿಕೆಗಳನ್ನು ಪ್ರಚುರಪಡಿಸುವಂತೆ ಸಂಸ್ಥೆಗಳಿಗೆ ಹೇಳಲಾಗಿದೆ.

ಕೇರಳದ ಕೋಯಿಕ್ಕೋಡ್ ಜಿಲ್ಲೆಯಲ್ಲಿ ನಿಪಾ ವೈರಸ್ ಸೋಂಕಿನಿಂದಾಗಿ ಇಬ್ಬರು ಮೃತಪಟ್ಟಿರುವ ಕಾರಣ ನಗರದ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಜನರು ಮಾಸ್ಕ್ ಧರಿಸಿದ್ದು ಮಂಗಳವಾರ ಕಂಡುಬಂತು. ಮಾಸ್ಕ್ ಧರಿಸುವಂತೆ ಆರೋಗ್ಯ ಇಲಾಖೆ ಜನತೆಗೆ ಸೂಚಿಸಿದೆ –ಪಿಟಿಐ ಚಿತ್ರ

ಕೇರಳ: ಇಬ್ಬರ ಸಾವಿಗೆ 'ನಿಪಾ' ವೈರಸ್ ಸೋಂಕು ಕಾರಣ

ನವದೆಹಲಿ(ಪಿಟಿಐ): ಕೇರಳದ ಕೋಯಿಕ್ಕೋಡ್ ಜಿಲ್ಲೆಯಲ್ಲಿ ವರದಿ ಯಾಗಿರುವ ಇಬ್ಬರ ಸಾವಿಗೆ ನಿಪಾ ವೈರಸ್ ಸೋಂಕು ಕಾರಣ ಎಂಬುದನ್ನು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯ ಮಂಗಳವಾರ ಖಚಿತಪಡಿಸಿದ್ದಾರೆ.

'ತಜ್ಞರನ್ನು ಒಳಗೊಂಡ ಕೇಂದ್ರದ ತಂಡವೊಂದನ್ನು ಕೇರಳಕ್ಕೆ ಕಳುಹಿಸಲಾಗಿದೆ. ತಂಡವು ಪರಿಸ್ಥಿತಿ ಅವಲೋಕಿಸುವ ಜೊತೆಗೆ, ನಿಪಾ ವೈರಸ್ ಸೋಂಕು ಪ್ರಸರಣ ನಿರ್ವಹಣೆಗೆ ರಾಜ್ಯ ಸರ್ಕಾರಕ್ಕೆ ನೆರವು ನೀಡಲಿದೆ' ಎಂದು ಹೇಳಿದ್ದಾರೆ.

ಕೋಯಿಕ್ಕೋಡ್ ಜಿಲ್ಲೆಯಲ್ಲಿ ಕೆಲವರಲ್ಲಿ ಜ್ವರ ಕಾಣಿಸಿಕೊಂಡಿತ್ತು. ಇಬ್ಬರು ಸೋಮವಾರ ಮೃತಪಟ್ಟಿದ್ದರು. ಮೃತರ ಪೈಕಿ ಒಬ್ಬರ ಸಂಬಂಧಿಯನ್ನು ಐಸಿಯುನಲ್ಲಿ ದಾಖಲಿಸಲಾಗಿದೆ ಎಂದು ಕೇರಳ ಆರೋಗ್ಯ ಇಲಾಖೆ ಸೋಮವಾರ ತಡರಾತ್ರಿ ತಿಳಿಸಿತ್ತು.

ಒಂಬತ್ತು ವರ್ಷದ ಬಾಲಕನೂ ಸೇರಿದಂತೆ ಇನ್ನೊಬ್ಬ ವ್ಯಕ್ತಿಯೂ ಮಂಗಳವಾರ ರಾತ್ರಿ ನಿಪಾ ವೈರಸ್‌ಗೆ ಬಲಿಯಾಗಿದ್ದು, ಸತ್ತವರ ಸಂಖ್ಯೆ ನಾಲ್ಕಕ್ಕೇರಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ಈ 'ಅಸಹಜ' ಸಾವುಗಳ ಬೆನ್ನಲ್ಲೇ, ಆರೋಗ್ಯ ಇಲಾಖೆಯು ಜಿಲ್ಲೆಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ಘೋಷಿಸಿದೆ. ನಾಲ್ವರ ಮಾದರಿಗಳನ್ನು ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಗೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಕೋಯಿಕ್ಕೋಡ್‌ನಲ್ಲಿ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಮಾಸ್ಕ್ ಧರಿಸುವಂತೆ ಜನರಿಗೆ ಸೂಚಿಸಲಾಗಿದೆ.

'ನಿಪಾ ವೈರಸ್ ಸೋಂಕಿನಿಂದಾಗಿ ಇಬ್ಬರು ಮೃತಪಟ್ಟ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಪೊಲೀಸರ ವಶಕ್ಕೆ ಗೋರಕ್ಷಕ ಮೋನು'

ಗುರುಗ್ರಾಮ (ಪಿಟಿಐ): ರಾಜಸ್ಥಾನದಲ್ಲಿ ಇಬ್ಬರು ಮುಸ್ಲಿಂ ವ್ಯಕ್ತಿಗಳ ಹತ್ಯೆ ಹಾಗೂ ನೂಹ್‌ನಲ್ಲಿ ಈಚೆಗೆ ನಡೆದ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ ಆರೋಪದ ಮೇರೆಗೆ ಗೋರಕ್ಷಕ, ಬಜರಂಗ ದಳದ ನಾಯಕ ಮೋನು ಮಾನೇಸರ್ ಅವರನ್ನು ಮಂಗಳವಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ವಿಶ್ವ ಹಿಂದೂ ಪರಿಷತ್ ಹೇಳಿದೆ.

ಆದರೆ, ಹರಿಯಾಣ ಪೊಲೀಸರು ಇದುವರೆಗೆ ಮೋನು ಅವರ ಬಂಧನವನ್ನು ಖಚಿತಪಡಿಸಿಲ್ಲ.

ಮೋನು ಅವರನ್ನು ಗುರುಗ್ರಾಮದಲ್ಲಿರುವ ಮಾನೇಸರ್‌ನಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂಬುದಾಗಿ ಬಜರಂಗದ ದಳದ ಮಾತೃಸಂಘಟನೆಯಾಗಿರುವ ವಿಎಚ್‌ಪಿಯ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾನೇಸರ್ ಅವರ ವಿರುದ್ಧ ಯಾವುದೇ ಪ್ರಕರಣವಿಲ್ಲ. ವಿನಾಕಾರಣ ಬಜರಂಗದಳದ ಕಾರ್ಯಕರ್ತರಿಗೆ ಕಿರುಕುಳ ನೀಡಲಾಗುತ್ತಿದೆ ಇದನ್ನು ಖಂಡಿಸುತ್ತೇವೆ ಎಂದು ಹರಿಯಾಣದ ವಿಎಚ್‌ಪಿ ಪದಾಧಿಕಾರಿ ವರುಣ್ ಶರ್ಮಾ ಹೇಳಿದ್ದಾರೆ.

ಮೋನು ಮಾನೇಸರ್ ಅವರ ಮೂಲ ಹೆಸರು ಮೋಹಿತ್ ಯಾದವ್ ಆಗಿದ್ದು, ಅವರನ್ನು ಸಾದಾ ಉಡುಪಿನಲ್ಲಿರುವ ವ್ಯಕ್ತಿಗಳು ವಶಕ್ಕೆ ಪಡೆಯುತ್ತಿರುವ ವಿಡಿಯೊಕ್ಲಿಪ್‌ವೊಂದು ಹರಿದಾಡುತ್ತಿದೆ.

ಜುಲೈ 31ರ ಹಿಂಸಾಚಾರಕ್ಕೂ ಮುನ್ನ ಆನ್‌ಲೈನ್‌ನಲ್ಲಿ ಕಾಣಿಸಿಕೊಂಡ ಮತ್ತೊಂದು ವಿಡಿಯೊ ಕ್ಲಿಪ್‌ನಲ್ಲಿ ಮೋನು ಅವರು ಬ್ರಿಜ್ ಮಂಡಲ್ ಜಲಾಭಿಷೇಕ ಮೆರವಣಿಗೆಯಲ್ಲಿ ತಾವು ಭಾಗವಹಿಸುವುದಾಗಿ ಮತ್ತು ಯಾತ್ರೆಯಲ್ಲಿ ಜನರು ಪಾಲ್ಗೊಳ್ಳುವಂತೆ ಕೋರಿರುವ ದೃಶ್ಯಗಳಿವೆ.

ಈ ವಿಡಿಯೊದ ಬಗ್ಗೆ ಪ್ರತಿಕ್ರಿಯಿಸಿದ್ದ ಹರಿಯಾಣದ ಗೃಹಸಚಿವ ಅನಿಲ್ ವಿಜ್ ಅವರು, 'ವಿಡಿಯೊವನ್ನು ವೀಕ್ಷಿಸಿದ್ದೇನೆ. ಮೋನು ಅವರು ಎಲ್ಲಿಯೂ ಜನರನ್ನು ಗಲಭೆಗೆ ಪ್ರಚೋದಿಸಿಲ್ಲ. ಅವರು ಜನರನ್ನು ಯಾತ್ರೆಯಲ್ಲಿ ಪಾಲ್ಗೊಳ್ಳುವಂತೆ ಕೋರಿದ್ದಾರೆ' ಎಂದಿದ್ದಾರೆ.

'ವಿಶ್ವದ ಅತ್ಯುತ್ತಮ ಶಾಲೆ'ಗಳ ಸ್ಪರ್ಧೆ ಅಂತಿಮಪಟ್ಟಿಗೆ ಭಾರತದ 2 ಶಾಲೆಗಳು

ಲಂಡನ್ (ಪಿಟಿಐ): 2023ನೇ ಸಾಲಿನ 'ವಿಶ್ವದ ಅತ್ಯುತ್ತಮ ಶಾಲೆ'ಗಳು ಸ್ಪರ್ಧೆಯ ಅಂತಿಮ ಪಟ್ಟಿಯಲ್ಲಿ ಗುಜರಾತ್‌ನ ಖಾಸಗಿ ಅಂತರರಾಷ್ಟ್ರೀಯ ಶಾಲೆ ಮತ್ತು ಮಹಾರಾಷ್ಟ್ರದ ದತ್ತಿ ಶಾಲೆಯು ಸ್ಥಾನ ಪಡೆದಿವೆ.

ಟಿ4 ಎಜುಕೇಷನ್ ಮತ್ತು ವರ್ಲ್ಡ್ ಬೆಸ್ಟ್ ಸ್ಕೂಲ್ ಸ್ಪರ್ಧೆಯ ಸ್ಥಾಪಕರಾದ ವಿಕಾಸ್ ಪೋಟ ಅವರು ಮಂಗಳವಾರ ಇಲ್ಲಿನ ಐದು ವಿಭಾಗಗಳಲ್ಲಿ ಅಂತಿಮ ಸ್ಪರ್ಧೆಯಲ್ಲಿರುವ ಶಾಲೆಗಳ ಪಟ್ಟಿಯನ್ನು ಪ್ರಕಟಿಸಿದರು.

ಪರಿಣತರ ಸಮಿತಿಯು ಐದು ವಿಭಾಗಗಳಲ್ಲಿ ತಲಾ ಒಂದು ಶಾಲೆಯನ್ನು ಬಹುಮಾನಕ್ಕೆ ಆಯ್ಕೆ ಮಾಡಲಿದೆ. ಬಹುಮಾನ ವಿಜೇತ ಶಾಲೆಗಳ ಪಟ್ಟಿ ನವೆಂಬರ್‌ನಲ್ಲಿ ಪ್ರಕಟವಾಗಲಿದೆ. ಬಹುಮಾನದ ಮೊತ್ತ ತಲಾ 50 ಸಾವಿರ ಅಮೆರಿಕ ಡಾಲರ್ (₹ 41.46 ಲಕ್ಷ).

ಸಮುದಾಯದ ಒಳಗೊಳ್ಳುವಿಕೆ, ಪರಿಸರ ಸ್ನೇಹಿ ಕ್ರಮ, ನವೀನತೆ/ಅನ್ವೇಷಣೆ, ಪ್ರತಿಕೂಲ ಸ್ಥಿತಿಯ ಸಮರ್ಥ ನಿರ್ವಹಣೆ, ಆರೋಗ್ಯಕರ ಜೀವನಶೈಲಿಯನ್ನು ಬೆಂಬಲಿಸುವುದು –ಹೀಗೆ ಐದು ಪ್ರತ್ಯೇಕ ವಿಭಾಗಗಳಲ್ಲಿ ವಿಜೇತ ಶಾಲೆಗಳ ಆಯ್ಕೆ ನಡೆಯಲಿದೆ.

ವಿದ್ಯಾರ್ಥಿ ಕೇಂದ್ರಿತ ಬೋಧನಾ ಕ್ರಮಕ್ಕಾಗಿ 'ನವೀನತೆ/ಅನ್ವೇಷಣೆ' ವಿಭಾಗದಲ್ಲಿ ಗುಜರಾತ್ ರಾಜ್ಯದ ಅಹಮದಾಬಾದ್‌ನಲ್ಲಿ ಇರುವ ರಿವರ್‌ಸೈಡ್ ಸ್ಕೂಲ್ ಪ್ರಶಸ್ತಿಯ ಅಂತಿಮ ಪಟ್ಟಿಯಲ್ಲಿದೆ. ಎಚ್‌ಐವಿ/ಏಡ್ಸ್ ಬಾಧಿತ ಮಕ್ಕಳ ಜೀವನಕ್ರಮ ಬದಲಾವಣೆಗೆ ಒತ್ತು ನೀಡುತ್ತಿರುವ ಮಹಾರಾಷ್ಟ್ರದ ಅಹಮದ್‌ನಗರದಲ್ಲಿರುವ ಸ್ನೇಹಾಲಯ ಇಂಗ್ಲಿಷ್ ಮೀಡಿಯಂ ಸ್ಕೂಲ್ 'ಪ್ರತಿಕೂಲ ಸ್ಥಿತಿಯ ಸಮರ್ಥ ನಿರ್ವಹಣೆ' ವಿಭಾಗದಲ್ಲಿ ಅಂತಿಮ ಸ್ಪರ್ಧಾಪಟ್ಟಿಯಲ್ಲಿದೆ.

ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಮೂವರ ಹತ್ಯೆ

ಇಂಫಾಲ್(ಮಣಿಪುರ) (ಪಿಟಿಐ): ಮಣಿಪುರದಲ್ಲಿ ಮಂಗಳವಾರ ಮತ್ತೆ ಹಿಂಸಾಚಾರ ಕಂಡುಬಂದಿದ್ದು, ಕಂಗ್‌ಪೋಕ್ಪಿ ಜಿಲ್ಲೆಯಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಕುಕಿ ಸಮುದಾಯದ ಮೂವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯ ಕಂಗ್‌ಗುಯಿ ಪ್ರದೇಶದಲ್ಲಿರುವ ಐರೆಂಗ್ ಮತ್ತು ಕರಮ್ ವೈಫಿ ಗ್ರಾಮಗಳ ನಡುವೆ ಈ ಹೊಂಚು ದಾಳಿ ನಡೆದಿದೆ ಎಂದು ತಿಳಿಸಿದ್ದಾರೆ.

ಖಂಡನೆ: ಕಂಗ್‌ಪೋಕ್ಪಿ ಮೂಲದ ಕಮಿಟಿ ಆನ್ ಟ್ರೈಬಲ್ ಯುನಿಟಿ (ಸಿಓಟಿಯು) ಎಂಬ ಸಂಘಟನೆಯು ಈ ದಾಳಿಯನ್ನು ಖಂಡಿಸಿದೆ.

'ರಾಜ್ಯದಲ್ಲಿ ಸಹಜಸ್ಥಿತಿ ಮರಳಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರ ಗಂಭೀರವಾಗಿದ್ದಲ್ಲಿ, ರಾಜ್ಯದ ಎಲ್ಲ ಜಿಲ್ಲೆಗಳನ್ನು ಸಂಘರ್ಷಪೀಡಿತ ಎಂಬುದಾಗಿ ಘೋಷಿಸಬೇಕು ಹಾಗೂ ಆಫ್‌ಸ್ಪಾ (ಸಶಸ್ತ್ರ ಪಡೆಗಳ(ವಿಶೇಷ ಅಧಿಕಾರ) ಕಾಯ್ದೆ 1958) ಜಾರಿಗೊಳಿಸಬೇಕು' ಎಂದು ಸಿಓಟಿಯು ಹೇಳಿಕೆಯಲ್ಲಿ ತಿಳಿಸಿದೆ.

ಸೆ.8ರಂದು ತೆಂಗ್‌ನೌಪಲ್ ಜಿಲ್ಲೆಯಲ್ಲಿ ನಡೆದಿದ್ದ ಹಿಂಸಾಚಾರದಲ್ಲಿ ಮೂವರನ್ನು ಹತ್ಯೆಯಾಗಿತ್ತು.

ಪಕ್ಷದ ಚಿಹ್ನೆ ಪ್ರಚಾರ: ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

ನವದೆಹಲಿ (ಪಿಟಿಐ): ಸಂಸತ್ ಸಿಬ್ಬಂದಿಯ ನೂತನ ವಸ್ತ್ರಸಂಹಿತೆ ವಿವಾದಕ್ಕೆ ಕಾರಣವಾಗಿದ್ದು, ಈ ವಿಚಾರವಾಗಿ ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

ನೂತನ ಸಮವಸ್ತ್ರದಲ್ಲಿ ಹೂವಿನ ಚಿತ್ರಗಳಿರುವುದೇ ವಿವಾದಕ್ಕೆ ಕಾರಣವಾಗಿದೆ. 'ಬಿಜೆಪಿಯು ತನ್ನ ಪಕ್ಷದ ಚಿಹ್ನೆಯ ಪ್ರಚಾರಕ್ಕಾಗಿ ಇಂತಹ ಕೀಳು ಮಟ್ಟದ ತಂತ್ರಕ್ಕೆ ಮೊರೆ ಹೋಗಿದೆ' ಎಂದು ಕಾಂಗ್ರೆಸ್ ಟೀಕಿಸಿದೆ.

'ಸಂಸತ್ ಒಂದು ಪಕ್ಷಕ್ಕೆ ಸೇರಿದ್ದು ಎಂಬಂತೆ ಬಿಂಬಿಸಲು ಬಿಜೆಪಿ ಹೊರಟಿದೆ' ಎಂದು ಕಾಂಗ್ರೆಸ್ ಆರೋಪಿಸಿದೆ.

'ಸಿಬ್ಬಂದಿಯ ಸಮವಸ್ತ್ರದ ಮೇಲೆ ಕಮಲದ ಚಿತ್ರವನ್ನೇ ಯಾಕೆ ಮುದ್ರಿಸಲಾಗಿದೆ? ರಾಷ್ಟ್ರೀಯ ಪ್ರಾಣಿ ಹುಲಿ ಇಲ್ಲವೇ ರಾಷ್ಟ್ರೀಯ ಪಕ್ಷಿ ನವಿಲಿನ ಚಿತ್ರವನ್ನು ಯಾಕೆ ಮುದ್ರಿಸಿಲ್ಲ' ಎಂದು ಲೋಕಸಭೆಯಲ್ಲಿ ಕಾಂಗ್ರೆಸ್‌ನ ಸಚೇತಕ ಮಾಣಿಕಂ ಟ್ಯಾಗೋರ್ ಪ್ರಶ್ನಿಸಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಕಮಲ ಮಾತ್ರ ಯಾಕೆ? ನವಿಲು ಅಥವಾ ಹುಲಿಯ ಚಿತ್ರ ಯಾಕಿಲ್ಲ? ಓಹ್, ಅವು ಬಿಜೆಪಿ ಪಕ್ಷದ ಚಿಹ್ನೆಗಳು ಅಲ್ಲ! ಓಂ ಬಿರ್ಲಾ ಅವರೇ, ಇಷ್ಟೊಂದು ಕೀಳು ಮಟ್ಟದ ಚಿಂತನೆ ಯಾಕೆ' ಎಂದು ಪ್ರಶ್ನಿಸಿದ್ದಾರೆ.

'ಅವರು ಎಷ್ಟೊಂದು ಕೆಳಮಟ್ಟಕ್ಕೆ ಇಳಿದಿದ್ದಾರೆ. ಜಿ20 ಶೃಂಗಸಭೆ ಸಂದರ್ಭದಲ್ಲಿಯೂ ಇದೇ ರೀತಿ ಮಾಡಿದ್ದರು. ಈಗ ಮತ್ತೆ ಅದೇ ವರಸೆ. ಅದು (ಕಮಲ) ರಾಷ್ಟ್ರೀಯ ಹೂವು ಎನ್ನುತ್ತಾರೆ' ಎಂದು ಟ್ಯಾಗೋರ್ ಟೀಕಿಸಿದ್ದಾರೆ.

ವಸ್ತ್ರಸಂಹಿತೆ ಸುತ್ತೋಲೆಯಲ್ಲಿ ಏನಿದೆ?

ಮಾರ್ಷಲ್‌ಗಳು, ಭದ್ರತಾ ಸಿಬ್ಬಂದಿ ಮತ್ತು ಅಧಿಕಾರಿಗಳು, ಅಟೆಂಡರ್‌ಗಳು, ಚಾಲಕರಿಗೆ ಸಂಬಂಧಿಸಿ ಹೊಸ ವಸ್ತ್ರಸಂಹಿತೆ ಕುರಿತು ಲೋಕಸಭಾ ಕಾರ್ಯಾಲಯವು ಸುತ್ತೋಲೆಯೊಂದನ್ನು ಹೊರಡಿಸಿದೆ.

'ನೂತನ ಕಟ್ಟಡದಲ್ಲಿ ಸಂಸತ್‌ನ ಕಾರ್ಯ ಆರಂಭಗೊಂಡ ನಂತರ ಸಂಬಂಧಿಸಿದ ಸಿಬ್ಬಂದಿ ಹೊಸ ಸಮವಸ್ತ್ರ ಧರಿಸಬೇಕು' ಎಂದು ಹೇಳಲಾಗಿದೆ.

ಅಧಿಕಾರಿಗಳು ಕೊರಳು ಮುಚ್ಚುವ (ಬಂದ್‌ಗಲಾ) ಸಮವಸ್ತ್ರದ ಬದಲಾಗಿ ಕಡು ಗುಲಾಬಿ ಬಣ್ಣದ ನೆಹರೂ ಜಾಕೆಟ್ ಧರಿಸಬೇಕು. ಎಲ್ಲ ಸಿಬ್ಬಂದಿಯ ಅಂಗಿಗಳು ಹೂವಿನ ಚಿತ್ರಗಳಿರುವ ವಿನ್ಯಾಸ ಹೊಂದಿರಲಿವೆ. ಖಾಕಿ ಬಣ್ಣದ ಪ್ಯಾಂಟ್ ಧರಿಸಬೇಕು ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ. ಸಂಸತ್‌ನ ಎರಡೂ ಸದನಗಳ ಮಾರ್ಷಲ್‌ಗಳು ಮಣಿಪುರಿ ಪೇಟ ಧರಿಸಬೇಕು. ಭದ್ರತಾ ಸಿಬ್ಬಂದಿ ನೀಲಿ ಸಫಾರಿ ಸೂಟ್ ಬದಲಾಗಿ ಸೈನಿಕರು ಧರಿಸುವ ಮಾದರಿಯ ಸಮವಸ್ತ್ರ ಧರಿಸಬೇಕು. ಮಹಿಳಾ ಸಿಬ್ಬಂದಿಗೆ ಗಾಢ ಬಣ್ಣದ ಸೀರೆ ನಿಗದಿ ಮಾಡಲಾಗಿದೆ.

'ಚಂದ್ರಬಾಬು ಜೀವಕ್ಕೆ ಜೈಲು ಸುರಕ್ಷಿತ'

ಗೃಹ ಬಂಧನಕ್ಕೆ ಅನುಮತಿ ಕೋರಿದ್ದ ಅರ್ಜಿ ವಜಾ

ವಿಜಯವಾಡ (ಪಿಟಿಐ): ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ತೆಲುಗು ದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರನ್ನು ಕಾರಾಗೃಹದ ಬದಲು ಗೃಹ ಬಂಧನದಲ್ಲಿ ಇಡಲು ಅವಕಾಶ ನೀಡುವುದಕ್ಕೆ ಇಲ್ಲಿನ ಎಸಿಬಿ ನ್ಯಾಯಾಲಯ ಮಂಗಳವಾರ ನಿರಾಕರಿಸಿದೆ.

ನಾಯ್ಡು ಅವರಿಗೆ ಝಡ್ ಪ್ಲಸ್ ಕೆಟಗರಿ ಭದ್ರತೆ ಕಲ್ಪಿಸಲಾಗಿದೆ. ಅವರನ್ನು ಗೃಹ ಬಂಧನದಲ್ಲಿಟ್ಟರೆ ಈ ಮಾದರಿಯ ಭದ್ರತೆ ನೀಡುವುದು ಕಷ್ಟಕರ. ಅವರ ಜೀವದ ಸುರಕ್ಷೆಯ ದೃಷ್ಟಿಯಿಂದಲೂ ಕಾರಾಗೃಹದಲ್ಲಿ ಇರುವುದೇ ಲೇಸು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು.

ಕೌಶಲ ಅಭಿವೃದ್ಧಿ ನಿಗಮದ ಬಹುಕೋಟಿ ಹಣ ದುರುಪಯೋಗ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ನಾಯ್ಡು ವಿರುದ್ಧ ಸಿಐಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಸದ್ಯ ಅವರು ರಾಜಮಹೇಂದ್ರವರಂ ಕೇಂದ್ರ ಕಾರಾಗೃಹದಲ್ಲಿ ಇದ್ದಾರೆ.



ಚಂದ್ರಬಾಬು ನಾಯ್ಡು

ಸೋಮವಾರ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ ನೇತೃತ್ವದ ವಕೀಲರ ತಂಡವು, ನಾಯ್ಡು ಅವರ ಜೀವಕ್ಕೆ ಅಪಾಯವಿದೆ. ಅವರಿಗೆ ಹಲವು ವರ್ಷಗಳಿಂದ ಭದ್ರತೆ ಕಲ್ಪಿಸಲಾಗಿದೆ. ಅವರನ್ನು ಗೃಹ ಬಂಧನದಲ್ಲಿ ಇರಿಸಲು ಅನು ಮತಿ ನೀಡುವಂತೆ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು. 'ನಾಯ್ಡು ಅವರ ಗೃಹ ಬಂಧನಕ್ಕೆ ಅನುಮತಿ ನೀಡಲು ಕೋರ್ಟ್ ತಿರಸ್ಕರಿಸಿದೆ. ಈ ಕುರಿತ ಆದೇಶ ಪ್ರತಿ ದೊರೆತ ತಕ್ಷಣವೇ ಬುಧವಾರ ಆಂಧ್ರಪ್ರದೇಶ ಹೈಕೋರ್ಟ್‌ನ ಮೊರೆ ಹೋಗಲು ನಿರ್ಧರಿಸಲಾಗಿದೆ' ಎಂದು ವಕೀಲ ಜಯಕರ್ ಮಟ್ಟಾ ತಿಳಿಸಿದ್ದಾರೆ.

ಸನಾತನ ಧರ್ಮ: ಸೋನಿಯಾ, ರಾಹುಲ್ ಮೌನ ಪ್ರಶ್ನಿಸಿದ ಬಿಜೆಪಿ

'ಮತಬ್ಯಾಂಕ್ ರಾಜಕೀಯಕ್ಕಾಗಿ ದ್ವೇಷ'

ನವದೆಹಲಿ (ಪಿಟಿಐ): ಮತಬ್ಯಾಂಕ್ ರಾಜಕೀಯದ ರಹಸ್ಯ ಕಾರ್ಯಸೂಚಿಯ ಭಾಗವಾಗಿ 'ಇಂಡಿಯಾ' ಮೈತ್ರಿಕೂಟವು ಸನಾತನ ಧರ್ಮವನ್ನು ಟೀಕಿಸುತ್ತಿದೆ ಎಂದು ಬಿಜೆಪಿ ದೂರಿದೆ.



ಜೆ.ಪಿ. ನಡ್ಡಾ

'ಪದೇ ಪದೇ ಸನಾತನ ಧರ್ಮಕ್ಕೆ ಅವಹೇಳನ ಮಾಡಲಾಗುತ್ತಿದೆ. ಪ್ರಾಚೀನ ನಂಬಿಕೆ ಮೇಲೆ ದಾಳಿ ನಡೆಸುವುದು ಕಾಂಗ್ರೆಸ್‌ನ ತಂತ್ರಗಾರಿಕೆಯ ಭಾಗವಾಗಿದೆ. ಈ ಬಗ್ಗೆ ಆ ಪಕ್ಷದ ನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಪ್ರತಿಕ್ರಿಯಿಸದೆ ಮೌನಕ್ಕೆ ಜಾರಿದ್ದಾರೆ' ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು 'ಎಕ್ಸ್'ನಲ್ಲಿ ಆಪಾದಿಸಿದ್ದಾರೆ.

'ಇಂಡಿಯಾ'ವು ಸನಾತನ ಧರ್ಮದ ಸಿದ್ಧಾಂತವನ್ನು ವಿರೋಧಿಸುತ್ತದೆ ಎಂದು ಹೇಳಿಕೆ ನೀಡಿರುವ ತಮಿಳುನಾಡಿನ ಉನ್ನತ ಶಿಕ್ಷಣ ಸಚಿವ ಕೆ. ಪೊನ್ಮುಡಿ ಅವರನ್ನು ಕಮಲ ಪಾಳಯ ತರಾಟೆಗೆ ತೆಗೆದುಕೊಂಡಿದೆ.

ವಿರೋಧ ಪಕ್ಷಗಳಿಗೆ ಸಾಂವಿಧಾನಿಕ ನಿಬಂಧನೆಗಳ ಬಗ್ಗೆ ಅರಿವು ಇಲ್ಲವೇ? ಯಾವುದಾದರೂ ಧರ್ಮದ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡುವುದಕ್ಕೆ ಸಂವಿಧಾನದಲ್ಲಿ ಅವಕಾಶ ನೀಡಲಾಗಿದೆಯೇ ಎಂಬ ಬಗ್ಗೆ ಕಾಂಗ್ರೆಸ್ ಹಾಗೂ 'ಇಂಡಿಯಾ' ನಿಲುವು ಸ್ಪಷ್ಟಪಡಿಸಬೇಕು ಎಂದು ನಡ್ಡಾ ಆಗ್ರಹಿಸಿದ್ದಾರೆ.

'ಮೊಹಬ್ಬತ್ ಕಿ ದುಕಾನ್'ನಲ್ಲಿ ಸನಾತನ ಧರ್ಮದ ದ್ವೇಷವನ್ನು 'ಮಾರಾಟ' ಮಾಡುತ್ತಿರುವುದು ಏಕೆ ಎಂಬುದಕ್ಕೆ ರಾಹುಲ್ ಉತ್ತರಿಸಬೇಕಿದೆ ಎಂದಿರುವ ಅವರು, ಅಧಿಕಾರಕ್ಕಾಗಿ ಒಡೆದಾಳುವ ನೀತಿಯೇ ಇದರ ಹಿಂದಿರುವ ಮೂಲ ಉದ್ದೇಶವಾಗಿದೆ ಎಂದು ಆಪಾದಿಸಿದ್ದಾರೆ.

'ಸಂಸ್ಕೃತಿಗೆ ಅವಮಾನ'

'ಪ್ರತಿದಿನ ದೇಶದ ಸಂಸ್ಕೃತಿ ಮತ್ತು ಪರಂಪರೆಯನ್ನು ಅವಮಾನಿಸುತ್ತಿದ್ದರೂ ಸೋನಿಯಾ ಅವರು ಮೌನ ತಳೆದಿರುವುದು ಏಕೆ' ಎಂದು ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್ ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬಿಹಾರ ಸಚಿವ ಹಾಗೂ ಆರ್‌ಜೆಡಿ ನಾಯಕ ಚಂದ್ರಶೇಖರ್, ಸಮಾಜವಾದಿ ಪಕ್ಷದ ಸ್ವಾಮಿ ಪ್ರಸಾದ್ ಮೌರ್‍ಯ ಅವರು 'ರಾಮಚರಿತಮಾನಸ'ದಂತಹ ಪವಿತ್ರ ಹಿಂದೂ ಗ್ರಂಥಗಳನ್ನು ಟೀಕಿಸುತ್ತಿದ್ದಾರೆ. ಆದರೆ, ಈ ಪಕ್ಷಗಳ ನಾಯಕರು ಕೂಡ ಮೌನವಾಗಿದ್ದಾರೆ. ಇದಕ್ಕೆ ಅವರ ಒಪ್ಪಿಗೆ ಇರುವುದನ್ನು ಇದು ಸೂಚಿಸುತ್ತದೆ ಎಂದು ದೂರಿದ್ದಾರೆ.

ಕ್ರಿಕೆಟ್: ನಾಯಕ ರೋಹಿತ್ ಶರ್ಮಾ ಅರ್ಧಶತಕ • ಫೈನಲ್ ಪ್ರವೇಶಿಸಿದ ಭಾರತ ತಂಡ

ಕುಲದೀಪ್ ಕೈಚಳಕ: ಮಣಿದ ಲಂಕಾ

ಪ್ರಜಾವಾಣಿ ವಾರ್ತೆ

ವಿಕೆಟ್ ಪಡೆದ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಎಫ್‌ಪಿ ಚಿತ್ರ

ಕೊಲಂಬೊ: ಎಡಗೈ ಸ್ಪಿನ್ ಜೋಡಿ ಕುಲದೀಪ್ ಯಾದವ್ ಮತ್ತು ರವೀಂದ್ರ ಜಡೇಜ ಅವರ ಮೋಡಿಯಿಂದಾಗಿ ಭಾರತ ತಂಡವು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ನಾಲ್ಕರ ಹಂತದ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 41 ರನ್‌ಗಳಿಂದ ಶ್ರೀಲಂಕಾ ತಂಡದ ಎದುರು ಜಯಿಸಿತು. ಆದರೆ, ಲಂಕಾ ತಂಡದ ಸ್ಪಿನ್, ಆಲ್‌ರೌಂಡರ್ ದುನಿತ್ ವಲ್ಲಾಳಗೆ ಅವರ ಆಟ ಗಮನ ಸೆಳೆಯಿತು. ಈ ಹಂತದಲ್ಲಿ ಎರಡನೇ ಜಯ ದಾಖಲಿಸಿದ ರೋಹಿತ್ ಶರ್ಮಾ ಬಳಗವು ಫೈನಲ್‌ಗೆ ಸ್ಥಾನವನ್ನು ಖಚಿತಪಡಿಸಿತು.

ತಂಡವು ಕೊನೆಯ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಎದುರಿಸಲಿದೆ.

ಇಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವನ್ನು ದುನಿತ್ (40ಕ್ಕೆ5) ಕಾಡಿದರು. ಅದರಿಂದಾಗಿ ತಂಡವು ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. ಒಂದು ಹಂತದಲ್ಲಿ ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತ್ತು. ಆದರೆ, ನಾಯಕ ರೋಹಿತ್ ಅರ್ಧಶತಕ ಗಳಿಸಿ ಬಲ ತುಂಬಿದರು. ಅದರಿಂದಾಗಿ ತಂಡವು 49.1 ಓವರ್‌ಗಳಲ್ಲಿ 213 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಶ್ರೀಲಂಕಾ ತಂಡವು 41.3 ಓವರ್‌ಗಳಲ್ಲಿ 172 ರನ್ ಗಳಿಸಿತು. ಕುಲದೀಪ್ (43ಕ್ಕೆ4) ಮತ್ತು ಜಡೇಜ (33ಕ್ಕೆ2) ಲಂಕಾ ತಂಡಕ್ಕೆ ಪೆಟ್ಟುಕೊಟ್ಟರು.

ರೋಹಿತ್ ಅರ್ಧಶತಕ: ಸ್ಪಿನ್ನರ್ ಸ್ನೇಹಿ ಪಿಚ್‌ನಲ್ಲಿ ಬ್ಯಾಟಿಂಗ್ ಸುಲಭವಾಗಿರಲಿಲ್ಲ. ಆದರೂ ರೋಹಿತ್ ಮತ್ತು ಶುಭಮನ್ ಗಿಲ್ ಉತ್ತಮ ಆರಂಭ ನೀಡಿದರು. ಈ ಜೋಡಿಯು 11 ಓವರ್‌ಗಳಲ್ಲಿ 80 ರನ್ ಸೇರಿಸಿತು. ಅದರಲ್ಲಿ ಗಿಲ್ ಅವರದ್ದು 19 ರನ್‌ಗಳಷ್ಟೇ. ಉಳಿದದ್ದು ರೋಹಿತ್ ಕಾಣಿಕೆ. ಅವರು 48 ಎಸೆತಗಳಲ್ಲಿ 53 ರನ್ ಗಳಿಸಿದರು. ಅದರಲ್ಲಿ ಏಳು ಬೌಂಡರಿ ಹಾಗೂ ಎರಡು ಸಿಕ್ಸರ್ ಇದ್ದವು.

ಐದನೇ ಬೌಲರ್ ಆಗಿ ಕಣಕ್ಕಿಳಿದ ದುನಿತ್ ಇನಿಂಗ್ಸ್‌ನ 12ನೇ ಓವರ್‌ನಲ್ಲಿ ಗಿಲ್ ವಿಕೆಟ್ ಉರುಳಿಸಿ, ಜೊತೆಯಾಟ ಮುರಿದರು. 14ನೇ ಓವರ್‌ನಲ್ಲಿ ವಿರಾಟ್ ಕೊಹ್ಲಿ ವಿಕೆಟ್ ಗಳಿಸಿ ದುನಿತ್ ಸಂಭ್ರಮಿಸಿದರು.

ಪಾಕ್ ವಿರುದ್ಧದ ಪಂದ್ಯದಲ್ಲಿ ಭರ್ಜರಿ ಶತಕ ಹೊಡೆದಿದ್ದ ಕೊಹ್ಲಿ ಇಲ್ಲಿ ಕೇವಲ 3 ರನ್ ಗಳಿಸಿದರು. 16ನೇ ಓವರ್‌ನಲ್ಲಿ ದುನಿತ್ ಮತ್ತೊಂದು ಪೆಟ್ಟು ಕೊಟ್ಟರು. ಉತ್ತಮ ಲಯದಲ್ಲಿದ್ದ ರೋಹಿತ್ ಅವರ ವಿಕೆಟ್ ಉರುಳಿಸಿದರು.

ಈ ಹಂತದಲ್ಲಿ ಜೊತೆಗೂಡಿದ ಇಶಾನ್ ಕಿಶನ್ (33; 61ಎ, 4X1, 6X1) ಹಾಗೂ ಕೆ.ಎಲ್. ರಾಹುಲ್ (39; 44ಎ, 4X2) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 63 ರನ್ ಸೇರಿಸಿದರು. ಇದರಿಂದಾಗಿ ಇನಿಂಗ್ಸ್ ಸ್ವಲ್ಪಮಟ್ಟಿಗೆ ಚೇತರಿಕೆ ಕಂಡಿತು.

ದುನಿತ್ ಮತ್ತೊಮ್ಮೆ ತಮ್ಮ ಕೈಚಳಕ ಮೆರೆದು ಈ ಜೊತೆಯಾಟಕ್ಕೂ ತಡೆಯೊಡ್ಡಿದರು. 30ನೇ ಓವರ್‌ನಲ್ಲಿ ಅವರು ತಮ್ಮದೇ ಬೌಲಿಂಗ್‌ನಲ್ಲಿ ರಾಹುಲ್ ಅವರ ಕ್ಯಾಚ್ ತೆಗೆದುಕೊಂಡರು. ಹಾರ್ದಿಕ್ ಪಾಂಡ್ಯ ವಿಕೆಟ್ ಕೂಡ ಅವರ ಪಾಲಾಯಿತು.

ಇನ್ನೊಂದು ಬದಿಯಲ್ಲಿ ಬೌಲಿಂಗ್ ಮಾಡುತ್ತಿದ್ದ ಆಫ್‌ಬ್ರೇಕ್ ಬೌಲರ್ ಅಸಲಂಕಾ ಕೂಡ ಮಿಂಚಿದರು. ಅವರು ಇಶಾನ್, ಬೂಮ್ರಾ ಮತ್ತು ಕುಲದೀಪ್ ಯಾದವ್ ವಿಕೆಟ್ ಗಳಿಸಿದರು.

ಭಾರತವು 197 ರನ್‌ಗಳಿಗೆ 9 ವಿಕೆಟ್ ಕಳೆದುಕೊಂಡಿದ್ದ ಸಂದರ್ಭದಲ್ಲಿ ಮಳೆ ಬಂದ ಕಾರಣ ಸ್ವಲ್ಪ ಹೊತ್ತು ಪಂದ್ಯ ಸ್ಥಗಿತವಾಗಿತ್ತು. ಮಳೆ ನಿಂತ ನಂತರ ಆಟ ಆರಂಭವಾಯಿತು. ಅಕ್ಷರ್ ಪಟೇಲ್ ಒಂದು ಸಿಕ್ಸರ್ ಸಹಿತ 26 ರನ್ ಗಳಿಸಿದರು.

ರೋಹಿತ್ ಹತ್ತು ಸಾವಿರ ರನ್

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ 10 ಸಾವಿರ ರನ್‌ಗಳ ಗಡಿ ದಾಟಿದರು.

ಈ ಸಾಧನೆ ಮಾಡಿದ ಭಾರತದ ಆರನೇ ಹಾಗೂ ಒಟ್ಟಾರೆ 15ನೇ ಬ್ಯಾಟರ್ ಆದರು. ಲಂಕಾ ಎದುರಿನ ಪಂದ್ಯದಲ್ಲಿ ಕಸುನ್ ರಜಿತಾ ಎಸೆತವನ್ನು ಸಿಕ್ಸರ್‌ಗೆತ್ತಿದಾಗ ಅವರು ಹತ್ತು ಸಾವಿರ ರನ್ ಮೈಲುಗಲ್ಲು ದಾಟಿದರು.

ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿ, ಸೌರವ್ ಗಂಗೂಲಿ, ರಾಹುಲ್ ದ್ರಾವಿಡ್ ಹಾಗೂ ಮಹೇಂದ್ರಸಿಂಗ್ ಧೋನಿ ಅವರ ಸಾಲಿಗೆ ರೋಹಿತ್ ಸೇರಿದರು. 36 ವರ್ಷದ ರೋಹಿತ್ ಇದುವರೆಗೆ 248 ಪಂದ್ಯಗಳಲ್ಲಿ ಆಡಿದ್ದಾರೆ. 30 ಶತಕ, ಮೂರು ದ್ವಿಶತಕ ಹಾಗೂ 51 ಅರ್ಧಶತಕ ಗಳಿಸಿದ್ದಾರೆ.

ಸ್ಕೋರ್ ಕಾರ್ಡ್

ಭಾರತ 213 (49.1 ಓವರ್‌ಗಳಲ್ಲಿ)
ರೋಹಿತ್ ಬಿ ದುನಿತ್ 53 (48ಎ, 4X7, 6X2)
ಶುಭಮನ್ ಬಿ ದುನಿತ್ 19 (25ಎ, 4X2)
ಕೊಹ್ಲಿ ಸಿ ಶನಕಾ ಬಿ ದುನಿತ್ 3 (12ಎ)
ಇಶಾನ್ ಸಿ ದುನಿತ್ ಬಿ ಅಸಲಂಕಾ 33 (61ಎ, 4X1, 6X1)
ರಾಹುಲ್ ಸಿ ಮತ್ತು ಬಿ ದುನಿತ್ 39 (44ಎ, 4X2)
ಹಾರ್ದಿಕ್ ಸಿ ಮೆಂಡಿಸ್ ಬಿ ದುನಿತ್ 5 (18ಎ)
ಜಡೇಜ ಸಿ ಮೆಂಡಿಸ್ ಬಿ ಅಸಲಂಕಾ 4 (19ಎ)
ಅಕ್ಷರ್ ಸಿ ಸಮರವಿಕ್ರಮ ಬಿ ತೀಕ್ಷಣ 26 (36ಎ, 6X1)
ಬೂಮ್ರಾ ಬಿ ಅಸಲಂಕಾ 5 (12ಎ)
ಕುಲದೀಪ್ ಸಿ ಧನಂಜಯ ಬಿ ಅಸಲಂಕಾ 0 (1ಎ)
ಸಿರಾಜ್ ಔಟಾಗದೆ 5 (19ಎ)
ಇತರೆ: 21 (ಲೆಗ್‌ಬೈ 1, ವೈಡ್ 20)
ವಿಕೆಟ್ ಪತನ: 1–88 (ಶುಭಮನ್ ಗಿಲ್; 11.1), 2–90 (ವಿರಾಟ್ ಕೊಹ್ಲಿ;13.5), 3–91 (ರೋಹಿತ್ ಶರ್ಮಾ; 15.1), 4–154 (ರಾಹುಲ್; 29.6), 5–170 (ಇಶಾನ್ ಕಿಶನ್; 34.2), 6–172 (ಹಾರ್ದಿಕ್ ಪಾಂಡ್ಯ; 35.6), 7–178 (ರವೀಂದ್ರ ಜಡೇಜ; 38.5), 8–186 (ಜಸ್‌ಪ್ರೀತ್ ಬೂಮ್ರಾ; 42.1), 9–186 (ಕುಲದೀಪ್ ಯಾದವ್; 42.2), 10–213 (ಅಕ್ಷರ್ ಪಟೇಲ್; 49.1)
ಬೌಲಿಂಗ್: ಕಸುನ್ ರಜಿತಾ 4–0–30–0, ಮಹೀಷ ತೀಕ್ಷಣ 9.1–0–41–1, ದಸುನ್ ಶನಕಾ 3–0–24–0, ಮಹೀಷ ಪಥಿರಾಣ 4–0–31–0, ದುನಿತ್ ವೆಲ್ಲಾಳಗೆ 10–0–40–5, ಧನಂಜಯ ಡಿಸಿಲ್ವಾ 10–0–28–0, ಚರಿತ ಅಸಲಂಕಾ 9–1–18–4.

ಶ್ರೀಲಂಕಾ 172 (41.3 ಓವರ್‌ಗಳಲ್ಲಿ)
ನಿಸ್ಸಾಂಕ ಸಿ ರಾಹುಲ್ ಬಿ ಬೂಮ್ರಾ 6 (7ಎ, 4x1)
ದಿಮುತ್ ಸಿ ಶುಭಮನ್ ಬಿ ಸಿರಾಜ್ 2 (18ಎ)
ಕುಶಾಲ್ ಸಿ ಸೂರ್ಯಕುಮಾರ್ (ಬದಲಿ ಆಟಗಾರ) ಬಿ ಬೂಮ್ರಾ 15 (16ಎ, 4x3)
ಸದೀರ ಸ್ಟಂಪ್ ರಾಹುಲ್ ಬಿ ಯಾದವ್ 17 (31ಎ, 4x1)
ಚರಿತ್ ಸಿ ರಾಹುಲ್ ಬಿ ಕುಲದೀಪ್ 22 (35ಎ, 4x2)
ಧನಂಜಯ ಸಿ ಶುಭಮನ್ ಬಿ ಜಡೇಜ 41 (66ಎ, 4x5)
ದಸುನ್ ಸಿ ಶರ್ಮಾ ಬಿ ಜಡೇಜ 9 (13ಎ, 4x1)
ದುನಿತ್ ಔಟಾಗದೆ 42 (46ಎ, 4x3, 6x1)
ಮಹೀಷ ಸಿ ಸೂರ್ಯಕುಮಾರ್ ಬಿ ಪಾಂಡ್ಯ 2 (14ಎ)
ಕಸುನ್ ಬಿ ಕುಲದೀಪ್ 1 (2ಎ)
ಮಹೀಷ ಬಿ ಕುಲದೀಪ್ 0 (2ಎ)
ಇತರೆ: 15 (ಬೈ 2, ಲೆಗ್‌ಬೈ 4, ನೋಬಾಲ್ 1, ವೈಡ್ 8)
ವಿಕೆಟ್ ಪತನ: 1-7 (ಪಥುಮ್ ನಿಸ್ಸಾಂಕ; 2.1), 2-25 (ಕುಸಲ್ ಮೆಂಡಿಸ್; 6.4), 3-25 (ದಿಮುತ್ ಕರುಣಾರತ್ನೆ; 7.1), 4-68 (ಸದೀರ ಸಮರವಿಕ್ರಮ; 17.3), 5-73 (ಚರಿತ ಅಸಲಂಕಾ; 19.2), 6-99 (ದಸುನ್ ಶನಕಾ; 25.1), 7-162 (ಧನಂಜಯ ಡಿಸಿಲ್ವಾ; 37.3), 8-171 (ಮಹೀಷ ತೀಕ್ಷಣ; 40.5), 9-172 (ಕಸುನ್ ರಜಿತಾ; 41.1), 10-172 (ಮಹೀಷ ಪಥಿರಾಣ; 41.3)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 7–1–30–2, ಮೊಹಮ್ಮದ್ ಸಿರಾಜ್ 5–2–17–1, ಹಾರ್ದಿಕ್ ಪಾಂಡ್ಯ 5–0–14–1, ಕುಲದೀಪ್ ಯಾದವ್ 9.3–0–43–4 ರವೀಂದ್ರ ಜಡೇಜ 10–0–33–2 ಅಕ್ಷರ್ ಪಟೇಲ್ 5–0–29–0.

ಫಲಿತಾಂಶ: ಭಾರತಕ್ಕೆ 41 ರನ್‌ಗಳ ಜಯ

ಪೋಗ್ಬಾ ಮೇಲೆ ತಾತ್ಕಾಲಿಕ ನಿಷೇಧ

ಉದ್ದೀಪನ ಮದ್ದುಸೇವನೆ ನಿಯಮ ಉಲ್ಲಂಘನೆಗೆ ಕ್ರಮ

ಪಾಲ್ ಪೋಗ್ಬಾ

ಮಿಲಾನ್ (ಎಎಫ್‌ಪಿ): ಒಂದು ಕಾಲದಲ್ಲಿ ಜಗತ್ತಿನ ಅತ್ಯಂತ ದುಬಾರಿ ಫುಟ್‌ಬಾಲ್ ಆಟಗಾರ ಎನಿಸಿದ್ದ ಫ್ರಾನ್ಸ್‌ನ ಪಾಲ್ ಪೋಗ್ಬಾ ಈಗ ಬೇಡವಾದ ಕಾರಣಗಳಿಗಾಗಿ ಸುದ್ದಿಯಾಗುತ್ತಿದ್ದಾರೆ. ಉದ್ದೀಪನ ಮದ್ದುಸೇವನೆ ನಿಯಮ ಉಲ್ಲಂಘನೆಗಾಗಿ ಅವರ ಮೇಲೆ ತಾತ್ಕಾಲಿಕ ನಿಷೇಧ ಹೇರಲಾಗಿದೆ.

ಕೆಲ ಬಾರಿ ಗಾಯಾಳಾಗಿದ್ದು, ಬ್ಲ್ಯಾಕ್‌ಮೇಲ್ ಪ್ರಕರಣದಲ್ಲಿ ಅವರ ಸೋದರನೇ ಭಾಗಿಯಾಗಿದ್ದು ಅವರಿಗೆ ಹಿನ್ನಡೆ ಉಂಟುಮಾಡಿತ್ತು. ಈಗ 30 ವರ್ಷದ ಮಿಡ್‌ಫೀಲ್ಡರ್ ಯುವೆಂಟಸ್ ಪರ ಲಯಕ್ಕೆ ಮರಳಲು ಸಿದ್ಧರಾಗಿರುವಂತೆ ಮದ್ದಿನ ಕಳಂಕ ತಟ್ಟಿದೆ.

ಉಡಿನೀಸ್‌ನಲ್ಲಿ ಆಗಸ್ಟ್ 20ರಂದು ನಡೆದ ಋತುವಿನ ಮೊದಲ ಪಂದ್ಯದಲ್ಲಿ ಯುವೆಂಟಸ್ ಗೆದ್ದ ನಂತರ ನಡೆಸಿದ ಮದ್ದುಸೇವನೆ ಪರೀಕ್ಷೆಯಲ್ಲಿ ಟೆಸ್ಟೊಸ್ಟಿರಾನ್ ಮಟ್ಟ ಹೆಚ್ಚಿನ ಪ್ರಮಾಣದಲ್ಲಿರುವುದು ಪತ್ತೆಯಾಗಿದೆ ಎಂದು ಇಟಲಿಯ ಉದ್ದೀಪನ ಮದ್ದುಸೇವನೆ ತಡೆ ಏಜನ್ಸಿ 'ನಾಡೊ' ಸೋಮವಾರ ತಿಳಿಸಿದೆ. ಈ ಪಂದ್ಯದಲ್ಲಿ ಅವರು ಸಬ್‌ಸ್ಟಿಟ್ಯೂಟ್ ಆಗಿದ್ದು ಅವರಿಗೆ ಆಡುವ ಅವಕಾಶ ನೀಡಿರಲಿಲ್ಲ.

ತಮ್ಮ ಟೀಕಾಕಾರರು ಮಾತುಗಳನ್ನು ಹಿಂಪಡೆಯುವಂತೆ ಮಾಡುವುದು ತಮ್ಮ ಬಯಕೆ ಎಂದು ಅವರು ಅಲ್ ಜಝೀರಾಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ ಕೆಲವೇ ಸಮಯದಲ್ಲಿ ಈ ಮದ್ದುಸೇವನೆ ಪರೀಕ್ಷೆ ವಿವರ ಬಿಡುಗಡೆಯಾಗಿದೆ.

2018ರಲ್ಲಿ ರಷ್ಯಾದಲ್ಲಿ ನಡೆದ ವಿಶ್ವಕಪ್‌ನಲ್ಲಿ ಪೋಗ್ಬಾ ಫ್ರಾನ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಫ್ರಾನ್ಸ್ 4–2ರಲ್ಲಿ ಕ್ರೊವೇಷ್ಯಾ ವಿರುದ್ಧ ಫೈನಲ್‌ನಲ್ಲಿ ಜಯಗಳಿಸಿದ್ದು, ಇದರಲ್ಲಿ ಒಂದು ಗೋಲನ್ನು ಪೋಗ್ಬಾ ಗಳಿಸಿದ್ದರು.

ಆದರೆ ಕಳೆದ ವರ್ಷದ ಮಾರ್ಚ್‌ನಿಂದ ಅವರು ರಾಷ್ಟ್ರೀಯ ತಂಡದಲ್ಲಿ ಆಡಿಲ್ಲ.

ಹೆಲೆಪ್‌ಗೆ 4 ವರ್ಷ ನಿಷೇಧ



ಲಂಡನ್ (ಎಎಫ್‌ಪಿ): ಉದ್ದೀಪನ ಮದ್ದು ಸೇವನೆ ನಿಯಮ ಉಲ್ಲಂಘನೆಗಾಗಿ ವಿಶ್ವದ ಮಾಜಿ ಅಗ್ರಮಾನ್ಯ ಟೆನಿಸ್ ಆಟಗಾರ್ತಿ ಸಿಮೊನಾ ಹಲೆಪ್ ಅವರ ಮೇಲೆ ನಾಲ್ಕು ವರ್ಷಗಳ ನಿಷೇಧ ಹೇರಲಾಗಿದೆ.

ಇಂಟರ್‌ನ್ಯಾಷನಲ್ ಟೆನಿಸ್ ಇಂಟೆಗ್ರಿಟಿ ಏಜನ್ಸಿ ಮಂಗಳವಾರ ಈ ವಿಷಯ ತಿಳಿಸಿದೆ. ಕಳೆದ ವರ್ಷ ರುಮೇನಿಯಾದ 31 ವರ್ಷದ ಆಟಗಾರ್ತಿಯು ನಿಷೇಧಿತ ರೊಕ್ಸಾಡುಸ್ಟಾಟ್ ಎಂಬ ಉದ್ದೀಪನ ಮದ್ದು ಸೇವನೆ ಮಾಡಿದ್ದು ಪತ್ತೆಯಾಗಿತ್ತು. ಈ ಸಲ ಅಥ್ಲೀಟ್ ಬಯಾಲಾಜಿಕಲ್ ಪಾಸ್‌ಪೋರ್ಟ್‌ನಲ್ಲಿ ಆಗಿರುವ ಅವ್ಯವಹಾರಗಳಿಗೆ ಸಂಬಂಧಿಸಿ ಅವರ ಮೇಲೆ ಪ್ರತ್ಯೇಕ ಎರಡನೇ ಉಲ್ಲಂಘನೆ ಆರೋಪ ಹೊರಿಸಲಾಗಿದೆ.

2022ರ ಅಕ್ಟೋಬರ್‌ನಿಂದ ಅವರು ತಾತ್ಕಾಲಿಕ ನಿಷೇಧ ಅನುಭವಿಸುತ್ತಿದ್ದಾರೆ. ಈ ಅವಧಿಯೂ ಅವರ ನಾಲ್ಕು ವರ್ಷ ನಿಷೇಧ ಶಿಕ್ಷೆಗೆ ಸೇರಲಿದೆ. ಹೀಗಾಗಿ ಅವರು 2026ರ ಅಕ್ಟೋಬರ್ 6ರವರೆಗೆ ಆಡುವಂತಿಲ್ಲ.

ನಿಷೇಧದ ವಿರುದ್ಧ ಅವರು ಮನವಿ ಸಲ್ಲಿಸಲು ಅವಕಾಶವಿದೆ.

ಉಳಿದ ಪಂದ್ಯಗಳಿಗೆ ನಸೀಮ್, ರವೂಫ್ ಅನುಮಾನ

ಕೊಲಂಬೊ (ಪಿಟಿಐ): ಭಾರತ ವಿರುದ್ಧ ಭಾನುವಾರ ನಡೆದ ಸೂಪರ್ ಫೋರ್ ಪಂದ್ಯದ ವೇಳೆ ಗಾಯಾಳಾಗಿರುವ ಪಾಕಿಸ್ತಾನದ ವೇಗದ ಬೌಲರ್‌ಗಳಾದ ಹ್ಯಾರಿಸ್ ರವೂಫ್ ಮತ್ತು ನಸೀಮ್ ಶಾ ಏಷ್ಯಾ ಕಪ್‌ನ ಉಳಿದ ಪಂದ್ಯಗಳಲ್ಲಿ ಆಡುವುದು ಅನುಮಾನವಾಗಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ಈ ಇಬ್ಬರ ಬದಲಿಗೆ ಬ್ಯಾಕಪ್ ಆಗಿ ಶಾನವಾಝ್ ದಹಾನಿ ಮತ್ತು ಜಮಾನ್ ಖಾನ್ ಅವರನ್ನು ತಂಡಕ್ಕೆ ಕರೆಸಿಕೊಳ್ಳಲಾಗಿದೆ ಎಂದು ಪಾಕ್ ತಂಡದ ಹೇಳಿಕೆಯಲ್ಲಿ ತಿಳಿಸಲಾಗಿದೆ.

'ಇದು ಬರೇ ಮುನ್ನೆಚ್ಚರಿಕೆಯ ಹೆಜ್ಜೆ. ಮುಂದಿನ ತಿಂಗಳ ಐಸಿಸಿ ವಿಶ್ವಕಪ್ ಲಕ್ಷ್ಯದಲ್ಲಿಟ್ಟುಕೊಂಡು ಮತ್ತು ಆಟಗಾರರ ಕ್ಷೇಮದ ದೃಷ್ಟಿಯಿಂದ ಈ ಕ್ರಮ' ಎಂದು ತಂಡದ ಆಡಳಿತ ತಿಳಿಸಿದೆ.

ಕೆಂಟ್ ಪರ ಮಿಂಚಿದ ಚಾಹಲ್

ಕೆಂಟ್ (ಪಿಟಿಐ): ಇಂಗ್ಲಿಷ್ ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ಕೌಂಟಿ ತಂಡಕ್ಕೆ ಪದಾರ್ಪಣೆ ಮಾಡಿರುವ ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ನಾಟಿಂಗಮ್‌ಶೈರ್ ವಿರುದ್ಧ ಪಂದ್ಯದಲ್ಲಿ ಸ್ಫೂರ್ತಿಯುತ ಪ್ರದರ್ಶನ ನೀಡಿ ಮೂರು ವಿಕೆಟ್‌ಗಳನ್ನು ಪಡೆದರು.

ಆಯ್ಕೆಗಾರರ ಅವಕೃಪೆಗೆ ಒಳಗಾಗಿ ವಿಶ್ವಕಪ್ ತಂಡದಲ್ಲಿ ಸ್ಥಾನವಂಚಿತರಾದ 33 ವರ್ಷದ ಚಾಹಲ್ ಮೊದಲ ಡಿವಿಷನ್ ಪಂದ್ಯದ ಎರಡನೇ ದಿನ 20 ಓವರುಗಳಲ್ಲಿ 52 ರನ್ನಿತ್ತು 3 ವಿಕೆಟ್ ಪಡೆದರು. ಕೆಂಟ್‌ನ 446 ರನ್‌ಗಳಿಗೆ ಉತ್ತರವಾಗಿ ಸೋಮವಾರ, ನಾಲ್ಕು ದಿನಗಳ ಪಂದ್ಯದ ಎರಡನೇ ದಿನದಾಟ ಮುಗಿದಾಗ ನಾಟಿಂಗಮ್‌ಶೈರ್ 8 ವಿಕೆಟ್‌ಗೆ 219 ರನ್ ಗಳಿಸಿದೆ.

ಮ್ಯಾಥ್ಯೂ ಮಾಂಟೆಗೊಮರಿ, ಲಿಂಡನ್ ಜೇಮ್ಸ್ ಮತ್ತು ಕೆಲ್ವಿನ್ ಹ್ಯಾರಿಸನ್ ಅವರ ವಿಕೆಟ್‌ಗಳನ್ನು ಪಡೆದರು. ಕೆಂಟ್ ಪರ ಅವರು ಮೂರು ಪಂದ್ಯಗಳನ್ನು (ನಾಟಿಂಗಮ್‌ಶೈರ್, ಲ್ಯಾಂಕಾಶೈರ್, ಸಾಮರ್ಸೆಟ್) ಆಡುವರು.

ಈ ಋತುವಿನ ಆರಂಭದಲ್ಲಿ ಭಾರತ ತಂಡದ ಪೇಸ್ ಬೌಲರ್ ಅರ್ಷದೀಪ್ ಅವರು ಕೆಂಟ್ ಪರ ಐದು ಪಂದ್ಯಗಳನ್ನಾಡಿ 13 ವಿಕೆಟ್‌ಗಳನ್ನು ಪಡೆದಿದ್ದರು.

ಚಾಹಲ್ ಈ ವರ್ಷದ ಜನವರಿಯಿಂದೀಚೆಗೆ ಭಾರತ ತಂಡದಲ್ಲಿ ಏಕದಿನ ಪಂದ್ಯ ಆಡಿಲ್ಲ. ವೆಸ್ಟ್ ಇಂಡೀಸ್ ವಿರುದ್ಧ ಐದು ಪಂದ್ಯಗಳ ಟಿ–20 ಸರಣಿಯಲ್ಲಿ ಕೊನೆಯ ಬಾರಿ ರಾಷ್ಟ್ರೀಯ ತಂಡಕ್ಕೆ ಆಡಿದ್ದರು.

ಫುಟ್‌ಬಾಲ್: ಯುಎಇಗೆ ಮಣಿದ ಭಾರತ ತಂಡ

ಡೇಲಿಯನ್, ಚೀನಾ (ಪಿಟಿಐ): ಭಾರತ ತಂಡವು ಎಎಫ್‌ಸಿ 23 ವರ್ಷದೊಳಗಿನವರ ಏಷ್ಯನ್ ಕಪ್ ಫುಟ್‌ಬಾಲ್ ಅರ್ಹತಾ ಅಭಿಯಾನವನ್ನು ಎರಡನೇ ಸೋಲಿನೊಂದಿಗೆ ಕೊನೆಗೊಳಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಭಾರತ ತಂಡದವರು 0–3ರಿಂದ ಯುಎಇ ತಂಡಕ್ಕೆ ಸುಲಭವಾಗಿ ಸೋತರು. ಮೊದಲ ಪಂದ್ಯದಲ್ಲಿ ಭಾರತವು 1–2ರಿಂದ ಆತಿಥೇಯ ಚೀನಾ ವಿರುದ್ಧ ಮುಗ್ಗರಿಸಿತ್ತು.

'ಜಿ' ಗುಂಪಿನಲ್ಲಿ ಯುಎಇ ತಂಡವು ನಾಲ್ಕು ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಚೀನಾ ತಂಡ ಎರಡನೇ ಸ್ಥಾನದಲ್ಲಿದ್ದರೆ, ಭಾರತ ಕೊನೆಯ ಸ್ಥಾನದಲ್ಲಿದೆ.

ಫುಟ್‌ಬಾಲ್: ಎಎಸ್‌ಸಿ ತಂಡಕ್ಕೆ ಜಯ

ಬೆಂಗಳೂರು: ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವು ಮಂಗಳವಾರ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–1ರಿಂದ ಬಿಯುಎಫ್‌ಸಿ ತಂಡವನ್ನು ಮಣಿಸಿತು.

ಎಎಸ್‌ಸಿ ಪರ ವಹೆಂಗಮ್ ನೀರಜ್ ಸಿಂಗ್, ಲೈಶ್ರಾಮ್ ಪ್ರೇಮ್‌ಕುಮಾರ್ ಸಿಂಗ್ ಮತ್ತು ಆಶಿಶ್ ಥಾಪಾ ತಲಾ ಒಂದು ಗೋಲು ಗಳಿಸಿದರು. ಬಿಯುಎಫ್‌ಸಿ ಪರ ಏಕೈಕ ಗೋಲನ್ನು ಲೈಶ್ರಾಮ್ ಬೆನ್‌ಜಾನ್ಸನ್ ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು 2–2ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು.

ಕ್ರೀಸ್‌ಗೆ ಬಂದಾಗ ಆತಂಕದಲ್ಲಿದ್ದೆ: ರಾಹುಲ್

ಕೆ.ಎಲ್. ರಾಹುಲ್

ಕೊಲಂಬೊ (ಪಿಟಿಐ): ಗಾಯದಿಂದಾಗಿ ಸುದೀರ್ಘ ಸಮಯದವರೆಗೆ ವಿಶ್ರಾಂತಿಯಲ್ಲಿದ್ದ ಕೆ.ಎಲ್. ರಾಹುಲ್ ತಾವು ಮರಳಿ ಕಣಕ್ಕಿಳಿದ ಮೊದಲ ಪಂದ್ಯದಲ್ಲಿಯೇ ಶತಕ ದಾಖಲಿಸಿದರು. ಆದರೆ, ತಾವು ಕ್ರೀಸ್‌ಗೆ ಬಂದ ಆರಂಭದಲ್ಲಿ ತುಸು ಆತಂಕವಾಗಿದ್ದನ್ನು ರಾಹುಲ್ ಹೇಳಿದ್ದಾರೆ.

ಸೋಮವಾರ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಏಷ್ಯಾ ಕಪ್ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಕನ್ನಡಿಗ ರಾಹುಲ್ ಶತಕ (111; 106ಎ) ದಾಖಲಿಸಿದರು. ಭಾರತ ತಂಡವು 228 ರನ್‌ಗಳಿಂದ ಜಯಿಸಿತು.

ಪಂದ್ಯದ ನಂತರ ಸ್ಟಾರ್ ಸ್ಪೋರ್ಟ್ಸ್ ವಾಹಿನಿಯೊಂದಿಗೆ ಮಾತನಾಡಿದ ಅವರು, 'ಬಹಳ ಸಮಯದ ನಂತರ ಅಂತರರಾಷ್ಟ್ರೀಯ ಪಂದ್ಯದಲ್ಲಿ ಆಡಿದೆ. ಇಲ್ಲಿಗೆ ಬರುವ ಮುನ್ನ ಕೆಲವು ಅಭ್ಯಾಸ ಪಂದ್ಯಗಳಲ್ಲಿ ಆಡಿದ್ದೆ. ಆದರೆ, ಆ ಪಂದ್ಯಗಳಿಗೂ ಮತ್ತು ಇಲ್ಲಿ ನಡೆದ ಹಣಾಹಣಿಯ ನಡುವೆ ಬಹಳ ವ್ಯತ್ಯಾಸವಿರುತ್ತವೆ. ಆದ್ದರಿಂದ ನಾನು ಕ್ರೀಸ್‌ಗೆ ಬಂದಾಗ ಸ್ವಲ್ಪ ಅಧೀರನಾಗಿದ್ದೆ' ಎಂದರು.

'ಭಾನುವಾರ ನಾನು ಕ್ರೀಸ್‌ಗೆ ಬಂದು ಲಯ ಕಂಡುಕೊಳ್ಳುವಷ್ಟರಲ್ಲಿ ಮಳೆ ಆರಂಭವಾಯಿತು. ಸೋಮವಾರಕ್ಕೆ ಮುಂದೂಡಲಾಯಿತು. ಮತ್ತೊಮ್ಮೆ ಲಯ ಕಂಡುಕೊಳ್ಳಲು ಪ್ರಯತ್ನಿಸಬೇಕಾಯಿತು. 10–15 ಎಸೆತಗಳನ್ನು ಆಡುವಷ್ಟರಲ್ಲಿ ಲಯ ಲಭಿಸಿತು' ಎಂದರು.

ಹೋದ ಐಪಿಎಲ್ ಟೂರ್ನಿಯ ಸಂದರ್ಭದಲ್ಲಿ ರಾಹುಲ್ ತೊಡೆಯ ಗಾಯದಿಂದ ಬಳಲಿದ್ದರು. ಶಸ್ತ್ರಚಿಕಿತ್ಸೆ ನೀಡಲಾಗಿತ್ತು. ಅದರ ನಂತರ ಅವರು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯಲ್ಲಿ ಪುನಶ್ಚೇತನ ಶಿಬಿರದಲ್ಲಿದ್ದರು.

ಪಂದ್ಯದಲ್ಲಿ ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ ರಾಹುಲ್ ಅವರು ವಿರಾಟ್ ಕೊಹ್ಲಿ ಜೊತೆಗೆ 233 ರನ್ ಸೇರಿಸಿದರು.

ಶ್ರೇಯಸ್‌ಗೆ ಗಾಯ

ಭಾರತ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್ ಬೆನ್ನಿನ ಸೆಳೆತದಿಂದಾಗಿ ಶ್ರೀಲಂಕಾ ಎದುರಿನ ಪಂದ್ಯಕ್ಕೆ ಅಲಭ್ಯರಾದರು.

ಆರು ತಿಂಗಳುಗಳ ಹಿಂದೆ ಅವರು ಬೆನ್ನಿನ ಗಾಯಕ್ಕೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. ಅದರಿಂದಾಗಿ ದೀರ್ಘಕಾಲ ಆಟದಿಂದ ದೂರ ಉಳಿದಿದ್ದರು. ಏಷ್ಯಾ ಕಪ್ ಗುಂಪು ಹಂತದಲ್ಲಿ ಪಂದ್ಯದಲ್ಲಿ ಅವರು ಆಡಿದ್ದರು.

ಪಾಕ್ ಕೈತಪ್ಪಿದ ಒಲಿಂಪಿಕ್ ಕ್ವಾಲಿಫೈಯರ್ ಹಾಕಿ ಟೂರ್ನಿ

ಕರಾಚಿ (ಪಿಟಿಐ): ಒಲಿಂಪಿಕ್ ಅರ್ಹತಾ ಹಾಕಿ ಟೂರ್ನಿಯನ್ನು ಆಯೋಜಿಸಲು ಸಜ್ಜಾಗುತ್ತಿದ್ದ ಪಾಕಿಸ್ತಾನದ ಹಕ್ಕುಗಳನ್ನು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಹಿಂಪಡೆದಿದೆ.

ಪಾಕಿಸ್ತಾನ ಹಾಕಿ ಫೆಡರೇಷನ್ (ಪಿಎಚ್‌ಎಫ್) ಮತ್ತು ಪಾಕಿಸ್ತಾನ ಕ್ರೀಡಾ ಮಂಡಳಿ (ಪಿಎಸ್‌ಬಿ) ನಡುವಣ ಒಳಜಗಳವೇ ಎಫ್‌ಐಎಚ್ ನಿರ್ಧಾರಕ್ಕೆ ಕಾರಣವಾಗಿದೆ.

'ಎಫ್‌ಐಎಚ್ ನಮ್ಮಿಂದ ಒಲಿಂಪಿಕ್ ಹಾಕಿ ಕ್ವಾಲಿಫೈಯರ್ ಆಯೋಜನೆಯ ಹಕ್ಕುಗಳನ್ನು ಮರಳಿ ಪಡೆಯುವುದರೊಂದಿಗೆ ಸರ್ಕಾರ ಹಾಗೂ ಪಿಎಸ್‌ಬಿಯು ನಮಗೆ ಸರಿಯಾದ ಬೆಂಬಲ ನೀಡುತ್ತಿಲ್ಲ ಎಂಬುದು ಸಾಬೀತಾಗಿದೆ' ಎಂದು ಪಿಎಚ್‌ಎಫ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ಬೆಳವಣಿಗೆಯು ಪಾಕಿಸ್ತಾನ ಹಾಕಿ ಕ್ರೀಡಾಕ್ಷೇತ್ರಕ್ಕೆ ದೊಡ್ಡ ಪೆಟ್ಟಾಗಿದೆ. ಸುಮಾರು ಒಂದು ದಶಕದ ನಂತರ ಅಂತರರಾಷ್ಟ್ರೀಯ ಮಟ್ಟದ ಕೂಟವನ್ನು ಆಯೋಜಿಸುವ ಹಕ್ಕು ದೇಶಕ್ಕೆ ಸಿಕ್ಕಿತ್ತು. ಲಾಹೋರ್‌ನಲ್ಲಿ ಟೂರ್ನಿ ನಡೆಸಲು ಪಿಎಚ್‌ಎಫ್ ನಿರ್ಧರಿಸಿತ್ತು.

ಆದರೆ ಇತ್ತೀಚೆಗೆ ಪಿಎಚ್‌ಎಫ್ ಕಾರ್ಯಗಳಲ್ಲಿ ಕ್ರೀಡಾ ಮಂಡಳಿಯು ಹಸ್ತಕ್ಷೇಪ ಮಾಡಲಾರಂಭಿಸಿತ್ತು. ಇದರಿಂದಾಗಿ ಪಿಎಚ್‌ಎಫ್ ಪದಾಧಿಕಾರಿಗಳು ತೀವ್ರ ಅಸಮಾಧಾನಗೊಂಡಿದ್ದರು.

ದೇಶದ ಕೆಲವು ಒಲಿಂಪಿಯನ್ ಆಟಗಾರರು, ಸರ್ಕಾರದ ಆಂತರಿಕ ಹಾಗೂ ಪ್ರಾಂತೀಯ ಸಮನ್ವಯ ಸಚಿವಾಲಯದ ಬೆಂಬಲದೊಂದಿಗೆ ಪಿಎಚ್‌ಎಫ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಸಿದ್ಧರಾಗಿದ್ದರು. ಪಿಎಚ್‌ಎಫ್ ಅಧ್ಯಕ್ಷ ಬ್ರಿಗೇಡಿಯರ್ ಖಾಲೀದ್ ಸಜ್ಜಾದ್ ಖೋಕರ್ ಮತ್ತು ಕಾರ್ಯದರ್ಶಿ ಹೈದರ್ ಹುಸೇನ್ ಅವರನ್ನು ಅಧಿಕಾರದಿಂದ ಕೆಳಗಿಳಿಸುವುದು ಅವರ ಗುರಿಯಾಗಿತ್ತು.

ಅರ್ಹತಾ ಸುತ್ತಿನಲ್ಲೇ ಹೊರಬಿದ್ದ ಕಿರಣ್ ಜಾರ್ಜ್

ಕೊವ್ಲೂನ್ (ಹಾಂಗ್‌ಕಾಂಗ್), (ಪಿಟಿಐ): ಕಳೆದ ವಾರಾಂತ್ಯದಲ್ಲಿ ಇಂಡೊನೇಷ್ಯಾ ಮಾಸ್ಟರ್ಸ್ ಟೂರ್ನಿ ಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದ ಭಾರತದ ಕಿರಣ್ ಜಾರ್ಜ್ ಅದೇ ಲಯವನ್ನು ಮುಂದುವರಿಸಲು ವಿಫಲರಾಗಿದ್ದಾರೆ. ಅವರು ಹಾಂಗ್‌ಕಾಂಗ್ ಓಪನ್ ಟೂರ್ನಿಯ ಪುರುಷರ ಸಿಂಗಲ್ಸ್ ಅರ್ಹತಾ ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ಮಂಗಳವಾರ ನಡೆದ ಎರಡನೇ ಅರ್ಹತಾ ಸುತ್ತಿನಲ್ಲಿ ಅವರು ಮಲೇಷ್ಯಾದ ಜುನ್ ಹಾವೊ ಲಿಯೋಂಗ್ ಎದುರು 20–22, 21–14, 14–21 ರಿಂದ ಪರಾಜಿತರಾದರು. ಅರ್ಹತಾ ಹಂತದ ಮೊದಲ ಸುತ್ತಿನಲ್ಲಿ ಅವರು ಚೀನಾ ತೈಪೆಯ ಯು ಜೆನ್ ಚಿ ಅವರನ್ನು 21–15, 21–17 ರಿಂದ ಸೋಲಿಸಿದ್ದರು.

ಮಿಥುನ್ ಮಂಜುನಾಥ್ ಮತ್ತು ರವಿ ಅವರೂ ಅರ್ಹತಾ ಹಂತದಲ್ಲೇ ಹೊರಬಿದ್ದರು. ಇವರಿಬ್ಬರೂ ಹಾಂಗ್‌ಕಾಂಗ್‌ನ ಜೇಸನ್ ಗುಣವಾನ್ ಅವರಿಗೆ ಸೋತರು. ಮಿಥುನ್ ಮೊದಲ ಸುತ್ತಿನಲ್ಲೇ ಜೇಸನ್ ಅವರಿಗೆ 20–22, 15–21ರಲ್ಲಿ ಮಣಿದರೆ, ರವಿ ಎರಡನೇ ಅರ್ಹತಾ ಸುತ್ತಿನಲ್ಲಿ 15–21, 14–21ರಲ್ಲಿ ಮಣಿದರು.

ಭಾರತದ ಮಾಳವಿಕಾ ಬನ್ಸೋಡ್ ಅವರು ಮಹಿಳೆಯರ ಸಿಂಗಲ್ಸ್ ಪ್ರಧಾನ ಸುತ್ತಿಗೆ ಅರ್ಹತೆ ಪಡೆದರು.

ಭಾರತದ ಡಬಲ್ಸ್ ಜೋಡಿಯಾದ ಟ್ರೀಸಾ ಜೋಳಿ ಮತ್ತು ಪುಲ್ಲೇಲ ಗಾಯತ್ರಿ ಗೋಪಿಚಂದ್ ಅವರು ಟೂರ್ನಿಯ ಎರಡನೇ ಸುತ್ತನ್ನು ತಲುಪಿದರು.

ಅವರು ನೆದರ್ಲೆಂಡ್ಸ್‌ನ ಡೆಬೊರಾ ಜಿಲ್ಲೆ ಮತ್ತು ಚೆರಿಲ್ ಸೀನೆನ್ ಅವರನ್ನು 21–15, 16–21, 21–16 ರಿಂದ ಸೋಲಿಸಿದರು.

ಏಷ್ಯಾ ಚಾಂಪಿಯನ್ಸ್: ಭಾರತಕ್ಕೆ ಮೊದಲ ಎದುರಾಳಿ ಥಾಯ್ಲೆಂಡ್

ರಾಂಚಿ (ಪಿಟಿಐ): ಭಾರತ ಮಹಿಳಾ ತಂಡವು, ಮುಂಬರುವ ಏಷ್ಯಾ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಮೊದಲ ಪಂದ್ಯವನ್ನು ಥಾಯ್ಲೆಂಡ್ ವಿರುದ್ಧ ಇಲ್ಲಿ ಅಕ್ಟೋಬರ್ 27ರಂದು ಆಡಲಿದೆ. ಹಾಕಿ ಇಂಡಿಯಾ ಮಂಗಳವಾರ ಟೂರ್ನಿಯ ವೇಳಾಪಟ್ಟಿ ಬಿಡುಗಡೆ ಮಾಡಿದೆ.

ಮರಾಂಗ್ ಗೋಮ್ಕೆ ಜೈಪಾಲ್ ಸಿಂಗ್ ಆಸ್ಟ್ರೋ ಟರ್ಫ್ ಹಾಕಿ ಕ್ರೀಡಾಂಗಣದಲ್ಲಿ ನಡೆಯುವ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಮಲೇಷಿಯಾ ಮತ್ತು ಜಪಾನ್ ಎದುರಾಗಲಿವೆ. ಆತಿಥೇಯ ಭಾರತ ಮೊದಲ ದಿನ ಮೂರನೇ ಪಂದ್ಯದಲ್ಲಿ ಥಾಯ್ಲೆಂಡ್ ತಂಡವನ್ನು ಎದುರಿಸಲಿದೆ. ಭಾರತ, ನವೆಂಬರ್ 2ರಂದು ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಕೊರಿಯಾ ತಂಡವನ್ನು ಎದುರಿಸಲಿದೆ.

ಈ ಟೂರ್ನಿಯಲ್ಲಿ ಕೊರಿಯಾ, ಮಲೇಷ್ಯಾ, ಥಾಯ್ಲೆಂಡ್, ಜಪಾನ್, ಚೀನಾ ಮತ್ತು ಆತಿಥೇಯ ಭಾರತ ಪಾಲ್ಗೊಳ್ಳುತ್ತಿವೆ. ನವೆಂಬರ್ 5ರಂದು ಟೂರ್ನಿ ಮುಕ್ತಾಯಗೊಳ್ಳಲಿದೆ. ಬರ್ಮಿಂಗಮ್ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಕಂಚಿನ ಪದಕ ಮತ್ತು ಕಳೆದ ವರ್ಷ ಸ್ಪೇನ್‌ನಲ್ಲಿ ನಡೆದ ಎಫ್‌ಐಎಚ್ ಮಹಿಳಾ ನೇಷನ್ಸ್ ಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡ ಭಾರತ ಉತ್ತಮ ಲಯದಲ್ಲಿದೆ.

46ನೇ ಜೂನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿ

ರುಷೇಂದ್ರ, ರಕ್ಷಿತಾಶ್ರೀ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ನಡೆದ 46ನೇ ಜೂನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ವಿಜೇತರಾದ (ಮುಂದಿನ ಸಾಲಿನಲ್ಲಿ ಎಡದಿಂದ) ನಿಕೋಲಸ್ ನಾಥನ್ ರಾಜ್, ತುಷಾರ್ ಸುವೀರ್, ಸಾತ್ವಿಕ್ ರೆಡ್ಡಿ, ರುಷೇಂದ್ರ ತಿರುಪತಿ, (ಹಿಂದಿನ ಸಾಲಿನಲ್ಲಿ ಎಡದಿಂದ) ರಾಧಿಕಾ ಶರ್ಮಾ, ಎಸ್. ರಕ್ಷಿತಾಶ್ರೀ, ವೈಷ್ಣವಿ ಖಡ್ಕೇಕರ್, ತನ್ವಿ ಶರ್ಮಾ –ಪ್ರಜಾವಾಣಿ ಚಿತ್ರ

ಬೆಂಗಳೂರು: ತೆಲಂಗಾಣದ ರುಷೇಂದ್ರ ತಿರುಪತಿ ಮತ್ತು ಎಸ್. ರಕ್ಷಿತಾಶ್ರೀ ಅವರು ಇಲ್ಲಿ ನಡೆದ ಯೋನೆಕ್ಸ್-ಸನ್‌ರೈಸ್ 46ನೇ ಜೂನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮಂಗಳವಾರ ನಡೆದ ಬಾಲಕರ ಸಿಂಗಲ್ಸ್‌ನ ಫೈನಲ್ ಪಂದ್ಯದಲ್ಲಿ 13ನೇ ಶ್ರೇಯಾಂಕದ ರುಷೇಂದ್ರ ಅವರು 21-18, 18-21, 21-16 ರಿಂದ 8ನೇ ಶ್ರೇಯಾಂಕದ ಸಮರವೀರ್ (ಚಂಡೀಗಢ) ಅವರನ್ನು ಮಣಿಸಿದರು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಶ್ರೇಯಾಂಕರಹಿತ ಆಟಗಾರ್ತಿ ರಕ್ಷಿತಾಶ್ರೀ ಅವರು 9-21, 21-13, 21-18ರಿಂದ ಮೂರನೇ ಶ್ರೇಯಾಂಕದ ಅನ್ಮೋಲ್ ಖರ್ಬ್ (ಹರಿಯಾಣ) ಅವರನ್ನು ಪರಾಭವಗೊಳಿಸಿದರು.

ಬಾಲಕರ ಡಬಲ್ಸ್‌ನ ಫೈನಲ್ ಪಂದ್ಯದಲ್ಲಿ ಕರ್ನಾಟಕದ ನಿಕೋಲಸ್ ನಾಥನ್ ರಾಜ್ ಮತ್ತು ತುಷಾರ್ ಸುವೀರ್ ಜೋಡಿಯು 7-21, 21-11, 21-13ರಿಂದ ದೆಹಲಿಯ ಭವ್ಯ ಛಬ್ರಾ ಮತ್ತು ಪರಮ್ ಚೌಧರಿ ಜೋಡಿಯನ್ನು ಮಣಿಸಿ ಪ್ರಶಸ್ತಿ ಗೆದ್ದಿತು.

ಬಾಲಕಿಯರ ಡಬಲ್ಸ್‌ನ ಫೈನಲ್‌ನಲ್ಲಿ ಪಂಜಾಬ್‌ನ ರಾಧಿಕಾ ಶರ್ಮಾ ಮತ್ತು ತನ್ವಿ ಶರ್ಮಾ ಅವರು 21-15, 14-21, 21-18ರಿಂದ ಉತ್ತರಖಂಡದ ಗಾಯತ್ರಿ ರಾವತ್ ಮತ್ತು ಮಾನಸಾ ರಾವತ್ ಜೋಡಿಯನ್ನು ಮಣಿಸಿ ಚಾಂಪಿಯನ್ ಆದರು.

ಮಿಕ್ಸೆಡ್ ಡಬಲ್ಸ್‌ನ ಪ್ರಶಸ್ತಿ ಸುತ್ತಿನಲ್ಲಿ ತೆಲಂಗಾಣದ ಸಾತ್ವಿಕ್ ರೆಡ್ಡಿ ಕೆ. ಮತ್ತು ವೈಷ್ಣವಿ ಖಡ್ಕೇಕರ್ ಜೋಡಿಯು 14-21, 22-20, 21-18ರಿಂದ ಚಂಡೀಗಢದ ಸಮರವೀರ್ ಮತ್ತು ಪಂಜಾಬ್‌ನ ರಾಧಿಕಾ ಶರ್ಮಾ ಅವರನ್ನು ಮಣಿಸಿತು.

ಬೆಂಗಳೂರಿಗೂ ಸುಬ್ರತೊ ಕಪ್ ಟೂರ್ನಿ ಆತಿಥ್ಯ

ನವದೆಹಲಿ (ಪಿಟಿಐ): ಇದೇ ತಿಂಗಳ 19 ರಿಂದ ಅಕ್ಟೋಬರ್ 23ರವರೆಗೆ ನಡೆಯಲಿರುವ ಸುಬ್ರತೊ ಕಪ್ ಅಂತರರಾಷ್ಟ್ರೀಯ ಫುಟ್‌ಬಾಲ್ ಟೂರ್ನಿಯ ಆತಿಥ್ಯಕ್ಕೆ ಬೆಂಗಳೂರನ್ನೂ ಸೇರ್ಪಡೆ ಮಾಡಲಾಗಿದೆ.

ಸುಬ್ರತೊ ಕಪ್, ದೇಶದ ಅತಿ ಹಳೆಯ ರಾಷ್ಟ್ರೀಯ ಅಂತರ ಶಾಲಾ ಫುಟ್‌ಬಾಲ್ ಟೂರ್ನಿ ಆಗಿದೆ.

14 ವರ್ಷದೊಳಗಿನವರ ಸಬ್ ಜೂನಿಯರ್ ಬಾಲಕರ ವಿಭಾಗದ ಟೂರ್ನಿ ಬೆಂಗಳೂರಿನ ಎಎಸ್‌ಸಿ ಸೆಂಟರ್, ಜಾಲಹಳ್ಳಿಯ ಏರ್‌ಫೋರ್ಸ್ ಸ್ಕೂಲ್ ಮತ್ತು ಯಲಹಂಕದ ಏರ್‌ಫೋರ್ಸ್ ಸ್ಕೂಲ್ ಮೈದಾನದಲ್ಲಿ ನಡೆಯಲಿವೆ. ಟೂರ್ನಿಗೆ ಅಂತರರಾಷ್ಟ್ರೀಯ ಸ್ವರೂಪ ನೀಡಲು ಬಾಂಗ್ಲಾದೇಶ ಮತ್ತು ನೇಪಾಳದ ತಂಡಗಳನ್ನೂ ಆಹ್ವಾನಿಸಲಾಗಿದೆ.